"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

**(156ನೇ ಅಧಿವೇಶನ)**

**ಗುರುವಾರ, 14ನೇ ಆಗಸ್ಟ್ 2025**

## ವಿಷಯಾನುಕ್ರಮಣಿಕೆ (INDEX)

**01. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**563 – ಪಿಲಿಕುಳ ನಿಸರ್ಗಧಾಮ ಅಭಿವೃದ್ಧಿ ಕುರಿತು**
- ಶ್ರೀ ಮಂಜುನಾಥ ಭಂಡಾರಿ
- ಶ್ರೀ ಎನ್.ಎಸ್.ಬೋಸರಾಜು (ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

**555 – ಸ್ಪೆಷಲ್ ಆಕ್ಷನ್ ಫೋರ್ಸ್ ಸ್ಥಾಪನೆಯ ಬಗ್ಗೆ**
- ಶ್ರೀ ಕಿಶೋರ್ ಕುಮಾರ್ ಪುತ್ತೂರು
- ಡಾ: ಜಿ.ಪರಮೇಶ್ವರ್ (ಗೃಹ ಸಚಿವರು)

**510 – ರಾಜ್ಯದಲ್ಲಿರುವ ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ**
- ಶ್ರೀ ಎಂ.ನಾಗರಾಜು
- ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು)

**496 – ರಾಜ್ಯದಲ್ಲಿ ಸಿವಿಲ್ ಸರ್ವಿಸ್ ಬೋರ್ಡ್ ರಚನೆ ಕುರಿತು**
- ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ
- ಶ್ರೀ ಸಿದ್ಧರಾಮಯ್ಯ (ಮುಖ್ಯಮಂತ್ರಿಗಳು)

**608 – ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಪಡಿಸಲು ಕೈಗೊಂಡ ಕ್ರಮಗಳ ಬಗ್ಗೆ**
- ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್.)
- ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು)

**568 – ಕೆಂಪೇಗೌಡ ಮತ್ತು ಶಿವರಾಮ ಕಾರಂತ ಬಡಾವಣೆಯ ನಿವೇಶನಗಳ ಬಗ್ಗೆ**
- ಶ್ರೀ ಟಿ.ಎನ್.ಜವರಾಯಿ ಗೌಡ
- ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು)

**541 – ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸಿಎ ನಿವೇಶನ ಹಂಚಿಕೆ ಮಾಡಿರುವ ಬಗ್ಗೆ**

- ಡಾ: ಉಮಾಶ್ರೀ
- ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು)

**525 – ನಗರದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಸುರಂಗ ಮಾರ್ಗಗಳ ಬಗ್ಗೆ**

- ಶ್ರೀ ಸಿ.ಟಿ.ರವಿ
- ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು)

**547 – ಭದ್ರಾ ಜಲಾಶಯ ಆವರಣದಲ್ಲಿ ಉದ್ಯಾನವನ ನಿರ್ಮಾಣ ಮಾಡುವ ಬಗ್ಗೆ**

- ಶ್ರೀಮತಿ ಬಲ್ಕೀಸ್ ಬಾನು
- ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು)

**542 – ಬಾಗಲಕೋಟೆ ಜಿಲ್ಲೆ ವ್ಯಾಪ್ತಿಯ ಗುಡ್ಡದ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಪ್ರವಾಸೋದ್ಯಮ ಇಲಾಖೆಯಿಂದ ಮೂಲಸೌಕರ್ಯಗಳನ್ನು ನಿರ್ಮಿಸುವ ಕುರಿತು**

- ಶ್ರೀ ಪಿ.ಹೆಚ್.ಪೂಜಾರ್
- ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

**ತಡೆ ಹಿಡಿಯಲಾದ ಪ್ರಶ್ನೆಗಳು**

**443 – ಪೆರಿಫೆರಲ್ ವರ್ತುಲ ರಸ್ತೆ-2 ಕಾಮಗಾರಿಯ ಬಗ್ಗೆ**

- ಶ್ರೀ ಹೆಚ್.ಎಸ್.ಗೋಪಿನಾಥ್
- ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**02. ನಿಯಮ 58ಎ ಮೇರೆಗೆ ಶೂನ್ಯ ವೇಳೆ ಪ್ರಸ್ತಾವಗಳಿಗೆ ಸರ್ಕಾರದಿಂದ ಲಿಖಿತ ಉತ್ತರಗಳು**

**ಅ) ಕೋಲಾರ ಜಿಲ್ಲೆ, ಕೆಜಿಎಫ್‌ನಲ್ಲಿ ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ ವಿತರಿಸಲು ತಂದಿದ್ದ ಪರಿಕರಗಳು ಕಳಪೆ ಗುಣಮಟ್ಟದಿಂದ ಕೂಡಿದೆ ಎಂದು ರೈತರು ಸ್ವೀಕರಿಸಲು ನಿರಾಕರಿಸುವ ಬಗ್ಗೆ.**

- ಶ್ರೀಎನ್.ಎಸ್. ಬೋಸರಾಜು (ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ)

**ಆ) ರಾಜ್ಯದಲ್ಲಿ ಕಳೆದ 30 ವರ್ಷಗಳಲ್ಲಿ 98 ಕಾರ್ಮಿಕರು ಶೌಚ ಗುಂಡಿಗೆ ಬಿದ್ದು ಸಾವನ್ನಪ್ಪಿರುವ ಬಗ್ಗೆ**

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)(ಪೌರಾಡಳಿತ ಮತ್ತು ಹಜ್ ಸಚಿವರ ಪರವಾಗಿ)

**ಇ) ಕಲಬುರಗಿ ಜಿಲ್ಲೆ ಸೇಡಂ ತಾಲ್ಲೂಕಿನ ಮಳಖೇಡ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವ ಕೊಂಕನಹಳ್ಳಿ ಅಂಬಿಗರ ಚೌಡಯ್ಯರವರ ಧ್ವಜದ ಕಟ್ಟೆ ಕುರಿತು**

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)(ಗೃಹ ಸಚಿವರ ಪರವಾಗಿ)

**ಈ) ಕೇಂದ್ರ ಸರ್ಕಾರವು ಸಾಕಷ್ಟು ಯೂರಿಯಾ ಮತ್ತು ಡಿ.ಎ.ಪಿ. ರಸಗೊಬ್ಬರವನ್ನು ಪೂರೈಸಿದ್ದು, ರಾಜ್ಯ ಸರ್ಕಾರವು ರೈತರಿಗೆ ಸಮರ್ಪಕವಾಗಿ ಪೂರೈಸುವ ಕುರಿತು**

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)(ಕೃಷಿ ಸಚಿವರ ಪರವಾಗಿ)

**ಉ) ನೆಲಮಂಗಲದ "ಅರಶಿನಕುಂಟೆ ಮತ್ತು ಚಿನ್ನಮಂಗಲದ ಕೆರೆಗಳ ಕಾಯಕಲ್ಪ" ಕುರಿತು**

- ಶ್ರೀ ಎನ್.ಎಸ್.ಬೋಸರಾಜು (ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರ ಪರವಾಗಿ)

**ಊ) ರಾಷ್ಟ್ರೀಯ ಸ್ವಯಂ ಸೇವಕ ಸಂಘದ ವಿರುದ್ಧ ಸುಳ್ಳು ಸುದ್ದಿ ಹರಡುತ್ತಿರುವ ಕುರಿತು**

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)(ಗೃಹ ಸಚಿವರ ಪರವಾಗಿ)

**ಋ) ರಾಜ್ಯದ ವಿವಿಧ ಭಾಗಗಳಲ್ಲಿ ಹಸುಗಳ ಹತ್ಯೆ, ಕತ್ತು ಕೊಯ್ಯುವುದು, ಕೆಚ್ಚಲು ಕತ್ತರಿಸುವಂತಹ ಅಮಾನುಶ ಕೃತ್ಯಗಳು ನಡೆದಿರುವ ಕುರಿತು**

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)(ಗೃಹ ಸಚಿವರ ಪರವಾಗಿ)

**ಎ) ಮಂಗಳೂರಿನ ಕೇಂದ್ರ ಕಾರಾಗೃಹಕ್ಕೆ ಜಾಮರ್ ಅಳವಡಿಸಿರುವ ಕುರಿತು**

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)(ಗೃಹ ಸಚಿವರ ಪರವಾಗಿ)

**ಏ)"ಕೊಪ್ಪಳ ಕೇಂದ್ರೀಯ ವಿದ್ಯಾಲಯ ರಸ್ತೆ, ನೂರಾರು ಸಂಖ್ಯೆಯಲ್ಲಿ ಮಕ್ಕಳು ಓಡಾಡುತ್ತಿದ್ದರೂ ಬಸ್ ಸೌಲಭ್ಯ" ಇಲ್ಲದ ಬಗ್ಗೆ.**

- ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)(ಸಾರಿಗೆ ಮತ್ತು ಮುಜರಾಯಿ ಸಚಿವರ ಪರವಾಗಿ

**೦3. ನಿಯಮ 58ರ ಮೇರೆಗೆ ಶೂನ್ಯವೇಳೆ ಪ್ರಸ್ತಾವನೆಗಳು**

**ಅ) ಆಶಾ ಕಾರ್ಯಕರ್ತೆಯರು ತಮ್ಮ ಗೌರವಧನವನ್ನು ಹತ್ತು ಸಾವಿರ ರೂಪಾಯಿಗಳಿಗೆ ಹೆಚ್ಚಿಸುವಂತೆ ಆಗ್ರಹಿಸಿ ಧರಣಿ ಮಾಡುತ್ತಿರುವ ಬಗ್ಗೆ.**

- ಶ್ರೀ ಶಾಂತಾರಾಮ್ ಬುಡ್ನ ಸಿದ್ಧಿ
- ಶ್ರೀಮತಿ ಬಲ್ಕೀಸ್ ಬಾನು
- ಶ್ರೀಮತಿ ಹೇಮಲತಾ ನಾಯಕ್
- ಶ್ರೀ ರಾಮೋಜಿಗೌಡ

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

- ಶ್ರೀ ಡಿ.ಎಸ್.ಅರುಣ್
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಆ) "ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಸಾವಿಗೀಡದವರ ಹೆಸರಿನಲ್ಲಿ ಡಯಾಲಿಸಿಸ್ ಚಿಕಿತ್ಸೆ ನೀಡಿದಂತೆ ನಕಲಿ ಬಿಲ್ ಸೃಷ್ಟಿಸುತ್ತಿರುವ ಬಗ್ಗೆ.**

- ಶ್ರೀ ಡಿ.ಎಸ್.ಅರುಣ್
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಇ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಿರ್ಮಿಸಲು ಉದ್ದೇಶಿಸಿರುವ ಬಡಾವಣೆಗೆ ಭೂ ಸ್ವಾಧೀನ ಅಧಿಸೂಚನೆ ಹೊರಬಿದ್ದಿಲ್ಲದಿದ್ದರೂ ರೈತರು ಮತ್ತು ಸ್ಥಳೀಯರಿಗೆ ಮನೆ ಕಟ್ಟಿಕೊಳ್ಳಲು ನಿರಾಪೇಕ್ಷಣಾ(ಎನ್.ಓ.ಸಿ.) ಪತ್ರ ನೀಡದಿರುವ ಬಗ್ಗೆ.**

- ಶ್ರೀ ಟಿ.ಎ.ಶರವಣ
- ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು)

**ಈ) ಉತ್ತರ ಕರ್ನಾಟಕದ ಮಲಪ್ರಭಾ ನದಿಯ ಪ್ರವಾಹದಿಂದಾಗಿ ಹುನಗುಂದ ತಾಲ್ಲೂಕಿ ಬೇವಿನನಾಳ ಮತ್ತು ಸುರಳಕಲ್ಲ ಗ್ರಾಮದ ನಡುವೆ ಬರುವ ನದಿಗೆ ನಿರ್ಮಿಸಿರುವ ಬ್ರಿಡ್ಜ್ ಕಂ ಬ್ಯಾರೇಜ್‌ಗೆ ಗೇಟ್‌ಗಳನ್ನು ಎತ್ತರಿಸಿ ಸಂಭವಿಸಬಹುದಾದ ಅನಾಹುತವನ್ನು ತಪ್ಪಿಸುವ ಕುರಿತು.**

- ಶ್ರೀ ಪಿ.ಹೆಚ್.ಪೂಜಾರ್
- ಶ್ರೀ ಎನ್.ಎಸ್.ಬೋಸರಾಜು (ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

**ಉ) ಯುಜಿಸಿ ನಿಗಧಿಪಡಿಸಿರುವ ವಿದ್ಯಾರ್ಹತೆ ಹೊಂದಿರದಿದ್ದರೂ ಯುಜಿಸಿ ವೇತನ ಪಡೆಯುತ್ತಿರುವ ಸಹಾಯಕ ಪ್ರಾಧ್ಯಾಪಕರು ಮತ್ತು ಪ್ರಾಧ್ಯಾಪಕರುಗಳ ವಿರುದ್ಧ ಕ್ರಮ ಕೈಗೊಳ್ಳುವ ಕುರಿತು**

- ಶ್ರೀ ಸಿ.ಟಿ.ರವಿ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಊ) ಕರಾವಳಿ ಕರ್ನಾಟಕದಲ್ಲಿ ನಡೆಯುವ ಪ್ರತಿ ಕಂಬಳ ಕ್ರೀಡಾಕೂಟಕ್ಕೆ ಸರ್ಕಾರದಿಂದ ಐದು ಲಕ್ಷ ರೂಪಾಯಿಗಳ ಅನುದಾನ ನೀಡುವ ಬಗ್ಗೆ.**

- ಶ್ರೀ ಐವನ್ ಡಿ'ಸೋಜಾ
- ಶ್ರೀ ಎನ್.ಎಸ್.ಬೋಸರಾಜು

**ಋ) ಅಬಕಾರಿ ಉದ್ಯಮದಲ್ಲಿ ತೊಡಗಿರುವ ಮೂಲ ಕಸುಬುದಾರರಾದ ಈಡಿಗ/ಬಿಲ್ಲವ ಸಮಾಜದ ಉದ್ದಿಮೆದಾರರಿಗೆ ತೆಲಂಗಾಣ ಮಾದರಿಯಲ್ಲಿ ವ್ಯವಹಾರಿಕ ಲಾಭಾಂಶವನ್ನು ನೀಡಲು ಸಮಿತಿ ರಚಿಸುವ ಕುರಿತು**

- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ತಿಮ್ಮಾಪುರ ರಾಮಪ್ಪ ಬಾಳಪ್ಪ (ಅಬಕಾರಿ ಸಚಿವರು)

**ಎ) ಜಾನಪದ ವಿಶ್ವವಿದ್ಯಾಲಯದ ಹೊರಗುತ್ತಿಗೆ ಸಿಬ್ಬಂದಿಗಳಿಗೆ ವೇತನ ಪಾವತಿಸದಿರುವ ಬಗ್ಗೆ.**

– ಡಾ: ತಳವಾರ್ ಸಾಬಣ್ಣ
– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಏ) ಮೈಸೂರಿನಲ್ಲಿ ತಯಾರಾದ ಮಾದಕ ವಸ್ತುವಿಗೆ ಮಹಾರಾಷ್ಟ್ರದ ನಂಟು ಪತ್ತೆಯಾಗಿರುವ ಹಿನ್ನಲೆಯಲ್ಲಿ ಮಾದಕ ಜಾಲವನ್ನು ಬುಡ ಸಮೇತ ಕಿತ್ತು ಹಾಕುವ ಬಗ್ಗೆ**

– ಶ್ರೀ ಸಿ.ಎನ್.ಮಂಜೇಗೌಡ
– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)

**ಐ) ಸಿಂಧನೂರಿನ ನಗರ ಹೃದಯ ಭಾಗದಲ್ಲಿ ಹಣ್ಣಿನ ತೋಟವನ್ನು ನಿರ್ಲಕ್ಷಿಸದೆ ಅಭಿವೃದ್ಧಿ ಪಡಿಸುವ ಕುರಿತು**

- ಶ್ರೀ ಬಸನಗೌಡ ಬಾದರ್ಲಿ
– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)

**೦4. ಕಾರ್ಯದರ್ಶಿಯವರ ವರದಿ**

ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ವಿಧೇಯಕಗಳ ಮಂಡನೆ

**೦5. ವಿಧೇಯಕಗಳನ್ನು ಚರ್ಚೆಗೆ ಸ್ವೀಕರಿಸದೇ ಕಾರ್ಯಕಲಾಪಗಳ ಪಟ್ಟಿಯನ್ನು ಮುಂದುವರೆಸುವ ಬಗ್ಗೆ**

– ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು)
– ಶ್ರೀ ಕೃಷ್ಣ ಬೈರೇಗೌಡ (ಕಂದಾಯ ಸಚಿವರು)
– ಶ್ರೀ ಎನ್.ರವಿಕುಮಾರ್(ವಿರೋಧ ಪಕ್ಷದ ಮುಖ್ಯಸಚೇತಕರು)
– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)
– ಶ್ರೀ ಕೆ.ಎಸ್.ನವೀನ್
– ಶ್ರೀ ಸಿ.ಟಿ.ರವಿ

**೦6. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕ, 2025**

– ಶ್ರೀ ಕೃಷ್ಣ ಬೈರೇಗೌಡ (ಕಂದಾಯ ಸಚಿವರು)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಆ) ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025**

– ಶ್ರೀ ಕೃಷ್ಣ ಬೈರೇಗೌಡ (ಕಂದಾಯ ಸಚಿವರು)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಇ) ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025**

– ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಈ) ಕಿತ್ತೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025**

– ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಉ) ಕೂಡಲ ಸಂಗಮ ಅಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕ, 2025**

**– ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ (ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)(ಕಂದಾಯ ಸಚಿವರ ಪರವಾಗಿ)**

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಊ) ಬನವಾಸಿ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025**

– ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಋ) ಸರ್ವಜ್ಞ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025**

– ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು)
– ಶ್ರೀ ಎನ್.ರವಿಕುಮಾರ್
– ಶ್ರೀ ಕೆ.ಎಸ್.ನವೀನ್

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಎ) ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2025**

– ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು)
– ಶ್ರೀ ಸಿ.ಟಿ.ರವಿ
– ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ
– ಶ್ರೀ ಐವನ್ ಡಿ'ಸೋಜಾ
– ಶ್ರೀ ಕೆ.ಎಸ್. ನವೀನ್
– ಶ್ರೀ ಸಿ.ಎನ್.ಮಂಜೇಗೌಡ
– ಶ್ರೀ ಪುಟ್ಟಣ್ಣ

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

– – –

(695) 14-08-2025/10.00/ಎಂವಿ-ಎಕೆ (ಸಭಾಪತಿಯವರ ಉಪಸ್ಥಿತಿ)

# ಕರ್ನಾಟಕ ವಿಧಾನ ಪರಿಷತ್ತು

ಗುರುವಾರ, 14ನೇ ಆಗಸ್ಟ್ 2025

ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಗ್ಗೆ 10 ಗಂಟೆ 08 ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಅವರು ಪೀಠದಲ್ಲಿ ಉಪಸ್ಥಿತರಿದ್ದರು.

## 01 ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**ಸಭಾಪತಿಯವರು:-** ಈಗ ಶ್ರೀ ಅಡಗೂರು ಹೆಚ್. ವಿಶ್ವನಾಥ್ ರವರು ಪ್ರಶ್ನೆ ಕೇಳುವುದು.

**ಪ್ರಶ್ನೆ ಸಂಖ್ಯೆ:493**

**(ಮಾನ್ಯ ಸದಸ್ಯರು ಹಾಜರಿರುವುದಿಲ್ಲ)**

**ಪ್ರಶ್ನೆ ಸಂಖ್ಯೆ:563**

**ಪಿಲಿಕುಳ ನಿಸರ್ಗಧಾಮ ಅಭಿವೃದ್ಧಿ ಕುರಿತು**

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಂಗಳೂರಿನ ಪಿಲಿಕುಳ ನಿಸರ್ಗಧಾಮವನ್ನು ಅಭಿವೃದ್ಧಿ ಪಡಿಸಲು ಇಲಾಖೆ ಕೈಗೊಂಡ ಸುಧಾರಣಾ ಕ್ರಮಗಳೇನು: ಪಿಲಿಕುಳ ಪ್ರಾಧಿಕಾರದ ಸಭೆಗಳಲ್ಲಿ ಚರ್ಚಿಸಿದ ಯಾವೆಲ್ಲ ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗಿದೆ: | ಮಂಗಳೂರಿನ ಪಿಲಿಕುಳ ನಿಸರ್ಗಧಾಮವನ್ನು ಅಭಿವೃದ್ಧಿ ಪಡಿಸಲು ಈ ಕೆಳಕಂಡ ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>• ಪಶ್ಚಿಮ ಘಟ್ಟ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಲಾಗಿದ್ದು, ಅದರಂತೆ ಕ್ರಿಯಾಯೋಜನೆಯನ್ನು ಸಿದ್ಧಪಡಿಸುವ ಕಾರ್ಯ ಪ್ರಗತಿಯಲ್ಲಿದೆ.<br>• ಪ್ರಾದೇಶಿಕ ವಿಜ್ಞಾನ ಕೇಂದ್ರ ಉನ್ನತೀಕರಣಗೊಳಿಸುವ ನಿಟ್ಟಿನಲ್ಲಿ ಪ್ರೊ.ಯು.ಆರ್.ರಾವ್ ಖಗೋಳಶಾಸ್ತ್ರ ಮತ್ತು ಬಾಹ್ಯಾಕಾಶ ಗ್ಯಾಲರಿಯ ನಿರ್ಮಾಣ ಮಾಡಲು Mangalore Refinery and Petrochemicals Limited (MRPL) ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು, ಸದರಿ ಸಂಸ್ಥೆಯ Corporate Social Responsibility (CSR) ನಿಧಿಯಿಂದ Visvesvaraya Industrial and Technological Museum (VITM) ಮುಖಾಂತರ ಅನುಷ್ಠಾನ ಗೊಳಿಸಲು ಕ್ರಮವಹಿಸಲಾಗುತ್ತಿದೆ. |

| | | |
|---|---|---|
| | | • ತಾರಾಲಯಕ್ಕೆ ಲೇಸರ್ ಪ್ರೊಜೆಕ್ಟರ್ ಅಳವಡಿಕೆಯನ್ನು ಕಾರ್ಪೋರೇಟ್ ಸಂಸ್ಥೆಗಳ Corporate Social Responsibility (CSR) ನಿಧಿಯಿಂದ ಅನುಷ್ಠಾನಗೊಳಿಸುವ ಪ್ರಕ್ರಿಯೆಯು ಪ್ರಗತಿಯಲ್ಲಿದೆ. |
| ಆ) | ಸದರಿ ಪ್ರಾಧಿಕಾರವನ್ನು ಪಿಲಿಕುಳ ಅಭಿವೃದ್ಧಿ ಮಂಡಳಿ ಮಾಡುವ ಬಗ್ಗೆ ಮತ್ತು ಮೃಗಾಲಯವನ್ನು ಮೃಗಾಲಯ ಪ್ರಾಧಿಕಾರಕ್ಕೆ ವಹಿಸುವ ಬಗ್ಗೆ ಯಾವ ರೀತಿಯ ಕ್ರಮಗಳನ್ನು ವಹಿಸಲಾಗಿದೆ; ಯಾವಾಗ ಈ ಪ್ರಕ್ರಿಯೆಗಳು ಪೂರ್ಣಗೊಳಿಸಲಾಗುವುದು; | ಪ್ರಾಧಿಕಾರವನ್ನು ಪಿಲಿಕುಳ ಅಭಿವೃದ್ಧಿ ಮಂಡಳಿ ಮಾಡುವ ಪ್ರಸ್ತಾವನೆ ಕುರಿತು ಪರಿಶೀಲಿಸಿ ವರದಿ ಸಲ್ಲಿಸುವಂತೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ಇವರನ್ನು ಕೋರಲಾಗಿದ್ದು, ವರದಿ ಸ್ವೀಕೃತವಾದ ನಂತರ ಪರಿಶೀಲಿಸಿ ಕ್ರಮವಹಿಸಲಾಗುವುದು.<br><br>ಪಿಲಿಕುಳ ಜೈವಿಕ ಉದ್ಯಾನವನವನ್ನು ಮೃಗಾಲಯ ಪ್ರಾಧಿಕಾರಕ್ಕೆ ವಹಿಸುವ ಬಗ್ಗೆ ದಿನಾಂಕ:18.06.2025 ರಂದು ನಡೆದ ರಾಜ್ಯ ಮಟ್ಟದ ಸಲಹಾ ಸಮಿತಿ ಸಭೆಯಲ್ಲಿ ಚರ್ಚಿಸಿದಂತೆ ಜೈವಿಕ ಉದ್ಯಾನವನವು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಅವಿಭಾಜ್ಯ ಅಂಗವಾಗಿದ್ದು, ಇದರ ಅಸ್ತಿತ್ವವನ್ನು ಪ್ರಾಧಿಕಾರದಲ್ಲೇ ಉಳಿಸಿಕೊಂಡು, ನಿರ್ವಹಣೆಯನ್ನು ಮೃಗಾಲಯ ಪ್ರಾಧಿಕಾರಕ್ಕೆ ನೀಡುವ ಬಗ್ಗೆ ತೀರ್ಮಾನಿಸಲಾಗಿದೆ. ಅದರಂತೆ ಮುಂದಿನ ಕ್ರಮವಹಿಸಲಾಗುತ್ತಿದೆ. |
| ಇ) | ಪಿಲಿಕುಳದ ಸಿಬ್ಬಂದಿಗಳ ವೃಂದ ಮತ್ತು ನೇಮಕಾತಿ ನಿಯಮಗಳ ಕುರಿತಂತೆ ಸರಕಾರದ ನಿರ್ದೇಶನಗಳೇನು; ಅವುಗಳನ್ನು ಪಾಲಿಸಲಾಗಿದೆಯೇ; ಪಾಲಿಸದಿದ್ದರೆ ಕಾರಣವೇನು; ಅನುಸರಣ ಕ್ರಮಗಳನ್ನು ಕ್ಲಪ್ತ ಸಮಯದಲ್ಲಿ ಅನುಷ್ಠಾನ ಮಾಡಲು ಇರುವ ಸಮಸ್ಯೆಗಳೇನು; | ಪಿಲಿಕುಳದ ಸಿಬ್ಬಂದಿಗಳ ವೃಂದ ಮತ್ತು ನೇಮಕಾತಿ ನಿಯಮಗಳನ್ನು ನಿಯಮಾನುಸಾರ ರಚಿಸುವ ಪ್ರಕ್ರಿಯೆಯು ಪ್ರಗತಿಯಲ್ಲಿದೆ. |
| ಈ) | ಪಿಲಿಕುಳ ನಿಸರ್ಗಧಾಮದ ವಿವಿಧ | ಪಿಲಿಕುಳ ನಿಸರ್ಗಧಾಮದ ವಿವಿಧ ಕಟ್ಟಡಗಳು, |

| | | |
|---|---|---|
| | ಕಟ್ಟಡಗಳು, ನಾಗರೀಕ ಸೌಲಭ್ಯಗಳು, ವಿದ್ಯುತ್ ಚಾಲಿತ ವಾಹನಗಳು, ವ್ಯವಹಾರ ಮಳಿಗೆಗಳ ಸುಧಾರಣೆಗೆ ಯಾವ ಕ್ರಮ ವಹಿಸಲಾಗಿದೆ ಈಗಾಗಲೇ ಇರುವ ಸೌಕರ್ಯಗಳನ್ನು ನಿಲ್ಲಿಸಲಾಗಿದೆಯೇ ಅಥವಾ ಉನ್ನತೀಕರಿಸಲಾಗಿದೆಯೇ: | ನಾಗರೀಕ ಸೌಲಭ್ಯಗಳು, ವಿದ್ಯುತ್ ಚಾಲಿತ ವಾಹನಗಳು, ವ್ಯವಹಾರ ಮಳಿಗೆಗಳ ನಿರ್ವಹಣೆಗೆ ಕ್ರಮವಹಿಸಿದ್ದು, ಪ್ರಸ್ತುತ ಯಾವುದೇ ಸೌಲಭ್ಯಗಳನ್ನು ನಿಲ್ಲಿಸಿರುವುದಿಲ್ಲ. |
| ಉ) | ಪಿಲಿಕುಳದ ಯಾವ ವಿಭಾಗಗಳನ್ನು, ಮಾರುಕಟ್ಟೆ ಮಳಿಗೆಗೆಗಳನ್ನು ಸ್ಥಗಿತಗೊಳಿಸಲಾಗಿದೆ: ಕಾರಣವೇನು: ಪ್ರಾಧಿಕಾರದ ಅಧೀನದ ಮಾರುಕಟ್ಟೆ/ಅಂಗಡಿಗಳಲ್ಲಿ ಮಾರಲ್ಪಡುವ ಕರಕುಶಲ ಹಾಗೂ ಇತರ ಸಾಮಾಗ್ರಿಗಳ ಪೂರೈಕೆದಾರರಿಗೆ ಎಷ್ಟು ಅವಧಿಯೊಳಗೆ ಹಣ ಪಾವತಿ ಮಾಡಲಾಗುತ್ತಿದೆ? | ಪಿಲಿಕುಳ ನಿಸರ್ಗಧಾಮದ ಯಾವುದೇ ವಿಭಾಗಗಳನ್ನು ಮತ್ತು ಮಾರುಕಟ್ಟೆ ಮಳಿಗೆಗಳನ್ನು ಸ್ಥಗಿತಗೊಳಿಸಿರುವುದಿಲ್ಲ. ಕರಕುಶಲ ಹಾಗೂ ಇತರ ಸಾಮಾಗ್ರಿಗಳ ಪೂರೈಕೆದಾರರಿಗೆ ಹಣ ಪಾವತಿಗೆ ಯಾವುದೇ ಬಾಕಿ ಇರುವುದಿಲ್ಲ. |

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ನಾನು ಕೆಲವು ವಿಷಯಗಳನ್ನು ಪ್ರಸ್ತಾಪಿಸಲು ಇಷ್ಟಪಡುತ್ತೇನೆ. ಮಾನ್ಯ ಸಚಿವರು ಕಳೆದ ಬಾರಿ ಮಂಗಳೂರಿನ ಪಿಲಿಕುಳಕ್ಕೆ ಬಂದಿದ್ದರು. ಆಗ ನಾನು ಅವರನ್ನು ಭೇಟಿ ಮಾಡಿದ್ದೆನು. ಈ ಪಿಲಿಕುಳ ನಿಸರ್ಗಧಾಮ ಸುಮಾರು 356 ಎಕರೆ ಜಮೀನನ್ನು ಹೊಂದಿರುವಂಥದ್ದು. ಅದರಲ್ಲಿ ಪ್ರಾಣಿ ಸಂಗ್ರಹಾಲಯವಿದೆ. ಮತ್ತೆ ವಿದ್ಯಾರ್ಥಿಗಳಿಗೆ ಬೇಕಾದಂತಹ ಸಂಶೋಧನಾ ಕೇಂದ್ರವಿದೆ. ಅದೇ ರೀತಿ skill development ಇದೆ. ಈ

ರೀತಿ ಹಲವಾರು ಕಾರ್ಯಕ್ರಮಗಳ ಪ್ರವಾಸೋದ್ಯಮ ಸಹ ಇದೆ. ಅದೆಲ್ಲಾ ಸೇರಿಕೊಂಡು ಪಿಲಿಕುಳ ನಿಸರ್ಗಧಾಮವಾಗಿದೆ.

(ಮುಂದು)

(696) 14.08.2025 10.10 LL-AK (ಸಭಾಪತಿಯವರ ಉಪಸ್ಥಿತಿ)

**ಶ್ರೀ ಮಂಜುನಾಥ ಭಂಡಾರಿ(ಮುಂದು):-**

ಇದು ಅಂದಿನ ಜಿಲ್ಲಾಧಿಕಾರಿಯಾದಂತಹ ಶ್ರೀ ಭರತ್‌ಲಾಲ್ ಮೀನಾರವರ ಕನಸಿನ ಕೂಸಾಗಿತ್ತು. ನಂತರ, ಶ್ರೀ ಜೆ.ಆರ್. ಲೋಬೊರವರು ಮತ್ತು ಶ್ರೀ ಜಯಪ್ರಕಾಶ್ ಭಂಡಾರಿಯವರು ಅದನ್ನು ಉತ್ತಮ ರೀತಿಯಲ್ಲಿ ಮಾಡಿದ್ದಾರೆ. ಆದರೆ, ನನ್ನ ಪ್ರಶ್ನೆ ಏನೆಂದರೆ, ಅಲ್ಲಿ ಕರ್ನಾಟಕ ಮೃಗಾಲಯ ಪ್ರಾಧಿಕಾರ (Zoo Authority of Karnataka) ಇದೆ. ಅದು ನಮ್ಮ ಕರ್ನಾಟಕ ಸರ್ಕಾರದ ಪ್ರಾಣಿ ಸಂಗ್ರಹಾಲಯದ ಅಥಾರಿಟಿಯಾಗಿ ಸರ್ಕಾರದ ಒಂದು ಅವಿಭಾಜ್ಯ ಅಂಗವಾಗಿರುತ್ತದೆ. ಆದರೆ, ಅಲ್ಲಿ ನಡೆಯುತ್ತಿರುವಂತಹ ಪ್ರಾಣಿ ಸಂಗ್ರಹಾಲಯವನ್ನು ಪಿಲಿಕುಳ ನಿಸರ್ಗಧಾಮದಿಂದ ನಡೆಸುತ್ತಿದ್ದಾರೆ. ನನ್ನ ಮಾಹಿತಿ ಪ್ರಕಾರ ಅಲ್ಲಿ 1,050 ಪ್ರಾಣಿಗಳು ಇವೆ. ಅದರಲ್ಲಿ 6 ಹುಲಿಗಳು ಇವೆ. ಇದರ ಜೊತೆಗೆ, ಸಿಂಹಗಳು ಮತ್ತು ಚಿರತೆಗಳು ಸಹ ಇವೆ. ಆದರೆ, ಇವೊತ್ತಿನ ದಿವಸ ಆ ಪ್ರಾಣಿ ಸಂಗ್ರಹಾಲಯವನ್ನು ಇವರಿಂದ ನಿರ್ವಹಣೆ ಮಾಡುವುದಕ್ಕೆ ಆಗುತ್ತದೆಯೇ? ನಾಳೆಯ ದಿವಸ ಏನಾದರೂ ಹೆಚ್ಚು ಕಡಿಮೆ ಆದರೆ ಏನಾಗಬಹುದು? ಏಕೆಂದರೆ, ಶ್ರೀ ಜಯಪ್ರಕಾಶ್ ಭಂಡಾರಿಯವರು ಹಿಂದಿನ ಡಿ.ಸಿ.ಎಫ್. ಆಗಿದ್ದು, ಆ ಸಮಯದಲ್ಲಿ ಅವರು ಆ ಪ್ರಾಣಿ ಸಂಗ್ರಹಾಲಯವನ್ನು ನೋಡಿಕೊಳ್ಳುತ್ತಿದ್ದರು. ಆದರೆ, ಇವೊತ್ತಿನ ದಿವಸ ಅಲ್ಲಿ ಅವರು ಇರುವುದಿಲ್ಲ. ಅಲ್ಲದೇ, ಆ ಪ್ರಾಣಿ ಸಂಗ್ರಹಾಲಯದಲ್ಲಿ ಪೂರ್ಣ ಅವಧಿಯ ಅಧಿಕಾರಿಗಳು ಸಹ ಇರುವುದಿಲ್ಲ. ಹಾಗಾಗಿ, ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಆ ಪ್ರಾಣಿ ಸಂಗ್ರಹಾಲಯವನ್ನು ಕರ್ನಾಟಕ ಜ್ಯೂ ಅಥಾರಿಟಿಗೆ ಕೊಡಬೇಕು. ಏಕೆಂದರೆ, ಈ ಹಿಂದೆ ಸದರಿ ಪ್ರಾಣಿ ಸಂಗ್ರಹಾಲಯವನ್ನು ಜ್ಯೂ ಅಥಾರಿಟಿಗೆ ಕೊಡುತ್ತೇವೆಂದು ಒಪ್ಪಿಕೊಂಡಿದ್ದರು ಮತ್ತು ಅದನ್ನು ನಾವು ತೆಗೆದುಕೊಳ್ಳುತ್ತೇವೆಂದು ಜ್ಯೂ ಅಥಾರಿಟಿಯವರು ಒಪ್ಪಿಕೊಂಡಿದ್ದರು. ಆದರೆ, ಕಾರಣಾಂತರಗಳಿಂದ ಅದು ಆಗಿರುವುದಿಲ್ಲ. ಆದುದರಿಂದ, ಆ ಪ್ರಾಣಿ ಸಂಗ್ರಹಾಲಯವನ್ನು ಜ್ಯೂ ಅಥಾರಿಟಿಗೆ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತಿದ್ದೇನೆ.

ಇನ್ನೊಂದು ವಿಷಯವೇನೆಂದರೆ, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರಕ್ಕೆ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿದ್ದಾರೆ. ಆದರೆ, ಜಿಲ್ಲಾಧಿಕಾರಿಗಳಿಗೆ ತಮ್ಮದೇ ಆದಂತಹ ಹಲವಾರು ಕೆಲಸ-ಕಾರ್ಯಗಳು ಇರುತ್ತವೆ. ಹಾಗಾಗಿ, ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಸದರಿ ಪ್ರಾಧಿಕಾರಕ್ಕೆ ಬದಲಾವಣೆ ತಂದು ಜಿಲ್ಲಾಧಿಕಾರಿಗಳಿಗೆ ಬದಲಾಗಿ ಅಲ್ಲಿ ಒಬ್ಬ ಪೂರ್ಣ ಅವಧಿಯ ಸರ್ಕಾರೇತರರನ್ನು ನೇಮಿಸಲು ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಮನವಿ ಮಾಡುತ್ತೇನೆ. ಏಕೆಂದರೆ, ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಭಾಗದಲ್ಲಿ ಮಂಗಳೂರನ್ನು ರಾಜ್ಯದ ಎರಡನೇ ಪ್ರವಾಸೋದ್ಯಮ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಬೇಕೆಂದು ಇದ್ದೇವೆ. ಅದಕ್ಕೆ ಪೂರಕವಾದಂತಹ ಎಲ್ಲಾ

ಸೌಲಭ್ಯಗಳು ಆ ಜಿಲ್ಲೆಯಲ್ಲಿದೆ. ಇದರಿಂದಾಗಿ, ಜಿಲ್ಲಾಧಿಕಾರಿಗಳಿಗೆ ತನ್ನದೇ ಆದಂತಹ ಕೆಲಸದ ಒತ್ತಡಗಳು ಇರುವುದರಿಂದ, ಅವರಿಂದ ಪ್ರಾಧಿಕಾರವನ್ನು ನಿರ್ವಹಣೆ ಮಾಡುವುದಕ್ಕಾಗುತ್ತಿಲ್ಲ. ಈ ಎರಡನ್ನು ತಾವು ಬದಲಾವಣೆ ಮಾಡಬೇಕೆಂದು ತಮ್ಮಲ್ಲಿ ಹಲವಾರು ಬಾರಿ ಮನವಿ ಮಾಡಿಕೊಂಡಿರುತ್ತೇವೆ. ಅದೇ ರೀತಿ, ಸರ್ಕಾರದ ಕಾರ್ಯದರ್ಶಿಯವರಿಗೂ ಸಹ ಮನವಿ ಮಾಡಿಕೊಂಡಿರುತ್ತೇವೆ. ಈಗ ಮತ್ತೊಮ್ಮೆ ತಮ್ಮ ಮೂಲಕ ಮಾನ್ಯ ಸಚಿವರನ್ನು ಮನವಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಎನ್.ಎಸ್. ಬೋಸರಾಜು(ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ವಿಷಯವನ್ನು ಎರಡು-ಮೂರು ಬಾರಿ ನಮ್ಮ ಗಮನಕ್ಕೆ ತಂದಿರುತ್ತಾರೆ. ನಾವು ಕೂಡ ಎರಡು ಮೂರು ಬಾರಿ ಸಭೆ ನಡೆಸಿರುತ್ತೇವೆ. ಅದರಂತೆ, ಯಾವ ಕಾರಣಕ್ಕಾಗಿ ಆ ಪ್ರಾಣಿ ಸಂಗ್ರಹಾಲಯವನ್ನು ಜ್ಯೂ ಅಥಾರಿಟಿಯವರಿಗೆ ಕೊಡಬೇಕು ಮತ್ತು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರವನ್ನು ಅಭಿವೃದ್ಧಿ ಮಂಡಳಿ ಮಾಡಬೇಕು ಎಂಬ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಆದರೆ, ಆ ಪ್ರಾಣಿ ಸಂಗ್ರಹಾಲಯವನ್ನು ಜ್ಯೂ ಅಥಾರಿಟಿಗೆ ಕೊಡಬೇಕೆಂದರೆ, ಇದಕ್ಕೆ ಎರಡು ಕಮಿಟಿಗಳು ಇರುತ್ತವೆ. ಅದರಂತೆ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಒಂದು ಸಲಹಾ ಸಮಿತಿ ಇರುತ್ತದೆ. ಅದೇ ರೀತಿ, ನನ್ನ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದಲ್ಲಿ ಒಂದು ಸಲಹಾ ಸಮಿತಿ ಇರುತ್ತದೆ. ಅದರಂತೆ, ಜಿಲ್ಲಾ ಸಲಹಾ ಸಮಿತಿಯಲ್ಲಿ ಏನು ತೀರ್ಮಾನ ಮಾಡಿರುತ್ತಾರೆಂದರೆ, "ಪಿಲಿಕುಳ ಜೈವಿಕ ಉದ್ಯಾನವನ್ನು ಕರ್ನಾಟಕ ಮೃಗಾಲಯ ಪ್ರಾಧಿಕಾರಕ್ಕೆ ವಹಿಸುವ ಬಗ್ಗೆ ದಿನಾಂಕ: 18.06.2025ರಂದು ನಡೆದ ರಾಜ್ಯ ಮಟ್ಟದ ಸಲಹಾ ಸಮಿತಿ ಸಭೆಯಲ್ಲಿ ಚರ್ಚಿಸಿದಂತೆ, ಜೈವಿಕ ಉದ್ಯಾನವನವು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಅವಿಭಾಜ್ಯ ಅಂಗವಾಗಿದ್ದು, ಇದರ ಅಸ್ತಿತ್ವವನ್ನು ಪ್ರಾಧಿಕಾರದಲ್ಲೇ ಉಳಿಸಿಕೊಂಡು, ನಿರ್ವಹಣೆಯನ್ನು ಮೃಗಾಲಯ ಪ್ರಾಧಿಕಾರಕ್ಕೆ ನೀಡುವ ಬಗ್ಗೆ ತೀರ್ಮಾನಿಸಲಾಗಿರುತ್ತದೆ" ಎಂದು ತಿಳಿಸಿರುತ್ತಾರೆ. ಆದರೆ, ಅದನ್ನು ಯಾವ ರೀತಿ ಮಾಡಬೇಕೆಂದು ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ ಅಧಿಕಾರಿಗಳ ಒಂದು ಸಮಿತಿ ಮಾಡಿ, ನಮ್ಮ ಕಾರ್ಯದರ್ಶಿಯವರು ಅವರ ಜೊತೆಯಲ್ಲಿ ಚರ್ಚೆ ಮಾಡುತ್ತಿದ್ದಾರೆ. ಅದರಂತೆ, ಆ ಪ್ರಾಣಿ ಸಂಗ್ರಹಾಲಯವನ್ನು ಯಾವ ರೀತಿ ನೀಡಿದರೆ, ಅದನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡುವುದಕ್ಕಾಗುತ್ತದೆ ಎಂದು ಚರ್ಚಿಸಿದ್ದು, ಅದು ಈಗ ಪ್ರಗತಿಯಲ್ಲಿರುತ್ತದೆ. ಮಾನ್ಯ ಸದಸ್ಯರು ಹೇಳಿರತಕ್ಕಂತಹ ಸಲಹೆಯನ್ನು ಸಹ ನಾವು ಗಂಭೀರವಾಗಿ ಗಮನಿಸಿರುತ್ತೇವೆ. ಆದರೆ, ಅಲ್ಲಿ ಎರಡು ಅಭಿಪ್ರಾಯಗಳು ಇರುತ್ತವೆ. ಅದೇನೆಂದರೆ, ಆ ಪ್ರಾಣಿ ಸಂಗ್ರಹಾಲಯ ನಮ್ಮ ಅಸ್ತಿತ್ವದಲ್ಲಿರಬೇಕು. ಏಕೆಂದರೆ, ಅನೇಕ ವರ್ಷಗಳಿಂದ ನಾವು ಆ ಪ್ರಾಣಿ ಸಂಗ್ರಹಾಲಯವನ್ನು ನಡೆಸಿಕೊಂಡು ಬಂದಿದ್ದು, ಇದುವರೆವಿಗೂ ಯಾವುದೇ ತೊಂದರೆಯಾಗಿರುವುದಿಲ್ಲ. ಇಡೀ ದೇಶದಲ್ಲಿಯೇ ಈ ರೀತಿಯಾದಂತಹ ಪ್ರಾಣಿ ಸಂಗ್ರಹಾಲಯ ಬೇರೆ ಕಡೆ ಇರುವುದಿಲ್ಲ ಎಂದು ಅವರು ಹೇಳುವಂಥದ್ದು ಇದೆ. ಮಾನ್ಯ ಸದಸ್ಯರು ಆ ಪ್ರಾಣಿ ಸಂಗ್ರಹಾಲಯದಿಂದ ಮುಂದಿನ ದಿನಗಳಲ್ಲಿ ಯಾರಿಗೂ ತೊಂದರೆಯಾಗಬಾರದು ಮತ್ತು ಅದನ್ನು ಅಭಿವೃದ್ಧಿ ಮಾಡಬೇಕಾದರೆ ಅದು ಕರ್ನಾಟಕ ಜ್ಯೂ ಅಥಾರಿಟಿಗೆ ಕೊಟ್ಟರೆ

ಒಳ್ಳೆಯದು ಎಂಬುದು ಅವರ ಅಭಿಪ್ರಾಯವಾಗಿದೆ. ಈ ಎರಡು ವಿಷಯಗಳ ಬಗ್ಗೆ ನಮ್ಮ ಇಲಾಖೆಯ ಕಾರ್ಯದರ್ಶಿಯವರ ಜೊತೆ ನಾನು ಈಗಾಗಲೇ ಸಭೆ ನಡೆಸಿರುತ್ತೇನೆ. ಅದರಂತೆ, ಅವರು ಈ ಪ್ರೋಸೆಸ್ ಮಾಡುತ್ತಿದ್ದಾರೆ. ಅದು ಅಂತಿಮ ಹಂತಕ್ಕೆ ಬಂದ ನಂತರ, ಮಾನ್ಯ ಸದಸ್ಯರು ಹೇಳಿದಂತಹ ವಿಚಾರವನ್ನು ಗಮನದಲ್ಲಿಟ್ಟುಕೊಂಡು ನಾವು ಮುಂದಿನ ನಿರ್ಧಾರ ತೆಗೆದುಕೊಳ್ಳುತ್ತೇವೆ.

ಎರಡನೆಯದಾಗಿ, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಏನಿದೆ, ಅದನ್ನು ಅಭಿವೃದ್ಧಿ ಮಂಡಳಿ ಮಾಡಬೇಕೆಂದು ಮಾನ್ಯ ಸದಸ್ಯರು ಹೇಳಿರುತ್ತಾರೆ. ಮೊದಲೇ ಇದನ್ನು ಅಭಿವೃದ್ಧಿ ಪ್ರಾಧಿಕಾರ ಮಾಡಿರುವುದರಿಂದ, ಜಿಲ್ಲಾಧಿಕಾರಿಗಳು ಇದಕ್ಕೆ ಅಧ್ಯಕ್ಷರಾಗಿರುತ್ತಾರೆ. ಹಾಗಾಗಿ, ಮಾನ್ಯ ಸದಸ್ಯರು ಹೇಳಿದಂತೆ, ಜಿಲ್ಲಾಧಿಕಾರಿಗಳು ಇದಕ್ಕೆ ಹೆಚ್ಚಿನ ಸಮಯ ಕೊಡುವುದಕ್ಕೆ ಆಗುತ್ತಿಲ್ಲ. ಏಕೆಂದರೆ, ಅದು ಸುಮಾರು 350-360 ಎಕರೆ ವಿಸ್ತೀರ್ಣದಲ್ಲಿದ್ದು, ಎಲ್ಲಾ ರೀತಿಯಾದಂತಹ, ಆಕರ್ಷಣೀಯವಾಗಿರುವಂತಹ ಚಟುವಟಿಕೆಗಳು ಅಲ್ಲಿ ನಡೆಯುತ್ತಿರುತ್ತವೆ. ಹಾಗಾಗಿ, ಅದನ್ನು ಅಭಿವೃದ್ಧಿ ಮಾಡಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳು ಸಹ ಸಾಕಷ್ಟು ಕ್ರಮ ತೆಗೆದುಕೊಂಡಿರುತ್ತಾರೆ. ಆದುದರಿಂದ, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರವನ್ನು ಅಭಿವೃದ್ಧಿ ಮಂಡಳಿ ಮಾಡಬೇಕಾದರೆ ಆಕ್ಟ್‌ಗೆ ತಿದ್ದುಪಡಿ ಮಾಡಬೇಕಾಗಿರುತ್ತದೆ. ಹಾಗಾಗಿ, ಈ ವಿಚಾರ ಸರ್ಕಾರದ ಗಮನದಲ್ಲಿರುತ್ತದೆ. ಅದರಂತೆ, ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ, ಅಲ್ಲಿರತಕ್ಕಂತಹ ಜಿಲ್ಲಾ ಸಲಹಾ ಸಮಿತಿಯವರು ಒಂದು ರೀತಿಯಾದಂತಹ ಪ್ರಸ್ತಾವನೆ ಕಳುಹಿಸಬೇಕಾಗಿರುತ್ತದೆ. ಅದನ್ನು ಈಗಾಗಲೇ ಅವರ ಗಮನಕ್ಕೆ ತಂದಿರುತ್ತೇವೆ. ಮಾನ್ಯ ಸದಸ್ಯರು ನಮಗೆ ನೀಡಿರುವಂತಹ ಪತ್ರವನ್ನು ನಾವು ಅವರಿಗೆ ಕಳುಹಿಸಿ, ಪ್ರಾಧಿಕಾರವನ್ನು ಅಭಿವೃದ್ಧಿ ಮಂಡಳಿ ಮಾಡುವ ಬಗ್ಗೆ ಒಂದು ನಿರ್ಣಯ ಮಾಡಿ ಕಳುಹಿಸಿದರೆ, ಸರ್ಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಎಂಬ ಮಾತನ್ನು ಅವರಿಗೆ ತಿಳಿಸಿರುತ್ತೇವೆ. ಅದರಂತೆ, ಅದನ್ನು ಪ್ರೋಸೆಸ್ ಮಾಡುತ್ತಿದ್ದೇವೆ. ಆದರೂ ಸಹ, ಸರ್ಕಾರದ ಮಟ್ಟದಲ್ಲಿ ವಿಚಾರ ಮಾಡಿ, ಬರುವಂತಹ ದಿನಗಳಲ್ಲಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಮಂಜುನಾಥ್ ಭಂಡಾರಿ:-** ಮಾನ್ಯ ಸಭಾಪತಿಯವರೇ, ದಿನಾಂಕ:10.08.2023ರಂದು ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಪತ್ರ ಬರೆದು, ಅದರಲ್ಲಿ ಬಹಳ ಸ್ಪಷ್ಟವಾಗಿ ಹೇಳಿರುವುದೇನೆಂದರೆ, "ದೆಹಲಿಯವರು ಬಂದಾಗ, ಆ ಪ್ರಾಣಿ ಸಂಗ್ರಹಾಲಯವನ್ನು ತಾವು ನಡೆಸುವುದು ಬೇಡ. ಬದಲಾಗಿ, ಇದನ್ನು ಜ್ಯೂ ಅಥಾರಿಟಿಗೆ ಕೊಡಿ. ಜ್ಯೂ ಅಥಾರಿಟಿಗೆ ಕೊಟ್ಟಾಗ ಅದಕ್ಕೆ ಬೇಕಾದಂತಹ ಸಂಪೂರ್ಣ ಅಧಿಕಾರಿಗಳು ಅಂದರೆ, ಅರಣ್ಯ ಇಲಾಖೆಯವರು ಯಾವ ರೀತಿ ಪ್ರಾಣಿ ಸಂಗ್ರಹಾಲಯವನ್ನು ನಿರ್ವಹಣೆ ಮಾಡಬೇಕೆಂಬುದು ಅವರಿಗೆ ಗೊತ್ತಿರುತ್ತದೆ" ಎಂದು ತಿಳಿಸಿರುತ್ತಾರೆ. ಅವರ ಆದೇಶದ ಪ್ರಕಾರ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಪತ್ರ ಬರೆದಿರುತ್ತಾರೆ. ಜೊತೆಗೆ, ಕರಡು ಪ್ರತಿಗೆ ಎಲ್ಲರೂ ಸಹ ಒಪ್ಪಿಕೊಂಡಿರುತ್ತಾರೆ. ಕೊನೆಯ ದಿವಸ ಆ ಪ್ರಾಣಿ ಸಂಗ್ರಹಾಲಯವನ್ನು ಜ್ಯೂ ಅಥಾರಿಟಿಗೆ ಹಸ್ತಾಂತರ ಮಾಡುವಂತಹ ಸಂದರ್ಭದಲ್ಲಿ ಇದು ನಿಂತು ಹೋಗಿರುತ್ತದೆ. ಹಾಗಾಗಿ, ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿರುತ್ತದೆ. ನಾನು ಹೇಳುವುದೇನೆಂದರೆ, ಪಿಲಿಕುಳದ ಅಸ್ತಿತ್ವವನ್ನು ಉಳಿಸಿಕೊಳ್ಳೋಣ. ಆದರೆ, ಆ ಪ್ರಾಣಿ ಸಂಗ್ರಹಾಲಯದಲ್ಲಿ

ಸುಮಾರು 1,080 ಪ್ರಾಣಿಗಳು ಇರುವುದರಿಂದ, ಜ್ಞೂ ಅಥಾರಿಟಿಯವರು ಪ್ರಾಣಿಗಳನ್ನು ನಿರ್ವಹಣೆ ಮಾಡುವುದಕ್ಕಾಗಿಯೇ ಇರುತ್ತಾರೆ. ಅರಣ್ಯ ಇಲಾಖೆಯವರು ನಮ್ಮ ರಾಜ್ಯದಲ್ಲಿರುವ ಐದಾರು ಜೂ ಗಳನ್ನು ಜ್ಞೂ ಅಥಾರಿಟಿಯವರು ನಡೆಸಿಕೊಂಡು ಬರುತ್ತಿದ್ದಾರೆ. ನಮಗೆ ನಮ್ಮ ಐಡೆಂಟಿಟಿ ಇದ್ದೇ ಇರುತ್ತದೆ. ಆದರೆ, ಆ ಪ್ರಾಣಿಗಳನ್ನು ಯಾವ ರೀತಿ ನೋಡಿಕೊಳ್ಳಬೇಕು ಎನ್ನುವುದಕ್ಕೆ ಗೈಡ್‌ಲೈನ್ಸ್ ಇರುತ್ತದೆ. ಅದು ಅರಣ್ಯ ಇಲಾಖೆಯವರಿಗೆ ಗೊತ್ತಿರುವುದರಿಂದ, ಆ ಪ್ರಾಣಿ ಸಂಗ್ರಹಾಲಯವನ್ನು ಅವರಿಗೆ ಕೊಡಬೇಕು.

ಎರಡನೆಯದಾಗಿ, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರಕ್ಕೆ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುತ್ತಾರೆ. ಜಿಲ್ಲಾಧಿಕಾರಿಗಳಿಗೆ ಅವರದ್ದೇ ಆದಂತಹ ಕರ್ತವ್ಯಗಳು ಇರುತ್ತವೆ. ಹಾಗಾಗಿ, ಅದಕ್ಕೆ ಬೇರೆ ಅಧ್ಯಕ್ಷರನ್ನು ನೇಮಿಸುವಂತಹ ಕೆಲಸವನ್ನು ಮಾಡಬೇಕು. ಜೊತೆಗೆ, ಅದಕ್ಕೆ ಹಣಕಾಸು ಬೇಕಾಗಿರುತ್ತದೆ. ಇವೊತ್ತಿನ ದಿವಸ ಆ ಪ್ರಾಣಿ ಸಂಗ್ರಹಾಲಯವನ್ನು ನಡೆಸುವಂತಹವರು ತಾತ್ಕಾಲಿಕ ಅಧಿಕಾರಿಗಳಾಗಿರುತ್ತಾರೆ. ಹಾಗಾಗಿ, ಅಲ್ಲಿ ಒಬ್ಬ ಕೆ.ಎ.ಎಸ್. ಹಂತದ ಅಧಿಕಾರಿಯನ್ನು ಪೂರ್ಣ ಅವಧಿಯ ಅಧಿಕಾರಿಯನ್ನು ಅಲ್ಲಿ ನೇಮಿಸಬೇಕೆಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಐವನ್ ಡಿ' ಸೋಜಾ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಕೂಡ ಆ ಭಾಗದಿಂದ ಬಂದಿರುವಂತಹ ಶಾಸಕನಾಗಿರುತ್ತೇನೆ. I am a also member of the Pilikula Committee.

**ಸಭಾಪತಿಯವರು:-** ಎಲ್ಲಾ ಭಾಗದಿಂದ ಎಲ್ಲರೂ ಬಂದಿರುತ್ತಾರೆ. ನಮ್ಮಲ್ಲಿ ಪದ್ಧತಿ ಏನಿದೆ? ಯಾರು ಪ್ರಶ್ನೆ ಕೇಳುತ್ತಾರೆ, ಅವರಿಗೆ ಮಾತ್ರ ಉಪ ಪ್ರಶ್ನೆ ಕೇಳುವುದಕ್ಕೆ ಅವಕಾಶ ಇರುತ್ತದೆ ಅಲ್ಲವೇ? ಹಾಗಾಗಿ, ನೀವು ಎಂದರೆ ನನಗೆ ಹೆಚ್ಚೇ?

**ಶ್ರೀ ಐವನ್ ಡಿ' ಸೋಜಾ:-** ಮಾನ್ಯ ಸಭಾಪತಿಯವರೇ, ಹೌದು ಇದೆ. ಆದರೆ, ಮಾನ್ಯ ಮಂಜುನಾಥ್ ಭಂಡಾರಿಯವರು ಏನು ಪ್ರಶ್ನೆ ಕೇಳಿರುತ್ತಾರೆ, ಅದಕ್ಕೆ ನಾನು ಬೆಂಬಲ ವ್ಯಕ್ತಪಡಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಐವನ್ ಡಿ' ಸೋಜಾರವರೇ, ತಾವು ಮಾತನಾಡುವುದಕ್ಕೆ ನಾನು ಅವಕಾಶ ಕೊಟ್ಟಿದ್ದೇನೆಯೇ? ಆದುದರಿಂದ, ತಾವು ಈ ವಿಷಯದ ಬಗ್ಗೆ ಯಾವುದಾದರೂ ರೂಪದಲ್ಲಿ ನನಗೆ ನೋಟಿಸ್ ಕೊಡಿ. ನಂತರ, ನಾನು ಅದನ್ನು ಪರಿಶೀಲಿಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ದಿನಾಂಕ:18.06.2025ರಂದು ಜಿಲ್ಲಾ ಮಟ್ಟದ ಸಲಹಾ ಸಮಿತಿಯವರು, ಆ ಪ್ರಾಣಿ ಸಂಗ್ರಹಾಲಯದ ಅಸ್ತಿತ್ವವನ್ನು ಉಳಿಸಿಕೊಂಡು ಜ್ಞೂ ಅಥಾರಿಟಿಗೆ ಅದರ ನಿರ್ವಹಣೆ ಮಾಡುವುದಕ್ಕೆ ಹಸ್ತಾಂತರಿಸಬೇಕೆಂದು ನಿರ್ಣಯ ಮಾಡಿ ಸರ್ಕಾರಕ್ಕೆ ಕಳುಹಿಸಿರುತ್ತಾರೆ. ಆ ಉದ್ದೇಶಕ್ಕಾಗಿ ನಮ್ಮ ಮಾನ್ಯ ಸದಸ್ಯರು ನಮಗೆ ಬರೆದಿರುವಂತಹ ಪತ್ರವನ್ನು ಅವರಿಗೆ ಕೊಟ್ಟು, ಅವರು ಹೇಳಿರುವಂತಹ ಎರಡು ಉದ್ದೇಶಗಳನ್ನು ನಾವು ಅರ್ಥ ಮಾಡಿಕೊಂಡು, ಜ್ಞೂ ಅಥಾರಿಟಿಯವರ ಜೊತೆಯಲ್ಲಿ ಮಾತನಾಡಿ, ಇದರ ಬಗ್ಗೆ

ಒಂದು ತೀರ್ಮಾನ ತೆಗೆದುಕೊಳ್ಳಿ ಎಂದು ನಮ್ಮ ಅಧಿಕಾರಿಗಳಿಗೆ ಸೂಚನೆ ನೀಡಿರುತ್ತೇನೆ. ಅದರಂತೆ, ಆದಷ್ಟು ಬೇಗ ಅದರ ಬಗ್ಗೆ ಸರ್ಕಾರ ನಿರ್ಧಾರ ತೆಗೆದುಕೊಳ್ಳುತ್ತದೆ.

**ಸಭಾಪತಿಯವರು:-** ಸರ್ಕಾರ ಎಂದರೆ, ತಾವೇ ಅಲ್ಲವೇ?

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಹೌದು, ಸರ್ಕಾರ ಎಂದರೆ ನಾವೇ. ಈ ವಿಷಯದಲ್ಲಿ ನಾವೇ ನಿರ್ಧಾರ ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದೇನೆ. ಏಕೆಂದರೆ, ಜಿಲ್ಲಾ ಮಟ್ಟದ ಸಲಹಾ ಸಮಿತಿಯಿಂದ ನಿರ್ಣಯ ಬಂದ ತಕ್ಷಣವೇ, ನಮ್ಮ ಇಲಾಖೆಯ ಕಾರ್ಯದರ್ಶಿಯವರು, ಜ್ಯೂ ಅಥಾರಿಟಿಯವರು ಮತ್ತು ಅರಣ್ಯ ಇಲಾಖೆಯವರು ಸೇರಿದಂತೆ ಒಂದು ಸಮಿತಿ ರಚನೆ ಮಾಡಿ, ಈ ವಿಷಯದ ಬಗ್ಗೆ ಚರ್ಚೆ ಮಾಡಿ, ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕೆಂದು ಸೂಚನೆ ನೀಡಿರುತ್ತೇವೆ. ಅದು ಬಂದ ನಂತರ, ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ. ಎರಡನೆಯದಾಗಿ, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರವನ್ನು ಅಭಿವೃದ್ಧಿ ಮಂಡಳಿ ಮಾಡಬೇಕಾದರೆ ಆಕ್ಟ್ ಅಮೆಂಡ್‌ಮೆಂಟ್ ಮಾಡಬೇಕಾಗುತ್ತದೆ. ಆ ಪ್ರಕ್ರಿಯೆಯನ್ನು ಸರ್ಕಾರ ಮಾಡಬೇಕಾದರೆ ಎಲ್ಲರ ಜೊತೆ ಚರ್ಚೆ ಮಾಡಬೇಕಾಗಿರುತ್ತದೆ. ಮುಂದೆ ಬರುವಂತಹ ದಿನಗಳಲ್ಲಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಮಂಜುನಾಥ್ ಭಂಡಾರಿ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಈ ವಿಷಯದ ಬಗ್ಗೆ ಜಿಲ್ಲಾಧಿಕಾರಿಗಳು ಸಲಹಾ ಸಮಿತಿಯಲ್ಲಿ ಚರ್ಚಿಸಿ, ಎಲ್ಲರ ಅಭಿಪ್ರಾಯ ಪಡೆದು ಬಹಳ ಸ್ಪಷ್ಟವಾಗಿ ಪತ್ರ ಬರೆದಿರುತ್ತಾರೆ. ಆದರೆ, ಕೊನೆಯ ಒಂದು ದಿವಸದಲ್ಲಿ ಅದನ್ನು ನಿಲ್ಲಿಸಿರುತ್ತಾರೆ. ಆದರೆ, ಪಿಲಿಕುಳದಲ್ಲಿ ನಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುತ್ತಿದ್ದಾರೆ. ಇದಕ್ಕೆ ಅರಣ್ಯ ಇಲಾಖೆಯವರು ಒಪ್ಪುವುದಿಲ್ಲ. ಈ ವಿಷಯದ ಬಗ್ಗೆ ಬಹಳಷ್ಟು ಓಡಾಡಿರುತ್ತೇನೆ. ಈ ವಿಷಯದಲ್ಲಿ ನಾನು ಪ್ರಾಣಿಗಳ ಕಾಳಜಿಯನ್ನು ವಹಿಸಿಕೊಳ್ಳುತ್ತಿದ್ದೇನೆ. ಏಕೆಂದರೆ, ಆ ಪ್ರಾಣಿ ಸಂಗ್ರಹಾಲಯದಲ್ಲಿ 1,050 ಪ್ರಾಣಿಗಳು ಇವೆ. ಅಲ್ಲಿ ಹುಲಿ, ಸಿಂಹ, ಚಿರತೆ ಹಾಗೂ ಇತರೆ ಪ್ರಾಣಿಗಳು ಸಹ ಇವೆ. ಈ ಹಿಂದೆ ಅರಣ್ಯ ಇಲಾಖೆಯ ಡಿ.ಸಿ.ಎಫ್. ಆಗಿದ್ದಂತಹ ಶ್ರೀ ಜಯಪ್ರಕಾಶ್ ಭಂಡಾರಿಯವರು ಅದನ್ನು ನೋಡಿಕೊಳ್ಳುತ್ತಿದ್ದರು. ಆದರೆ, ಇವೊತ್ತಿನ ದಿವಸ ಅವರು ಅಲ್ಲಿರುವುದಿಲ್ಲ. ಆ ಪ್ರಾಣಿ ಸಂಗ್ರಹಾಲಯವನ್ನು ನೋಡಿಕೊಳ್ಳುವುದಕ್ಕಾಗಿ ಜ್ಯೂ ಅಥಾರಿಟಿ ಇದೆ. ಆ ಪ್ರಾಣಿ ಸಂಗ್ರಹಾಲಯದ ಅಸ್ತಿತ್ವ ನಮ್ಮದೇ ಇರಲಿ. ಅದರ ಬಗ್ಗೆ ನಾನು ಮಾತನಾಡುತ್ತಿರುವುದಿಲ್ಲ. ಆದರೆ, ಆ ಪ್ರಾಣಿ ಸಂಗ್ರಹಾಲಯದಲ್ಲಿ ಪ್ರಾಣಿಗಳನ್ನು ಹೇಗೆ ನಿರ್ವಹಣೆ ಮಾಡಬೇಕೆಂಬುದು ಮುಖ್ಯವಾಗಿರುತ್ತದೆ. ಇಂತಹ ಪ್ರಾಣಿ ಸಂಗ್ರಹಾಲಯಗಳಲ್ಲಿ ಏನೇನು ಆಗಿವೆ ಎಂಬ ಬಗ್ಗೆ ಇವೊತ್ತಿನ ದಿವಸ ಹಲವಾರು ದಿನಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ. ಹಾಗಾಗಿ, ಆ ಪ್ರಾಣಿ ಸಂಗ್ರಹಾಲಯದಲ್ಲಿ ಮತ್ತೊಂದು ಅವಾಂತರ ಆಗಬಾರದೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಬಹಳ ದಿನಗಳ ಹಿಂದೆಯೇ ಪ್ರಾರಂಭವಾಗಿರುತ್ತದೆ. ಆ ಪ್ರಾಧಿಕಾರದಲ್ಲಿ ಬಹಳಷ್ಟು ಅಧಿಕಾರಿಗಳನ್ನು ಬದಲಾವಣೆ ಮಾಡಿ, ಒಂದು ಸ್ವತಂತ್ರವಾಗಿ ಸಹಕಾರ ಸಂಘಗಳ ಜಂಟಿ ನಿಬಂಧಕರನ್ನು ನೇಮಕ ಮಾಡಿದ್ದೇವೆ. ಅವರು ಸುಮಾರು 9 ತಿಂಗಳು

ಕೆಲಸ ಮಾಡಿ, ನಂತರ ನನ್ನಿಂದ ಈ ಕೆಲಸ ಆಗುವುದಿಲ್ಲವೆಂದು ಬಿಟ್ಟು ಹೋಗಿರುತ್ತಾರೆ. ಆ ರೀತಿಯಾಗಿ ಸಹಜವಾಗಿ ಜಿಲ್ಲಾಧಿಕಾರಿಗಳನ್ನು ಆ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ಮಾಡಿರುತ್ತೇವೆ. ಆದುದರಿಂದ, ಈ ವಿಷಯದ ಬಗ್ಗೆ ಆಕ್ಟ್ ಅನ್ನು ತಿದ್ದುಪಡಿ ಮಾಡುವಂತಹ ಪ್ರಯತ್ನವನ್ನು ನಾವು ಈಗ ಮಾಡುತ್ತಿದ್ದೇವೆ. ಅಲ್ಲದೇ, ಈ ವಿಷಯ ಸರ್ಕಾರದ ಗಮನದಲ್ಲಿದೆ. ಆದಷ್ಟು ಬೇಗ ನಾವು ನಿರ್ಧಾರ ತೆಗೆದುಕೊಳ್ಳುತ್ತೇವೆ. ಈ ವಿಷಯದಲ್ಲಿ ಪರ ವಿರೋಧ ಅಭಿಪ್ರಾಯಗಳು ಇವೆ. ಆ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ಸರ್ಕಾರ ಒಂದು ನಿರ್ಧಾರ ತೆಗೆದುಕೊಳ್ಳುತ್ತದೆ.

(ಮುಂದು)

(697) 14.08.2025 10.20 ವೈಎಲ್-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ಯಾವುದೇ ಕಾರಣಕ್ಕೂ ಅದು,... ಪಿಲಿಕುಳ ನಿಸರ್ಗಧಾಮ Zoo Authority ಸ್ವಾಧೀನದಲ್ಲಿದ್ದರೆ ಮಾತ್ರ ಸರಿಯಾಗಿ ನಿರ್ವಹಣೆ ಮಾಡಲು ಸಾಧ್ಯವಿದೆ. ಈ ಹಿಂದೆ ಶ್ರೀ ಜಯಪ್ರಕಾಶ್ ಎಂಬುವವರು DFO ಆಗಿದ್ದು, ಅವರು ಸರಿಯಾಗಿ ನಿರ್ವಹಣೆ ಮಾಡುತ್ತಿದ್ದರು. ನಿನ್ನೆ ಅಥವಾ ಮೊನ್ನೆ ದಿವಸ ಪತ್ರಿಕೆಯಲ್ಲಿ 'ತಿನ್ನಲಿಕ್ಕೆ ಹಾಕುವಂಥ ಪ್ರಾಣಿಯ ಮಾಂಸದಲ್ಲಿ ಸಹ ವಿಷವಿದ್ದು, ಅಲ್ಲಿ ಮತ್ತೆ ಸಮಸ್ಯೆಯಾಗಿದೆ' ಎಂದು ವರದಿಯಾಗಿತ್ತು. ಪ್ರತಿ ದಿವಸ ಪಿಲಿಕುಳ news ನಲ್ಲಿರುವುದು ಬೇಡ. ಅದಕ್ಕಾಗಿ ಬಹಳ ಒಳ್ಳೆಯ ಸಂಸ್ಥೆ ಇದ್ದು, ಅದನ್ನು ಉಳಿಸಬೇಕು ಮತ್ತು ದೊಡ್ಡದಾದ ಮೂಲಸೌಕರ್ಯವನ್ನು ಒಳಗೊಂಡಿದ್ದು, ಅದಕ್ಕೆ ಬೇಕಾದಂಥ ನೌಕರರು ಸರಿಯಾಗಿಲ್ಲ. ಸುಮಾರು 60 ರಿಂದ 70 ಜನ ನೌಕರರಿರಬೇಕಾದ ಸಂಸ್ಥೆಯಲ್ಲಿ ಕೇವಲ ಐದಾರು ಜನ ಖಾಯಂ ನೌಕರರನ್ನಿಟ್ಟುಕೊಂಡು ಆ ಸಂಸ್ಥೆಯನ್ನು ನಡೆಸಲಾಗುತ್ತಿದೆ. ಅದಕ್ಕೆ ಯಾವುದಾದರೂ ಕಾರ್ಯಕಲ್ಪ ಕೊಡಬೇಕು ಮತ್ತು ಅದರ ಬೆಳವಣಿಗೆಗೆ ಅಲ್ಲಿ ಒಂದು ಅಭಿವೃದ್ಧಿ ಪ್ರಾಧಿಕಾರವನ್ನು ಮಾಡಿ, non-official Chairman ನೇಮಕ ಮಾಡಬೇಕೆಂದು ನಾನು ಸಹ ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುತ್ತೇನೆ.

**ಸಭಾಪತಿಯವರು:-** ಬಹಳ ದಿವಸಗಳ ಹಿಂದೆ ನಾನು ಸಹ ಸಚಿವನಾಗಿದ್ದ ಸಂದರ್ಭದಲ್ಲಿ ಅಲ್ಲಿಗೆ ಹೋಗಿ, ಅಲ್ಲಿ ಏನೇನು ಅಭಿವೃದ್ಧಿ ಮಾಡಬೇಕೆನ್ನುವಂಥ ಕೆಲಸ ಮಾಡಿದ್ದೆನು. ಹಾಗಾಗಿ, ಮಾನ್ಯ ಸಭಾನಾಯಕರು ಒಮ್ಮೆ ಅಲ್ಲಿಗೆ ಹೋಗಿ ಬನ್ನಿ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಾನು ಒಂದು ಸಲ ಮಾತ್ರ ಇಲ್ಲ, ಮೂರು ಸಲ ಅಲ್ಲಿಗೆ ಹೋಗಿ ಭೇಟಿ ನೀಡಿದ್ದೇನೆ. ಅಲ್ಲಿಗೆ ಕಾರ್ಯದರ್ಶಿಯವರನ್ನು ಕರೆಸಿ ಅಲ್ಲಿ ಸಭೆ ಸಹ ನಡೆಸಿದ್ದೇವೆ ಮತ್ತು ಇಲ್ಲಿಯೂ ಸಭೆ ನಡೆಸಿದ್ದೇವೆ. ನಾವು ಎಲ್ಲಾ ರೀತಿಯ ಪ್ರಯತ್ನವನ್ನು ಮಾಡಿದ್ದು, ಅಲ್ಲಿ ಕೆಲವೊಂದು ಸಮಸ್ಯೆಗಳಿದ್ದು, ಆ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಸರ್ಕಾರದ ಮಟ್ಟದಲ್ಲಿ ವಿಚಾರ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿದಂಥ ವಿಚಾರದಲ್ಲಿ ಎರಡು ವಿಚಾರಗಳನ್ನು ಬಹಳ ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಅವೆರಡನ್ನೂ ಆದಷ್ಟು ತೀವ್ರವಾಗಿ ಸರಿಪಡಿಸಿ, ಅದಕ್ಕೊಂದು ಕಾರ್ಯಕಲ್ಪ ಕೊಡುತ್ತೇವೆ.

**ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಉತ್ತರ ನೀಡುವಾಗ ಯಾವುದೋ JRCS ರವರನ್ನು ನೇಮಿಸಲಾಗಿದೆ ಎಂದು ಹೇಳಿದರು. ಪ್ರಾಣಿ ಸಂಗ್ರಹಾಲಯಕ್ಕೆ Joint Registrar ಬಂದರೆ, ಹೇಗೆ ಆ ಸಂಗ್ರಹಾಲಯ ನಡೆಯಬಹುದು? ಆ ಪ್ರಾಣಿ ಸಂಗ್ರಹಾಲಯದ ಬಗ್ಗೆ ಅವರಿಗೆ ಗೊತ್ತಿರಬೇಕಲ್ಲವೇ? ನಾನು ಅದಕ್ಕಾಗಿ ತಮ್ಮ ಮೂಲಕ ಕೇಳುವುದೇನೆಂದರೆ, ಅರಣ್ಯ ಇಲಾಖೆಯವರಿಗೆ ಪ್ರಾಣಿ ಅಥಾರಿಟಿ ಅಧಿಕಾರ ಕೊಟ್ಟಾಗ ಅವರು ಚೆನ್ನಾಗಿ ನೋಡಿಕೊಳ್ಳುತ್ತಾರೆ. ಅಂಥವರನ್ನು ನೇಮಕ ಮಾಡಿ. ಜೊತೆಗೆ ಒಬ್ಬ ಒಳ್ಳೆಯ ಹಣಕಾಸು ಅಧಿಕಾರಿಯನ್ನು ನೇಮಿಸಿ. ಬೇಕಾದಷ್ಟು ಜನ ಹಣ ನೀಡಿ ಪ್ರಾಣಿಗಳನ್ನು ಖರೀದಿಸುತ್ತಾರೆ ಮತ್ತು ದಾನ ಸಹ ನೀಡುತ್ತಾರೆ. ಸರ್ಕಾರದಲ್ಲಿ ಹಣವಿಲ್ಲದಿದ್ದರೂ ಬಹಳಷ್ಟು ಮಂದಿ ಸಿ.ಎಸ್.ಆರ್. ಫಂಡ್ ಕೊಡಲಿಕ್ಕೆ ತಯಾರಿದ್ದಾರೆ. ಆದರೆ, ಪೂರ್ಣ ಕಾಲದವರೆಗೂ ಅಲ್ಲಿ ಕೆಲಸ ಮಾಡುವವರು ಯಾರು ಇಲ್ಲದೇ ಇರುವುದರಿಂದ ಪೂರ್ಣ ಕಾಲದವರೆಗೂ ಕೆಲಸ ಮಾಡುವಂಥವರನ್ನು ಒದಗಿಸಿ ಎಂದು ಕೇಳಿಕೊಳ್ಳುತ್ತಿದ್ದೇವೆ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಮಂಜುನಾಥ ಭಂಡಾರಿಯವರು ಹೇಳಿರುವಂಥ ವಿಷಯಗಳೆಲ್ಲವನ್ನೂ ಗಂಭೀರವಾಗಿ ತೆಗೆದುಕೊಳ್ಳುವುದರ ಜೊತೆಗೆ ಮಾನ್ಯ ಸದಸ್ಯರನ್ನು ಸಹ ಕರೆಸಿ ಮಾತನಾಡಿ, ಎರಡೂ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ.

## ಪ್ರಶ್ನೆ ಸಂಖ್ಯೆ: 555
## ಸ್ಪೆಷಲ್ ಆಕ್ಷನ್ ಫೋರ್ಸ್ ಸ್ಥಾಪನೆಯ ಬಗ್ಗೆ

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕೋಮು ಹಿಂಸಾಚಾರವನ್ನು ನಿಗ್ರಹಿಸಲು ಎಸ್.ಎ.ಎಫ್ (Special Action Force) ಸ್ಥಾಪಿಸಲಾಗಿದೆಯೆ; ಯಾವೆಲ್ಲ ಜಿಲ್ಲೆಗಳಲ್ಲಿ ಈ ಪಡೆ ಕಾರ್ಯ ವ್ಯಾಪ್ತಿಯನ್ನು ಹೊಂದಿದೆ; ಯಾವ ರೀತಿಯಾಗಿ ಈ ಫೋರ್ಸ್ ಕಾರ್ಯ ನಿರ್ವಹಿಸಲಿದೆ; (ಸಂಪೂರ್ಣ ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 83 ಪಿಓಪಿ 2025, ದಿನಾಂಕ: 28/05/2025 ಮತ್ತು 11/06/2025ರಲ್ಲಿ ಉಡುಪಿ, ಶಿವಮೊಗ್ಗ ಮತ್ತು ದಕ್ಷಿಣ ಕನ್ನಡ (ಮಂಗಳೂರು) ಜಿಲ್ಲೆಗಳಲ್ಲಿ ಕೋಮು ಗಲಭೆಗಳನ್ನು ನಿಗ್ರಹಿಸಲು ಹೊಸದಾಗಿ ವಿಶೇಷ ಕಾರ್ಯಪಡೆಯನ್ನು ಸ್ಥಾಪಿಸಲಾಗಿರುತ್ತದೆ.<br><br>**ವಿಶೇಷ ಕಾರ್ಯಪಡೆಯ ಕಾರ್ಯಗಳು:**<br>1. ದ್ವೇಷ ಭಾಷಣ, ಉದ್ರೇಕಕಾರಿ ಘಟನೆಗಳು ಮತ್ತು ಕೋಮು ಸಂಬಂಧಿತ ಘಟನೆಗಳಿಗಾಗಿ ಮಾಧ್ಯಮ ಮತ್ತು ಸಾಮಾಜಿಕ ಮಾಧ್ಯಮಗಳನ್ನು ಬಳಸುವವರ ಮೇಲೆ ನಿಗಾ ಇಡುವುದು.<br>2. ಸಂಭಾವ್ಯ ಕೋಮು ಹಿಂಸಾಚಾರದ ಬಗ್ಗೆ ಕಣ್ಗಾವಲು ಮತ್ತು ಮಾನವ ಗುಪ್ತಚರ ಮೂಲಕ ಎಚ್ಚರಿಕೆ ವ್ಯವಸ್ಥೆಯನ್ನು ರಚಿಸುವುದು.<br>3. ಪ್ರಾಬಲ್ಯದ ಮೂಲಕ ವಿಶ್ವಾಸ ವೃದ್ಧಿ ಕ್ರಮಗಳನ್ನು ಕೈಗೊಳ್ಳುವುದು.<br>4. ಮೂಲಭೂತೀಕರಣವನ್ನು ಗುರುತಿಸಲು ಮತ್ತು ಮೇಲ್ವಿಚಾರಣೆ ಮಾಡಲು ಕ್ರಮಗಳನ್ನು ಕೈಗೊಳ್ಳುವುದು.<br>5. ಕೋಮು ಗಲಭೆಯ ಸಂದರ್ಭದಲ್ಲಿ ವಿಶೇಷ ಕಾರ್ಯಪಡೆ ಅಧಿಕಾರಿ/ಸಿಬ್ಬಂದಿಗಳು ಅದನ್ನು ನೇರವಾಗಿ ನಿಯಂತ್ರಿಸುವುದು. |
| ಆ) | ಈವರೆಗೆ ಎಸ್.ಎ.ಎಫ್. ಎಷ್ಟು ಕೇಸ್‌ಗಳನ್ನು ರಿಜಿಸ್ಟರ್ ಮಾಡಿದೆ; (ವಿವರ ನೀಡುವುದು) | ಈವರೆಗೆ ಎಸ್.ಎ.ಎಫ್. ಯಾವುದೇ ಕೇಸ್‌ಗಳನ್ನು ರಿಜಿಸ್ಟರ್ ಮಾಡಿರುವುದಿಲ್ಲ. |

| | | |
|---|---|---|
| ಇ) | ರಾಜ್ಯದಲ್ಲಿ ಮತಾಂತರ ಸಂಬಂಧಿಸಿದಂತೆ ಅನೇಕ ಕಡೆಗಳಲ್ಲಿ ಕೋಮು ಗಲಭೆಗಳು ನಡೆದಿವೆ ಆದ್ದರಿಂದ ಮತಾಂತರ ವಿಚಾರಗಳ ಬಗ್ಗೆ ಈ ಎಸ್.ಎ.ಎಫ್. ನಿಗಾ ವಹಿಸುವುದೇ: | ಉಡುಪಿ, ಶಿವಮೊಗ್ಗ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಯಾವುದೇ ಕಾರಣಕ್ಕೆ ಕೋಮು ಗಲಭೆಗಳು ನಡೆದಲ್ಲಿ ವಿಶೇಷ ಪಡೆಯು (ಎಸ್.ಎ.ಎಫ್) ಅದನ್ನು ತಡೆಯಲು ನಿಗಾವಹಿಸುವುದು. |
| ಈ) | ಗೋ ಹತ್ಯೆ ಮತ್ತು ಗೋ ಕಳ್ಳತನಗಳಿಂದ ಅನೇಕ ಕೋಮು ಹಿಂಸಾಚಾರಗಳು ರಾಜ್ಯದಲ್ಲಿ ನಡೆದಿರುವುದರಿಂದ ಈ ಬಗ್ಗೆ ಎಸ್.ಎ.ಎಫ್. ನಿಗಾ ವಹಿಸುವುದೇ? | |

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದು, ನನ್ನ ಎರಡನೆಯ ಪ್ರಶ್ನೆಯಲ್ಲಿ ಈವರೆಗೆ ಎಸ್.ಎ.ಎಫ್. ನಲ್ಲಿ ಎಷ್ಟು ಕೇಸ್‌ಗಳನ್ನು ರಿಜಿಸ್ಟರ್ ಮಾಡಲಾಗಿದೆ? ಎಂದು ಕೇಳಿದ್ದು, ಯಾವುದೇ ಕೇಸ್‌ಗಳನ್ನು ರಿಜಿಸ್ಟರ್ ಮಾಡಿರುವುದಿಲ್ಲ ಎಂದು ಹೇಳಿದ್ದಾರೆ. ಮಂಗಳೂರಿನಲ್ಲಿ ಸುಮಾರು 200 ಜನರು ಗ್ರ್ಯಾಂಟ್ ನಕ್ಸಲ್ ಫೋರ್ಸ್ ಟೀಂ ರವರು ಬಂದಿದ್ದು, ಅವರಿಗೆ ಯೂನಿಫಾರಂ ಕೊಟ್ಟು, ಬಸ್ ಸಂಚಲನ ಮಾಡುವಂಥ ಕೆಲಸ ಮಾತ್ರ ಮಾಡುತ್ತಿದ್ದು, ಇವರುಗಳು ಯಾವುದೇ ರೀತಿಯ ಕೋಮುಗಲಭೆಯನ್ನು ತಡೆಯುವಂಥ ಕೆಲಸ ಮಾಡಿಲ್ಲ. ಏಕೆಂದರೆ, ಅವರಿಗೆ ಯಾವುದೇ ರೀತಿಯ ತರಬೇತಿಯಾಗಲೀ ಮತ್ತು ಕಾನೂನಾತ್ಮಕವಾಗಿ ಪವರ್ ಸಹ ಇರುವುದಿಲ್ಲ. ಹಾಗಾಗಿ, ಇದು ಸರಿಯಾದ ವ್ಯವಸ್ಥೆಯಾಗಿಲ್ಲ ಎಂದು ಮಾನ್ಯ ಗೃಹ ಸಚಿವರಿಗೆ ಹೇಳಬಯಸುತ್ತೇನೆ.

**ಡಾ॥ ಜಿ.ಪರಮೇಶ್ವರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷವಾಗಿ ಮಂಗಳೂರು, ಉಡುಪಿ ಮತ್ತು ಶಿವಮೊಗ್ಗ ಈ ಮೂರು ಜಿಲ್ಲೆಗಳಲ್ಲಿ ಇತ್ತೀಚೆಗೆ ಕೋಮುಗಲಭೆಗಳ ಜೊತೆಯಲ್ಲಿ ಕೊಲೆಗಳಾಗಿರುವುದನ್ನು ಸರ್ಕಾರ ಬಹಳ ಗಂಭೀರವಾಗಿ ಗಮನಿಸಿದೆ. ಇತ್ತೀಚಿನ ದಿನದಲ್ಲಿ ನಮ್ಮ ರೆಗ್ಯೂಲರ್ ಪೋಲೀಸ್‌ನವರಿಗೆ ಈ ಘಟನೆಗಳನ್ನು ತಡೆಯಲು ಸ್ವಲ್ಪ ಕಷ್ಟವಾಗುತ್ತಿದ್ದು, ತಡೆಯಲು ಸಾಧ್ಯವಾಗಲಿಲ್ಲ ಎಂದು Special Action Force ಮಾಡಿದ್ದೇವೆ. ಬಹುಶಃ ಇದರ ಉದ್ದೇಶ ಬೇರೆ ಬೇರೆ ರೀತಿಯಲ್ಲಿ ಕಾಣಬಹುದು. ಆದರೆ, ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಯಲ್ಲಿ ಸಂಪ್ರದಾಯಗಳು, ಸಂಸ್ಕೃತಿ ಮತ್ತು ಒಳ್ಳೆಯ ಜನರು ಹಾಗೂ ಒಳ್ಳೆಯ ಶಿಕ್ಷಣ ಸಂಸ್ಥೆ ಇರುವಂಥ ಪ್ರದೇಶವಾಗಿದ್ದು, ನಾವು ಕೂಡ ಘಟ್ಟದ ಮೇಲೆ ಇರುವಂಥವರಾಗಿದ್ದೇವೆ. ನಮಗೂ

ಸಹ ಒಂದು ರೀತಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಎಂದರೆ, ಬುದ್ಧಿವಂತ ನಾಯಕರು ಎಂದುಕೊಂಡಿದ್ದು, ಅದನ್ನು ಬದಲಾಯಿಸಿಲ್ಲ. ಆದರೆ, ಅಲ್ಲಿ ಸುಮಾರು ತಿಂಗಳು ಅಥವಾ ವರ್ಷಗಳಲ್ಲಿ ಅನೇಕ ಘಟನೆಗಳೇನಾಗಿವೆ, ಎಂಬುದನ್ನು ಬಹಳ ಸೂಕ್ಷ್ಮವಾಗಿ ಗಮನಿಸಿದ್ದೇವೆ. ಅದರ ಬಗ್ಗೆ ಮಾನ್ಯ ಸದಸ್ಯರಿಗೆ ಒಂದಿಷ್ಟು ಮಾಹಿತಿಯನ್ನು ಸಹ ಕೊಡುತ್ತೇನೆ. 2023ನೇ ಚುನಾವಣೆಗೂ ಮೊದಲು ನನಗೆ ನಮ್ಮ ಪಕ್ಷದ ಚುನಾವಣಾ ಪ್ರಣಾಳಿಕೆಯನ್ನು ಬರೆಯುವಂಥ ಜವಾಬ್ದಾರಿಯನ್ನು ವಹಿಸಿದ್ದರು. ಆ ಸಂದರ್ಭದಲ್ಲಿ ಎಲ್ಲಾ ಜಿಲ್ಲೆಗಳಿಗೂ ಭೇಟಿ ನೀಡಿ, ಆಯಾಯ ಜಿಲ್ಲೆಗಳಲ್ಲಿ ಏನೇನಾಗಬಹುದೆನ್ನುವಂಥ ಅಲ್ಲಿಯ ಅಭಿಪ್ರಾಯಗಳನ್ನು ಸಂಗ್ರಹಣೆ ಮಾಡಿಕೊಂಡು ಮಂಗಳೂರಿಗೆ ಬಂದಾಗ Industrialists, ಶಿಕ್ಷಣ ಸಂಸ್ಥೆ ನಡೆಸುವವರನ್ನು, ವಕೀಲರನ್ನು, ವೈದ್ಯರನ್ನು ಮತ್ತು ಸಮಾಜದ ವಿಧವಿಧದವರಾದ ಸಿವಿಲ್ ಸೊಸೈಟಿ ಎಂದು ಏನು ಕರೆಯುತ್ತೇವೆ ಅವರೆಲ್ಲರನ್ನೂ ಕರೆಸಿ ಮಾತನಾಡುವ ಸಂದರ್ಭದಲ್ಲಿ ಅವರ ಅಭಿಪ್ರಾಯವನ್ನು ಕೇಳಿದಾಗ 'ಈ ಕೋಮುಸೌಹಾರ್ದತೆಯಲ್ಲಿ ಮೊದಲು ಮಂಗಳೂರು ಯಾವ ರೀತಿ ಇತ್ತು, ದಕ್ಷಿಣ ಕನ್ನಡ ಜಿಲ್ಲೆ ಯಾವ ರೀತಿ ಇತ್ತು, ಅದನ್ನು ವಾಪಸ್ಸು ತಂದುಕೊಡಿ, ಅದಕ್ಕೆ ಏನು ಬೇಕಾದರೂ ಮಾಡಿ' ಎಂದು ಹೇಳಿದ್ದರು. ಅವರು ಹೇಳಿದಂಥ ಮಾತಿನಲ್ಲಿ ಬಹಳ ಒತ್ತಾಯವೇನೆಂದರೆ, ಶಿಕ್ಷಣ ಸಂಸ್ಥೆಗಳಲ್ಲಿ ಮಕ್ಕಳು ಶಾಂತಿಯಿಂದ ವಿದ್ಯಾಭ್ಯಾಸ ಮಾಡುವುದಕ್ಕಾಗಲೀ, ಕೈಗಾರಿಕೆಗಳು ಬಂದು ಬಂಡವಾಳ ಹೂಡಿಕೆ ಮಾಡುವಂಥದ್ದಾಗಲೀ ಆಗುತ್ತಿಲ್ಲ. ಇದ್ದರಿಂದ ನಮಗೆ ಬಹಳ ಆತಂಕವಾಗಿದ್ದು, ನಮ್ಮ ಮಕ್ಕಳ ಸುರಕ್ಷತಾ ದೃಷ್ಟಿಯಿಂದ ನಾವೇ ಮೈಸೂರು ಅಥವಾ ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಪಡೆಯಲಿಕ್ಕೆ ಕಳುಹಿಸಬೇಕು ಎನ್ನುವಂಥ ಅನೇಕ ವಿಚಾರಗಳನ್ನು ನನ್ನ ಗಮನಕ್ಕೆ ತಂದರು.

ಆದಾದ ಬಳಿಕ ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಕೋಮು ವಿಚಾರಕ್ಕೆ ಸಂಬಂಧಿಸಿದಂತೆ, ಬಹಳ ಗಂಭೀರವಾಗಿ ಎರಡು-ಮೂರು ಕೊಲೆಗಳು ನಡೆಯಿತು. ನಾವು ಇದೆಲ್ಲವನ್ನೂ ಅಧ್ಯಯನ ಮಾಡಿ, ನಮ್ಮ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ, ಏನಾದರೂ ಪ್ರತ್ಯೇಕ ಕಾರ್ಯಕಲ್ಪ ಮಾಡಬೇಕೆಂದು ಒಂದು ಸಲಹೆಯನ್ನು ನೀಡಿದಾಗ ನನಗೆ ಅನಿಸಿದ ವಿಚಾರವೇನೆಂದರೆ, Special Action Force ನೇಮಕ ಮಾಡಿದರೆ ಒಳ್ಳೆಯದು ಎಂದು ನನಗೆ ಅನಿಸಿತ್ತು. ಈ Special Action Force ರವರನ್ನು ಖಾಯಂ ಆಗಿ ಇಡಬೇಕಾಗಿಲ್ಲ. ಎಲ್ಲಿ ಇಂತಹ ಘಟನೆಗಳು ಹೆಚ್ಚಾಗಿ ನಡೆಯುತ್ತವೆ, ಅಂತಹ ಸಂದರ್ಭದಲ್ಲಿ Special Action Force ರವರು ಬೇಕಾಗಬಹುದೆಂದು ಭಾವಿಸಿದ್ದೆವು. ನಾವು ಈಗಾಗಲೇ Anti-Naxal Force ನಿಂದ ನಕ್ಸಲ್ ಹಾವಳಿಯನ್ನು ನಿಗ್ರಹಿಸುವಂಥ ಕೆಲಸ ಮಾಡಿ, Anti-Naxal Force ನ್ನು ತೆರೆಯಬೇಕೆಂಬ ತೀರ್ಮಾನವನ್ನು ಕೈಗೊಂಡಿದ್ದೇವೆ.

ಈಗಾಗಲೇ ಅವರಿಗೆ ತರಬೇತಿ ಕೊಡಲಾಗಿದೆ. ಅದರ ಜೊತೆಗೆ intelligence gathering ಆಗಬಹುದು, ಕೋಮುಸೌಹರ್ದತೆ angle ನಲ್ಲಿಯೇ ವಿಶೇಷ ತರಬೇತಿ ಕೊಡಬೇಕೆಂಬ ಉದ್ದೇಶದಿಂದ ಈಗಾಗಲೇ ಎರಡು-ಮೂರು ತಿಂಗಳುಗಳಿಂದ ತರಬೇತಿ ನೀಡಲಾಗುತ್ತಿದೆ. ಈಗಾಗಲೇ intelligence gathering ಆಗಬಹುದು, ಟೆಕ್ನಾಲಜಿ ಟ್ರೈನಿಂಗ್ ಎಲ್ಲವನ್ನೂ ಕೊಡುತ್ತಿದ್ದೇವೆ. ಆ ಒಂದು ಉದ್ದೇಶದ ಸಲುವಾಗಿ ಮಾಡಲಾಗಿದೆಯೇ ವಿನಃ ಬೇರೆ ಯಾವುದೇ ಉದ್ದೇಶದಿಂದ ಮಾಡುತ್ತಿಲ್ಲ. ದಿನಾಂಕ: 11.06.2025 ರಿಂದ ತರಬೇತಿ ನೀಡುವಂಥ ಕೆಲಸ ಪ್ರಾರಂಭವಾಗಿದೆ. ಇಲ್ಲಿಯವರೆಗೂ ಆ ರೀತಿ ಯಾವುದೇ ಘಟನೆಗಳು ನಡೆದಿಲ್ಲ. ಬಹುಶಃ Force ನವರಿದ್ದು, ಅಲ್ಲಿ ಬೀಟ್ ಮಾಡುತ್ತಿದ್ದು, ಹಗಲು-ರಾತ್ರಿ ಹೋರಾಡುತ್ತಿರುವುದರಿಂದ ಅವರ ಕಡೆಯಿಂದ ಒಂದಿಷ್ಟು ಸಹಾಯವಾಗಿದೆ ಎಂದುಕೊಳ್ಳುತ್ತೇನೆ. ಹಾಗೆಯೇ ಇದನ್ನು ಖಾಯಂ ಆಗಿಯೇ ಇರಿಸಬೇಕೆಂದು ಸಹ ಇಲ್ಲ. ಎಲ್ಲಿಯವರೆಗೂ ಇಂತಹ ಘಟನೆಗಳು ನಡೆಯುತ್ತವೆ, ಅಲ್ಲಿಯವರೆಗೂ ಆ ತರಬೇತಿದಾರರನ್ನು ನೇಮಿಸಿರುತ್ತೇವೆ. ಮುಂದಿನ ದಿನಗಳಲ್ಲಿ ಅಂತಹ ಯಾವುದೇ ಘಟನೆಗಳು ನಡೆಯುವುದಿಲ್ಲ ಎಂಬುದು ಮನವರಿಕೆಯಾದ ಮೇಲೆ ಅವರನ್ನು ತೆಗೆಯುತ್ತೇವೆ. ಈಗಾಗಲೇ ಉತ್ತರದಲ್ಲಿ ವಿಶೇಷ ಕಾರ್ಯಪಡೆಯ ಕಾರ್ಯಗಳ ವಿವರವನ್ನು ಒದಗಿಸಿದ್ದೇನೆ. ಮೊದಲನೆಯದಾಗಿ, ದ್ವೇಷ ಭಾಷಣ, ಉದ್ರೇಕಕಾರಿ ಘಟನೆಗಳು ಮತ್ತು ಕೋಮು ಸಂಬಂಧಿತ ಘಟನೆಗಳಿಗಾಗಿ ಮಾಧ್ಯಮ ಮತ್ತು ಸಾಮಾಜಿಕ ಮಾಧ್ಯಮಗಳನ್ನು ಬಳಸುವವರ ಮೇಲೆ ನಿಗಾ ಇಡುವುದು. ಎಷ್ಟು ದೊಡ್ಡದಾಗಿ ಸಾಮಾಜಿಕ ಮಾಧ್ಯಮದಲ್ಲಿ ವರದಿಯಾಗುತ್ತದೆ ಎಂಬುದನ್ನು ತಾವೆಲ್ಲರೂ ಸಹ ನೋಡಿದ್ದೀರಿ. ಪ್ರತ್ಯೇಕವಾಗಿಯೂ ವರದಿಯಾಗುತ್ತದೆ ಮತ್ತು ಸಂಬಂಧಪಟ್ಟ ಸಂಸ್ಥೆಗಳ ಮೇಲೆಯೂ ವರದಿಯಾಗುತ್ತದೆ. ಇವೆಲ್ಲವನ್ನೂ ಸ್ವಲ್ಪ ನಿಯಂತ್ರಣ ಮಾಡಿದರೆ ಬಹುಶಃ ಒಳ್ಳೆಯ ವ್ಯವಸ್ಥೆ ಸೃಷ್ಟಿಯಾಗಬಹುದು. ಮಾನ್ಯ ಎನ್.ರವಿಕುಮಾರ್‌ರವರೆ ಮತ್ತು ಶ್ರೀಮತಿ ಭಾರತಿಶೆಟ್ಟಿಯವರೆ ನಮ್ಮ ಇಡೀ ರಾಜ್ಯದಲ್ಲಿ ಬೆಂಗಳೂರನ್ನು ಹೊರತುಪಡಿಸಿದರೆ ಮಂಗಳೂರಿನಲ್ಲಿಯೇ ಹೆಚ್ಚಾಗಿ ಆರ್ಥಿಕ ಚಟುವಟಿಕೆಗಳು ನಡೆಯುತ್ತಿರುವುದು.

(ಮುಂದು)

(698) 14.08.2025/10.30/ಎಸ್‌ಕೆ-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಡಾ|| ಜಿ. ಪರಮೇಶ್ವರ್ (ಮುಂದು):-**

ಕರ್ನಾಟಕದಲ್ಲಿ Gross Domestic Product ನಲ್ಲಿ ಶೇಕಡಾ 6 ರಷ್ಟು ಮಂಗಳೂರಿನಲ್ಲಿ ಆಗುತ್ತದೆ ಎಂದು ಒಂದು ವರದಿ ಇದೆ. ಹಾಗಾಗಿ, ಅದೆಲ್ಲವೂ ಕಡಿಮೆಯಾಗುತ್ತಿದೆ. ಕೈಗಾರಿಕೋದ್ಯಮಿಗಳು ಹೂಡಿಕೆ ಮಾಡುವುದಕ್ಕೆ

ಹೆದರುತ್ತಾರೆ. ಆ ವಾತಾವರಣ ಇರಬೇಕಾ ಅಥವಾ ಹಾಗೆಯೇ ಮುಂದುವರೆಸಬೇಕಾ ಹೇಳಿ. ಅದಕ್ಕಾಗಿ ಸರ್ಕಾರ ಜವಾಬ್ದಾರಿಯುತವಾಗಿ ಇದನ್ನು ಮಾಡಿದ್ದೇವೆ ವಿನಃ ಬೇರೆ ಯಾವುದೇ ಅರ್ಥದಲ್ಲಿ ಇಲ್ಲ. ಮಾನ್ಯ ಸದಸ್ಯರು ಕೆಲವು ಪ್ರಶ್ನೆ ಕೇಳಿದ್ದಾರೆ. ಗೋಹತ್ಯೆ ಮತ್ತು ಗೋ ಕಳ್ಳತನದಿಂದ ಅನೇಕ ಕೋಮು ಹಿಂಸಾಚಾರಗಳು ಉಂಟಾಗುತ್ತಿರುವುದಾಗಿ ತಿಳಿಸಿದ್ದಾರೆ. ಇದಕ್ಕೆ ನಾವು ಅದನ್ನು ಸೇರಿಸಿದ್ದೇವೆ. ಗೋಹತ್ಯೆ ಮತ್ತು ಗೋಕಳ್ಳತನ ಮಾಡುವವರ ವಿರುದ್ಧ ಹಾಗೂ ನೈತಿಕ ಪೊಲೀಸ್‌ಗಿರಿ ಮಾಡುವವರ ವಿರುದ್ಧವೂ ಸಹ ಈ ಪಡೆಯೂ ನಿಗಾ ವಹಿಸುವುದು. ಏಕೆಂದರೆ, ಇವೆಲ್ಲ ಕಾರಣ. ಒಂದಲ್ಲಾ ಒಂದು ಕಾರಣದಿಂದ ಅಲ್ಲಿ ಕೋಮು ಗಲಭೆಗಳಾಗುವಂತಹದ್ದನ್ನು ನಾವು ನೋಡಿದ್ದೇವೆ. ಇದನ್ನು ಬಹಳ ವಿಶೇಷವಾಗಿ ಮಾಡಿರುವಂತಹದ್ದು. ಸಂಭಾವ್ಯ ಕೋಮು ಹಿಂಸಾಚಾರದ ಬಗ್ಗೆ ಕಣ್ಗಾವಲು ಮತ್ತು ಮಾನವ ಗುಪ್ತಚರ ಮೂಲಕ ಮುಂಜಾಗ್ರತಾ ಕ್ರಮಗಳು, ಪ್ರಾಬಲ್ಯದ ಮೂಲಕ ವಿಶ್ವಾಸ ವೃದ್ಧಿ ಕ್ರಮಗಳು, ಮೂಲಭೂತೀಕರಣವನ್ನು ಗುರುತಿಸಲು ಮತ್ತು ಮೇಲ್ವಿಚಾರಣೆ ಮಾಡಲು ಕ್ರಮಗಳನ್ನು ಕೈಗೊಳ್ಳುವುದು; ಈವರೆಗೆ ಇಂತಹ ವಿಚಾರಗಳಲ್ಲಿ ಎಷ್ಟು ಕೇಸ್‌ಗಳನ್ನು ರಿಜಿಸ್ಟರ್ ಮಾಡಿದ್ದೀರಿ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಆ ಫೋರ್ಸ್ ಬಂದ ಮೇಲೆ ಅಂತಹ activity ಆಗಿಲ್ಲ. ಅದಕ್ಕಾಗಿ ಕೇಸ್ ರಿಜಿಸ್ಟರ್ ಆಗಬೇಕೆಂದು ನಮಗೇನು ಉದ್ದೇಶವಿಲ್ಲ. ಹಾಗೆಯೇ ಇದ್ದರೆ ಬಹಳ ಸಂತೋಷ. ಯಾವುದೇ ಕೇಸ್ ರಿಜಿಸ್ಟರ್ ಆಗಲಿಲ್ಲವೆಂದರೆ, ಶಾಂತಿ ಇದೆ, ಅದರಿಂದ ಯಾವುದೇ ಕೇಸ್ ಕೂಡ ರಿಜಿಸ್ಟರ್ ಆಗಿಲ್ಲ ಎಂದು ಅರ್ಥ. ಉಡುಪಿ ಜಿಲ್ಲೆಗೂ ಕೂಡ extend ಮಾಡಿದ್ದೇವೆ. ಉಡುಪಿ, ಶಿವಮೊಗ್ಗ ಇತ್ತೀಚಿನ ದಿನಗಳಲ್ಲಿ ಇಂತಹ ಗಲಭೆಗಳು ಎಲ್ಲಿ ಜಾಸ್ತಿಯಾಯಿತು, ಇದರಿಂದ ಸಮಾಜದ ಸ್ವಾಸ್ಥ್ಯ ಹಾಳಾಗುತ್ತದೆ ಎಂದು ಹೇಳಿದಾಗ, ನಾವು ಇದರ ಕಡೆ ಗಮನಹರಿಸಬೇಕಾಗುತ್ತದೆ. ನಮ್ಮ ರೆಗ್ಯೂಲರ್ ಪೊಲೀಸ್‌ನವರು ಮಾಡುತ್ತಾರೆ. ಯಾರೋ ದೂರು ಕೊಡುತ್ತಾರೆ, ದೂರನ್ನು ರಿಜಿಸ್ಟರ್ ಮಾಡಿಕೊಂಡು, ತನಿಖೆ ಮಾಡಿ, ಅವರ ಮೇಲೆ ಕೇಸ್ ರಿಜಿಸ್ಟರ್ ಮಾಡಿ ಕ್ರಮ ತೆಗೆದುಕೊಳ್ಳುವುದೊಂದು ಭಾಗ. ಆದರೆ Special Action Force ಇದೆ ಎಂದಾಗ ಸ್ವಲ್ಪ ಜನರಿಗೂ ಕೂಡ ಅರ್ಥವಾಗುತ್ತದೆ. ನೈಟ್ ಬೀಟ್ ಮಾಡುತ್ತಾರೆ ಎಂದು ಕೆಳಮನೆಯಲ್ಲಿ ನನಗೆ ಕೇಳಿದರು. ಇವರು ನೈಟ್ ಬೀಟ್ ಮಾಡುತ್ತಾರೆ. ಆದರೆ ಇವರು ಮನೆ ಮನೆಗಳಿಗೆ ಭೇಟಿ ಮಾಡಿ, ಎಲ್ಲವನ್ನೂ ಮಾಡುವುದಕ್ಕೆ ಹೋಗುವುದಿಲ್ಲ. ಇವರ ಕೆಲಸ ಬೇರೆಯೇ ಇರುತ್ತದೆ. ಇವರ ಕೊಟ್ಟಿರುವ ಉದ್ದೇಶವೇ ಬೇರೆ. ರೆಗ್ಯೂಲರ್ ಪೊಲೀಸ್ ನೈಟ್ ಬೀಟ್ ಮಾಡುವವರು, ಅವರು ಬೀಟ್ ಮಾಡಿಕೊಳ್ಳುತ್ತಾರೆ. ಈ ಮೂರು ಜಿಲ್ಲೆಗಳಲ್ಲಿ ಸದ್ಯದ ಪರಿಸ್ಥಿತಿ ಇರುವುದರಿಂದ ನಾವು ಈ ಪಡೆಯನ್ನು ಇಟ್ಟಿದ್ದೇವೆ. ದ್ವೇಷ ಭಾಷಣಕ್ಕಾಗಿಯೇ ನಾವು ಒಂದು ಕಾನೂನನ್ನು ತರುತ್ತಿದ್ದೇವೆ. ದ್ವೇಷ ಭಾಷಣ ಮಾಡುವಂತಹದ್ದು. ಭಾಷಣ ಮಾಡುವುದಕ್ಕೆ ಯಾರೂ ತಡೆಯುವುದಿಲ್ಲ. ಯಾವುದೋ ಒಂದು ವ್ಯಕ್ತಿಯನ್ನಾಗಲೀ ಅಥವಾ ಸಂಸ್ಥೆಯನ್ನಾಗಲೀ ದ್ವೇಷ ಮಾಡಿ ಪ್ರಚೋದನೆ ಮಾಡುವಂತಹ ರೀತಿಯಲ್ಲಿ ಭಾಷಣ ಮಾಡುವುದು ಇದೆಯೆಲ್ಲಾ, ಅದು ಸರಿ ಕಾಣಿಸುವುದಿಲ್ಲ. ಅದರಿಂದ fallout effect ಬಹಳಷ್ಟು ಕಡೆ ಆಗಿಬಿಟ್ಟಿದೆ. ಅದು ಆಗಬಾರದು ಎನ್ನುವುದಕ್ಕೋಸ್ಕರ ಈ ಫೋರ್ಸ್ ಏನಿದೆ, ಅದನ್ನು ಕೂಡ ತಡೆಯಬೇಕೆಂದು

ಹೇಳಿ, ಅವರಿಗೆ terms of reference ಅನ್ನು ಕೊಟ್ಟಿದ್ದೇವೆ. ಉದ್ರೇಕಕಾರಿ ಘಟನೆಗಳು, ಕೋಮು ಸಂಬಂಧಿತ ವಿಚಾರಗಳ ಬಗ್ಗೆ ಮಾಧ್ಯಮದಲ್ಲಿ ಬರುತ್ತದೆ. ಬೇರೆ ಬೇರೆ ರೀತಿಯಲ್ಲಿ ಪೋಸ್ಟ್ ಮಾಡಿಬಿಡುತ್ತಾರೆ. ಧರ್ಮಸ್ಥಳ ವಿಚಾರದಲ್ಲಿ ಯಾವ ಯಾವ ರೀತಿ ಸೋಶಿಯಲ್ ಮೀಡಿಯಾದಲ್ಲಿ ಬರುತ್ತಿದೆ ಎಂಬುದನ್ನು ನಾವೆಲ್ಲರೂ ನೋಡಿದ್ದೇವೆ. ಇದನ್ನು ಗಮನಿಸಿದರೆ, ನಮಗೆ ಒಂದು ತರಹ ಬೇಸರವಾಗುತ್ತದೆ. ಒಳ್ಳೆಯದು ಅಥವಾ ಕೆಟ್ಟದ್ದು ಅದರ ಪರ ವಿರೋಧ ಇರಲಿ. ಅದರ ಬಗ್ಗೆ ನಮಗೆ ಚಿಂತೆ ಇಲ್ಲ. ಆದರೆ ಯಾವ ರೀತಿ ಭಾಷೆ ಉಪಯೋಗಿಸುತ್ತಾರೆ. ಯಾವ ರೀತಿಯಲ್ಲಿ ಪೋಸ್ಟಿಂಗ್ ಮಾಡುತ್ತಾರೆ ಎಂಬ ಬಗ್ಗೆ ಗಮನಿಸಬೇಕಾದಂತಹ ವಿಚಾರ. ಅದಕ್ಕಾಗಿ ಈ ಒಂದು Special Action Force ಅನ್ನು ಮಾಡಿದ್ದೇವೆ. ಈ ಮೊದಲೇ ನಾನು ಹೇಳಿದಂತೆ, ಈ ಫೋರ್ಸ್ ಖಾಯಂ ಇರಬಾರದು. ಅಂದರೆ ಅಲ್ಲಿ ಒಳ್ಳೆಯ ವಾತಾವರಣ ಸೃಷ್ಟಿಯಾಯಿತು ಎಂದರೆ ಅದನ್ನು ನಾವು ತೆಗೆಯುವುದಕ್ಕೆ ಸಾಧ್ಯತೆ ಇದೆ. ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಈ ಉತ್ತರವನ್ನು ಮಾನ್ಯ ಕಿಶೋರ್ ಕುಮಾರ್‌ರವರಿಗೆ ತಿಳಿಸಬಯಸಿದ್ದೇನೆ. ಈ ಉತ್ತರದಿಂದ ಮಾನ್ಯ ಸದಸ್ಯರಿಗೆ ಸಮಾಧಾನವಾಗುತ್ತದೆ ಎಂದು ನಾನು ಅಂದುಕೊಂಡಿದ್ದೇನೆ.

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕೋಮು ಸಾಮರಸ್ಯ ನೂರಕ್ಕೆ ನೂರರಷ್ಟು ಬೇಕಾಗುತ್ತದೆ. ಈ SAF ತಂದಿರುವುದರಿಂದ ಕೋಮು ಸಾಮರಸ್ಯ ಅವರ ಮನಸ್ಸಿಗೆ ಬರುವುದಕ್ಕೆ ಸಾಧ್ಯ. ಏಕೆಂದರೆ, ಅವರು Anti-Naxal Force ನವರು. ಮೇ 1 ರಂದು ಮಾನ್ಯ ಸುಭಾಷ್ ಶೆಟ್ಟಿಯವರದು ಹತ್ಯೆ ಆಯಿತು. ನಲವತ್ತು ಜನರು ಅವರನ್ನು ಸುತ್ತುಗಟ್ಟಿ, ಹೊಡೆದು ಮತ್ತು ಗಾಡಿಗೆ ಹೊಡೆದು ಹಾಗೂ ಇನ್ನೊಂದು ಗಾಡಿಯನ್ನು ಅಡ್ಡ ಹಾಕಿ ಒಂದು ಭಯಾನಕ ರೀತಿಯಲ್ಲಿ ಪರಿಸ್ಥಿತಿ ನಿರ್ಮಾಣ ಆಯಿತು. ಅದರ ನಂತರ ತಾವು ಮೇ 3ನೇ ತಾರೀಖು ಮಂಗಳೂರಿಗೆ ಬಂದಿರಿ. ಯಾವುದೇ ರೀತಿಯಾದರೂ ಕೂಡ ತಾವು ಸುಭಾಷ್ ಶೆಟ್ಟಿಯವರ ಮನೆಗೆ ಹೋಗಲಿಲ್ಲ. ಅವನ ತಂದೆ, ಮಾವ, ಅಜ್ಜ ಎಲ್ಲರೂ ಕೂಡ ಕಾಂಗ್ರೆಸ್ ಕಾರ್ಯಕರ್ತರು. ತಾವು ಅವರ ಮನೆಗೆ ಏತಕ್ಕೆ ಹೋಗಲಿಲ್ಲ? ತಾವು ತಾರತಮ್ಯ ಮಾಡಬಾರದು ನನ್ನದೊಂದು ಮನವಿ. ತಾವೊಬ್ಬ ಹಿರಿಯರು ಹಾಗೂ ಗೌರವಾನ್ವಿತರಾಗಿದ್ದೀರಿ. ಇಡೀ ಆರು ನೂರು ಕೋಟಿ ಜನರಿಗೆ ಗೃಹ ಸಚಿವರಾಗಿದ್ದೀರಿ. ತಾವು ಅವರ ಮನೆಗೆ ಏತಕ್ಕೆ ಹೋಗಲಿಲ್ಲ? ತಾವು ಅವರ ಮನೆಗೆ ಹೋಗಬೇಕಾಗಿತ್ತು. ನಮಗೆ ಸಮಾಧಾನವಾಗುತ್ತಿತ್ತು.

ನನ್ನದೊಂದು ವಿಚಾರವೇನೆಂದರೆ, ನಿನ್ನೆ ಬೆಳ್ತಂಗಡಿಯಲ್ಲಿ ಗೋವು ಕಳ್ಳಸಾಗಾಣಿಕೆ ಮಾಡಿದರು. ಇನ್ನೋವಾ ಕಾರಿನ ನಂಬರ್ ಪ್ಲೇಟ್ ಬದಲಾವಣೆ ಮಾಡಿ ಹೋದರು. ಅವರು ಯಾವ ರೀತಿ ಎಂದರೆ ಪೋಲೀಸ್‌ನವರ ಕುತ್ತಿಗೆಗೆ ಕೈ ಹಾಕಿದರು. ಈ SAF ಮಾಡಿದ್ದರಿಂದ ಏನು ಪ್ರಯೋಜನವಾಯಿತು? ಒಂದು ವೇಳೆ ಇಲ್ಲಿ ಕೋಮು ಸಾಮರಸ್ಯ ಬರಬೇಕೆಂದರೆ, ಈಗ ತಾವು ಕೊಟ್ಟಿರುವಂತಹ ಇಬ್ಬರು ಅಧಿಕಾರಿಗಳು ಎಸ್.ಪಿ., ಮತ್ತು ಕಮಿಷನರ್ ಇರಬಹುದು. ಶ್ರೀ ಸುನೀಲ್ ಕುಮಾರ್ ರೆಡ್ಡಿಯವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಎಲ್ಲಾ ಜಿಲ್ಲೆಗಳಲ್ಲಿ ಈ ತರಹ

ನಿಷ್ಠಾವಂತ ಅಧಿಕಾರಿಗಳನ್ನು ನೇಮಿಸಿರಿ. ಈ SAF ಅನ್ನು ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾಡಿದ್ದೀರಿ. ಈಗಾಗಲೇ ನಾಗಮಂಗಲಕ್ಕೆ ಮಾಡಿದ್ದಾರೆ. ಮೊನ್ನೆ ತಾನೇ ಗವಿಸಿದ್ದಪ್ಪ ಕೊಪ್ಪಳದಲ್ಲಿ ಕೂಡ ಮಾಡಿದ್ದೀರಾ. ನಾನು ಹೇಳುವುದೇನೆಂದರೆ, ಎಲ್ಲರನ್ನೂ ಸಮಾನವಾಗಿ ನೋಡುವುದು ತಮ್ಮ ಕರ್ತವ್ಯವಾಗಿದೆ. ತಮ್ಮ ಮೇಲೆ ನಮಗೆ ವಿಶ್ವಾಸ, ಭರವಸೆ ಮತ್ತು ಗೌರವ ಕೂಡ ಇದೆ. ತಾವು ಯಾವುದೋ ಒಂದು ಸಮುದಾಯಕ್ಕೆ ಸಂತೋಷ ತರುವುದಕ್ಕೆ ಹೋಗುತ್ತೀರಾ ಎನ್ನುವುದು ನನ್ನ ಪ್ರಶ್ನೆ. ಈ ಒಂದು ತಾರತಮ್ಯ ಯಾರ ಮನಸ್ಸಿನಲ್ಲಿಯೂ ಕೂಡ ಬರಬಾರದು. ನಾವು ಕೂಡ ತಮ್ಮ ಪರವಾಗಿ ಇದ್ದೇವೆ. ಕೋಮು ಸಾಮರಸ್ಯ ನೂರಕ್ಕೆ ನೂರು ಬೇಕಾಗುತ್ತದೆ. ಆದರೆ ತಾವು ಒಬ್ಬರ ಕಣ್ಣಿಗೆ ಸುಣ್ಣ, ಇನ್ನೊಬ್ಬರ ಕಣ್ಣಿಗೆ ಬೆಣ್ಣೆ ಇಡಬೇಡಿ. ತಾವು ಎಲ್ಲರನ್ನು ಸಮಾನವಾಗಿ ಕಾಣಬೇಕು ಎಂಬುದು ನನ್ನ ವಿಚಾರವಾಗಿದೆ.

**ಸಭಾಪತಿಯವರು:-** ಮಾನ್ಯ ಪೂಜಾರ್‌ರವರೇ, ತಾವು ಮಾತನಾಡಿ.

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ,..

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆಗ ಪ್ರವೀಣ್ ನೆಟ್ಟಾರು ಅವರ ಹತ್ಯೆಯಾದಾಗ, ಆಗ ಮಾನ್ಯ ಮುಖ್ಯಮಂತ್ರಿಯವರು ಅವರ ಮನೆಗೆ ಹೋಗಿದ್ದರು. ಅದರ ಬಗ್ಗೆ ತಾವು ಏತಕ್ಕೆ ಹೇಳಲಿಲ್ಲ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಐವನ್ ಡಿ' ಸೋಜಾರವರೇ, ಕುಳಿತುಕೊಳ್ಳಿ. **(ಗೊಂದಲ)** ನಾನು ಅನುಮತಿಯಿಲ್ಲದೇ ಮಾತನಾಡಿದರೆ, ಅವರನ್ನು ಸದನದಿಂದ ಹೊರ ಹಾಕುತ್ತೇನೆ. ಇದೇನೂ ಧರ್ಮಶಾಲೆಯನ್ನಾಗಿ ಮಾಡಿದ್ದೀರಾ?

**(ಗೊಂದಲ)**

**ಡಾ|| ಜಿ. ಪರಮೇಶ್ವರ್:-** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:-** ಮಾನ್ಯ ಗೃಹಸಚಿವರೇ, ಒಂದು ನಿಮಿಷವಿರಿ. ಮಾನ್ಯ ಪೂಜಾರ್‌ರವರೇ ಮಾತನಾಡುತ್ತಿದ್ದಾರೆ.

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಮಾಧಾನಕರವಾದಂತಹ ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಸದಸ್ಯರು ಹೇಳಿದ ಹಾಗೇ ಇಡೀ ರಾಜ್ಯಾದ್ಯಂತ ಕೋಮು-ಸೌಹಾರ್ದತೆ ಸರಿಯಾಗಿ ಇರಬೇಕು. ಅದನ್ನು ಕಾಪಾಡುವಂತಹ ಜವಾಬ್ದಾರಿ ಎಲ್ಲರ ಮೇಲಿದೆ. ಅಧಿಕಾರಿಗಳು ಮತ್ತು ಪೊಲೀಸರು ಹಾಗೂ ಎಲ್ಲರೂ ಸೇರಿಕೊಂಡು ನಾಗರಿಕರ ವಿಶ್ವಾಸವನ್ನು ತೆಗೆದುಕೊಂಡು ಕೆಲಸ ಮಾಡುವಂತಹದ್ದು. ಮೇಲಿಂದ ಮೇಲೆ ಗೋ ಹತ್ಯೆ ಕೆಲಸ ಕರುವನ್ನು ಕೊಲ್ಲುವಂತಹದ್ದು, ಗೋವಿನ ಕೆಚ್ಚಲು ಕೊಯ್ಯುವಂತಹದ್ದು. ಇದು ಕೂಡ ಕೋಮು ಸಾಮರಸ್ಯ ಕದಡುವಂತಹದ್ದು. ಇದು ಗಂಭೀರ ಸಮಸ್ಯೆಯಾಗಿದ್ದು,

ಸರ್ಕಾರ ಇದುವರೆವಿಗೂ ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ಆ ಭಾವನೆ ಜನರಲ್ಲಿ ಸಾಮೂಹಿಕವಾಗಿ ಬಂದಿದೆ. ಇದು ಕೂಡ ಕೋಮು ಸಾಮರಸ್ಯವನ್ನು ಕದಡುವಂತಹ ಒಂದು ಕೃತ್ಯ. ದಯವಿಟ್ಟು, ಸರ್ಕಾರ ಇದನ್ನು ಗಂಭೀರವಾಗಿ ತೆಗೆದುಕೊಂಡು ಅಂತಹ ಆರೋಪಿಗಳನ್ನು ಹಿಡಿದು ಹಾಕಿ, ಯಾವ ರೀತಿ ಶಿಕ್ಷೆ ಕೊಡಬೇಕೋ, ಗರಿಷ್ಠ ಮಟ್ಟದ ಶಿಕ್ಷೆಯನ್ನು ಕೊಡುವಂತಹ ಕೆಲಸವನ್ನು ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ವಿನಂತಿ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಐವನ್ ಡಿ' ಸೋಜಾರವರೇ, ತಾವು ಮಾತನಾಡಿ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ಪ್ರವೀಣ್ ನೆಟ್ಟಾರು ಅವರ ಕೊಲೆಯಾಯಿತು. ಅವೊತ್ತಿನ ದಿನ ರಾಜ್ಯ ಮುಖ್ಯಮಂತ್ರಿಯವರು ಅವರ ಮನೆಗೆ ಹೋಗಿ ರೂ.50 ಲಕ್ಷ ರೂಪಾಯಿಗಳ ಹಣವನ್ನು ಕೊಟ್ಟು ಬಂದರು. ಅದೇ ಸಂದರ್ಭದಲ್ಲಿ ಆ ಘಟನೆಗೆ ಸಂಬಂಧಪಟ್ಟಂತೆ, ಮುಸ್ಲಿಂ ವ್ಯಕ್ತಿಯ ಹತ್ಯೆಯಾಯಿತು. ರಾಜ್ಯದ ಮುಖ್ಯಮಂತ್ರಿಯವರು ಅವರ ಮನೆಗೆ ಏತಕ್ಕೆ ಹೋಗಲಿಲ್ಲ? ಅವರು ಏನು criminal incident ನಲ್ಲಿ ಇದ್ದರಾ? ಅವರು ಯಾವುದೇ ವಿಚಾರದಲ್ಲಿ ಇರಲಿಲ್ಲ. ನಮ್ಮ ಜಿಲ್ಲೆಯಲ್ಲಿ ಇವತ್ತು ಕೋಮು ಸೌಹಾರ್ದಕ್ಕೆ ಧಕ್ಕೆ ತರುವಂತಹ ವಿಚಾರ ಪದೇ ಪದೇ ನಡೆಯುತ್ತಿದೆ. ಅದಕ್ಕೋಸ್ಕರ ಇವತ್ತು SAF ಫೋರ್ಸ್‌ನ್ನು ಮಾಡಿದ್ದಾರೆ. SAF ಫೋರ್ಸ್‌ನವರ ಉದ್ದೇಶವೇನೆಂದರೆ, ಶಾಂತಿ ಸೌಹಾರ್ದತೆಯನ್ನು ಕಾಪಾಡುವುದು. ಪೊಲಿಸ್ ಎಂದರೆ ಇವತ್ತು ಜನರಲ್ಲಿ ಹೆದರಿಕೆಯನ್ನು ಹುಟ್ಟಿಸುವಂತಹದ್ದು. ನಮ್ಮಲ್ಲಿ ಏನಾಗಿದೆ ಎಂದರೆ, ಪೊಲೀಸ್ ಎಂದರೆ ನಮ್ಮಲ್ಲಿ care ಇಲ್ಲ. ಪೊಲೀಸ್‌ನವರು ಏನು ಮಾಡಿದರೂ ನಡೆಯುತ್ತದೆ. ಪೊಲೀಸ್‌ರ ವಿರುದ್ಧವಾಗಿ ಏನು ಮಾಡಿದರೂ ನಡೆಯುತ್ತದೆ. ಧನ ಕಳ್ಳತನ ಮಾಡಬಾರದು ಎಂದು ಹೇಳುವವರೇ ಹೋಗಿ ಅವರನ್ನು ಹಿಡಿದು ಬಡಿದು ಅವರೇ ಅವರಿಗೆ ಬೇಕಾದಂತಹ ಕಾನೂನನ್ನು ಕೈಗೆ ತೆಗೆದುಕೊಳ್ಳುವಂತಹದ್ದು. ಯಾರೋ ಒಬ್ಬ ಹುಡುಗ-ಹುಡುಗಿಯರು ರಸ್ತೆಯಲ್ಲಿ ನಿಂತುಕೊಂಡರೆ, ಜಾತಿ ಯಾವುದು? ನೀನು ಕ್ರಿಶ್ಚಿಯನ್ನಾ? ನೀನು ಮುಸ್ಲಿಮನಾ? ನೀನು ಹಿಂದೂನಾ? ನೀನು ಏತಕ್ಕೆ ಹೋಗುತ್ತಿದ್ದೀಯಾ ಎಂದು ಕೇಳಿ ಗಲಭೆ ಮಾಡುವಂಥದ್ದೆಲ್ಲಾ ನಡೆಯುತ್ತಿವೆ.

**ಶ್ರೀ ಕಿಶೋರ್ ಕುಮಾರ್ ಪುತ್ತೂರ್:-** ಗೋಮಾತೆಯನ್ನು ನಾವು ತಾಯಿ ಎಂದು ಸ್ವೀಕಾರ ಮಾಡಿದ್ದೇವೆ.

**ಶ್ರೀ ಐವನ್ ಡಿ'ಸೋಜಾ:-** ಕಾನೂನನ್ನು ಕೈಗೆ ತೆಗೆದುಕೊಳ್ಳುವಂತವರ ಮೇಲೆ ಕ್ರಮ ತೆಗೆದುಕೊಳ್ಳುವಂತಹ ಕೆಲಸವನ್ನು ಮಾಡುವಂತಹ ಜಿಲ್ಲೆ ಇದು. Naxal Force ಬರಲಿ, ಅವರು ಇದ್ದ ಮೇಲೆ ನಿಮಗೆ ತಲೆ ಬಿಸಿ ಏತಕ್ಕೆ? ನಕ್ಸಲ್ ಫೋರ್ಸ್‌ನವರಿಗೆ ಏತಕ್ಕೆ ತೊಂದರೆ ಮಾಡುತ್ತೀರಾ? ಆಗ ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಕ್ರಮ ತೆಗೆದುಕೊಳ್ಳುವುದಕ್ಕೆ ಜಾತಿ-ಸೌಹಾರ್ದತೆ ಇರಬಾರದು. ಕೋಮು ಸೌಹಾರ್ದತೆ ಇರಬಾರದು ಎಂದರೆ ಹೇಗೆ? ಯಾರು ಸಮಾಜದಲ್ಲಿ ಒಳ್ಳೆಯ ಕೆಲಸ ಮಾಡಬಾರದೆಂದರೆ ಹೇಗೆ? ಶಾಂತಿ ಕದಡಿ ಭಯ ಹುಟ್ಟಿಸುವಂತಹ ಕೆಲಸ ಮಾಡುವವರಿಗೋಸ್ಕರನೇ ನಕ್ಸಲ್ ಫೋರ್ಸ್ ತಂದಿರುವಂತಹ ಉದ್ದೇಶ.

**ಶ್ರೀ ಕಿಶೋರ್ ಕುಮಾರ್ ಪುತ್ತೂರ್:-** ಗೋಮಾತೆಯನ್ನು ಹಿಂದೂಗಳು ಅಕ್ರಮವಾಗಿ ಯಾರಿಗಾದರೂ ಕೊಟ್ಟರೆ, ಯಾರು-ಯಾರಿಗೆ ಕೊಟ್ಟರೂ ಅವರ ಮೇಲೂ ಕೇಸ್ ಹಾಕಿ ಕ್ರಮ ತೆಗೆದುಕೊಳ್ಳಲಿ.

**ಸಭಾಪತಿಯವರು:-** ಮಾನ್ಯ ಕಿಶೋರ್ ಕುಮಾರ್‌ರವರೇ, ತಾವು ಏತಕ್ಕೆ ಮಾತನಾಡುತ್ತಿದ್ದೀರಿ?

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಕ್ಸಲ್ ಫೋರ್ಸ್‌ನ್ನು ಮಾಡಿದ್ದೀರಿ. ಅದು ಜನರ ಮೇಲೆ ದಬ್ಬಾಳಿಕೆ ಮಾಡುವಂತಹದ್ದಲ್ಲ. ಶಾಂತಿ ಸೌಹಾರ್ದತೆಯನ್ನು ಕಾಪಾಡಿಕೊಳ್ಳುವುದಕ್ಕೆ ಮಾಡಿದ್ದೀರಿ. ಅದಕ್ಕೆ ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಅಭಿನಂದಿಸುತ್ತೇನೆ.

**ಸಭಾಪತಿಯುವರು:-** ಮಾನ್ಯ ಹರಿಪ್ರಸಾದ್‌ರವರೇ, ತಾವು ಮಾತನಾಡಿ.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತೇನೆ. ನಾನು ತಮ್ಮ ಮೂಲಕ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಬಯಸುತ್ತೇನೆ. ಅಲ್ಲಿ ಟಾಸ್ಕ್‌ಫೋರ್ಸ್ ಮಾಡಿ ಕೋಮು- ಸೌಹಾರ್ದತೆಯನ್ನು ಕಾಪಾಡುವುದಕ್ಕೆ ಒಂದು ಮೊದಲ ಹೆಜ್ಜೆಯನ್ನು ಇಟ್ಟಿದ್ದಾರೆ. ಇದರ ಬಗ್ಗೆ ಬಹಳಷ್ಟು ಚರ್ಚೆಯಾಗುತ್ತಿದೆ. ಅಲ್ಲಿ ಒಬ್ಬರ ಕೊಲೆಯಾಗಿದೆ. ಅಲ್ಲಿ ನಲವತ್ತರಿಂದ ಐವತ್ತು ಜನರು ಬಂದು ಕೊಲೆ ಮಾಡಿದ್ದಾರೆ. ಕೊಲೆಯಾದವರ ಮೇಲೆ ಎರಡು ಪ್ರಕರಣಗಳಿವೆ. ರೌಡಿ ಶೀಟರ್‌ನಲ್ಲಿ ಇದ್ದಾರೆ. ಯಾರಾದರೂ ರೌಡಿ ಸತ್ತರೆ, ಅವರ ಮನೆಗೆ ಹೋಗುತ್ತಾರೆಯೇ ಎಂಬ ಬಗ್ಗೆ ಮಾನ್ಯ ಗೃಹ ಸಚಿವರು ನಾಳೆಯಿಂದ ಕೇಳಬೇಕಾಗುತ್ತದೆ.

(ಮುಂದು)

(699) 14.08.2025 10.40 ಟಿಸಿಹೆಚ್-ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಕೆ.ಹರಿಪ್ರಸಾದ್ (ಮುಂದು)**

ರೌಡಿ ಶೀಟರ್‌ನಲ್ಲಿ ಇದ್ದವರು ಜಗಳಗಳು ಮಾಡಿಕೊಂಡಿದ್ದಾರೆ. ನೀವು ಯಾವುದೇ ಕಾರಣಕ್ಕೆ ಅವರನ್ನು ರೌಡಿ ಶೀಟರ್ ಮಾಡಿ. ಅವರ ತಂದೆ-ತಾಯಿಯವರ ಮೇಲೆ ನನಗೆ ಬಹಳ ಗೌರವ ಇದೆ. ಅವರ ಮಕ್ಕಳನ್ನು ದಾರಿ ತಪ್ಪಿಸುವ ಸಂಘಟನೆಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತಾರೆಂದು ಹೇಳಬೇಕು. ನಕ್ಸಲ್ ನಿಗ್ರಹ ಮಾಡುವುದು ಸರಿ. ನಕ್ಸಲ್‌ನವರು ಇಂಗ್ಲೀಷ್‌ನಲ್ಲಿ "Power through bullet"ಎಂದು ಹೇಳುತ್ತಾರೆ. ಪ್ರಜಾಪ್ರಭುತ್ವದಲ್ಲಿ "Power through ballet"ಎಂದು ಹೇಳುತ್ತೇವೆ. ನಕ್ಸಲರು ನೇರವಾಗಿ ಹೋರಾಟ ಮಾಡುತ್ತಾರೆ. ಕೆಲವರು ಪ್ರಜಾಪ್ರಭುತ್ವವನ್ನು ಸಂಪೂರ್ಣವಾಗಿ ನಿರ್ನಾಮ ಮಾಡಬೇಕೆಂದು ಷಡ್ಯಂತರ ಮಾಡುತ್ತಾರೆ. ಮಾನ್ಯ

ಸದಸ್ಯರೊಬ್ಬರು ಹೇಳಿದರು. ಇಡೀ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಎಲ್ಲರಿಗೂ ಗೃಹ ಸಚಿವರೋ ಅಥವಾ ಕೇವಲ ಒಂದು ಧರ್ಮಕ್ಕೆ ಮಾತ್ರ ಗೃಹಸಚಿವರೋ ಎಂದು ಕೂಡ ಹೇಳಬೇಕಾಗುತ್ತದೆ. ನಮ್ಮ ದೇಶದಲ್ಲಿ ನಾವು ತೆರಿಗೆ ಕಟ್ಟತಕ್ಕಂಥ ಪ್ರತಿಯೊಬ್ಬರಿಗೂ ಪ್ರಜಾಪ್ರಭುತ್ವದಲ್ಲಿ ಕೂಡ ಹಕ್ಕಿದೆ. ನಮ್ಮ ಭಾರತದ ಸಂವಿಧಾನದಲ್ಲಿ ಹೇಳಿರುವಂತೆ, ಎಲ್ಲರ ಜೀವ ಮತ್ತು ಆಸ್ತಿಯನ್ನು ಕಾಪಾಡತಕ್ಕಂಥದ್ದು ನಮ್ಮೆಲ್ಲರ ಮೂಲಭೂತ ಜವಾಬ್ದಾರಿಯಾಗಿದೆ. ಇದನ್ನು ನಡೆಸುವ ಸಂದರ್ಭದಲ್ಲಿ ಸರ್ಕಾರ ಬಹಳ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಯಾವುದೋ ಧರ್ಮದವರು ರೌಡಿಶೀಟರ್ ಇದ್ದಾರೆಂದರೆ ಅವರ ಹತ್ತಿರ ಹೋಗಿ ನೋಡುವುದಕ್ಕೆ ಆಗುವುದಿಲ್ಲ. ಆದರೆ ಇನ್ನೊಂದು ಧರ್ಮದವರು ಅಮಾಯಕರು. ಇತ್ತೀಚೆಗೆ ಮಂಗಳೂರಿನಲ್ಲಿ ಶ್ರೀ ಅಬ್ದುಲ್ ರೆಹಮಾನ್ ಅವರ ಕೊಲೆ revenge killing. ಆ ಹುಡುಗ . . .

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕೊಲೆ ಮಾಡಿದವನು ಅಮಾಯಕ ಅಲ್ಲವೇ?

**ಸಭಾಪತಿಯವರು:-** ಶ್ರೀ ಕಿಶೋರ್ ಕುಮಾರ್ ಪುತ್ತೂರ್ ತಾವು ಆಮೇಲೆ ಮಾತನಾಡಿ. ನೀವೇನು ಸಚಿವರೇ? ಮಾನ್ಯ ಸದಸ್ಯರು ಮಾತನಾಡಿ ಮುಗಿಸಲಿ.

**ಶ್ರೀ ಕಿಶೋರ್ ಕುಮಾರ್ ಪುತ್ತೂರ್:-** ಮಾನ್ಯ ಸಭಾಪತಿಯವರೇ, ಅವರು ಅಮಾಯಕರು ಎಂದು ಹೇಳಿದರು.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಶ್ರೀ ಅಬ್ದುಲ್ ರೆಹಮಾನ್ ಎಂಬುವರು ಕೊಲೆ ಆದನಲ್ಲಾ, ಆತನಿಗೆ ಕೊಲೆ ಮಾಡಿದವರ ತಂದೆಯವರು ಹೋಗಿ ರಕ್ತ ಕೊಟ್ಟಿದ್ದಾರೆ. ಅವರಿಗೆ revenge killing ಯಾರು ಸಿಕ್ಕಿಲ್ಲವೆಂದು ಅವರನ್ನು ಕರೆಸಿ ಕೊಲೆ ಮಾಡಿರತಕ್ಕಂಥದ್ದು ವಿಶ್ವಾಸಘಾತುಕದ ಕೆಲಸ ಯಾವತ್ತೂ ಕೂಡ ನಮ್ಮ ಕರ್ನಾಟಕದಲ್ಲಿ ಆಗಿಲ್ಲ. ಇದನ್ನು ಹೊಸದಾಗಿ ಸೃಷ್ಟಿ ಮಾಡುತ್ತಿದ್ದಾರೆ. ಆದ್ದರಿಂದ ಮಾನ್ಯ ಗೃಹ ಸಚಿವರು ನಿರ್ದಾಕ್ಷಿಣ್ಯವಾಗಿ ಯಾವುದೇ ಧರ್ಮ, ಜಾತಿಯನ್ನು ನೋಡದೇ ನ್ಯಾಯವನ್ನು ಎಲ್ಲರಿಗೂ ಕೂಡ ಒದಗಿಸಿಕೊಡಬೇಕೆಂದು ತಮ್ಮ ಮೂಲಕ ನಾನು ಮನವಿ ಮಾಡುತ್ತಿದ್ದೇನೆ.

**ಸಭಾಪತಿಯವರು:-** ನೋಡಿ, ಸಮಯ ಇರಲಿಲ್ಲ ಎಂದು ಮಾತನಾಡಲು ಅವಕಾಶ ಕೊಟ್ಟಿದ್ದೇನೆ. ಅದನ್ನು ದುರುಪಯೋಗ ಮಾಡಿಕೊಳ್ಳಬೇಡಿ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ನಾನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹುಟ್ಟಿ ಬೆಳೆದವಳು.

**ಸಭಾಪತಿಯವರು:-** ಶ್ರೀಮತಿ ಭಾರತಿ ಶೆಟ್ಟಿಯವರೇ, ಈಗ ಅಲ್ಲಿಂದ ಬಿಟ್ಟು ಬಂದಿದ್ದೀರಲ್ಲವೇ?

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನಾನು ಬಿಟ್ಟು ಬಂದರೂ ಕೂಡ ಅದು ನಾನು ಹುಟ್ಟಿದ ನೆಲ. ಬಹಳ ಸಣ್ಣ ವಯಸ್ಸಿನಿಂದ ಅಲ್ಲಿ ಆಗುವಂತಹ ಕೋಮು-ಗಲಭೆಯನ್ನು ನಾನು ನೋಡಿಕೊಂಡು ಬಂದಿದ್ದೇನೆ. ನಮ್ಮ ಕಣ್ಣಿಗೆ ಮತ್ತು ಎಲ್ಲರಿಗೆ ಅಮಾಯಕರ ರೀತಿ ಕಾಣುತ್ತಾರೆ. ಬೆಂಕಿ ಹಚ್ಚಿದರೆ ಅಮಾಯಕರು, ಸತ್ತು ಹೋದರೆ ಅಮಾಯಕರು, ಕುಕ್ಕರ್‌ನಲ್ಲಿ ಬಾಂಬ್ ಬ್ಲಾಸ್ಟ್ ಮಾಡಿದರೆ ಅಮಾಯಕರು. ಈ ರೀತಿ ಅಮಾಯಕರು ಎಂದು ಅನಿಸಬಹುದು. ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಕೋಮು-ಸೌಹಾರ್ದತೆಯನ್ನು ಕಾಪಾಡುವುದಕ್ಕೆ ನೀವೇನು Action Force ಅನ್ನು ತಂದು ಇಟ್ಟಿದ್ದಾರೆಯೇ? ನೀವು ಯಾವ Force ಅನ್ನು ಬೇಕಾದರು ಇಡಿ. ಮಾನ್ಯ ಮುಖ್ಯಮಂತ್ರಿಯವರು ಅಲ್ಲಿಗೆ ಹೋಗಿ ಅವರಿಗೆ ದುಡ್ಡು ಕೊಟ್ಟರು, ಇನ್ನೊಬ್ಬರ ಹತ್ತಿರ ಹೋಗಲಿಲ್ಲವೆಂದು ಹೇಳುತ್ತಾರೆ. ಅದಕ್ಕಿಂತ ದೊಡ್ಡ ಪ್ರಮಾಣದಲ್ಲಿ ಕೊಲೆ ಆದವನ ಮನೆಗೆ ಸರ್ಕಾರ ಹೋಗುವುದಿಲ್ಲ. ಆದರೆ ಕೊಲೆ ಮಾಡಿಸಿದವರ ಹತ್ತಿರ ಹೋಗಿದ್ದಕ್ಕೆ ನನ್ನ ಹತ್ತಿರ ಲಿಸ್ಟ್ ಇದೆ. ನಮ್ಮ ಮನೆಯ ಹತ್ತಿರವೇ ಬೆಂಕಿ ಹಚ್ಚಿದಾಗ ದೇವಸ್ಥಾನಕ್ಕೆ ಎಷ್ಟು ದುಡ್ಡು ಬಂತು? ಬೆಂಕಿ ಹಚ್ಚಿದಾಗ ಮಸೀದಿಗೆ ಎಷ್ಟು ದುಡ್ಡ ಬಂತು? ಇವೆಲ್ಲಾ ಲಿಸ್ಟ್ ನಮ್ಮ ಹತ್ತಿರ ಇದೆ. ಆಮೇಲೆ ಆ ಕೇಸ್‌ನಲ್ಲಿ ಸಾಕಷ್ಟು ನೋವು ಅನುಭವಿಸಿ ಲಾಠಿ ಏಟು ಕೂಡ ನಾನು ತಿಂದಿದ್ದೇನೆ. ಆದ್ದರಿಂದ ಕೋಮು-ಸೌಹಾರ್ದತೆಯುತವಾಗಿ ಇರಬೇಕಾದರೆ, ಈ ಸರ್ಕಾರದ ರೀತಿ-ನೀತಿಗಳನ್ನೆಲ್ಲಾ ನೋಡಿದ ನಂತರ ಈಗ ನನಗೆ ಅನಿಸುವುದೇನೆಂದರೆ, ದನ ಸತ್ತರೆ ಸುಮ್ಮನೆ ಕುಳಿತುಕೊಳ್ಳಬೇಕು. ಯಾರು ಹೋಗಿ ಹೇಳಬಾರದು. ಲವ್ ಜಿಹಾದ್ ಆದಲ್ಲಿ ನಾವು ಮಾತನಾಡಬಾರದು. ಈ ಸಮಾಜದಲ್ಲಿ ಹಿಂದೂಗಳಿಗೆ ಏನು ಬೇಕಾದರೂ ಆದಲ್ಲಿ ನಾವು ಯಾರೂ ಮಾತನಾಡಬಾರದು. ಮಾತನಾಡುವುದು ಇದ್ದರೆ, ಎದುರು ಬರುವುದಿದ್ದರೆ ಈ ರಾಜ್ಯದಲ್ಲಿ ಕೋಮು-ಸೌಹಾರ್ದತೆ ಇರುತ್ತದೆ. ಆದರೆ ಕೆಲವರಿಗೆ ತಡೆಯುವುದಿಲ್ಲ. ಆಮೇಲೆ ಆ ಸಮಾಜಕ್ಕೆ ಆದಾಗ ಆಗ ಉದ್ವೇಗ ಆಗುತ್ತದೆ, ಕೋಮು-ಸೌಹಾರ್ದತೆ ನಿಲ್ಲುತ್ತದೆ.

**ಸಭಾಪತಿಯವರು:-** ಮಾನ್ಯ ಭಾರತಿ ಶೆಟ್ಟಿಯವರೇ, ತಾವು ಮಾತನಾಡಿದ್ದು ಸಾಕು, ಕುಳಿತುಕೊಳ್ಳಿ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಕೊನೆಯದಾಗಿ ಹೇಳುವುದೇನೆಂದರೆ, ಯಾವಾಗ ಹಠವಾದಿಗಳನ್ನು ನೀವು ಶಿಕ್ಷೆ ಕೊಡದೇ, ಅವರನ್ನು ಸಾಕುತ್ತೀರೋ ಆಗ ಕೋಮು-ಸೌಹಾರ್ದತೆ ಬಂದೇ ಬರುತ್ತದೆ, ಅದು ನಿಲ್ಲುವುದಿಲ್ಲ. ಯಾವ Force ಅಲ್ಲ, ನೀವು Army ಯನ್ನು ತಂದು ನಿಲ್ಲಿಸಿದರೂ ಕೂಡ ಏನೂ ಮಾಡುವುದಿಲ್ಲ. ಯಾವುದೇ ಕೋಮಿನವರು ಇರಬಹುದು, ಅವರು ತಪ್ಪು ಮಾಡಿದಾಗ ಅವರಿಗೆ ಶಿಕ್ಷೆ ಕೊಟ್ಟರೆ,

ಮುಂದೆ ಆ ತಪ್ಪನ್ನು ಮಾಡುವುದಿಲ್ಲ. ತಪ್ಪು ಮಾಡಿದವರನ್ನು ಅಮಾಯಕರು ಮತ್ತು ಸಹೋದರರು ಎಂದು treat ಮಾಡಿದರೆ ಆಗುವುದಿಲ್ಲ. ಇದು ಇವತ್ತಿನದ್ದು ಅಲ್ಲ, ನಾನು ಹುಟ್ಟಿದಾಗಿನಿಂದ ನೋಡುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಭಾರತಿ ಶೆಟ್ಟಿಯವರೇ, ತಾವು ಮಾತನಾಡಿದ್ದು ಸಾಕು, ಕುಳಿತುಕೊಳ್ಳಿ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಕೊನೆಯದಾಗಿ ಹೇಳಿಬಿಡುತ್ತೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆ education hub ಆಗಿದೆ. ಅಷ್ಟು ಚೆನ್ನಾಗಿ ಶಿಕ್ಷಣ ಕೊಡುತ್ತಾರೆ. ಮಾನ್ಯ ಸದಸ್ಯರು ಮೈಸೂರಿಗೆ ಕಲಿಯುವುದಕ್ಕೆ ಹೋಗುತ್ತಾರೆಂದು ಹೇಳಿದರು. ಮೈಸೂರಿನವರೆಲ್ಲಾ ಬಂದು ಶಿಕ್ಷಣ ಕಲಿಯುವುದೇ ಮಂಗಳೂರಿನಲ್ಲಿ. ಹೊರ ರಾಜ್ಯ ಮತ್ತು ಹೊರ ದೇಶಗಳಿಂದ ಸಾಕಷ್ಟು ವಿದ್ಯಾರ್ಥಿಗಳು ಬಂದು M.B.B.S ಮತ್ತು Engineering ಮಾಡುವುದಕ್ಕೆ ಮಂಗಳೂರಿಗೆ ಬರುತ್ತಾರೆ. ಎಲ್ಲರೂ ಕೂಡ ದಕ್ಷಿಣ ಕನ್ನಡದ ಮಂಗಳೂರಿಗೆ ಕಲಿಯಲು ಬರುತ್ತಾರೆ. ಆದ್ದರಿಂದ ಕೋಮು-ಸೌಹಾರ್ದತೆ ಇರಬೇಕಾದರೆ ಹಿಂದೂಗಳೇ ನೀವೆಲ್ಲರೂ ಕೂಡ ಬಾಯಿ ಮುಚ್ಚಿಕೊಂಡು ಕುಳಿತುಕೊಳ್ಳಿ. ಅವರು ಏನು ಮಾಡಿದರೂ ಕೂಡ ಬಾಯಿ ಮುಚ್ಚಿಕೊಂಡು ಕುಳಿತರೆ ಕೋಮು-ಸೌಹಾರ್ದತೆ ಇರುತ್ತದೆ, ಇಲ್ಲದಿದ್ದರೆ ಅವರಿಗೆ ಇರುವುದಿಲ್ಲ.

**ಸಭಾಪತಿಯವರು:-** ಮಾನ್ಯ ಸಚಿವರುಗಳು ಬಂದಿಲ್ಲವೆಂದು ನಿಮಗೆಲ್ಲರಿಗೂ ಮಾತನಾಡಲು ಅವಕಾಶ ಕೊಟ್ಟಿದ್ದೇನೆ.

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹಸಚಿವರು ಸದುದ್ದೇಶದಿಂದ ಕೋಮು-ಸಾಮರಸ್ಯ ನಿಲ್ಲಿಸಬೇಕು ಎಂಬ ಕಾರಣಕ್ಕೋಸ್ಕರ ಒಂದು Special Task Force ರಚನೆ ಮಾಡಿದ್ದೇವೆಂದು ಹೇಳಿದರು. ರೋಗದ ಅಡ್ಡಪರಿಣಾಮಕ್ಕೆ ಉಪ ಶಮನವೋ ಅಥವಾ ರೋಗದ ಮೂಲಕ್ಕೆ ಚಿಕಿತ್ಸೆಯೋ. ಒಂದುವೇಳೆ ರೋಗದ ಮೂಲಕ್ಕೆ ಚಿಕಿತ್ಸೆ ಎನ್ನುವುದಾದರೆ, ಭಾರತೀಯ ದರ್ಶನದಲ್ಲಿ 'ದೇವನೊಬ್ಬ ನಾಮ ಹಲವು' ಎಂಬ ತತ್ವ ಇದೆ. ಭಾರತೀಯ ದರ್ಶನಗಳಲ್ಲಿ intolerance ಇಲ್ಲ. 'ಸಕಲ ಜೀವಾತ್ಮಗಳಲ್ಲೂ ಲೇಸನ್ನು ಬಯಸು' ಎಂದು ನಮ್ಮ ದರ್ಶನಗಳು ಹೇಳುತ್ತವೆ. ಬರೀ ಮನುಷ್ಯರನ್ನು ಕೊಲ್ಲುವುದನ್ನು ಪಾಪ ಎಂದು ಹೇಳುವುದಿಲ್ಲ. ಪ್ರಾಣಿಗಳನ್ನು ಕೊಲ್ಲುವುದನ್ನು ಕೂಡ ಪಾಪ ಎಂದು ಹೇಳಿದೆ. "ದಯೆಯೇ ಧರ್ಮದ ಮೂಲವಯ್ಯ, ದಯೆ ಇಲ್ಲದ ಧರ್ಮ ಅದಾವುದಯ್ಯ, ದಯೆ ಇರಬೇಕು ಸಕಲ ಜೀವಾತ್ಮಗಳಲ್ಲಿ" ಎಂದು ಬಸವಣ್ಣನವರ ವಚನದ ಮೂಲಕ ನಿಜಧರ್ಮದ ಅರ್ಥವನ್ನು ತಿಳಿಸುವಂಥ ಕೆಲಸವನ್ನು ಮಾಡಿದ್ದಾರೆ. ಈಗ ದಯೆಯೇ ಧರ್ಮದ ಮೂಲವಯ್ಯ ಎನ್ನುವುದು ತಪ್ಪೋ ಅಥವಾ ಕೊಲ್ಲುವುದನ್ನೇ ಕಾಯಕ ಮಾಡಿಕೊಂಡಿರುವುದು ತಪ್ಪೋ. ನಾನು

ಹೇಳುವುದೇನೆಂದರೆ ಕೆಲವು ಮತಗ್ರಂಥಗಳು intolerance ಅನ್ನೇ ಇಟ್ಟುಕೊಂಡು ಹುಟ್ಟುಬಿಟ್ಟಿದ್ದಾರೆ. ಆ intolerance ಪರಿಣಾಮದಿಂದಾಗಿ ಇವತ್ತಿನ ದಿವಸ ಜಾಗತಿಕ ಭಯೋತ್ಪಾನೆ ಆಗಿದೆ. ನೀವು ಜಾಗತಿಕ ಭಯೋತ್ಪಾದನೆಯ ಮೂಲವನ್ನು ಹುಡುಕಿದರೆ intolerance. ಅಲ್ಲಿ tolerance ಇದ್ದಲ್ಲಿ ಭಯೋತ್ಪಾದನೆ ಆಗುವುದಿಲ್ಲ, communal clause ಆಗುವುದೇ ಇಲ್ಲ. ಆದರೆ intolerance ಯಾವುದರ ಮೂಲಕ ಬರುತ್ತದೆ? ನಾವು ಗೋವನ್ನು ಪೂಜಿಸುತ್ತೇವೆ. ನಾವು ಪೂಜಿಸುತ್ತೇವೆ ಎಂಬ ಕಾರಣಕ್ಕಾಗಿ ಅವರು ಕೊಲ್ಲುವುದಕ್ಕೆ ಹೊರಡುತ್ತಾರೆ. ಮಾನ್ಯ ಸಭಾಪತಿಯವರೇ, ನಿಮ್ಮ ಜಿಲ್ಲೆಯಲ್ಲಿ 2 ಹೋರಿ ಕರುಗಳನ್ನು ಹತ್ಯೆ ಮಾಡಿದರು. ಅವರು purpose ಕೆರಳಸಬೇಕೆಂದು ಕೆಚ್ಚಲು ಏಕೆ ಕುಯ್ದರು? ಗಬ್ಬದ ಹಸುವನ್ನು ಏಕೆ ಕಡಿದರು? ಕೆರಳಸಬೇಕೆಂದು ಕಡಿದರು. ಗಣಪತಿ ಮೆರವಣಿಗೆಯ ಮೇಲೆ ಏಕೆ ಕಲ್ಲು ಹೊಡೆಯುತ್ತಾರೆ? ಕೆರಳಸಬೇಕೆಂದು ಕಲ್ಲು ಹೊಡೆಯುತ್ತಾರೆ. ಈಗ ಏಕೆ ಅವರು ಕೆರಳಸಬೇಕೆಂದು ಹೇಳುತ್ತಾರೆಂದರೆ ಅವರ ಮತ ಗ್ರಂಥಗಳಲ್ಲಿ intolerance ಇದೆ. ಅವರ ಮತಗ್ರಂಥಗಳಲ್ಲಿ ಅನ್ಯದೇವರುಗಳ ಬಗ್ಗೆ ಜಾಗವೇ ಇಲ್ಲ. ನಿಮಗೆ ಸಹಿಷ್ಣುತೆ ಎಂದರೆ ಮಾನ್ಯ ಅಡಗೂರ್ ಹೆಚ್. ವಿಶ್ವನಾಥ್ ರವರು ನಮಗೆ ಇಷ್ಟವಿಲ್ಲ. ಆದರೂ ನಾವು ಸಹಿಸಿಕೊಂಡಿದ್ದೇವೆ. ಇದು ಸಹಿಷ್ಣುತೆ. ಸಮಾಧಾನ ಎಂದರೆ, ನಮ್ಮನ್ನೆಲ್ಲರನ್ನೂ equal ಆಗಿ treat ಮಾಡುವುದು ಸಮಾಧಾನ. ಸಮಾಧಾನವೇ ಇಲ್ಲದೇ ಇರುವುದು ಇನ್ನು ಸಹಿಷ್ಣುತೆ ಎಲ್ಲಿ ಅವರಿಗೆ? ಸಾಮರ್ಥ್ಯ ಇಲ್ಲದೇ ಇರುವವರಿಗೂ ಸಹಿಷ್ಣುತೆ, ಆದರೆ ಸಾಮರ್ಥ್ಯ ಬಂದಮೇಲೆ ಮುಗಿಸುವ ಕೆಲಸ ಇತಿಹಾಸದಲ್ಲಿ ನಾವು ಕಂಡಿದ್ದೇವೆ. ಇದಕ್ಕೆ ಚಿಕಿತ್ಸೆ ಕೊಡಬೇಕೇ? ಕೇವಲ ಅಡ್ಡಪರಿಣಾಮಗಳಿಗೆ ಮಾತ್ರ ಚಿಕಿತ್ಸೆ ಕೊಡಬೇಕೇ? ಅದಕ್ಕೆ ನಾನು ನಿಮ್ಮ ಹತ್ತಿರ ವಿನಂತಿ ಮಾಡುವುದೇನೆಂದರೆ, ಎಲ್ಲಾ ಧರ್ಮ ಗ್ರಂಥಗಳನ್ನು ಈ Special Task Force ಒಂದು study ಮಾಡಲಿ. ಆ ಧರ್ಮದ ಮತಗ್ರಂಥಗಳಲ್ಲಿ ಇರುವಂತಹ intolerance ಅನ್ನು ತೆಗೆದುಹಾಕುವುದಕ್ಕೆ ಆಯಾ ಸಮುದಾಯದವರನ್ನು ಮನವೊಲಿಸಬೇಕು. ಹಿಂದೂ ಧರ್ಮದಲ್ಲಿ intolerance ಇದ್ದರೆ ಶಾಶ್ವತವಾಗಿ ಶಾಂತಿ ನೆಲೆಸುವುದಕ್ಕೆ ಅದನ್ನು ತೆಗೆದುಹಾಕಬೇಕು. ಅದೇ ರೀತಿ ಇನ್ನೊಂದು ಮತಗ್ರಂಥಗಳಲ್ಲಿ intolerance ಇದ್ದರೆ ಅದನ್ನೂ ಕೂಡ ತೆಗೆದುಹಾಕಬೇಕು. ಅದನ್ನು ತೆಗೆದುಹಾಕದಿದ್ದರೆ ಈ ಸೌಹಾರ್ದತೆ ಎಷ್ಟು ದಿನ ಇರುತ್ತದೆ? 4 ದಿನ, 40 ದಿನ, 4 ವರ್ಷ ಆಮೇಲೆ ಏನು? ಇದು ಮುಂದುವರೆಯುತ್ತದೆ. ಅದಕ್ಕಾಗಿ ಇದನ್ನೂ ಅಧ್ಯಯನ ಮಾಡಿ. ಮತಗ್ರಂಥಗಳಲ್ಲಿರುವಂಥ intolerance, ಆ ಮತಗ್ರಂಥಗಳ ಬೋಧನೆ ಆ ಮತಗ್ರಂಥಗಳನ್ನು ಕಲಿಸುವುದರಿಂದ ತಯಾರಾಗುವ ವರ್ಗ. ಇದರ ಬಗ್ಗೆಯೂ ಕೂಡ ಅಧ್ಯಯನ ಆಗಲಿ.

**ಸಭಾಪತಿಯವರು:-** ಮಾನ್ಯ ಸಿ.ಟಿ.ರವಿಯವರೇ, ನಾನು ಬೆಲ್ ಮಾಡಿದರೆ ತಾವು ಕುಳಿತುಕೊಳ್ಳಬೇಕು.

**ಡಾ: ಜಿ.ಪರಮೇಶ್ವರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಈ ಪ್ರಶ್ನೆಯನ್ನು ಮತ್ತು ಈ ಸಮಸ್ಯೆಗೆ ಕಾನೂನನ್ನು ಹೊರತುಪಡಿಸಿ ನಾನೇನು ನೋಡುವುದಿಲ್ಲ. My limitations are only to take care of the law and order in the State. ನೀವು ರಾಜಕೀಯ ಮಾಡುವುದಕ್ಕೆ, ಧರ್ಮ ಗ್ರಂಥಗಳ ವಿಚಾರ ಮಾತನಾಡುವುದಕ್ಕೆ ಅಥವಾ ಇದರಿಂದ ಆಗುವಂತಹ ಅನಾಹುತಗಳ ಬಗ್ಗೆ ಮಾತನಾಡುವುದಕ್ಕೆ ಬೇರೆ ಚರ್ಚೆ ಮಾಡೋಣ. ಯಾವ ಗ್ರಂಥದಲ್ಲಿ ಯಾವ ideology ಇದೆ, ಯಾವ philosophy ಇದೆ. ಅದನ್ನೆಲ್ಲಾ ಬೇರೆ ಚರ್ಚೆ ಮಾಡೋಣ. ಆದರೆ ನಾನು ಒಬ್ಬ ಗೃಹ ಸಚಿವನಾಗಿದ್ದು ನನ್ನ ಕೆಲಸವೇನೆಂದರೆ, ಈ ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದು. ನನಗೆ ಅನಿಸಿದಂತೆ ಇವತ್ತಿನ ದಿವಸ ಕಾನೂನು ಮತ್ತು ಸುವ್ಯವಸ್ಥೆಯಲ್ಲಿ ಶಾಂತಿಯನ್ನು ಕಾಪಾಡುವುದರಲ್ಲಿ ಕರ್ನಾಟಕದಲ್ಲಿ ನಾವು ಯಶಸ್ವಿಯಾಗಿದ್ದೇವೆ ಎಂದು ಬಹಳ ಸಂತೋಷದಿಂದ ಹೇಳುತ್ತಿದ್ದೇನೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

ಇರಬಹುದು, ಅಲ್ಲಿಇಲ್ಲಿ ಘಟನೆಗಳು ಆಗಿರಬಹುದು, ಒಂದೂ ಘಟನೆ ಆಗಲೇ ಇಲ್ಲ, Accident ಎಲ್ಲೂ ಆಗಲಿಲ್ಲ ಅಥವಾ ಏನೋ ಒಂದು incident ಆಗಲೇ ಇಲ್ಲ ಎಂದು ನಾನು ಹೇಳುವುದಿಲ್ಲ. Compared to other States in the Country, what do the statistics say?

(ಮುಂದು)

(700)14.8.2025/10.50/ಎಂ.ಎಂ-ವಿ.ಕೆ (ಸಭಾಪತಿಯವರ ಉಪಸ್ಥಿತಿ)

**ಡಾ: ಜಿ. ಪರಮೇಶ್ವರ್ (ಮುಂದು):-**

ಕರ್ನಾಟಕದಲ್ಲಿ ಎಷ್ಟು ಕೊಲೆಗಳಾಗಿದೆ, ರೇಪ್ ಆಗಿದೆ ಅದನ್ನು ಬೇರೆ ಸಂದರ್ಭದಲ್ಲಿ ತಾವು Adjournment Motion ತಂದಿದ್ದೀರಿ, ನಾನು ಎಲ್ಲಾ statistics ಕೊಡುತ್ತೇನೆ. ಕರ್ನಾಟಕದ ಕಾನೂನು ವ್ಯವಸ್ಥೆಯ ಬಗ್ಗೆ ತಾವು ಕಳೆದ ಬಾರಿಯೂ ಪ್ರಶ್ನೆ ಕೇಳಿದ್ದಿರಿ, ನಾನು ಉತ್ತರಗಳನ್ನು ಕೊಟ್ಟಿದ್ದೇನೆ. ಈ ಬಾರಿಯೂ ಉತ್ತರ ಕೊಡುತ್ತೇನೆ. ಅದನ್ನು ಬೇರೆ ಸಮಯದಲ್ಲಿ ಚರ್ಚೆ ಮಾಡೋಣ. ಆದರೆ ಇವತ್ತು ಏನಾಗುತ್ತಿದೆ ಎಂದರೆ; ಮಾನ್ಯ ಸದಸ್ಯರಾದ ಭಾರತಿ ಶೆಟ್ಟಿಯವರು ಬಹಳ ವೀರಾವೇಷವಾಗಿ ಮಾತನಾಡುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆ ಹೇಗಿತ್ತು, ಹೇಗಾಗಿದೆ ಎನ್ನುವುದನ್ನು ನೀವು ಅರ್ಥಮಾಡಿಕೊಂಡಿದ್ದೀರಾ?

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಚಿವರೇ, ಅರ್ಥ ಮಾಡಿಕೊಂಡಿದ್ದೇವೆ. ನಾನು ಅರ್ಥ ಮಾಡಿಕೊಂಡೇ ಮಾತನಾಡಿದ್ದೇನೆ. (ಗೊಂದಲ)

**ಡಾ: ಜಿ. ಪರಮೇಶ್ವರ್:-** ನೀವು ಅರ್ಥ ಮಾಡಿಕೊಂಡಿಲ್ಲ. You have not understood your own town. ದಯವಿಟ್ಟು ಸ್ವಲ್ಪ ಕೇಳಿ. ನೀವು ಅರ್ಥ ಮಾಡಿಕೊಂಡಿದ್ದರೆ ನಾವೇತಕ್ಕೆ ಅಲ್ಲಿಗೆ ಬರುತ್ತಿದ್ದೆವು? ನಾವು ಅಲ್ಲಿಗೆ ಬಂದು ಶಾಂತಿಯಿಂದ ಇರಿ ಎಂದು ನಿಮಗೆ ಪಾಠ ಹೇಳಬೇಕೇ? ನಿಮಗೆ ಪಾಠ ಹೇಳುವುದಕ್ಕೆ ನಾವು ಬರಬೇಕೇ? ನೀವು ಘಟ್ಟದ ಮೇಲಿರುವವರು. ನೀವು ಬಹಳ ಬುದ್ಧಿವಂತರು, ಶಾಂತಿ ಕಾಪಾಡಬೇಕೆಂದು, ಅಲ್ಲಿ ಯಾವ ವಾತಾವರಣ ಇದೆ ಅದನ್ನು ಸರಿಮಾಡಿಕೊಳ್ಳಿ ಎಂದು ಹೇಳುವುದಕ್ಕೆ ನಾವು ಮಾಡಿದ್ದು ಬಿಟ್ಟರೆ ರಾಜಕೀಯ ಮಾಡುವುದಕ್ಕಲ್ಲ. ಧಾರ್ಮಿಕ ವಿಚಾರಗಳನ್ನು ಚರ್ಚೆ ಮಾಡಿ ಇದನ್ನು ಧಾರ್ಮಿಕವಾಗಿ ತೆಗೆದುಕೊಂಡು ಹೋಗುವುದಕ್ಕಲ್ಲ. ರಾಜ್ಯದಲ್ಲಿ ಶಾಂತಿಯಿಂದ ಇರಬೇಕೆಂದು ಮಾಡಿದ್ದೇವೆ. ಇವತ್ತು ಏತಕ್ಕೆ ಹೂಡಿಕೆ ಮಾಡುವುದಕ್ಕೆ ಕರ್ನಾಟಕಕ್ಕೆ ಬರುತ್ತಾರೆ? There is a political stability in the State. ಯಾರಾದರೂ ಹೂಡಿಕೆ ಮಾಡಬೇಕಾದರೆ ಕರ್ನಾಟಕಕ್ಕೆ ಬಂದು; ಕಳೆದ ಬಾರಿ Global Investors Meet ಆಯಿತು. 10,22,000 ಕೋಟಿ ಹೂಡಿಕೆಗೆ Memorandum of Understanding ಸಹಿ ಮಾಡಿದರು.

**ಶ್ರೀ ಸಿ.ಎನ್. ಮಂಜೇಗೌಡ:-** ಎಷ್ಟು ಜನ ವಾಪಸ್ ಹೋದರು?

**ಡಾ: ಜಿ. ಪರಮೇಶ್ವರ್:-** ಇಲ್ಲಿ ಸ್ವಲ್ಪ ಕೇಳಿ. ವಾಪಸ್ ಹೋಗುತ್ತಾರೆ. ಏಕೆಂದರೆ ಇಲ್ಲಿಯ ವಾತಾವರಣ, ಮಂಗಳೂರಿನ ವಾತಾವರಣ, ತುಮಕೂರಿನ ವಾತಾವರಣ ಸರಿಯಿಲ್ಲವೆಂದರೆ ಹೋಗುತ್ತಾರೆ. ವಾತಾವರಣ ಚೆನ್ನಾಗಿದೆಯೆಂದು ಹೇಳಿದರೆ ಬರುತ್ತಾರಲ್ಲವೇ? Karnataka is the second largest investor atmosphere in the Country. ಜಿ.ಎಸ್.ಟಿ. ಯಲ್ಲಿ ನಾವು ಎರಡನೇ ಸ್ಥಾನದಲ್ಲಿದ್ದೇವೆ. ಏತಕ್ಕೆ? Karnataka is a progressive State and let us be happy about it. ನಾವು ಇದನ್ನು ನಿಗ್ರಹ ಮಾಡಬೇಕೆಂದರೆ, ಇದು ಹಾಗೆಯೇ ಇದ್ದುಬಿಡಬೇಕೇ? ಸರ್ಕಾರಕ್ಕೆ ಜವಾಬ್ದಾರಿ ಇದೆ. ಆದ್ದರಿಂದ ಇದನ್ನು extend ಮಾಡುವ ಅಗತ್ಯವಿಲ್ಲ. ಬೇರೆ ಬೇರೆ ಆಯಾಮಗಳನ್ನು ಇದಕ್ಕೆ ಸೇರಿಸುವ ಅಗತ್ಯ ಖಂಡಿತವಾಗಿಯೂ ಇದರಲ್ಲಿ ಕಾಣುವುದಿಲ್ಲ. ನನ್ನ ದೃಷ್ಟಿ as a Home Minister of the State, law and order are at most important. ಆ ಜಾಗಗಳಲ್ಲಿ ಕರಾವಳಿ ಪ್ರದೇಶಗಳಲ್ಲಿ law and order stability, ಶಾಂತಿ ಇರಬೇಕು. ಅಷ್ಟನ್ನೇ ನಾನು ಕೇಳುತ್ತಿರುವುದು. ನಾವು ಅಷ್ಟಕ್ಕೆ ಮಾತ್ರ ಸೀಮಿತವಾಗಬೇಕೆನ್ನುವುದನ್ನು ಬಿಟ್ಟರೆ beyond that point we should not go.

## ಪ್ರಶ್ನೆ ಸಂಖ್ಯೆ: 510

## ರಾಜ್ಯದಲ್ಲಿರುವ ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಹಂಪಿಯನ್ನು ಹೊರತುಪಡಿಸಿ ಬೇಲೂರು ಹಳೇಬೀಡು, ಪಟ್ಟದಕಲ್ಲು ಮತ್ತು ಐಹೊಳೆ ಪ್ರವಾಸಿ ತಾಣಗಳನ್ನು ಹಂಪಿ ಪ್ರವಾಸಿ ತಾಣದಂತೆ ಅಭಿವೃದ್ಧಿ ಪಡಿಸಲು ಮತ್ತು ಪ್ರಚಾರ ಪಡಿಸದಿರಲು ಕಾರಣಗಳೇನು? | • ಹಂಪಿ, ಬೇಲೂರು-ಹಳೇಬೀಡು, ಪಟ್ಟದಕಲ್ಲು ಪ್ರವಾಸಿ ತಾಣಗಳು ವಿಶ್ವ ಪಾರಂಪರಿಕಾ ತಾಣಗಳಾಗಿದ್ದು, ಹಂಪಿ ಪ್ರವಾಸಿ ತಾಣದಂತೆ ಬೇಲೂರು-ಹಳೇಬೀಡು, ಪಟ್ಟದಕಲ್ಲು ಮತ್ತು ಐಹೊಳೆಗಳನ್ನು ಈ ಕೆಳಕಂಡಂತೆ ಅಭಿವೃದ್ಧಿ ಪಡಿಸಲಾಗುತ್ತಿದೆ.<br>• <u>ಐಹೊಳೆ:</u> ಚಾಲುಕ್ಯ ಪಾರಂಪರಿಕ ಪ್ರದೇಶ ನಿರ್ವಹಣಾ ಪ್ರಾಧಿಕಾರದ ವತಿಯಿಂದ ಐಹೊಳೆ ಗ್ರಾಮದಲ್ಲಿ ರಕ್ಷಿತ ಮತ್ತು ಅರಕ್ಷಿತ ಸ್ಮಾರಕಗಳಲ್ಲಿ ವಾಸವಾಗಿರುವ 134ಕ್ಕೂ ಹೆಚ್ಚು ಕುಟುಂಬಗಳಿಗೆ 13.11 ಎಕರೆ ಜಮೀನನ್ನು ರೂ.350.00 ಲಕ್ಷಗಳ ವೆಚ್ಚದಲ್ಲಿ ಖರೀದಿಸಿ, ಲೇ-ಔಟ್ ಅಭಿವೃದ್ಧಿ ಮಾಡಿ ಪುನರ್ ವಸತಿ ಕಲ್ಪಿಸಲಾಗುತ್ತಿದೆ. ಈ ಸಂಬಂಧ, ಲೇ-ಔಟ್ ಅಭಿವೃದ್ಧಿ ಪಡಿಸಲು ಸಮಗ್ರ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸಲಾಗುತ್ತಿದೆ.<br>• ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ವತಿಯಿಂದ ರೂ.30.00 ಕೋಟಿಗಳ ವೆಚ್ಚದಲ್ಲಿ ಸುಸಜ್ಜಿತವಾದ ಹೋಟೆಲ್ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗುವುದು.<br>• <u>ಪಟ್ಟದಕಲ್ಲು:</u> ರೂ.29.25 ಕೋಟಿಗಳ ವೆಚ್ಚದಲ್ಲಿ ಟೂರಿಸಂ ಪ್ಲಾಜಾ ನಿರ್ಮಿಸಲಾಗುತ್ತಿದೆ,<br>• <u>ಬೇಲೂರು ಮತ್ತು ಹಳೇಬೀಡು:</u> ರೂ.20.71 ಕೋಟಿಗಳ ವೆಚ್ಚದಲ್ಲಿ ಸುಸಜ್ಜಿತವಾದ ತ್ರಿ-ಸ್ಟಾರ್ ಹೋಟೆಲ್ ನಿರ್ಮಾಣ ಮಾಡಲಾಗುತ್ತಿದೆ.<br>• ಮುಂದಿನ ದಿನಗಳಲ್ಲಿ ಹಂಪಿ ಮಾದರಿಯಲ್ಲಿ ಬೇಲೂರು ಹಳೇಬೀಡು, ಪಟ್ಟದಕಲ್ಲು ಮತ್ತು ಐಹೊಳೆ ಪ್ರವಾಸಿ ತಾಣಗಳ ಬಗ್ಗೆ ಹೆಚ್ಚಿನ ಪ್ರಚಾರ ಕಾರ್ಯಗಳನ್ನು ಕೈಗೊಂಡು ಹೆಚ್ಚಿನ ದೇಶ-ವಿದೇಶಿ ಪ್ರವಾಸಿಗರನ್ನು ಆಕರ್ಷಿಸಲಾಗುವುದು. |
| ಆ) | ರಾಜ್ಯದಲ್ಲಿ ಅಂತರಾಷ್ಟ್ರೀಯ ಪ್ರವಾಸಿ ತಾಣಗಳಾದ ನೇಪಾಳ, ಇಂಡೋನೇಷ್ಯಾ, ಥೈಲ್ಯಾಂಡ್ ಮತ್ತು ಶ್ರೀಲಂಕಾದಂತಹ ತಾಣಗಳಿಕ್ಕಿಂತ ಕರ್ನಾಟಕದಲ್ಲಿ ಪ್ರವಾಸದರ ದುಬಾರಿಯಾಗುತ್ತಿರುವುದು ನಿಜವೇ; | ಹೌದು.<br>• ನೇಪಾಳ, ಇಂಡೋನೇಷ್ಯಾ, ಥೈಲ್ಯಾಂಡ್ ಮತ್ತು ಶ್ರೀಲಂಕಾಗಳು ಅಭಿವೃದ್ಧಿ ಹೊಂದುತ್ತಿರುವ ದೇಶಗಳಾಗಿದ್ದು, ಅಲ್ಲಿನ ಪ್ರವಾಸ ದರಗಳು ನಮ್ಮ ರಾಜ್ಯಕ್ಕಿಂತ ಕಡಿಮೆ ಇದೆ. ಆದರೆ, ನಮ್ಮ ರಾಜ್ಯವು ಐತಿಹಾಸಿಕ, ಸಾಂಸ್ಕೃತಿಕ, ಪಾರಂಪರಿಕ ಮತ್ತು ನೈಸರ್ಗಿಕವಾಗಿ ಶ್ರೀಮಂತವಾಗಿರುವ ತಾಣಗಳನ್ನು ಒಳಗೊಂಡಿದ್ದು, ನೇಪಾಳ, ಇಂಡೋನೇಷ್ಯಾ, ಥೈಲ್ಯಾಂಡ್ ಮತ್ತು ಶ್ರೀಲಂಕಾಗಳಲ್ಲಿನ ಪ್ರವಾಸಿ ತಾಣಗಳಲ್ಲಿ ಒದಗಿಸುವ ಆತಿಥ್ಯ ಸೇವೆಗಳಿಗಿಂತ ನಮ್ಮ ರಾಜ್ಯದಲ್ಲಿ ಉತ್ತಮ ಗುಣಮಟ್ಟದ ಮತ್ತು ವೃತ್ತಿಪರ ಸೇವೆಗಳನ್ನು ಒದಗಿಸಲಾಗುತ್ತಿದೆ. ಹಾಗಾಗಿ, ನಮ್ಮ ರಾಜ್ಯದಲ್ಲಿನ ದರಗಳು ನೇಪಾಳ, ಇಂಡೋನೇಷ್ಯಾ, ಥೈಲ್ಯಾಂಡ್ ಮತ್ತು ಶ್ರೀಲಂಕಾಗಳಲ್ಲಿನ ಪ್ರವಾಸಿ ತಾಣಗಳಲ್ಲಿ ದರಗಳಿಗಿಂತ ಹೆಚ್ಚಾಗಿವೆ.<br>• ಹಾಗೇಯೇ, ಅಭಿವೃದ್ಧಿ ಹೊಂದಿದ ರಾಷ್ಟ್ರಗಳಾದ ಇಂಗ್ಲೆಂಡ್, ಜಪಾನ್, ಜರ್ಮನಿ, ಅಮೇರಿಕಾಗಳಲ್ಲಿ ಪ್ರವಾಸಿದರಗಳು ನಮ್ಮ ರಾಜ್ಯಕ್ಕಿಂತ ಹೆಚ್ಚಾಗಿದ್ದು, ಗುಣಮಟ್ಟದ ಮತ್ತು ವೃತ್ತಿಪರ |

| | | |
|---|---|---|
| | | ಸೇವೆಗಳನ್ನು ಒದಗಿಸಲಾಗುವುದಿಲ್ಲ. ಹಾಗೇಯೇ, ದಕ್ಷಿಣ ಆಫ್ರಿಕಾ, ರಷ್ಯಾ ಮತ್ತು ಸ್ಪೇನ್ ರಾಷ್ಟ್ರಗಳು ನಮ್ಮ ದರಗಳನ್ನೇ ಹೊಂದಿವೆ.<br><br>Average Room Rent ದರಗಳ ವಿವರವನ್ನು ಅನುಬಂಧದಲ್ಲಿ ಒದಗಿಸಿದೆ. |
| ಇ) | ಇದ್ದಲ್ಲಿ, ಇತರೇ ರಾಜ್ಯ ಮತ್ತು ದೇಶ-ವಿದೇಶಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಪ್ರವಾಸಿಗರನ್ನು ಆಕರ್ಷಿಸಲು ಮತ್ತು ದರಗಳನ್ನು ಕಡಿಮೆಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | • ಕರ್ನಾಟಕಕ್ಕೆ ದೇಶ-ವಿದೇಶಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಪ್ರವಾಸಿಗರನ್ನು ಆಕರ್ಷಿಸಲು ಹಾಗೂ ರಾಜ್ಯದ ಪ್ರವಾಸೋದ್ಯಮ ಕ್ಷೇತ್ರದಲ್ಲಿನ ಅವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಪ್ರವಾಸೋದ್ಯಮ ಇಲಾಖೆಯಲ್ಲಿ ಪ್ರಸ್ತುತ ನೂತನ ಕರ್ನಾಟಕ ಪ್ರವಾಸೋದ್ಯಮ ನೀತಿ-2024-29 ಅನ್ನು ಮತ್ತಷ್ಟು ಹೂಡಿಕೆದಾರರ ಹಾಗೂ ಪ್ರವಾಸಿಗರ ಸ್ನೇಹಿಯಾಗಿ ಮಾಡಲು ಜಾರಿಗೆ ತರಲಾಗಿದೆ.<br><br>ಪ್ರವಾಸೋದ್ಯಮ ನೀತಿ-2024-29ಅನ್ನು ಈಗಾಗಲೇ ಜಾರಿಮಾಡಲಾಗಿದ್ದು, ಪ್ರವಾಸೋದ್ಯಮ ನೀತಿಯನ್ನು ಅನುಷ್ಠಾನಗೊಳಿಸಲು ರೂ.1350 ಕೋಟಿಗಳ ಅನುದಾನವನ್ನು ಆಯ-ವ್ಯಯದಲ್ಲಿ ಮೀಸಲಿರಿಸಲಾಗಿದೆ. ರೂ.8000 ಕೋಟಿಗಳ ನೇರ ಹೂಡಿಕೆಯನ್ನು ಆಕರ್ಷಿಸುವ ಹಾಗೂ 1.5 ಲಕ್ಷ ಉದ್ಯೋಗವಕಾಶಗಳನ್ನು ಸೃಷ್ಟಿಸುವ ಗುರಿಯನ್ನು ಹೊಂದಲಾಗಿದ್ದು, ಈಗಾಗಲೇ ರೂ.551.78 ಕೋಟಿಗಳ ಮೊತ್ತದ 25 ಹೋಟೆಲ್ ಹಾಗೂ ಇತರೆ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ಹೋಟೆಲ್ ಯೋಜನೆಗಳಿಗೆ ಸಹಾಯಧನ ನೀಡುವ ಮೂಲಕ ನಮ್ಮ ರಾಜ್ಯದಲ್ಲಿ ಉತ್ತಮ ಗುಣಮಟ್ಟದ ಹೋಟೆಲ್‌ಗಳು ಮತ್ತು ಕೊಠಡಿಗಳ ಸಂಖ್ಯೆಗಳನ್ನು ಹೆಚ್ಚಿಸಲು ತೀರ್ಮಾನಿಸಲಾಗಿದೆ.<br>• ನಮ್ಮ ಸ್ಮಾರಕ ದರ್ಶನ ಮತ್ತು ಸಂರಕ್ಷಣೆ ಯೋಜನೆ ಮೂಲಕ ನಮ್ಮ ಸ್ಮಾರಕಗಳನ್ನು ದತ್ತು ನೀಡುವ ಮೂಲಕ ಅವುಗಳನ್ನು ಅಭಿವೃದ್ಧಿ ಮಾಡಲಾಗುತ್ತಿದ್ದು, ಉದ್ಯಮಿಗಳು, ಅನಿವಾಸಿ ಭಾರತೀಯರು ಈ ಯೋಜನೆ ಯಶಸ್ಸಿಗೆ ಕೈಜೋಡಿಸಿದ್ದು, ಮೊದಲ ಹಂತದಲ್ಲಿ 7ಕ್ಕೂ ಹೆಚ್ಚು ಸ್ಮಾರಕಗಳನ್ನು ದತ್ತು ನೀಡಲಾಗಿದೆ.<br>• ದೇಶೀಯ ಮತ್ತು ವಿದೇಶಿಯ ಪ್ರವಾಸಿಗರಿಗೆ ಅನುಕೂಲವಾಗುವಂತೆ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (KSTDC) ಭಾರತೀಯ ರೈಲ್ವೇ ಕೇಟರಿಂಗ್ ಮತ್ತು ಪ್ರವಾಸೋದ್ಯಮ ನಿಗಮ (IRCTC) ರವರ ಸಹಯೋಗದೊಂದಿಗೆ ಕರ್ನಾಟಕದ ಪ್ರಮುಖ ಐಶಾರಾಮಿ ರೈಲು “ದಿ ಗೋಲ್ಡನ್ ಚಾರಿಯಟ್” ಅನ್ನು ದಿನಾಂಕ: 21.12.2024ರಂದು ಮರು ಆರಂಭಿಸಲಾಗಿದ್ದು, 'Pride of Karnataka'(5 ರಾತ್ರಿ-6 ದಿನ) ಹಾಗೂ 'Sojourn of the South' (3ರಾತ್ರಿ-4ದಿನ) ಎಂಬ ವಿಶೇಷ ಪ್ರವಾಸಗಳನ್ನು ಆಯೋಜಿಸಲಾಗುತ್ತಿದೆ.<br>• ಜರ್ಮನ್ ದೇಶದ ಲುಫ್ತಾನ್ಸಾ ವಾಯುಯಾನ ಸಂಸ್ಥೆಯ ಸಹಯೋಗದೊಂದಿಗೆ ಜರ್ಮನಿಯ ಟ್ರಾವೆಲ್ ಆಪರೇಟರ್‌ಗಳೊಂದಿಗೆ FAM ಪ್ರವಾಸ ಏರ್ಪಡಿಸಲಾಗುತ್ತದೆ. ಹಾಗೇಯೇ ವಿವಿಧ ಟ್ರಾವೆಲ್ Influencers ಗಳ ಸಹಯೋಗದೊಂದಿಗೆ ರಾಜ್ಯದ ಪ್ರವಾಸಿ ತಾಣಗಳ ಪ್ರಚಾರ ಕೈಗೊಳ್ಳಲಾಗುತ್ತಿದೆ. |
| ಈ) | ರಾಜ್ಯದಲ್ಲಿ ಅತ್ಯಂತ ಸುದೀರ್ಘ ಕಾಲದ ಶಿಲಾವಿನ್ಯಾಸಗಳು ಮತ್ತು ದೇವಸ್ಥಾನಗಳನ್ನು ಕಾಪಾಡಲು (ಬಿದ್ದು ಹೋಗುವ ಸ್ಥಿತಿಯಲ್ಲಿರುವ ಶಿಲಾ ವಿನ್ಯಾಸಗಳು ಮತ್ತು ದೇವಸ್ಥಾನಗಳು) ಕೈಗೊಂಡಿರುವ ಕ್ರಮಗಳಾವುವು? | • ರಾಜ್ಯದಲ್ಲಿ ಅತ್ಯಂತ ಸುಧೀರ್ಘ ಕಾಲದ ಶಿಲಾವಿನ್ಯಾಸಗಳು ಮತ್ತು ದೇವಸ್ಥಾನಗಳನ್ನು ಕಾಪಾಡಲು (ಬಿದ್ದು ಹೋಗುವ ಸ್ಥಿತಿಯಲ್ಲಿರುವ ಶಿಲಾ ವಿನ್ಯಾಸಗಳು ಮತ್ತು ದೇವಸ್ಥಾನಗಳು) ಕೈಗೊಂಡಿರುವ ಕ್ರಮಗಳು ಈ ಕೆಳಕಂಡಂತಿವೆ;<br><br>• ಸ್ಮಾರಕ ದತ್ತು ಯೋಜನೆ: ಕರ್ನಾಟಕ ರಾಜ್ಯದಲ್ಲಿರುವ ಇತಿಹಾಸ ಪ್ರಸಿದ್ಧ ಸ್ಮಾರಕಗಳನ್ನು ಸಂರಕ್ಷಿಸಲು ಮತ್ತು ಮೂಲಭೂತ ಸೌಲಭ್ಯಗಳೊಂದಿಗೆ ಅಭಿವೃದ್ಧಿಪಡಿಸಲು Adopt A Monument ಯೋಜನೆಯನ್ನು ಜಾರಿಗೊಳಿಸಲಾಗಿರುತ್ತದೆ. ಈ ಯೋಜನೆಯಡಿಯಲ್ಲಿ ಒಟ್ಟು ನಾಲ್ಕು ಸಂಸ್ಥೆಯವರು 18 ಸ್ಮಾರಕಗಳ ಸಂರಕ್ಷಣೆಗೆ ಆಸಕ್ತಿ ವ್ಯಕ್ತಪಡಿಸಿರುತ್ತಾರೆ. |

| | | |
|---|---|---|
| | | 3ಡಿ ಲೇಸರ್ ಸ್ಕ್ಯಾನಿಂಗ್ ಮೂಲಕ ಸ್ಮಾರಕಗಳ ಡಿಜಿಟಲ್ ದಾಖಲೀಕರಣ<br>• 2019-20ನೇ ಸಾಲಿನ ಆಯವ್ಯಯ ಭಾಷಣದ (ಕಂಡಿಕೆ- 309) ರ ಘೋಷಣೆಯನ್ವಯ ಇಲಾಖೆಯ ಒಟ್ಟು 844 ಸಂರಕ್ಷಿತ ಸ್ಮಾರಕಗಳನ್ನು ಐದು ವರ್ಷಗಳಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ, ಬೆಂಗಳೂರು, ಇವರ ಮೂಲಕ 3ಡಿ ಲೇಸರ್ ಸ್ಕ್ಯಾನಿಂಗ್ ಮೂಲಕ ಸ್ಮಾರಕಗಳ ಡಿಜಿಟಲ್ ದಾಖಲೀಕರಣಮಾಡುವ ಕಾರ್ಯ ಯೋಜನೆಗೆ ರೂ.64.91ಲಕ್ಷಗಳ ವೆಚ್ಚದಲ್ಲಿ ಕೈಗೊಳ್ಳಲು ದಿನಾಂಕ:04.10.2019 ರಂದು ಯೋಜನೆಗೆ ಚಾಲನೆಯನ್ನು ನೀಡಲಾಗಿದೆ.<br>ಯೋಜನೆಯ ಉದ್ದೇಶ: -<br>• ಲೇಸರ್ ಸ್ಕ್ಯಾನಿಂಗ್ ಔಟ್‌ಪುಟ್‌ಗಳನ್ನು 3D ದೃಶ್ಯೀಕರಣ, ವರ್ಚುವಲ್ ಪ್ರವಾಸೋದ್ಯಮ, ದರ್ಶನಗಳು, ಡಿಜಿಟಲ್ ಪುನರ್ ನಿರ್ಮಾಣ ಮತ್ತು ಮಾಪನ ವಿಶ್ಲೇಷಣೆಗಾಗಿ ಬಳಸಬಹುದು.<br>• ಲೇಸರ್ ಸ್ಕ್ಯಾನಿಂಗ್ ಡೇಟಾವು ಸಂಶೋಧಕರು ಮತ್ತು ಇತಿಹಾಸಕಾರರಿಗೆ ಇತಿಹಾಸವನ್ನು ಪುನರ್ ನಿರ್ಮಿಸಲು ಮತ್ತು ಸಂಶೋಧನೆ ನಡೆಸಲು ಅನುವು ಮಾಡಿಕೊಡುತ್ತದೆ.<br>• ಲೇಸರ್ ಸ್ಕ್ಯಾನಿಂಗ್ ಡೇಟಾವು ಭೌತಿಕ ರಚನೆಯು ಹಾನಿಗೊಳಗಾದರೂ, ಕುಸಿದು ಹೋದರೂ ಅಥವಾ ಕಣ್ಮರೆಯಾಗಿದ್ದರೂ ಸಹ, ಭವಿಷ್ಯದಲ್ಲಿ ಮರುಸ್ಥಾಪನೆ ಮತ್ತು ಪುನರ್ ನಿರ್ಮಾಣಕ್ಕಾಗಿ ಡಿಜಿಟಲ್ ಡೇಟಾವನ್ನು ಬಳಸಿಕೊಳ್ಳಬಹುದು.<br>• 3D ಸ್ಕ್ಯಾನ್ ಮಾಡಿದ ಡೇಟಾವು ಪುರಾತತ್ವ ಶಾಸ್ತ್ರದ ಸ್ಥಳಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮೇಲ್ವಿಚಾರಣೆ ಮಾಡಲು ಮತ್ತು ಕೈಗೊಳ್ಳಲು ಸಂರಕ್ಷಕರಿಗೆ ಸಹಾಯ ಮಾಡುತ್ತದೆ.<br>ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ, ಬೆಂಗಳೂರು, ಇವರ ವತಿಯಿಂದ 2023-24ನೇ ಸಾಲಿನಲ್ಲಿ ಬೆಳಗಾವಿ ವಿಭಾಗದಡಿ ಒಟ್ಟು 212 ಸ್ಮಾರಕಗಳ ಡಿಜಿಟಲ್ ದಾಖಲೀಕರಣಗೊಳಿಸಿರುತ್ತಾರೆ. ಒಟ್ಟಾರೆ ಈ ಯೋಜನೆಯಡಿ ರಾಜ್ಯದಲ್ಲಿ ಒಟ್ಟು 530 ಸ್ಮಾರಕಗಳ 3ಡಿ ಲೇಸರ್ ಸ್ಕ್ಯಾನಿಂಗ್ ಕಾರ್ಯವು ಪೂರ್ಣಗೊಂಡಿರುತ್ತದೆ. ಈ ಯೋಜನೆಯನ್ನು SKOCH Governance Assessment and Award 2023ಗೆ ನಾಮ ನಿರ್ದೇಶನಗೊಳಿಸಿ, Semi-finalist skoch order of merit ಪ್ರಮಾಣ ಪತ್ರವನ್ನು ನೀಡಿರುತ್ತಾರೆ. |

# ಅನುಬಂಧ

| ದೇಶ | ರಾಜಧಾನಿ | 3★ ಸರಾಸರಿ (INR/ರಾತ್ರಿ) ಸರಾಸರಿ ಕೊಠಡಿ ಬಾಡಿಗೆ | 4★ ಸರಾಸರಿ (INR/ರಾತ್ರಿ) ಸರಾಸರಿ ಕೊಠಡಿ ಬಾಡಿಗೆ | 5★ ಸರಾಸರಿ (INR/ರಾತ್ರಿ) ಸರಾಸರಿ ಕೊಠಡಿ ಬಾಡಿಗೆ |
|---|---|---|---|---|
| ನೇಪಾಳ | ಕಠ್ಮಂಡು | ₹1,500–₹3,000 | ₹4,000–₹8,000 | ₹9,500–₹13,500 |
| ಇಂಡೋನೇಷ್ಯಾ | ಜಕಾರ್ತ | ₹1,500–₹3,000 | ~₹3,400–₹8,600 | ~₹9,500–₹17,000 |
| ಥೈಲ್ಯಾಂಡ್ | ಬ್ಯಾಂಕಾಕ್ | ₹2,700-₹3,500 | ~₹4,200–₹4,300 | ~₹9,400–₹9,500 |
| ಕೊಲಂಬೊ, ಶ್ರೀಲಂಕಾ | ಕೊಲಂಬೊ | ₹3,000–₹4,000 | ~₹4,100–₹7,500 | ~₹6,200–₹12,000 |
| ಕರ್ನಾಟಕ | ಬೆಂಗಳೂರು | ₹5,000–₹5,500 | ₹8,000–₹12,500 | ₹14,000-₹50,000 |
| ಯುನೈಟೆಡ್ ಕಿಂಗ್‌ಡಮ್ | ಲಂಡನ್ | 11,000–20,000 | 16,000–30,000 | 35,000–80,000+ |
| ಜರ್ಮನಿ | ಬರ್ಲಿನ್ | 7,000–12,000 | 10,000–18,000 | 22,000–45,000 |
| ಜಪಾನ್ | ಟೋಕಿಯೊ | 8,000–14,000 | 14,000–26,000 | 30,000–65,000+ |
| ಯುಎಸ್‌ಎ | ವಾಷಿಂಗ್ಟನ್, ಡಿ.ಸಿ. | 10,000–18,000 | 16,000–30,000 | 32,000–70,000+ |
| ಸ್ಪೇನ್ | ಮ್ಯಾಡ್ರಿಡ್ | 5,000–6,000 | 10,000–13,500 | 15,000–52,000 |
| ದಕ್ಷಿಣ ಆಫ್ರಿಕಾ | ಪ್ರಿಟೋರಿಯಾ | 5,500–6,500 | 11,000–13,000 | 14,000–55,000 |
| ರಷ್ಯಾ | ಮಾಸ್ಕೋ | 5,000–7,000 | 10,500–16,000 | 20,000–55,000 |

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ವಿಸ್ತೃತವಾದಂತಹ, ವಿವರವಾದಂತಹ ಉತ್ತರವನ್ನು ನೀಡಿದ್ದಾರೆ. ಅದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ವಿಶೇಷವಾಗಿ ಕರ್ನಾಟಕ ರಾಜ್ಯ ದೇಶದಲ್ಲಿಯೇ ಅತ್ಯುತ್ತಮವಾದಂತಹ ರಾಜ್ಯ ಮತ್ತು

ಪ್ರವಾಸೋದ್ಯಮಕ್ಕೆ ತನ್ನದೇ ಆದಂತಹ ಐತಿಹಾಸಿಕ ಹಿನ್ನೆಲೆಯುಳ್ಳಂತಹ ಒಂದು ರಾಜ್ಯವಾಗಿದೆ. ದೇಶದಲ್ಲಿಯೇ ಐದನೇ ಸ್ಥಾನದಲ್ಲಿರುವಂತಹ ಕರ್ನಾಟಕ ರಾಜ್ಯ ಪ್ರವಾಸೋದ್ಯಮದಲ್ಲಿ ವಿದೇಶಿಗರನ್ನು ಆಕರ್ಷಣೆ ಮಾಡುವುದರಲ್ಲಿ 12ನೇ ಸ್ಥಾನದಲ್ಲಿ ಇರುವಂತಹದ್ದು ಹೆಮ್ಮೆ ಪಡುವಂತಹ ವಿಚಾರವಾಗಿದೆ. ಕಳೆದ ಆಯವ್ಯಯದಲ್ಲಿ ಕೂಡ ಉತ್ತಮವಾದ ಬಜೆಟನ್ನು ಕೊಟ್ಟು tourism improvement ಗೋಸ್ಕರ ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡುವುದಾಗಿ ರಾಜ್ಯದ ಮುಖ್ಯಮಂತ್ರಿಗಳು ಹೇಳಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ವಿಚಾರ ಬಂದಿರುವುದೇನೆಂದರೆ ಹಲವು ದೇಶಗಳು, ಹಲವು ರಾಜ್ಯಗಳು ಪ್ರವಾಸೋದ್ಯಮದಿಂದ ಅಭಿವೃದ್ಧಿಗೊಳ್ಳುತ್ತಿರುವುದನ್ನು ನಾವು ನೋಡಿದ್ದೇವೆ. ಕರ್ನಾಟಕ ರಾಜ್ಯದಲ್ಲಿರುವಂತಹ ಹಂಪಿ, ಬೇಲೂರು, ಹಳೇಬೀಡು, ಪಟ್ಟದಕಲ್ಲು ಪ್ರವಾಸಿ ತಾಣಗಳು ಯುನೆಸ್ಕೋದಿಂದ sites ಆಗಿರುವಂತಹದು ಮತ್ತು ಬಹಳ ದೊಡ್ಡ ಪರಂಪರೆ ಇರುವಂತಹ ಜಾಗಗಳಾಗಿರುವುದರಿಂದ ಇವುಗಳನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ ನಮ್ಮ ರಾಜ್ಯ ಸರ್ಕಾರ ಉತ್ತಮವಾದ ಕ್ರಮಗಳನ್ನು ತೆಗೆದುಕೊಳ್ಳುತ್ತದೆಂದು ವರದಿ ಕೊಟ್ಟಿದ್ದರೂ ಸಹ ನಮ್ಮ ರಾಜ್ಯಕ್ಕೆ ಬರುವಂತಹ ಪ್ರವಾಸಿಗರ ಸಂಖ್ಯೆ ಕಡಿಮೆಯಾಗುತ್ತಿರುವುದು ಏತಕ್ಕೆ ಎಂಬುದು ಮೂಲಭೂತ ಪ್ರಶ್ನೆಯಾಗಿತ್ತು. ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವಂತಹದ್ದು, last mile connectivity ಕೊಡುವಂತಹದ್ದು; ಅಲ್ಲಿರುವಂತಹ ವಿಚಾರಧಾರೆಗಳನ್ನು ವಿಶ್ವಕ್ಕೆ ಪರಿಚಯ ಮಾಡುವಂತಹ ತಂತ್ರಜ್ಞಾನವನ್ನು ಉಪಯೋಗ ಮಾಡಿಕೊಂಡು calendar of events, ಹಂಪಿಯಲ್ಲಿ ಮಾಡಿದ ರೀತಿಯಲ್ಲಿ, ಹಂಪೆಯನ್ನು ಯಾವ ರೀತಿ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿ ಪಡಿಸಿದ್ದೇವೆಯೋ ಅದೇ ರೀತಿಯಲ್ಲಿ ಬೇಲೂರು, ಹಳೇಬೀಡು, ಪಟ್ಟದಕಲ್ಲು, ಐಹೊಳೆ ಇಂತಹ ಜಾಗಗಳನ್ನು ಅಭಿವೃದ್ಧಿಪಡಿಸಬೇಕೆನ್ನುವುದು ನನ್ನ ಆಗ್ರಹವಾಗಿತ್ತು. ಹಾಗಾಗಿ ನಾನು ಹೇಳುತ್ತಿರುವುದೇನೆಂದರೆ, ಈ ವಿಚಾರಧಾರೆಗಳಲ್ಲಿ ಈಗ ಬಂದಿರುವುದೇನೆಂದರೆ, ನಾನು ಹೇಳದಂತಹ ಕೆಲವು ಜಾಗಗಳಲ್ಲಿ poor infrastructure in the matter of safety and security of the people who are travelling to Karnataka Tourism ಎನ್ನುವ ವಿಚಾರವನ್ನು ಹೇಳುತ್ತಿದ್ದೇನೆ. ಕೇವಲ ಪ್ರವಾಸೋದ್ಯಮದಿಂದ ಮಾತ್ರ ಒಂದು improve ಆಗುವುದಕ್ಕೆ ಸಾಧ್ಯವಾಗುವುದಿಲ್ಲ. ಅಲ್ಲಿ ಹಲವಾರು ಇಲಾಖೆಗಳಿಗೆ ಸಂಬಂಧಪಟ್ಟ ವಿಚಾರಧಾರೆಗಳು ಬರುತ್ತವೆ. Road connectivity, airline connectivity or train connectivity ಇರಬಹುದು, ಇವೆಲ್ಲವನ್ನೂ ನೋಡಿದಾಗ more coordination is required in the department of tourism. ಕೇವಲ ಪ್ರವಾಸೋದ್ಯಮ ಇಲಾಖೆಯಿಂದ ಹಣ ಖರ್ಚು ಮಾಡುವುದರಿಂದ, ಹೋಟೆಲ್‌ಗಳನ್ನು ಮಾಡುವುದರಿಂದ ಅಲ್ಲಿರುವಂತಹ ಜಾಗಗಳನ್ನು ಅಭಿವೃದ್ಧಿ ಪಡಿಸಿದರೆ ಮಾತ್ರ ಜನಗಳು ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಇದನ್ನೇ ಹೋಲಿಕೆ ಮಾಡಿದರೆ ನನ್ನ ಪ್ರಶ್ನೆಯಲ್ಲಿ ನೇಪಾಳ, ಶ್ರೀಲಂಕಾ, ಇಂಡೋನೇಷಿಯಾ ಈ ಕಡೆಗಳಲ್ಲಿ ಹೋಲಿಕೆ ಮಾಡಿದರೆ it is more affordable compared to Karnataka ಎಂಬ

ವಿಚಾರವನ್ನು ಹೇಳುತ್ತೇನೆ. ಹಾಗಾಗಿ ಯಾವುದೇ traveller ಗೆ affordability ಆದರೆ ಅವರು ಬರುವುದಕ್ಕೆ ಸಾಧ್ಯವಾಗುತ್ತದೆ ಎಂಬ ವಿಚಾರಗಳನ್ನು ಹೇಳುತ್ತಿದ್ದೇನೆ.

**ಶ್ರೀ ಹೆಚ್.ಕೆ. ಪಾಟೀಲ (ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, ಗೆಳೆಯರಾದಂತಹ ನಾಗರಾಜುರವರು ಬಹಳ ಬುದ್ಧಿವಂತಿಕೆಯ ಪ್ರಶ್ನೆಗಳನ್ನು ಪ್ರವಾಸೋದ್ಯಮ ಇಲಾಖೆಗೆ ಕಳುಹಿಸಿದ್ದಾರೆ. ಇವರ ಪ್ರಶ್ನೆಗಳಿಗೆ ಉತ್ತರಿಸಬೇಕಾದರೆ ನಮ್ಮ ನಿರ್ದೇಶಕರು, ನಮ್ಮ ಇಲಾಖೆಯವರು ಸಾಕಷ್ಟು ರಿಸರ್ಚ್ ಮಾಡಬೇಕಾಯಿತು. ನಮ್ಮ ಕಡತದಲ್ಲಿರುವಂತಹ ವಿಷಯವನ್ನು ತೆಗೆದು ನೋಡಿ ಹೇಳುವುದಲ್ಲ, ರಿಸರ್ಚ್ ಮಾಡುವಂತಹ ಪ್ರಶ್ನೆ ಬಂತು. ತಾವು ಅದನ್ನು ಪ್ರಸ್ತಾಪ ಮಾಡಿದ್ದೀರಿ. ರಾಜ್ಯದಲ್ಲಿ ಅಂತರಾಷ್ಟ್ರೀಯ ಪ್ರವಾಸಿ ತಾಣಗಳಾದ ನೇಪಾಳ, ಇಂಡೋನೇಷ್ಯಾ, ಥೈಲ್ಯಾಂಡ್ ಮತ್ತು ಶ್ರೀಲಂಕಾದಂತಹ ತಾಣಗಳಿಗಿಂತ ಕರ್ನಾಟಕದಲ್ಲಿ ಪ್ರವಾಸ ದರ ದುಬಾರಿಯಾಗುತ್ತಿರುವುದು ನಿಜವೇ ಎಂದು ಕೇಳಿದ್ದಾರೆ. ಇದು ನಿಜ. ಆದರೆ ನಾವು ಇಷ್ಟೇ ಉತ್ತರ ಹೇಳಿದರೆ, ನೀವು ಇಷ್ಟೇ ಪ್ರಶ್ನೆ ಕೇಳಿದರೆ ಏನು ಸಂದೇಶ ಹೋಗುತ್ತದೆಂದರೆ ನಮ್ಮದು ದುಬಾರಿಯಿದೆಯೆಂದು ಆಗುತ್ತದೆ. ಏತಕ್ಕೆ ನೀವು ಥೈಲ್ಯಾಂಡ್, ಇಂಡೋನೇಷ್ಯಾ ಅಷ್ಟನ್ನೇ ನೋಡುತ್ತೀರಿ? ಇಂಗ್ಲೆಂಡ್, ಜಪಾನ್, ಜರ್ಮನಿ, ಅಮೆರಿಕ ಈ ದೇಶಗಳ ಪ್ರವಾಸಿ ದರಗಳಲ್ಲಿ ನಮ್ಮದು ಅರ್ಧದಷ್ಟಿದೆ. ಇಲ್ಲಿ ನಾವು ಸರ್ವಿಸ್ ಕೊಡುತ್ತೇವೆ. ಅಲ್ಲಿ ಸರ್ವಿಸ್ ಇರುವುದಿಲ್ಲ. ಆದ್ದರಿಂದ ಹಲವು ಅಭಿವೃದ್ಧಿ ಹೊಂದಿರುವಂತಹ ರಾಷ್ಟ್ರಗಳು ಮತ್ತು ಅಭಿವೃದ್ಧಿ ಹೊಂದುತ್ತಿರುವಂತಹ ರಾಷ್ಟ್ರಗಳಿಗೆ ಹೋಲಿಕೆ ಮಾಡಿದಾಗ ನಮ್ಮ ಕರ್ನಾಟಕದಲ್ಲಿ ಪ್ರವಾಸಿಗರಿಗೆ ದರ ಸಾಕಷ್ಟು affordable ಇದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಜೊತೆಗೆ ಅವರು ಹಂಪಿ ಬಗ್ಗೆ ಹೋಲಿಕೆ ಮಾಡುತ್ತಾ, ಹಂಪಿಯಲ್ಲಿ ಅಷ್ಟು ಮಾಡಿದ್ದಾರೆ, ಬೇಲೂರು, ಹಳೇಬೀಡು, ಸೋಮನಾಥಪುರ ಈ ಕಡೆಗಳಲ್ಲಿ ಏತಕ್ಕೆ ಮಾಡಿಲ್ಲ ಎಂದು ಕೇಳಿದ್ದಾರೆ. ಹೌದು, ಮಾಡುವಲ್ಲಿ ನಾವು ವಿಫಲರಾಗಿದ್ದೇವೆ. World Heritage Site ಆಗುವುದಕ್ಕೆ ಏನೂ ತೊಂದರೆಯಾಗುವುದಿಲ್ಲ. ಅಲ್ಲಿ ನಾವು ಮೂಲಭೂತ ಸೌಲಭ್ಯಗಳನ್ನೂ ಕಲ್ಪಿಸಿಲ್ಲ. ಈಗ ನಾವು ಇಂತಹ ಏನು ಅತ್ಯಂತ ಮಹತ್ವದ ತಾಣಗಳಿವೆ, ಅಲ್ಲಿ ವಿಶೇಷವಾದ ರೀತಿಯಲ್ಲಿ ಮೂಲಭೂತ ಸೌಕರ್ಯ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಈಗ ಹಳೇಬೀಡು ಬೇಲೂರು, ಸೋಮನಾಥಪುರದಲ್ಲಿ master plan ಮಾಡಿದ್ದೇವೆ. ಅದರ ಜೊತೆಗೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಇದೇ ವರ್ಷ ನಮ್ಮ ಕ್ರಿಯಾ ಯೋಜನೆಯಲ್ಲಿ 2 ಕೋಟಿ ರೂಪಾಯಿಗಳನ್ನು ಈಗಾಗಲೇ ಒದಗಿಸಿದ್ದೇವೆ. ಕೇವಲ ಐತಿಹಾಸಿಕ ಸ್ಥಳಗಳಿಗೆ ಮಾತ್ರವಲ್ಲ. ಅದರ ಸುತ್ತಲಿನ ಪರಿಸರವನ್ನು ಸಹ ಶ್ರೇಷ್ಠವಾಗಿ ಅಭಿವೃದ್ಧಿಪಡಿಸುವುದಕ್ಕೆ ನಮ್ಮ ಪ್ರವಾಸೋದ್ಯಮ ಇಲಾಖೆ ಈಗಾಗಲೇ ನಿರ್ಣಯ ತೆಗೆದುಕೊಂಡಿದೆ. ಇದರ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಚರ್ಚೆ ಮಾಡಿದ್ದೇವೆ, ಅದಕ್ಕೆ ಬೇಕಾಗುವಂತಹ ವಿಶೇಷ ಅನುದಾನವನ್ನು ಕೊಡುವುದಕ್ಕೆ ಅವರು ಒಪ್ಪಿಕೊಂಡಿದ್ದಾರೆ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದ್ದು ಸರಿಯಿದೆ. ಆದರೂ ಕೂಡ ಇದನ್ನು World Map ನಲ್ಲಿ; ಒಂದು ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಪ್ರವಾಸೋದ್ಯಮವನ್ನು ಉತ್ತೇಜನ ಮಾಡುವುದಕ್ಕೆ, ಹೇಳುತ್ತಿರುವುದು ನಡೆಯುತ್ತಿರುವಂತಹ calendar of events ಗಳನ್ನು ವಿಶ್ವಕ್ಕೆ ಪರಿಚಯ ಮಾಡಿಕೊಡುವುದಕ್ಕೆ well in advance ಮಾಡಿದರೆ ಮಾತ್ರ ವಿದೇಶೀ ಪ್ರವಾಸಿಗರು ಬರುವುದಕ್ಕೆ, ಅವರು ಪ್ಲ್ಯಾನ್ ಮಾಡಿಕೊಳ್ಳುವುದಕ್ಕೆ ಆಗುತ್ತದೆ. ಮತ್ತು ಆ ಜಾಗಗಳ ಬಗ್ಗೆ ಇನ್ನೂ ಹೆಚ್ಚು ಪ್ರಚಾರ ಮಾಡುವುದಕ್ಕೋಸ್ಕರ digital marketing ಮಾಡುವಂತಹದ್ದು ಇರಬಹುದು ಮತ್ತು ಅಲ್ಲಿ ಕಟ್ಟುತ್ತಿರುವಂತಹ ಹೋಟೆಲ್‌ಗಳು ಈಗ ಏನು ಕೊಡುತ್ತಿದ್ದಾರೋ, ಸರ್ಕಾರಿ ಸ್ವಾಮ್ಯದಿಂದ ಕಟ್ಟುತ್ತಿದ್ದಾರೋ ಅಥವಾ ಪಿ.ಪಿ.ಪಿ. ಮಾದರಿಯಲ್ಲಿ ಕಟ್ಟುತ್ತಿದ್ದಾರೋ ಅಥವಾ ಯಾವುದೋ investors ದತ್ತು ತೆಗೆದುಕೊಂಡು approve ಮಾಡುತ್ತಿದ್ದಾರೆಯೇ ಎಂಬ ವಿಚಾರಗಳನ್ನು ಹೇಳಬೇಕಾಗುತ್ತದೆ.

(ಮುಂದು)

(701) 14.08.2025 11.00 ಹೆಚ್‌ವಿ.ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ.ನಾಗರಾಜು(ಮುಂದು):-**

ಸನ್ಮಾನ್ಯ ಸಭಾಪತಿಯವರೇ, ಏಕೆಂದರೆ, ಈ ಜಾಗಗಳು ಬಹಳ ಪವಿತ್ರವಾಗಿರುವ, ವಿಶೇಷವಾದ ದೇವಸ್ಥಾನಗಳು ಇರುವಂತಹ ಆಕರ್ಷಕ ಜಾಗಗಳಾಗಿವೆ ಮತ್ತು ಭಕ್ತಾದಿಗಳು ಬರುವಂತಹ ಜಾಗಗಳಾಗಿವೆ. ನಾನು ಉಲ್ಲೇಖ ಮಾಡಿರುವಂತಹ 4-5 ಜಾಗಗಳು ಮಾತ್ರವಲ್ಲ, ರಾಜ್ಯದಲ್ಲಿ ಪ್ರವಾಸೋದ್ಯಮ ಒಂದು ಉದ್ದಿಮೆಯಾಗಿ ಪರಿವರ್ತನೆಗೊಂಡು ಯುವಕರಿಗೆ ಉದ್ಯೋಗ ಅವಕಾಶಗಳನ್ನು ಕಲ್ಪಿಸಿ ಕೊಡುವಂತಾಗಬೇಕು ಮತ್ತು ಸುಮಾರು 8 ಸಾವಿರ ಕೋಟಿ ರೂಪಾಯಿಗಳನ್ನು ನೇರವಾಗಿ ಹೂಡಿಕೆ ಮಾಡಿರುವುದರ ಬಗ್ಗೆ ಮಾನ್ಯ ಸಚಿವರು ಉತ್ತರದಲ್ಲಿ ಉಲ್ಲೇಖ ಮಾಡಿದ್ದಾರೆ. ಸುಮಾರು 8 ಸಾವಿರ ಕೋಟಿ ರೂಪಾಯಿಗಳ ಬಂಡಾವಳ ಹೂಡಿಕೆ ಸರ್ಕಾರಕ್ಕೆ ಬಂದಿದೆಯೇ ಎನ್ನುವ ವಿಚಾರಕ್ಕೆ ಮಾನ್ಯ ಸಚಿವರಿಂದ ಉತ್ತರವನ್ನು ಬಯಸುತ್ತಿದ್ದೇನೆ.

**ಶ್ರೀ ಹೆಚ್.ಕೆ.ಪಾಟೀಲ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಎಂ.ನಾಗರಾಜುರವರಿಗೆ ನಾನು ಹೇಳಬಯಸುವುದೇನೆಂದರೆ, laser scanning output ಗಳು, 3ಡಿ ದೃಶ್ಯೀಕರಣ, ವರ್ಚ್ಯುಯಲ್ ಪ್ರವಾಸೋದ್ಯಮ, ದರ್ಶನಗಳು, ಡಿಜಿಟಲ್ ಪುನರ್ ನಿರ್ಮಾಣ ಮತ್ತು ಮಾಪನ ವಿಶ್ಲೇಷಣೆಗಾಗಿ ಬಳಸುವಂತಹ ಎಲ್ಲ ತಂತ್ರಜ್ಞಾನವನ್ನು ನಾವು ಬಳಕೆ ಮಾಡಿಕೊಳ್ಳುತ್ತಿದ್ದೇವೆ. ಮಾನ್ಯ ಸದಸ್ಯರು ಏನು ನಿರೀಕ್ಷೆ ಮತ್ತು ಆಪೇಕ್ಷೆಪಡುತ್ತಿದ್ದಾರೆ, ಆ ರೀತಿಯಲ್ಲಿ ಪ್ರವಾಸೋದ್ಯಮ ಇಲಾಖೆ ಇದೆ.

ಮಾನ್ಯ ಸದಸ್ಯರು ಪ್ರವಾಸೋದ್ಯಮವನ್ನು ಉದ್ಯಮವಾಗಿ ನೋಡಬೇಕೆಂದು ಹೇಳಿದ್ದಾರೆ. ಪ್ರವಾಸೋದ್ಯಮ ಎನ್ನುವುದು ಉದ್ಯಮ ನಿಜ, ಆದರೆ ಅದನ್ನು ವಾಣಿಜ್ಯೀಕರಣಗೊಳಿಸುವುದು ನಮ್ಮ ಉದ್ದೇಶವಲ್ಲ. ಉತ್ತರ ಕರ್ನಾಟಕ

ಭಾಗದ ಜನರು ದಕ್ಷಿಣ ಕರ್ನಾಟಕದಲ್ಲಿರುವ ದೇವಸ್ಥಾನಗಳು ಮತ್ತು ಮಠಗಳಿಗೆ ಭೇಟಿಯನ್ನು ನೀಡುತ್ತಿರುತ್ತಾರೆ. ಇದು ವಾಣಿಜ್ಯೀಕರಣವಲ್ಲ, ಇದರಿಂದ ಉದ್ಯೋಗ ಸೃಷ್ಟಿಯಾಗುವುದಿಲ್ಲ ಮತ್ತು ಹೆಚ್ಚಿನ ಆದಾಯವೂ ಬರುವುದಿಲ್ಲ. ಅಲ್ಲಿನ philanthropists, ದೇವಸ್ಥಾನಗಳು ಮತ್ತು ಅಲ್ಲಿನ ಮಠದವರು ಉದಾಹರಣೆಗೆ ಹೇಳಬೇಕಾದರೆ, ಇಡಗುಂಜಿ ದೇವಸ್ಥಾನ, ಕೊಲ್ಲೂರು ದೇವಸ್ಥಾನ, ಧರ್ಮಸ್ಥಳ ಮತ್ತು ಹೊರನಾಡು ದೇವಸ್ಥಾನಗಳು ಇರಬಹುದು ಇಲ್ಲಿಗೆ ಯಾರೇ ಪ್ರವಾಸಿಗರು ಅಥವಾ ಭಕ್ತಾದಿಗಳು ಬಂದರೂ ಅವರಿಗೆ ಉಚಿತವಾಗಿ ಊಟ ಉಪಚಾರವನ್ನು ಮಾಡುತ್ತಾರೆ. ಇಂತಹ ಒಂದು ವಾತಾವರಣವನ್ನು ಸರ್ಕಾರ ವಾಣಿಜ್ಯೀಕರಣ ಮಾಡುವುದಿಲ್ಲ. ಪ್ರವಾಸೋದ್ಯಮವನ್ನು ಅತ್ಯಂತ ಆಕರ್ಷಕ ಮತ್ತು ಶಕ್ತಿಶಾಲಿ ವಲಯವನ್ನಾಗಿ ಅಭಿವೃದ್ಧಿಪಡಿಸಲಾಗುತ್ತದೆ ಎನ್ನುವ ಮಾತನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲು ಬಯಸುತ್ತೇನೆ.

## ಪ್ರಶ್ನೆ ಸಂಖ್ಯೆ:496

## ರಾಜ್ಯದಲ್ಲಿ ಸಿವಿಲ್ ಸರ್ವಿಸ್ ಬೋರ್ಡ್ ರಚನೆ ಕುರಿತು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಸಿವಿಲ್ ಸರ್ವಿಸ್ ಬೋರ್ಡ್ ರಚನೆ ಮಾಡುವ ಪ್ರಕ್ರಿಯೆ ಪ್ರಸ್ತುತ ಯಾವ ಹಂತದಲ್ಲಿದೆ; | ದಿನಾಂಕ:26.09.2024 ರಂದು ನಡೆದ ಸಚಿವ ಸಂಪುಟ ಸಭೆಯ ನಿರ್ಣಯದಂತೆ ರಾಜ್ಯದಲ್ಲಿ ಸಿವಿಲ್ ಸರ್ವಿಸ್ ಬೋರ್ಡ್ ರಚನೆ ಮಾಡುವ ಸಂಬಂಧ ಸಚಿವ ಸಂಪುಟ ಉಪಸಮಿತಿಯನ್ನು ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುತ್ತದೆ. |
| ಆ. | ವರ್ಗಾವಣೆಯಲ್ಲಿ ಹಸ್ತಕ್ಷೇಪ ತಪ್ಪಿಸುವುದು ಸೇರಿದಂತೆ ಆಡಳಿತದಲ್ಲಿ ದಕ್ಷತೆ ತರಲು ಸಾಕಷ್ಟು ಪೂರಕ ಮತ್ತು ಪರಿಣಾಮಕಾರಿಯಾಗಿರುವ ಸಿವಿಲ್ ಸರ್ವಿಸ್ ಬೋರ್ಡ್ ರಚನೆಯನ್ನು ಸರ್ಕಾರ ಇದುವರೆಗೆ ರಚನೆ ಮಾಡದೇ ಇರಲು ಇರುವ ಕಾರಣಗಳೇನು; | ಸಚಿವ ಸಂಪುಟ ಉಪಸಮಿತಿಯು ಸಭೆಗಳನ್ನು ನಡೆಸಿ ವಿಷಯದ ಕುರಿತು ಸುದೀರ್ಘವಾಗಿ ಚರ್ಚಿಸಿ ನೀಡಿರುವ ಶಿಫಾರಸ್ಸಿನಂತೆ ಸಚಿವ ಸಂಪುಟದ ಮುಂದೆ ಪ್ರಸ್ತಾವನೆ ಸಲ್ಲಿಸಲು ಕ್ರಮಕೈಗೊಳ್ಳಲಾಗುತ್ತಿದೆ |
| ಇ. | ದೇಶದಾದ್ಯಂತ ಈಗಾಗಲೇ ಬಹುತೇಕ ರಾಜ್ಯಗಳಲ್ಲಿ ಸಿವಿಲ್ ಸರ್ವೀಸ್ ಬೋರ್ಡ್ ರಚನೆಯಾಗಿದ್ದು, ಅವು ಉತ್ತಮ ವ್ಯವಸ್ಥೆಯಾಗಿ ಮನ್ನಣೆಗಳಿಸಿರುವ ಹಿನ್ನಲೆಯಲ್ಲಿ ಯಾವ ಕಾಲಮಿತಿಯೊಳಗೆ, ರಾಜ್ಯದಲ್ಲಿ ಸಿವಿಲ್ ಸರ್ವಿಸ್ ಬೋರ್ಡ್ ರಚನೆ ಮಾಡಲಾಗುವುದು? | |

**ಶ್ರೀ ಪ್ರತಾಪಸಿಂಹ ನಾಯಕ್.ಕೆ.(ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಈ ಅಧಿವೇಶನದಲ್ಲಿ ಈ ದಿನ ಮೊದಲ ಬಾರಿಗೆ ಮಾನ್ಯ ಮುಖ್ಯಮಂತ್ರಿಗಳು ಈ ಸದನಕ್ಕೆ ಆಗಮಿಸಿದ್ದಾರೆ. ಅವರಿಗೆ ಮೊದಲ ಪ್ರಶ್ನೆ ಕೇಳುವ ಅವಕಾಶ ನನಗೆ ದೊರೆತಿರುವುದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಸ್ವತಂತ್ರ ಭಾರತದ ಸಂವಿಧಾನದ ಅನುಭವದ ಆಧಾರದ ಮೇಲೆ ಮತ್ತು ಸಂವಿಧಾನದ ಆಶಯದಂತೆ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಈ ಮೂರು ಅಂಗಗಳು ಸ್ವತಂತ್ರವಾಗಿ ಮತ್ತು ಪರಿಣಾಮಕಾರಿಯಾಗಿ ಕಾರ್ಯವನ್ನು ನಿರ್ವಹಿಸುತ್ತಿದೆ. ಮಾನ್ಯ ಟಿ.ಎಸ್.ಆರ್.ಸುಬ್ರಮಣಿಯನ್ ಮತ್ತು ಇತರರು vs. ಭಾರತ ಒಕ್ಕೂಟದ ಕೇಸ್‌ಗೆ ಸಂಬಂಧಪಟ್ಟಂತೆ ಸುಪ್ರೀಂ ಕೋರ್ಟ್ 2013ನೇ ಇಸವಿಯಲ್ಲಿ ಒಂದು ತೀರ್ಮಾನವನ್ನು ಕೊಟ್ಟು ಕೇಂದ್ರ ಮತ್ತು ರಾಜ್ಯಗಳಲ್ಲಿ ಸಿವಿಲ್ ಸರ್ವಿಸ್

ಬೋರ್ಡ್ ಅನ್ನು ರಚನೆ ಮಾಡಬೇಕೆನ್ನುವ ಆಶಯವನ್ನು ವ್ಯಕ್ತಪಡಿಸಿತ್ತು. ಕೇಂದ್ರ ಸರ್ಕಾರ ಈಗಾಗಲೇ ಜನವರಿ, 2014ರಲ್ಲಿಯೇ ಇದನ್ನು ಜಾರಿ ಮಾಡಿದೆ. ದೇಶದ ಸುಮಾರು 20 ರಾಜ್ಯಗಳಲ್ಲಿ ನಾಗರಿಕ ಸೇವಾ ಮಂಡಳಿಯ ರಚನೆಯಾಗಿದೆ. ಇದರ ಹಿಂದೆ ಇರುವಂತಹ ಮೂಲ ಉದ್ದೇಶವೇನೆಂದರೆ, ಸಿವಿಲ್ ಸರ್ವಿಸ್‌ನಲ್ಲಿ ನಡೆಯುವಂತಹ ವರ್ಗಾವಣೆಗಳಲ್ಲಿ ರಾಜಕೀಯ ಹಸ್ತಕ್ಷೇಪವನ್ನು ಕಡಿಮೆ ಮಾಡುವುದು ಅಥವಾ ಪಾರದರ್ಶಕತೆಯನ್ನು ತರುವುದಕ್ಕಾಗಿ ಒಂದು ಮಂಡಳಿಯನ್ನು ರಚನೆ ಮಾಡಿ, ಆ ಮಂಡಳಿಯ ಮೂಲಕ ಕಾರ್ಯಾಂಗ ಒಂದು ಸ್ಥಿರತೆಯಲ್ಲಿ ತನ್ನ ಕಾರ್ಯಕ್ಷಮತೆಯನ್ನು ಹೆಚ್ಚಿಸಿಕೊಂಡು, ವೃತ್ತಿಪರತೆಯನ್ನು ತೋರಿಸಿ ಒಂದು ನಿರ್ಭೀತ ವಾತಾವರಣದಲ್ಲಿ ವರ್ಗಾವಣೆಗಳು ಆಗಬೇಕೆನ್ನುವುದು ಇದರ ಉದ್ದೇಶವಾಗಿದೆ. ಈ ಹಿನ್ನೆಲೆಯಲ್ಲಿ ನಾನು Civil Services Board ನ ರಚನೆ ಬಗ್ಗೆ ಪ್ರಶ್ನೆ ಕೇಳಿದ್ದೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ "ದಿನಾಂಕ:26.09.2024ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಇದರ ಬಗ್ಗೆ ನಿರ್ಧಾರವಾಗಿದೆ" ಎಂದು ಹೇಳಿದ್ದಾರೆ. ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟ ನಂತರ ನಾನು ಉಪ ಪ್ರಶ್ನೆಗಳನ್ನು ಕೇಳುತ್ತೇನೆ.

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈಗಾಗಲೇ ಪ್ರಸ್ತಾಪ ಮಾಡಿರುವಂತೆ ದಿನಾಂಕ:30.10.2013ರಂದು ಸುಪ್ರೀಂ ಕೋರ್ಟ್ ಟಿ.ಎಸ್.ಆರ್.ಸುಬ್ರಮಣಿಯನ್ ಮತ್ತು ಇತರರು vs. ಭಾರತ ಒಕ್ಕೂಟದ ಕೇಸ್‌ಗೆ ಸಂಬಂಧಪಟ್ಟಂತೆ ಒಂದು ತೀರ್ಪು ಕೊಟ್ಟು, Civil Services Board ನ್ನು ರಚನೆ ಮಾಡಬೇಕೆಂದು ಹೇಳಿದೆ. ನಮ್ಮ ದೇಶದಲ್ಲಿ ಸುಮಾರು 31 ರಾಜ್ಯಗಳಿವೆ. ಇಲ್ಲಿಯವರೆಗೆ ಸುಮಾರು 21 ರಾಜ್ಯಗಳಲ್ಲಿ ಮತ್ತು 4 ಕೇಂದ್ರಾಡಳಿತ ಪ್ರದೇಶಗಳಲ್ಲಿ Civil Services Board ನ್ನು ರಚಿಸಿದ್ದಾರೆ. ನಮ್ಮ ರಾಜ್ಯದಲ್ಲಿಯೂ ಸಹ ದಿನಾಂಕ:26.09.2024ರಂದು ಈ ವಿಷಯದ ಬಗ್ಗೆ ಸಚಿವ ಸಂಪುಟದಲ್ಲಿ ಚರ್ಚೆ ಮಾಡಿ, ಮಾನ್ಯ ಕಾನೂನು ಸಚಿವರ ಅಧ್ಯಕ್ಷತೆಯಲ್ಲಿ ಒಂದು ಸಚಿವ ಸಂಪುಟದ ಉಪ ಸಮಿತಿಯನ್ನು ಸಹ ರಚನೆ ಮಾಡಲಾಗಿದೆ. ಅವರು ಚರ್ಚೆ ಮಾಡಿ ವರದಿ ಕೊಟ್ಟ ಮೇಲೆ, ಆ ವರದಿಯನ್ನು ಸಚಿವ ಸಂಪುಟ ಸಭೆಯ ಮುಂದಿಟ್ಟು ಆ ಉಪ ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ ಏನು ತೀರ್ಮಾನ ತೆಗೆದುಕೊಳ್ಳಬೇಕು, ಆ ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ. It is a matter of fact that 2013ನೇ ಇಸವಿಯಲ್ಲಿ ಸುಪ್ರೀಂ ಕೋರ್ಟಿನ ಈ ತೀರ್ಮಾನ ಬಂದಿದ್ದರೂ ಸಹ ಅನೇಕ ರಾಜ್ಯಗಳು ಇನ್ನೂ Civil Services Board ಅನ್ನು ರಚನೆ ಮಾಡಿಲ್ಲ.

**ಶ್ರೀ ಪ್ರತಾಪಸಿಂಹ ನಾಯಕ್ ಕೆ:-** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಅತ್ಯಂತ ಸುಶಿಕ್ಷಿತ, ಬಹಳ ವಿಶಾಲ ಹೃದಯವನ್ನು ಹೊಂದಿರುವ ಮತ್ತು ಸಂವಿಧಾನಬದ್ಧವಾಗಿ ನಡೆಯುವಂತಹ ರಾಜ್ಯಗಳ ಪಟ್ಟಿಯಲ್ಲಿ ನಮ್ಮ ರಾಜ್ಯ ಅಗ್ರಸ್ಥಾನದಲ್ಲಿದೆ. ಯಾವ ಕಾಲಮಿತಿಯೊಳಗೆ ರಾಜ್ಯದಲ್ಲಿ Civil Services Board ಅನ್ನು ರಚನೆ ಮಾಡಲಾಗುತ್ತದೆ ಎನ್ನುವುದು ನನ್ನ ಮೂರನೆಯ ಪ್ರಶ್ನೆಯಾಗಿದೆ. ಮಾನ್ಯ ಸಿದ್ಧರಾಮಯ್ಯನವರೇ 2014ನೇ

ಇಸವಿಯಲ್ಲಿ ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ನೋಟಿಫಿಕೇಶನ್ ಮಾಡಲಾಗಿತ್ತು, ಪುನಃ ಅದನ್ನು abeyance ನಲ್ಲಿ ಇಡಲಾಯಿತು. "ಸುಪ್ರೀಂ ಕೋರ್ಟ್‌ನ ಆದೇಶವನ್ನು ಪರಿಪಾಲನೆ ಮಾಡದೇ ಇರುವುದು ಅಪವಾದವಾಗುತ್ತದೆ. ಆದ್ದರಿಂದ ಸಾಧ್ಯವಾದಷ್ಟು ಬೇಗನೇ ಈ ಬೋರ್ಡ್ ಅನ್ನು ರಚನೆ ಮಾಡಬೇಕು" ಎಂದು ಇತ್ತೀಚೆಗೆ ಹೈಕೋರ್ಟ್ ಪುನಃ ಇದರ ಬಗ್ಗೆ ಎಚ್ಚರಿಸಿದೆ. 2014ನೇ ಇಸವಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳೇ ಇದರ ಬಗ್ಗೆ ಕ್ರಿಯಾಶೀಲರಾಗಿ ಪುನಃ ಇದನ್ನು abeyance ನಲ್ಲಿ ಇಟ್ಟಿದ್ದಾರೆ. ಇದರ ಹಿಂದಿರುವ ಆಶಯ ಒಳ್ಳೆಯದಾಗಿದೆ. ಇದರಿಂದಾಗಿ ಕಾರ್ಯ ಕ್ಷಮತೆಗೆ ವೇಗ ಸಿಗುತ್ತದೆ. ಎರಡು ವರ್ಷಗಳ ಕಾಲ ಒಬ್ಬ ಅಧಿಕಾರಿ ಸ್ಥಿರವಾಗಿ ನಿಂತು ಕೆಲಸ ಮಾಡಬಹುದು ಎನ್ನುವ ನಂಬಿಕೆಯ ಜೊತೆಗೆ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಯಾವುದೇ ರೀತಿಯ ರಾಜಕೀಯ ಹಸ್ತಕ್ಷೇಪವಿಲ್ಲದೆ ವರ್ಗಾವಣೆಯಲ್ಲಿ ಪಾರದರ್ಶಕತೆ ಬರುತ್ತದೆ ಎನ್ನುವುದು ಇದರ ಹಿಂದಿರುವ ಉದ್ದೇಶವಾಗಿದೆ. ಅಪವಾದ ಅಥವಾ ಅನಿವಾರ್ಯ ಸಂದರ್ಭದಲ್ಲಿ ವರ್ಗಾವಣೆಯ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ವಿಶೇಷ ಪರಮಾಧಿಕಾರವನ್ನು ಇಟ್ಟುಕೊಂಡು, ಈ ಬೋರ್ಡ್‌ನ್ನು ಆದಷ್ಟು ಬೇಗ ರಚನೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ.

**ಶ್ರೀ ಸಿದ್ದರಾಮಯ್ಯ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಕಳಕಳ ನನಗೆ ಅರ್ಥವಾಗಿದೆ. ಈ ವಿಚಾರದ ಬಗ್ಗೆ ವರದಿ ಕೊಡಲು ಸಚಿವ ಸಂಪುಟದ ಉಪ ಸಮಿತಿಯನ್ನು ರಚನೆ ಮಾಡಲಾಗಿದೆ. ಅವರು ವರದಿಯನ್ನು ಕೊಟ್ಟಿದ್ದಾರೆ. ಮುಂದಿನ ಸಚಿವರ ಸಂಪುಟ ಸಭೆಯಲ್ಲಿ ಆದಷ್ಟು ಜಾಗ್ರತೆ ತೀರ್ಮಾನ ಮಾಡುವಂತಹ ಕೆಲಸವನ್ನು ಮಾಡುತ್ತೇವೆ. ಅನೇಕ ರಾಜ್ಯಗಳಲ್ಲಿ ಈ ಬೋರ್ಡ್ ರಚನೆ ಇನ್ನೂ ಕೂಡ ಆಗಿಲ್ಲ.

**ಶ್ರೀ ಪ್ರತಾಪಸಿಂಹ ನಾಯಕ್ ಕೆ:-** ಸನ್ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯ ಇತರರಿಗೆ ಮಾದರಿಯಾಗಲೀ, ಉದಾಹರಣೆಯಾಗಲೀ ಎನ್ನುವುದು ನಮ್ಮ ಅಭಿಲಾಷೆಯಾಗಿದೆ.

**ಶ್ರೀ ಸಿದ್ದರಾಮಯ್ಯ:-** ಸನ್ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯಲ್ಲಿಯೂ ಸಹ ಈ ವಿಚಾರವನ್ನು ಸಚಿವ ಸಂಪುಟದ ಮುಂದಿಟ್ಟು ತೀರ್ಮಾನ ತೆಗೆದುಕೊಳ್ಳಲಾಗುತ್ತದೆ. ಆ ಕಾರ್ಯ ಪ್ರಗತಿಯಲ್ಲಿದೆ. ಎರಡನೆಯದಾಗಿ ಹೇಳಬೇಕಾದರೆ, ಇನ್ನೂ ಗುಜರಾತ್ ರಾಜ್ಯದಲ್ಲಿಯೂ ಸಹ ಈ ಬೋರ್ಡ್‌ನ ರಚನೆ ಆಗಲಿಲ್ಲ.

(ಮುಂದು)

(702) 14.8.2025 11.10 ಪಿಕೆ:ಬಿಎನ್‌ಎಸ್ (ಸಭಾಪತಿಗಳ ಉಪಸ್ಥಿತಿ)

**ಶ್ರೀ ಕೆ. ಪ್ರತಾಪ್‌ಸಿಂಹ ನಾಯಕ್:-** ಮಾನ್ಯ ಸಭಾಪತಿಗಳೆ, ಬೇರೆ ರಾಜ್ಯದಲ್ಲಿ ಆಗಲಿಲ್ಲ ಎಂದು ಹೇಳಿಕೊಂಡಿರುವುದೇ ನಮ್ಮ ಸಮಸ್ಯೆಯಾಗಿದೆ.

**ಶ್ರೀ ಸಿದ್ದರಾಮಯ್ಯ:-** ನಾನು ಆಪಾದನೆ ಮಾಡುತ್ತಿಲ್ಲ. ಗುಜರಾತ್, ಆಂಧ್ರಪ್ರದೇಶ, ತೆಲ್ಲಂಗಾಣ ಮತ್ತು ತಮಿಳುನಾಡಿನಲ್ಲೂ ಆಗಿಲ್ಲ.

**(ಗೊಂದಲ)**

**ಶ್ರೀ ಐವನ್ ಡಿ' ಸೋಜ:-** ಮಾನ್ಯ ಸಭಾಪತಿಗಳೆ, . . .

**ಸಭಾಪತಿಯವರು:-** ನೀವು ಕುಳಿತುಕೊಳ್ಳಿ. ಮುಖ್ಯಮಂತ್ರಿಗಳು ಮಾತನಾಡುವಾಗ ನೀವೇಕೆ ಮಧ್ಯದಲ್ಲಿ ಎದ್ದುನಿಂತು ಮಾತನಾಡುತ್ತೀರಿ?

**ಶ್ರೀ ಕೆ.ಪ್ರತಾಪ್‌ಸಿಂಹ ನಾಯಕ್:-** ಮಾನ್ಯ ಸಭಾಪತಿಗಳೆ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಬೇರೆ ಸದಸ್ಯರು ಉತ್ತರ ಕೊಡುವ ಅವಶ್ಯಕತೆ ಇಲ್ಲ. ಅವರು ಸಾಕಷ್ಟು ಅನುಭವ ಹೊಂದಿರುವಂತಹ ಮುಖ್ಯಮಂತ್ರಿಗಳಾಗಿದ್ದಾರೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಗಳೆ, ನಾವು ಈಗ ಪ್ರಕ್ರಿಯೆ ಪ್ರಾರಂಭ ಮಾಡಿದ್ದೇವೆ. ಕ್ಯಾಬಿನೆಟ್ ಸಬ್ ಕಮಿಟಿ ಆಗಿದೆ. ಅವರು ರಿಪೋರ್ಟ್ ಕೊಟ್ಟಿದ್ದಾರೆ. ಮುಂದಿನ ಕ್ಯಾಬಿನೆಟ್‌ನಲ್ಲಿ ಆ ಕುರಿತು ಚರ್ಚೆ ಮಾಡಿ ನಾವು ಒಂದು ತೀರ್ಮಾನ ಮಾಡುತ್ತೇವೆ.

## ಪ್ರಶ್ನೆ ಸಂಖ್ಯೆ: 608

## ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಪಡಿಸಲು ಕೈಗೊಂಡ ಕ್ರಮಗಳ ಬಗ್ಗೆ

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಪಡಿಸಲು ಕೈಗೊಂಡಿರುವ ಸ್ಥಳಗಳು ಯಾವುವು; ಹಿರಿಯೂರಿನ ವಾಣಿ ವಿಲಾಸ ಸಾಗರ, ಚಿತ್ರದುರ್ಗದ ಕೋಟೆ, ನಾಯಕನಹಟ್ಟಿ ಹಾಗೂ ಇತರ ಐತಿಹಾಸಿಕ ಸ್ಥಳಗಳನ್ನು ಅಭಿವೃದ್ಧಿ ಪಡಿಸಲು ಕೈಗೊಂಡಿರುವ ಕ್ರಮಗಳೇನು; | ರಾಜ್ಯದಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿಗಾಗಿ ಸರ್ಕಾರದ ಆದೇಶ ಸಂಖ್ಯೆ: ಟಿಓಆರ್/194/ಟಿಡಿಓ/2025, ಬೆಂಗಳೂರು, ದಿನಾಂಕ: 07/08/2025 ರಲ್ಲಿ ಪ್ರವಾಸೋದ್ಯಮ ನೀತಿ 2024-2029 ರಡಿ ಒಟ್ಟು 1275 ಪ್ರವಾಸಿ ತಾಣಗಳನ್ನು ಗುರುತಿಸಲಾಗಿರುತ್ತದೆ. ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಿದೆ.<br><br>ಹಿರಿಯೂರಿನ ವಾಣಿ ವಿಲಾಸ ಸಾಗರ, ಚಿತ್ರದುರ್ಗದ ಕೋಟೆ, ನಾಯಕನಹಟ್ಟಿ ಹಾಗೂ ಇತರ ಐತಿಹಾಸಿಕ ಸ್ಥಳಗಳನ್ನು ಅಭಿವೃದ್ಧಿ ಪಡಿಸಲು ಇಲಾಖೆಯಿಂದ ಕೈಗೊಂಡಿರುವ ಕ್ರಮಗಳ ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಿದೆ.<br>ಚಿತ್ರದುರ್ಗ ಜಿಲ್ಲೆ, ಹಿರಿಯೂರಿನ ವಾಣಿ ವಿಲಾಸ ಸಾಗರದ ಹಿನ್ನೀರು ಪ್ರದೇಶದಲ್ಲಿ ಜಲ ಕ್ರೀಡೆ ಮತ್ತು ಜಲಸಾಹಸ ಚಟುವಟಿಕೆಗಳನ್ನು ಆಯೋಜಿಸಲು ಕೆ.ಎಸ್.ಟಿ.ಡಿ.ಸಿ ವತಿಯಿಂದ ನಿಯಮಾನುಸಾರ ಕ್ರಮವಹಿಸಲಾಗುತ್ತಿರುತ್ತದೆ. |
| ಆ) | ಪ್ರಪ್ರಥಮ ಬಾರಿಗೆ ನಿರ್ಮಾಣಗೊಂಡಿರುವ ವಾಣಿ ವಿಲಾಸ ಸಾಗರದಲ್ಲಿ ಪ್ರವಾಸೋದ್ಯಮ ಹೆಚ್ಚಿಸಲು ಕೃಷ್ಣರಾಜಸಾಗರದಲ್ಲಿ ಕೈಗೊಂಡಿರುವಂತೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ; ಇದ್ದಲ್ಲಿ, ಯಾವ-ಯಾವ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುವುದು; | ಇದೆ.<br>ವಾಣಿ ವಿಲಾಸ ಸಾಗರ ಜಲಾಶಯದಲ್ಲಿ ಬೋಟಿಂಗ್, ಕಯಾಕಿಂಗ್, ಜೆಟ್ ಸ್ಕೀ, ಬನಾನಾ ರೈಡ್ ಮುಂತಾದ ಚಟುವಟಿಕೆಗಳನ್ನು ನಡೆಸಲು ಜಲ ಸಂಪನ್ಮೂಲ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ನಿರೀಕ್ಷಿಸಲಾಗುತ್ತಿದ್ದು, ಬಂದ ನಂತರ ಸೂಕ್ತ ಹೂಡಿಕೆದಾರರನ್ನು ಆಯ್ಕೆ ಮಾಡಿ ಜಲಸಾಹಸ ಚಟುವಟಿಕೆಗಳನ್ನು ಪ್ರಾರಂಭಿಸುವ ಬಗ್ಗೆ ಪರಿಶೀಲಿಸಲಾಗುವುದು. |
| ಇ) | ರಾಜ್ಯದ ಯಾವ-ಯಾವ ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಹೊಸದಾಗಿ ಮಯೂರ ಹೋಟೆಲ್‌ಗಳನ್ನು ನಿರ್ಮಿಸಲು ಅನುಮತಿ ನೀಡಲಾಗಿದೆ; (ಅವುಗಳ ಮಾಹಿತಿ ನೀಡುವುದು) | ಯಾವುದು ಇಲ್ಲ. |
| ಈ) | ಚಿಂತಾಮಣಿಯ ಕೈಲಾಸಗಿರಿ, ಕೋಲಾರದ ಅಂತರಗಂಗೆ, ಮಧುಗಿರಿಯ ಏಕಶಿಲೆ ಇದ್ದು, ಈ ಸ್ಥಳಗಳಲ್ಲಿ ಪ್ರವಾಸೋದ್ಯಮವನ್ನು | **ಚಿಂತಾಮಣಿಯ ಕೈಲಾಸಗಿರಿ:**<br>ಸರ್ಕಾರದ ಆದೇಶ ಸಂಖ್ಯೆ:ಟಿಓಆರ್/27/ಟಿಡಿಪಿ/2024(8), ದಿನಾಂಕ:27.02.2024 ಹಾಗೂ ತಿದ್ದುಪಡಿ ಆದೇಶ ದಿನಾಂಕ: |

| | | |
|---|---|---|
| | ಉತ್ತೇಜಿಸಲು ತೆಗೆದುಕೊಂಡಿರುವ ಕ್ರಮಗಳು ಯಾವುವು; | 31.07.2024ರಲ್ಲಿ ಚಿಕ್ಕ ಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಮಹಾಕೈಲಾಸಗಿರಿ ಗುಹಾಂತರ ದೇವಾಲಯದಲ್ಲಿ ವಿವಿಧ ಮೂಲಭೂತ ಸೌಕರ್ಯ ಕಾಮಗಾರಿಗಳನ್ನು ರೂ.200.00 ಲಕ್ಷಗಳಲ್ಲಿ ಕೈಗೊಳ್ಳಲು ಮಂಜೂರಾತಿ ನೀಡಲಾಗಿರುತ್ತದೆ. ಸದರಿ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯಿಂದ ಪರಿಷ್ಕೃತ ಅಂದಾಜು ಪಟ್ಟಿ ಬರಬೇಕಿರುತ್ತದೆ.<br><br>**ಅಂತರ ಗಂಗೆ:** ಕೋಲಾರ ಜಿಲ್ಲೆಯ ಅಂತರಗಂಗೆ ಕಾಶಿ ವಿಶ್ವನಾಥ ದೇವಾಲಯಕ್ಕೆ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ರೂ.50.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೆ.ಆರ್.ಐಡಿಎಲ್ ಸಂಸ್ಥೆಯ ಮೂಲಕ ಕೈಗೊಳ್ಳಲು ಪೂರ್ಣ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಅರಣ್ಯ ಇಲಾಖೆ ಸಹಮತಿ ದೊರೆತ ನಂತರ ಕಾಮಗಾರಿ ಪ್ರಾರಂಭಿಸಬೇಕಿದೆ.<br><br>**ಮಧುಗಿರಿ ಏಕಶಿಲಾ ಬೆಟ್ಟ:** 2024-25ನೇ ಸಾಲಿನ ಆಯವ್ಯಯ ಭಾಷಣದ ಘೋಷಣೆಯಂತೆ ಮಧುಗಿರಿ ಏಕಶಿಲಾ ಬೆಟ್ಟವೂ ಒಳಗೊಂಡಂತೆ ರಾಜ್ಯದ 11 ಪ್ರವಾಸಿ ತಾಣಗಳಿಗೆ ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ ರೋಪ್ ವೇ ಅಭಿವೃದ್ಧಿಪಡಿಸಲು ಈಗಾಗಲೇ ಇಲಾಖೆಯ ಅಂಗ ಸಂಸ್ಥೆಯಾದ ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮ (ಕೆ.ಟಿ.ಐ.ಎಲ್) ಮೂಲಕ ವಹಿವಾಟು ಸಲಹೆಗಾರರನ್ನು ಆಯ್ಕೆ ಮಾಡಿದ್ದು, ಸದರಿ ಸಂಸ್ಥೆಯು ಈಗಾಗಲೇ ಸ್ಥಳಕ್ಕೆ ಭೇಟಿ ನೀಡಿ, ಅಧ್ಯಯನ ನಡೆಸಿ ಕಾರ್ಯಸಾಧ್ಯತಾ (Techno-Economic Feasibility Report) ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯನ್ನು ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ (SLSWA) ಗೆ ಸಲ್ಲಿಸಿ ಅನುಮೋದನೆ ಪಡೆದು ಮುಂದಿನ ಕ್ರಮ ವಹಿಸಲಾಗುವುದು. |
| ಉ) | ರಾಜ್ಯದ ನಂದಿಬೆಟ್ಟ ಮತ್ತು ಚಾಮುಂಡಿ ಬೆಟ್ಟಗಳಿಗೆ ರೋಪ್‌ವೇ ಗಳನ್ನು ಅಳವಡಿಸಲಾಗುವುದೇ; ಅಳವಡಿಸಿರುವ ಪ್ರಸ್ತಾಪ ಇದ್ದಲ್ಲಿ ಯಾವಾಗ ಅಳವಡಿಸಲಾಗುವುದು; | ರಾಜ್ಯದ ನಂದಿಬೆಟ್ಟ ಮತ್ತು ಚಾಮುಂಡಿ ಬೆಟ್ಟಗಳಿಗೆ ರೋಪ್-ವೇ ಅಳವಡಿಸುವ ಯೋಜನೆಯ ವಿವರಗಳನ್ನು **ಅನುಬಂಧ-3ರಲ್ಲಿ** ಒದಗಿಸಿದೆ. |
| ಊ) | ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಕರಾವಳಿ ಪ್ರವಾಸ ಮತ್ತು ವಾಟರ್ ಸ್ಪೋರ್ಟ್ಸ್‌ಗೆ ಒತ್ತು ನೀಡಲಾಗುವುದೇ; ಈ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು? | ಕರ್ನಾಟಕ ಪ್ರವಾಸೋದ್ಯಮ ನೀತಿ-2024-29ರಲ್ಲಿ ರಾಜ್ಯ ಕರಾವಳಿ ಪ್ರದೇಶವೂ ಒಳಗೊಂಡಂತೆ ರಾಜ್ಯದ ಒಟ್ಟಾರೆ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.<br><br>2024-25ನೇ ಸಾಲಿನ ಆಯವ್ಯಯ ಘೋಷಣೆಯಂತೆ ರಾಜ್ಯದಲ್ಲಿನ **ಅನುಬಂಧ-4ರಲ್ಲಿರುವ** 18 ಜಲಾಶಯಗಳ ಹಿನ್ನೀರಿನಲ್ಲಿ ಹಾಗೂ 10 ಕಡಲ ತೀರಗಳಲ್ಲಿ ಜಲಕ್ರೀಡೆಗಳು ಹಾಗೂ ಜಲ ಸಾಹಸ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲಾಗುತ್ತಿದೆ.<br><br>ಸದರಿ ತಾಣಗಳ ಪೈಕಿ, ಈ ಕೆಳಕಂಡ ಸ್ಥಳಗಳಲ್ಲಿ ಈಗಾಗಲೇ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಗಳಿಂದ, ಅರಣ್ಯ, ವಸತಿ ಮತ್ತು ವಿಹಾರಧಾಮ ಸಂಸ್ಥೆ ಹಾಗೂ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (ಕೆ.ಎಸ್.ಟಿ.ಡಿ.ಸಿ)ಗಳಿಂದ ಟೆಂಡರ್ ಮೂಲಕ ಖಾಸಗಿ ಸಂಸ್ಥೆಗಳಿಂದ ಜಲಕ್ರೀಡೆಗಳು |

ಹಾಗೂ ಜಲ ಸಾಹಸ ಪ್ರವಾಸೋದ್ಯಮ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತಿದೆ.

| ಕ್ರ. ಸಂ. | ತಾಣದ ಹೆಸರು | ಕ್ರ. ಸಂ. | ತಾಣದ ಹೆಸರು |
|---|---|---|---|
| 1 | ಕೊಡಗು ಜಿಲ್ಲೆ, ಹಾರಂಗಿ ಜಲಾಶಯ | 8 | ಉಡುಪಿ ಜಿಲ್ಲೆಯ ಕಾಪು ಕಡಲ ತೀರ |
| 2 | ಹಾಸನ ಜಿಲ್ಲೆಯ ಯಗಚಿ ಜಲಾಶಯ | 9 | ಉಡುಪಿ ಜಿಲ್ಲೆಯ ಮಲ್ಪೆ |
| 3 | ಚಿಕ್ಕಮಗಳೂರು ಜಿಲ್ಲೆಯ ಭದ್ರಾ ಜಲಾಶಯ | 10 | ಉಡುಪಿ ಜಿಲ್ಲೆಯ ಮರವಂತೆ ಕಡಲ ತೀರ |
| 4 | ಶಿವಮೊಗ್ಗ ಜಿಲ್ಲೆಯ ತುಂಗಾ ಜಲಾಶಯ | 11 | ಉಡುಪಿ ಜಿಲ್ಲೆಯ ಮರವಂತೆ ಸೀತಾನದಿ |
| 5 | ದಾವಣಗೆರೆ ಜಿಲ್ಲೆಯ ಶಾಂತಿಸಾಗರ ಕೆರೆ. | 12 | ಉತ್ತರ ಕನ್ನಡ ಜಿಲ್ಲೆಯ ಮುರುಡೇಶ್ವರ ಕಡಲ ತೀರ |
| 6 | ದಕ್ಷಿಣ ಕನ್ನಡ ಜಿಲ್ಲೆಯ ಪಣಂಬೂರು ಕಡಲ ತೀರ. | 13 | ಉತ್ತರ ಕನ್ನಡ ಜಿಲ್ಲೆಯ ಗೋಕರ್ಣ ಕಡಲ ತೀರ |
| 7 | ದಕ್ಷಿಣ ಕನ್ನಡ ಜಿಲ್ಲೆಯ ತಣ್ಣೀರು ಬಾವಿ ಕಡಲ ತೀರ | 14 | ಉತ್ತರ ಕನ್ನಡ ಜಿಲ್ಲೆಯ ಕಾರವಾರ ಕಡಲ ತೀರ |

ಇದರೊಂದಿಗೆ, ರಾಜ್ಯದ ಜಲಾಶಯಗಳ ಹಿನ್ನೀರುಗಳಲ್ಲಿ, ಕಡಲ ತೀರಗಳಲ್ಲಿ ಮತ್ತು ಕೆರೆಗಳಲ್ಲಿ ಜಲಕ್ರೀಡೆಗಳು ಹಾಗೂ ಜಲ ಸಾಹಸ ಪ್ರವಾಸೋದ್ಯಮ ಚಟುವಟಿಕೆಗಳನ್ನು ಕೈಗೊಳ್ಳಲು ಅಗತ್ಯ ಕ್ರಮವಹಿಸುವಂತೆ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಗಳಿಗೆ ಸೂಚನೆಯನ್ನು ನೀಡಲಾಗಿರುತ್ತದೆ.

ಕರ್ನಾಟಕ ಪ್ರವಾಸೋದ್ಯಮ ನೀತಿ-2024-29ರಲ್ಲಿ ರಾಜ್ಯದಲ್ಲಿ ಸಾಹಸ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಈ ಕ್ರಮಕ್ಕಾಗಿ, ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮಾಲೋಚನೆ ನಡೆಸಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುವುದು.

ಸರ್ಕಾರದ ಆದೇಶ ಸಂಖ್ಯೆ:ಟಿಒಆರ್/154/ಟಿಡಿಬಿ/2023, ದಿನಾಂಕ:21.08.2024ರಲ್ಲಿ, 2023-24ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ-297ರಂತೆ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಡಲ ತೀರದ ಪ್ರವಾಸೋದ್ಯಮ ಅಭಿವೃದ್ಧಿಗೆ ಕರಾವಳಿ ಬೀಚ್ ಪ್ರವಾಸೋದ್ಯಮ ಕಾರ್ಯಪಡೆಯನ್ನು ರಚಿಸುವ ಹಾಗೂ ಕಡಲ ತೀರದ ಸಮಗ್ರ ಅಭಿವೃದ್ಧಿಗಾಗಿ ವಿಸ್ತೃತ ಯೋಜನೆಯನ್ನು ತಯಾರಿಸುವ

| | | |
|---|---|---|
| | | ಕುರಿತು ಜಿಲ್ಲಾ ಮಟ್ಟದ ಕರಾವಳಿ ಬೀಚ್ ಪ್ರವಾಸೋದ್ಯಮ ಕಾರ್ಯಪಡೆ ಸಮಿತಿಗಳನ್ನು ಮತ್ತು ರಾಜ್ಯಮಟ್ಟದ ಕರಾವಳಿ ಬೀಚ್ ಪ್ರವಾಸೋದ್ಯಮ ಕಾರ್ಯಪಡೆ ಸಮಿತಿಯನ್ನು ರಚಿಸಿ, ಸದರಿ ಸಮಿತಿಗಳಿಗೆ ಪ್ರಮುಖ ಜವಾಬ್ದಾರಿಗಳನ್ನು ನಿಗಧಿಪಡಿಸಿ ಆದೇಶಿಸಲಾಗಿದೆ. ವಿವರವನ್ನು **ಅನುಬಂಧ-5ರಲ್ಲಿ** ಒದಗಿಸಿದೆ.<br><br>**2025-26ನೇ ಸಾಲಿನ ಆಯವ್ಯಯ ಕಂಡಿಕೆ-385 ರಲ್ಲಿ ಘೋಷಣೆಯಾದ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಣ್ಣೀರುಬಾವಿ ಕಡಲ ತೀರದಲ್ಲಿ ರೆಸಾರ್ಟ್ ನಿರ್ಮಾಣ:** ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಣ್ಣೀರುಬಾವಿ ಕಡಲ ತೀರದಲ್ಲಿ ರೆಸಾರ್ಟ್ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ಸಮಗ್ರ ಯೋಜನಾ ವರದಿಯನ್ನು ಸಿದ್ಧಪಡಿಸಲು ಸಮಾಲೋಚಕ ಸಂಸ್ಥೆಯನ್ನು ಆಯ್ಕೆ ಮಾಡಲು ಟೆಂಡರ್ ಪ್ರಕಟಿಸಲಾಗಿದ್ದು, ಸದರಿ ಟೆಂಡರ್‌ನ ತಾಂತ್ರಿಕ ಬಿಡ್ಡನ್ನು ದಿನಾಂಕ:07.08.2025 ರಂದು ತೆರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಮೂರು ಬಿಡ್ಡುದಾರರು ಭಾಗವಹಿಸಿದ್ದು, ಬಿಡ್ಡುದಾರರು ಸಲ್ಲಿಸಿರುವ ಬಿಡ್ಡುಗಳು ಪರಿಶೀಲನಾ ಹಂತದಲ್ಲಿದೆ.<br><br>**2025-26ನೇ ಸಾಲಿನ ಆಯವ್ಯಯ ಕಂಡಿಕೆ-385 ರಲ್ಲಿ ಘೋಷಣೆಯಾದ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಗುರುಪುರ ನದಿ ತೀರದಲ್ಲಿ ರೆಸಾರ್ಟ್ ನಿರ್ಮಾಣ:** ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಗುರುಪುರ ನದಿ ತೀರದಲ್ಲಿ ರೆಸಾರ್ಟ್ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ವಹಿವಾಟು ಸಲಹೆಗಾರರನ್ನು ಆಯ್ಕೆ ಮಾಡಿಕೊಳ್ಳಲು ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ (IDD) ರವರೊಂದಿಗೆ ಎಂಪ್ಯಾನಲ್ ಆಗಿರುವ ಸಂಸ್ಥೆಗಳಿಗೆ ಮಾತ್ರ ಟೆಂಡರ್ ಪ್ರಕಟಿಸಿದ್ದು, ಸದರಿ ಟೆಂಡರ್‌ನ Pre-Bid ಸಭೆಯಲ್ಲಿ ಎಂಪ್ಯಾನಲ್ಡ್ ಬಿಡ್ಡುದಾರರಿಗೆ ಪ್ರಕಟಿಸಿರುವ ಟೆಂಡರ್ ಬದಲಿಗೆ ಓಪನ್ ಟೆಂಡರ್ ಅನ್ನು ಪ್ರಕಟಿಸಿರುವಂತೆ ಬಿಡ್ಡುದಾರ ಸಂಸ್ಥೆಗಳು ಕೋರಿರುತ್ತಾರೆ. ಆದ್ದರಿಂದ, ಸದರಿ ಟೆಂಡರ್ ಅನ್ನು ರದ್ದುಪಡಿಸಿದ್ದು, ಮತ್ತೊಮ್ಮೆ ಟೆಂಡರ್ (Open Tender) ಅನ್ನು ಮರುಪ್ರಕಟಿಸಲು ಕ್ರಮವಹಿಸಲಾಗುತ್ತಿದೆ. |

**ಸಂಖ್ಯೆ: ಟಿಓಆರ್ 189 ಟಿಡಿವಿ 2025**

(ಹೆಚ್.ಕೆ.ಪಾಟೀಲ)
ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ
ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ
ಪ್ರವಾಸೋದ್ಯಮ ಸಚಿವರು

**ಶ್ರೀ ಡಿ.ಟಿ.ಶ್ರೀನಿವಾಸ್(ಡಿ.ಟಿ.ಎಸ್)(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರು ಸಮಗ್ರವಾದ ಉತ್ತರವನ್ನು ಕೊಟ್ಟಿದ್ದಾರೆ. ಬಯಲುಸೀಮೆಯಲ್ಲಿ ಪ್ರವಾಸೋದ್ಯಮಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕು ಎನ್ನುವ ದೃಷ್ಟಿಯಿಂದ ನಾನು ಹಲವಾರು ಪ್ರಶ್ನೆಗಳನ್ನು ಕೇಳಿದ್ದೇನೆ. ವಾಣಿವಿಲಾಸ ಸಾಗರದ ಬೋಟಿಂಗ್ ವ್ಯವಸ್ಥೆ ಇರಬಹುದು, ಅಲ್ಲಿ Jet Ski, Banana Boat Ride ಮುಂತಾದ ಚಟುವಟಿಕೆಗಳನ್ನು ಪ್ರಾರಂಭಿಸುವ ಬಗ್ಗೆ ಪರಿಶೀಲಿಸಲಾಗುವುದು ಎಂದು ಉತ್ತರದಲ್ಲಿ ಹೇಳಿದ್ದಾರೆ. ಹಿಂದೆ, ವಾಣಿವಿಲಾಸ ಸಾಗರಕ್ಕೆ ನೀರಾವರಿ ಸಚಿವರು, ಉಪಮುಖ್ಯಮಂತ್ರಿಗಳು ಮತ್ತು ಮಾನ್ಯ ಮುಖ್ಯಮಂತ್ರಿಗಳು ಮೊದಲನೆ ಸಲ ಬಾಗಿನ ಅರ್ಪಿಸುವ ಸಂದರ್ಭದಲ್ಲಿ, ಅವರ ಜೊತೆ ಮಾತನಾಡಿ ರೂ.38 ಕೋಟಿಗಳಿಗೆ DPR (Detailed Project Report) ಮಾಡಿಸಿದ್ದೆವು. ಮೈಸೂರಿನ ಕೆ.ಆರ್.ಎಸ್. ಮತ್ತು ಆಲಮಟ್ಟಿಯ ಎರಡು ಉದಾಹರಣೆಗಳನ್ನು ತೆಗೆದುಕೊಂಡು, ಇಲ್ಲೂ ಅದೇರೀತಿ ಅಭಿವೃದ್ಧಿ ಮಾಡಬೇಕು ಎಂದು ಡಿಪಿಆರ್ ಮಾಡಿಸಿದ್ದೆವು. ವಾಣಿವಿಲಾಸ ಸಾಗರಕ್ಕೆ ಹೊಂದಿಕೊಂಡ ಹಾಗೆ ಉತ್ತರೆಗುಡ್ಡ ಇದೆ. ಅದು 26 ಸಾವಿರ ಹೆಕ್ಟೇರ್ ಪ್ರದೇಶವನ್ನು ಹೊಂದಿದೆ. ಹಿಂದೆ ನಾವು ಅಲ್ಲಿ Wild Life Sanctuary ಮಾಡಬೇಕೆಂದು Gazette Notification ಆಗಿದೆ. ಆಗಸ್ಟ್ ತಿಂಗಳಿನಿಂದ ಪ್ರಾರಂಭಗೊಂಡು ನವೆಂಬರ್-ಡಿಸೆಂಬರ್‌ವರೆಗಿನ ಅವಧಿಯಲ್ಲಿ ಉತ್ತರೆಗುಡ್ಡವನ್ನು ವೀಕ್ಷಣೆ ಮಾಡಿದರೆ ಅದು ಮಲೆನಾಡಿನ ವಾತಾವರಣವನ್ನು ಮೀರಿಸುವಂತೆ ಅದ್ಭುತವಾಗಿ ಇರುತ್ತದೆ. ಒಂದು ಬಯಲುಸೀಮೆ ಪ್ರದೇಶದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿ ಮಾಡಬೇಕಿದೆ. ಬೆಂಗಳೂರಿನಿಂದ ಸರಿಸುಮಾರು ಒಂದೂವರೆಯಿಂದ ಎರಡು ತಾಸುಗಳ ಅವಧಿಯಲ್ಲಿ ಈ ಪ್ರದೇಶವನ್ನು ತಲುಪಬಹುದಾಗಿದೆ. ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುವಂತಹ ಐ.ಟಿ.-ಬಿ.ಟಿ. ಟೆಕ್ಕಿಗಳು ಇಲ್ಲಿಗೆ ಭೇಟಿ ಕೊಡುವಂತಾಗುತ್ತದೆ. ಅವರು 8-10 ತಾಸುಗಳ ಪ್ರಯಾಣವನ್ನು ಇಷ್ಟಪಡುವುದಿಲ್ಲ. ವಾರಾಂತ್ಯದಲ್ಲಿ, ಕಡಿಮೆ ಪ್ರಯಾಣ ಅವಧಿಯ ಜೊತೆಗೆ ರಮಣೀಯ ತಾಣ ಮತ್ತು ಜಲಕ್ರೀಡೆಗಳು ಇರಬೇಕೆಂದು ಬಯಸುತ್ತಾರೆ. ವಾಣಿವಿಲಾಸ ಸಾಗರ-ಉತ್ತರೆಗುಡ್ಡವನ್ನು ಅಭಿವೃದ್ಧಿ ಪಡಿಸಿದರೆ ಪೂರ್ಣ ದಿವಸ ಅಲ್ಲೇ ಕಳೆಯುವಂತಾಗುತ್ತದೆ. ಇದು ಆರ್ಥಿಕತೆಯನ್ನು ಸಬಲೀಕರಣಗೊಳಿಸಲು interlinked activity ಆಗುತ್ತದೆ. ಇದರಿಂದ ಟ್ಯಾಕ್ಸಿಯವರಿಗೆ, ಆಟೋದವರಿಗೆ ಮತ್ತು ಸಣ್ಣ ಸಣ್ಣ ಹೋಟೆಲ್‌ಗಳವರಿಗೆ ಅನುಕೂಲವಾಗುತ್ತದೆ. Per Capita Income increase ಮಾಡುವುದಕ್ಕೆ ಇದು ಅನುಕೂಲವಾಗುತ್ತದೆ. ಮಾನ್ಯ ಸಭಾಪತಿಗಳೆ, ಮಧುಗಿರಿಯಲ್ಲಿ ಏಕಶಿಲಾ ಬೆಟ್ಟ ಇದೆ. ಅಲ್ಲಿ ರೋಪ್‌ವೇ ಮಾಡಬೇಕು ಎಂದು ಪ್ರಸ್ತಾಪ ಮಾಡಿದ್ದೆ. ನಂದಿ ಬೆಟ್ಟಕ್ಕೂ ರೋಪ್‌ವೇ ಹಾಕಬೇಕೆಂದು ಪ್ರಸ್ತಾಪ ಮಾಡಿದೆ. ಮಾನ್ಯ ಪ್ರವಾಸೋದ್ಯಮ ಸಚಿವರು ಬಂದಮೇಲೆ, ಈ 2 ವರ್ಷದಲ್ಲಿ, ಸರಿಸುಮಾರು 1275 ಪ್ರವಾಸಿ ತಾಣಗಳನ್ನು ಗುರುತಿಸಿದ್ದಾರೆ. ಒಂದು ಕಡೆ ಕೇರಳ ರಾಜ್ಯವನ್ನು ಮಾದರಿಯನ್ನಾಗಿ ತೆಗೆದುಕೊಳ್ಳಬೇಕಾಗುತ್ತದೆ. ಆಯುರ್ವೇದ ಚಿಕಿತ್ಸೆಗೆ ಸಂಬಂಧಪಟ್ಟಂತೆ ಏನು ಕಾರ್ಯಗಳನ್ನು ಮಾಡುತ್ತಿದ್ದಾರೋ ಅದೇರೀತಿ ನಮ್ಮ ನದಿಪಾತ್ರದಲ್ಲಿ ಮಾಡಬಹುದಾಗಿದೆ. ಚಾಮುಂಡಿ ಬೆಟ್ಟಕ್ಕೂ ರೋಪ್‌ವೇ ಮಾಡಬೇಕೆನ್ನುವ ವಿಚಾರದಲ್ಲಿ, ಬೇಡ ಎಂದು ಹೇಳಿದ್ದಾರೆ. ನಾನು ಪಳನಿ ದೇವಸ್ಥಾನಕ್ಕೆ ಹೋದ ಸಂದರ್ಭದಲ್ಲಿ,

ಅಲ್ಲೂ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನಕ್ಕೆ ರೋಪ್‌ವೇ ಮಾಡಿರುವುದನ್ನು ನೋಡಿದ್ದೇನೆ. ಪ್ರವಾಸಿಗರ ಸಮಯ ಉಳಿಯುತ್ತದೆ ಎನ್ನುವ ಉದ್ದೇಶದಿಂದ ನಾನು ಈ ವಿಚಾರಗಳ ಬಗ್ಗೆ ಮಾತನಾಡುತ್ತಿದ್ದೇನೆ.

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ನ್ಯಾಯ, ಮಾನವಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು)–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಕೇಳಿರುವಂತಹ ಎಲ್ಲಾ ಪ್ರಶ್ನೆಗಳಿಗೆ ಸಮಗ್ರ ಉತ್ತರ ಕೊಟ್ಟಿದ್ದರೂ ಇನ್ನೂ ಹೆಚ್ಚಿನ ಮಾಹಿತಿಯನ್ನು ಅಪೇಕ್ಷಿಸಿದ್ದಾರೆ. ಅದರಲ್ಲೂ ವಿಶೇಷವಾಗಿ ವಾಣಿವಿಲಾಸ ಸಾಗರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ವಾಣಿವಿಲಾಸ ಸಾಗರವನ್ನು ಇಲ್ಲಿರುವ ಎಷ್ಟು ಜನ ನೋಡಿದ್ದಾರೋ ನೋಡಿಲ್ಲವೋ ಗೊತ್ತಿಲ್ಲ. ನಾನೂ ಕೂಡ ನೋಡಿರಲಿಲ್ಲ. ಮಾನ್ಯ ಸಭಾಪತಿಗಳೆ, ನಮ್ಮ ಹಿರಿಯ ನಾಯಕರಾಗಿದ್ದ ಮಾನ್ಯ ಕೆ.ಹೆಚ್.ರಂಗನಾಥ್‌ರವರು, ನಾನು ಜಲ ಸಂಪನ್ಮೂಲ ಖಾತೆಯ ಸಚಿವನಾಗಿದ್ದಾಗ ಬಾಗಿನ ಅರ್ಪಿಸಲು ದಂಪತಿ ಸಮೇತ ಬರಬೇಕು ಎಂದು ಕರೆದಿದ್ದರು. ಆ ಸಂದರ್ಭದಲ್ಲಿ ಮಾನ್ಯ ರಂಗನಾಥ್‌ರವರು ಒಂದು ಸ್ಥಳಕ್ಕೆ ಕರೆದುಕೊಂಡು ಹೋಗಿ, ಇಲ್ಲಿ ನೋಡಿ ಪಾಟೀಲರೇ, 'ಇಲ್ಲಿ ನಿಮಗೆ ಏನು ಕಾಣುತ್ತದೆ 'ಎಂದು ಕೇಳಿದರು. ಇಡೀ ಭಾರತದ ನಕ್ಷೆ ವಾಣಿವಿಲಾಸ ಸಾಗದಲ್ಲಿ ನೋಡುವುದಕ್ಕೆ ಸಾಧ್ಯವಾಗುತ್ತದೆ; ಇದು ಬಹಳ ಉತ್ತಮವಾದ ಕ್ಷೇತ್ರವಾಗಿದೆ. ಮಾನ್ಯ ಸದಸ್ಯರ ಪ್ರಶ್ನೆಗಳನ್ನು ನೋಡಿ, ನಾನು ಮಾನ್ಯ ಉಪಮುಖ್ಯಮಂತ್ರಿಗಳ ಹತ್ತಿರ ಒಂದು ವಿನಂತಿ ಮಾಡಿದೆ. ಜಲಸಂಪನ್ಮೂಲ ಇಲಾಖೆಯವರು ನಮ್ಮ ಪ್ರವಾಸೋದ್ಯಮಕ್ಕೆ ಬೋಟಿಂಗ್ ಮತ್ತು ಅದರ ಜೊತೆಗೆ Kayaking, Jet Ski, Banana Boat Ride ಮುಂತಾದ ಚಟುವಟಿಕೆಗಳನ್ನು ನಡೆಸುವುದಕ್ಕೆ ನಮಗೆ ಪರವಾನಗಿ ಕೊಡಿ ಎಂದು ಕೇಳಿದೆ. ಆಗ ಅವರು, ನೀವು ಈ ಕುರಿತು ಪತ್ರ ಕಳುಹಿಸಿ; ನಮ್ಮ ಇಲಾಖೆಯಿಂದ ಕ್ಲಿಯರೆನ್ಸ್ ಕೊಡುತ್ತೇವೆ ಎಂದು ಹೇಳಿದರು. ನವೆಂಬರ್ 1ನೇ ದಿನಾಂಕದಿಂದ ವಾಣಿವಿಲಾಸ ಸಾಗರದಲ್ಲಿ ಬೋಟಿಂಗ್ ಪ್ರಾರಂಭ ಮಾಡುತ್ತೇವೆ. ವಾಣಿವಿಲಾಸ ಸಾಗರದ ಹತ್ತಿರ ಪ್ರವಾಸೋದ್ಯಮ ಇಲಾಖೆಯ ಜಾಗ ಇದೆ. ಅಲ್ಲಿ ಹೋಟೆಲ್‌ಗಳು ಆಗಬೇಕು, ಅಲ್ಲಿಗೆ ಬಂದವರು, ಚಿತ್ರದುರ್ಗಕ್ಕೆ ಬಂದವರು ಅಲ್ಲಿ ಒಂದು ದಿವಸ ತಂಗಬೇಕು ಎನ್ನುವುದು ಮಾನ್ಯ ಸದಸ್ಯರ ಅಪೇಕ್ಷೆಯಾಗಿದೆ; ಅದು ಸಮಂಜಸವೂ ಆಗಿದೆ. ಅದಕ್ಕಾಗಿ ಅಲ್ಲಿ ನಮ್ಮ ಪ್ರವಾಸೋದ್ಯಮ ಇಲಾಖೆಯ ಜಾಗದಲ್ಲಿ ಕೆ.ಎಸ್.ಟಿ.ಡಿ.ಸಿ. ಮೂಲಕ . . . ಇಲ್ಲಿ ನಮ್ಮ ಕೆ.ಎಸ್.ಟಿ.ಡಿ.ಸಿ. ಎಂ.ಡಿ.ಯವರು ಇದ್ದಾರೆ, ನಮ್ಮ ಪ್ರವಾಸೋದ್ಯಮ ಇಲಾಖೆಯ ಕಾರ್ಯದರ್ಶಿಗಳು ಕೂಡ ಇದ್ದಾರೆ. ಅವರಿಗೆ, ವಾಣಿವಿಲಾಸ ಸಾಗರದ ಹತ್ತಿರ ನಮ್ಮ ಜಾಗ ಏನಿದೆ, ಅಲ್ಲಿ ಕೆ.ಎಸ್.ಟಿ.ಡಿ.ಸಿ. ಹೋಟೆಲ್ ಮಾಡುವ ಸಂಬಂಧ ನಿರ್ಣಯ ತೆಗೆದುಕೊಳ್ಳುವ ಪ್ರಕ್ರಿಯೆ ಮಾಡಬೇಕೆಂದು ಸೂಚನೆ ಕೊಡುತ್ತೇನೆ. ಅದರ ಜೊತೆಗೆ, ಯಾವ ಯಾವ ಜಿಲ್ಲೆಗಳಲ್ಲಿ ಮಯೂರ ಹೋಟೆಲ್‌ಗಳಿವೆ ಎಂದು ಕೇಳಿದ್ದಾರೆ. ನಮ್ಮ ರಾಜ್ಯದ 15 ಕಡೆ ಕೆ.ಎಸ್.ಟಿ.ಡಿ.ಸಿ.ಯ ಮಯೂರ ಹೋಟೆಲ್‌ಗಳು ಇಲ್ಲ. ಎಲ್ಲಿ ಈ ಹೋಟೆಲ್‌ಗಳು ಇಲ್ಲವೋ ಅದರಲ್ಲಿ 7 ಜಾಗದಲ್ಲಿ ಈಗಾಗಲೇ ನಾವು ಮಯೂರ ಹೋಟೆಲ್‌ಗಳನ್ನು ಮಾಡುವುದಕ್ಕೆ ಡಿ.ಪಿ.ಆರ್. ಅನ್ನು ತಯಾರಿಸಿದ್ದೇವೆ. ಮೊದಲ ಹಂತವಾಗಿ,

ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ, ಈ ವರ್ಷ ಹೆಚ್ಚಿನ ಅನುದಾನ ಪಡೆದು ಆ ಏಳು ಮಯೂರ ಹೋಟೆಲ್‌ಗಳನ್ನು ವಿವಿಧ ಜಿಲ್ಲೆಗಳಲ್ಲಿ ಪ್ರಾರಂಭ ಮಾಡುವ ನಿರ್ಣಯ ಮಾಡುತ್ತೇವೆ ಎಂದು ಹೇಳಬಯಸುತ್ತೇನೆ.

ಮಾನ್ಯ ಸದಸ್ಯರು ಮಧುಗಿರಿ ಬೆಟ್ಟದ ಬಗ್ಗೆ ಪ್ರಸ್ತಾಪ ಮಾಡಿದರು. ಮಾನ್ಯ ರಾಜಣ್ಣನವರು ಇದರ ಬಗ್ಗೆ ಹಲವಾರು ಸಂದರ್ಭದಲ್ಲಿ ಪ್ರಸ್ತಾಪ ಮಾಡಿದ್ದರು ಮತ್ತು ನನಗೆ ಹಲವಾರು ಪತ್ರಗಳನ್ನು ಬರೆದಿದ್ದರು. ಈಗಾಗಲೇ ಮಧುಗಿರಿ ಏಕಶಿಲಾ ಬೆಟ್ಟಕ್ಕೆ ರೋಪ್‌ವೇ ಮಾಡುವ ಸಲುವಾಗಿ ಸರ್ವೆ ಮಾಡಿಸಿದ್ದೇವೆ. ಪಿ.ಪಿ.ಪಿ. ಮಾಡೆಲ್‌ನಲ್ಲಿ ಈ ರೋಪ್‌ವೇ ಕಾರ್ಯಕ್ರಮವನ್ನು ಮಾಡುತ್ತಿದ್ದೇವೆ. ಈಗಾಗಲೇ ಟೆಂಡರ್ ಕರೆದಿದ್ದೇವೆ. ಅದಷ್ಟು ಬೇಗ ಈ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್):-** ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರಲ್ಲಿ ನನ್ನದೊಂದು ಮನವಿ ಇದೆ. ಒಂದು ದಿವಸ ಉತ್ತರೆಗುಡ್ಡಕ್ಕೆ ತಾವು ಟೂರ್ ಪ್ರೋಗ್ರಾಮ್ ಹಾಕಿಕೊಳ್ಳಬೇಕು. ಆಗಸ್ಟ್ ತಿಂಗಳಿನಿಂದ ಹಿಡಿದು ನವೆಂಬರ್ ತಿಂಗಳಿನವರೆಗೆ ತುಂಬಾ ಅದ್ಭುತವಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಅಲ್ಲಿ ವಿಸಿಟ್ ಮಾಡಿದರೆ ನಾವು ಒಂದಷ್ಟು ಬದಲಾವಣೆ ಕಾಣಬಹುದು. ಅಲ್ಲಿ ಬೇರೆ ಬೇರೆ ಚಟುವಟಿಕೆಗಳನ್ನು ಮಾಡುವುದಕ್ಕೆ ಅವಕಾಶ ಇದೆ. ಅಲ್ಲಿ ಇಳಿಜಾರು ಪ್ರದೇಶವಿದೆ. ಸರಿಸುಮಾರು 10-15 ಕಿ.ಮೀ ನದಿಪಾತ್ರ ಉತ್ತರೆಗುಡ್ಡಕ್ಕೆ ಅಂಟಿಕೊಂಡ ಹಾಗಿದೆ. ಈಗ ಈ ಇಲಾಖೆ ಸಾಮಾಜಿಕ ಜಾಲತಾಣಗಳಿಗೆ ಹೆಚ್ಚು ಒತ್ತು ಕೊಡುತ್ತಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಈ ಕುರಿತು ಪ್ರಚಾರ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕು. ಜೊತೆಗೆ ಸುರಕ್ಷಿತ ಕ್ರಮಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಹೆಚ್ಚಿನ ಆದ್ಯತೆ ಕೊಡಬೇಕು.

(ಮುಂದು)

(703) 14-8-2025 11.20 ಡಿಎಸ್-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಡಿ.ಟಿ.ಶ್ರೀನಿವಾಸ್ (ಮುಂದು):-**

ಈಗ ನಾವು ಹೊರದೇಶಗಳಿಗೆ ಹೋದಾಗ ವಾರದಲ್ಲಿ ಒಮ್ಮೆ ಅಲ್ಲಿರುವಂತಹ ಪರಿಕರಗಳ ನಿರ್ವಹಣೆಗಾಗಿ ವಾರಕ್ಕೆ ಒಂದು ದಿವಸ ಬಂದ್ ಮಾಡಿರುತ್ತಾರೆ. ಅದನ್ನು ನಾವು ನೋಡಬಹುದು. ಆ ದಿನಗಳಲ್ಲಿ ಅವಕಾಶ ಕಲ್ಪಿಸಿಕೊಡುವುದಿಲ್ಲ. ಈ ವಿಚಾರಗಳನ್ನು ಸಹ ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಪ್ರವಾಸಿ ತಾಣಗಳ ಬಗ್ಗೆ ಹೆಚ್ಚು ಪ್ರಚಾರ ಕೊಟ್ಟು ಅಂತರರಾಷ್ಟ್ರೀಯ ಪ್ರವಾಸಿಗರನ್ನು ಸೆಳೆಯುವ ನಿಟ್ಟಿನಲ್ಲಿ ಇನ್ನು ಹೆಚ್ಚಿನ ಆದ್ಯತೆ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಮತ್ತೊಮ್ಮೆ ನಾನು ಧನ್ಯವಾದಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಎಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀನಿವಾಸ್‌ರವರು ಅವರ ಕ್ಷೇತ್ರದ ಒಟ್ಟು ಪ್ರವಾಸಿ ತಾಣಗಳ ಬಗ್ಗೆ ಒಂದು ಪ್ರಶ್ನೆ ಹಾಕಿಬಿಟ್ಟಿದ್ದಾರೆ. ಹಾಗಾಗಿ ಎಲ್ಲವನ್ನು ಕೂಡ ಈ ಪ್ರಶ್ನೋತ್ತರ ವೇಳೆಯಲ್ಲಿ

ಉತ್ತರಿಸುವುದಕ್ಕಾಗುವುದಿಲ್ಲ. ಆದರೆ ಮಾನ್ಯ ಸದಸ್ಯರೇನು ನನಗೆ ಆಹ್ವಾನ ಕೊಟ್ಟಿದ್ದಾರೆ ಅದರ ಬಗ್ಗೆ ಒಮ್ಮೆ ನಾವು ನೀವು ಮಾತನಾಡಿಕೊಂಡು ಆ ಒಂದು ಪ್ರದೇಶಕ್ಕೆ ಹೋಗಿ ಬರುತ್ತೇನೆ.

## ಪ್ರಶ್ನೆ ಸಂಖ್ಯೆ: 568

## ಕೆಂಪೇಗೌಡ ಮತ್ತು ಶಿವರಾಮ ಕಾರಂತ ಬಡಾವಣೆಯ ನಿವೇಶನಗಳ ಬಗ್ಗೆ

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಾಡಪ್ರಭು ಕೆಂಪೇಗೌಡ ಬಡಾವಣೆಯನ್ನು ರಚನೆ ಮಾಡಲು ಪ್ರಾಥಮಿಕ ಅಧಿಸೂಚನೆಯನ್ನು ಯಾವ ವರ್ಷದಲ್ಲಿ ಹೊರಡಿಸಿದೆ; ಎಷ್ಟು ಎಕರೆಗೆ ಅಧಿಸೂಚನೆ ಹೊರಡಿಸಲಾಗಿತ್ತು; (ಸಂಪೂರ್ಣ ದಾಖಲೆಗಳೊಂದಿಗೆ ಮಾಹಿತಿ ಒದಗಿಸುವುದು) | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಾಡಪ್ರಭು ಕೆಂಪೇಗೌಡ ಬಡಾವಣೆ ನಿರ್ಮಾಣಕ್ಕಾಗಿ ಬಿಡಿಎ ಕಾಯ್ದೆ 1976ರ ಕಲಂ 17 (1) & (3) ರಡಿ ದಿನಾಂಕ: 21.05.2008 ರಂದು ಒಟ್ಟು 4814ಎಕರೆ 15ಗುಂಟೆ ವಿಸ್ತೀರ್ಣದ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. ಅಧಿಸೂಚನೆಯ ಪ್ರತಿಯನ್ನು (**ಅನುಬಂಧ-1**) ಸಿ.ಡಿ. ರೂಪದಲ್ಲಿ ಒದಗಿಸಲಾಗಿದೆ. |
| ಆ | ಈ ಬಡಾವಣೆಯ ಅಂತಿಮ ಅಧಿಸೂಚನೆಯನ್ನು ಯಾವ ವರ್ಷದಲ್ಲಿ ಹೊರಡಿಸಲಾಗಿತ್ತು ಹಾಗೂ ಅಂತಿಮ ಅಧಿಸೂಚನೆಯಲ್ಲಿ ಎಷ್ಟು ಎಕರೆಗೆ ಅಧಿಸೂಚನೆ ಹೊರಡಿಸಲಾಗಿತ್ತು; (ಮಾಹಿತಿಯ ದಾಖಲೆಗಳೊಂದಿಗೆ ವಿವರಣೆ ನೀಡುವುದು) | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆ ಕಲಂ.19(1)ರಡಿಯಲ್ಲಿ ದಿನಾಂಕ:18.02.2010 ರಂದು 4043 ಎಕರೆ 27ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಅಧಿಸೂಚನೆಯ ಪ್ರತಿಯನ್ನು (**ಅನುಬಂಧ-2**) ಸಿ.ಡಿ. ರೂಪದಲ್ಲಿ ಒದಗಿಸಲಾಗಿದೆ. |
| ಇ | ಈ ಬಡಾವಣೆಗೆ ಸ್ವಾಧೀನಪಡಿಸಿಕೊಂಡ ಭೂಮಿಯಲ್ಲಿ ಪೂರ್ಣ ಪ್ರಮಾಣದಲ್ಲಿ ನಿವೇಶನಗಳನ್ನು ರಚನೆ ಮಾಡಿ ಹಂಚಿಕೆ ಮಾಡಲಾಗಿದೆಯೇ: (ವಿವರ ನೀಡುವುದು) | • ಅಂತಿಮ ಅಧಿಸೂಚನೆ ಹೊರಡಿಸಲಾದ ಜಮೀನಿನ ವಿಸ್ತೀರ್ಣ - 4043ಎಕರೆ 27ಗುಂಟೆ.<br>• ಭೂಸ್ವಾಧೀನ ಪ್ರಕ್ರಿಯೆ ಅಂತಿಮಗೊಳಿಸಿ ಇಂಜಿನಿಯರಿಂಗ್ ವಿಭಾಗಕ್ಕೆ ಹಸ್ತಾಂತರಿಸಿದ ಜಮೀನಿನ ವಿಸ್ತೀರ್ಣ-2806ಎಕರೆ 08ಗುಂಟೆ.<br>• ರಚಿಸಲಾಗಿರುವ ಒಟ್ಟು ನಿವೇಶನಗಳ ಸಂಖ್ಯೆ: - 30296<br>• ಹಂಚಿಕೆ/ಹರಾಜು ಮಾಡಲಾಗಿರುವ ಒಟ್ಟು ನಿವೇಶನಗಳ ಸಂಖ್ಯೆ: 22481 |

<table>
<tr>
<td>ಈ</td>
<td>ಶಿವರಾಮ ಕಾರಂತ ಬಡಾವಣೆಯನ್ನು ರಚನೆ ಮಾಡಲು ಭೂಮಿಯ ಪ್ರಾಥಮಿಕ ಮತ್ತು ಅಂತಿಮ ಅಧಿಸೂಚನೆಯನ್ನು ಯಾವ ವರ್ಷದಲ್ಲಿ ಹೊರಡಿಸಲಾಗಿತ್ತು; (ಸಂಪೂರ್ಣ ದಾಖಲೆಗಳೊಂದಿಗೆ ಮಾಹಿತಿ ಒದಗಿಸುವುದು)</td>
<td>ಡಾ|| ಕೆ. ಶಿವರಾಮಕಾರಂತ ಬಡಾವಣೆ ರಚನೆಗಾಗಿ ಹೊರಡಿಸಲಾಗಿರುವ ಪ್ರಾಥಮಿಕ ಮತ್ತು ಅಂತಿಮ ಅಧಿಸೂಚನೆಗಳ ವಿವರಗಳು ಕೆಳಕಂಡಂತಿವೆ.
<table>
<tr><th>ಯೋಜನೆಯ ಹೆಸರು</th><th>ಪ್ರಾಥಮಿಕ ಅಧಿಸೂಚನೆ ದಿನಾಂಕ</th><th>ಅಂತಿಮ ಅಧಿಸೂಚನೆ ದಿನಾಂಕ</th></tr>
<tr><td>ಡಾ|| ಕೆ.ಶಿವರಾಮ ಕಾರಂತ ಬಡಾವಣೆ</td><td>ದಿನಾಂಕ:30.12.2008</td><td>ದಿನಾಂಕ:30.10.2018.</td></tr>
<tr><td>ಡಾ|| ಕೆ.ಶಿವರಾಮ ಕಾರಂತ ಬಡಾವಣೆಯಲ್ಲಿ ಸಂಪರ್ಕವನ್ನು ಸುಧಾರಿಸಲು ಆರ್.ಎಂ.ಪಿ-2015ರಸ್ತೆ ಮತ್ತು ಬೈಪಾಸ್ ರಸ್ತೆ</td><td>ದಿನಾಂಕ:18.02.2022</td><td>ದಿನಾಂಕ:06.08.2022</td></tr>
<tr><td>ಡಾ|| ಕೆ.ಶಿವರಾಮ ಕಾರಂತ ಬಡಾವಣೆ (ಪ್ರಾಥಮಿಕ ಮತ್ತು ಅಂತಿಮ ಅಧಿಸೂಚನೆಯಲ್ಲಿ ಬಿಟ್ಟುಹೋದ ಭೂಮಿಯನ್ನು ಬಡಾವಣೆಯೊಳಗೆ ಗುರುತಿಸಲಾಗಿದೆ)</td><td>ದಿನಾಂಕ:19.08.2022</td><td>ದಿನಾಂಕ:18.10.2022</td></tr>
</table>
ಅಧಿಸೂಚನೆಯ ಪ್ರತಿಗಳನ್ನು (**ಅನುಬಂಧ-3**) ಸಿ.ಡಿ. ರೂಪದಲ್ಲಿ ಒದಗಿಸಲಾಗಿದೆ.</td>
</tr>
<tr>
<td>ಉ</td>
<td>ಈ ಬಡಾವಣೆಯಲ್ಲಿ ಹಂಚಿಕೆ ಮಾಡಿರುವ ನಿವೇಶನಗಳ ಸಂಖ್ಯೆ ಎಷ್ಟು: ಇನ್ನು ಹಂಚಿಕೆ ಮಾಡಲು ಬಾಕಿಯಿರುವ ನಿವೇಶನಗಳ ಸಂಖ್ಯೆ ಎಷ್ಟು? (ವಿವರ ನೀಡುವುದು)</td>
<td>ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅಪೀಲ್ ಸಂಖ್ಯೆ: 252/2017ರಲ್ಲಿ 'Status quo' ಆದೇಶ ನೀಡಿರುವುದರಿಂದ, ನಿವೇಶನಗಳನ್ನು ಹಂಚಿಕೆ ಮಾಡಿರುವುದಿಲ್ಲ.</td>
</tr>
</table>

**ಸಂಖ್ಯೆ**: ನಅಇ 528 [illegible] 2025

**ಶ್ರೀ ಟಿ.ಎನ್.ಜವರಾಯಿ ಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಉಪ ಮುಖ್ಯಮಂತ್ರಿಗಳ ಕಛೇರಿಯಿಂದ ಉತ್ತರ ಬಂದಿದೆ. ನಾನು ಕೆಂಪೇಗೌಡ ಬಡಾವಣೆಯ ರಚನೆ ಬಗ್ಗೆ ಕೆಲವೊಂದು ಪ್ರಶ್ನೆಗಳನ್ನು ಕೇಳಿದ್ದೆ. ಅದಕ್ಕೆ ಕೆಲವು ಉತ್ತರಗಳನ್ನು ಒದಗಿಸಿದ್ದಾರೆ. 2008 ರಲ್ಲಿ ಪ್ರಾಥಮಿಕ ಅಧಿಸೂಚನೆಯನ್ನು

ಹೊರಡಿಸುತ್ತಾರೆ. 2010 ರಲ್ಲಿ ಅಂತಿಮ ಅಧಿಸೂಚನೆಯನ್ನು ಹೊರಡಿಸುತ್ತಾರೆ. 4,814 ಎಕರೆ 15 ಗುಂಟೆ ವಿಸ್ತೀರ್ಣದ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ಪ್ರಾಥಮಿಕ ಅಧಿಸೂಚನೆ ಹೊರಡಿಸುತ್ತಾರೆ. 4,043 ಎಕರೆ 27 ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಅವತ್ತು ಪ್ರಾಥಮಿಕ ಅಧಿಸೂಚನೆಯಿಂದ ಅಂತಿಮ ಅಧಿಸೂಚನೆ ಹೊರಡಿಸುವಾಗ ಸುಮಾರು 700 ಎಕರೆ ಜಮೀನನ್ನು ಹೊರತುಪಡಿಸುತ್ತಾರೆ. ಅಂದರೆ, ಅಧಿಕಾರಿಗಳದ್ದು ಏನು ಉದ್ದೇಶವಾಗಿದೆ? ಈ ಬಡಾವಣೆಗೆ ಯೋಗ್ಯವಾಗಿಲ್ಲ ಅದಕ್ಕಾಗಿ ಬಿಟ್ಟಿದ್ದೇವೆಂದು ಹೇಳುತ್ತಾರೆ. ನನ್ನ ಎರಡನೇ ಪ್ರಶ್ನೆ, ಇವತ್ತು 2008 ರಿಂದ 2025 ರವರೆಗೆ 17 ವರ್ಷಗಳು ಕಳೆದಿವೆ. 17 ವರ್ಷಗಳಲ್ಲಿ 4,043 ಎಕರೆ 27 ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಂಡರು. ಅಲ್ಲಿ 2,806 ಎಕರೆ 08 ಗುಂಟೆಯನ್ನು ಅವಾರ್ಡ್ ಮಾಡಿ ಇಂಜಿನಿಯರಿಂಗ್ ವಿಭಾಗಕ್ಕೆ ಹಸ್ತಾಂತರಿಸಲಾಗಿದೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಇವತ್ತು ಅಲ್ಲಿನ ರೈತರ ಪಾಡು ಏನಾಗಿದೆ ಎಂದರೆ, ಭೂಸ್ವಾಧೀನಪಡಿಸಿಕೊಳ್ಳಬೇಕಾದರೆ ಹೊಸ ಸ್ಕೀಮ್ ಅನ್ನು ಅಳವಡಿಸಿದರು. 40X60 ನಿವೇಶನಗಳನ್ನು ಜಂಟಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಿರುವಂತಹ ಶೇಕಡ 40 ರಷ್ಟು ನಿವೇಶನಗಳನ್ನು ನಿಮಗೆ ಕೊಡುತ್ತೇವೆಂದು ಅಧಿಸೂಚನೆಯನ್ನು ಹೊರಡಿಸಿ ಹಂಚಿಕೆ ಮಾಡುತ್ತಿದ್ದಾರೆ ಅದರಲ್ಲಿ ಬಹಳಷ್ಟು ಹಗರಣಗಳು ಬಿ.ಡಿ.ಎ. ದಲ್ಲಿ ನಡೆಯುತ್ತಿವೆ. ಇವತ್ತು ಒಬ್ಬ ರೈತ ಒಂದು ಎಕರೆ ಅವಾರ್ಡ್ ಮಾಡಿ 9,580 ಅಡಿ ನಿವೇಶನವನ್ನು ಪಡೆಯಬೇಕಾದರೆ ಕನಿಷ್ಟ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಯಾವುದೇ ಕೆಲಸ ಆಗುತ್ತಿಲ್ಲ. ಇನ್ನು ಕೆಲವರಿಗೆ ಗೊತ್ತಿಲ್ಲದೆ ಅವಾರ್ಡ್ ಪಾಸ್ ಆಗುವ ಹಾಗೆ ಮಾಡಿ ಕೋರ್ಟ್‌ಗೆ ತೆಗೆದುಕೊಂಡು ಹೋಗಿ ಹಣ ಡೆಪಾಸಿಟ್ ಮಾಡಿದ್ದಾರೆ. ಅವರು ನನಗೆ cash ಬೇಡ, ನನಗೆ ನಿವೇಶನ ಬೇಕು, ಕೋರ್ಟ್ ಗೆ ಹೋಗಿ ರಿವರ್ಸ್ ಅವಾರ್ಡ್ ಮಾಡಿಸಿಕೊಂಡು ಬಂದು ನಿವೇಶನವನ್ನು ಕೇಳುತ್ತಿದ್ದಾರೆ.

**ಸಭಾಪತಿಯವರು:-** ತಾವು ಪ್ರಶ್ನೆಯನ್ನು ಕೇಳಿ.

**ಶ್ರೀ ಟಿ.ಎನ್.ಜವರಾಯಿ ಗೌಡ:-** ಮಾನ್ಯ ಸಭಾಪತಿಯವರೇ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಸ್ಪಂದಿಸುತ್ತಿಲ್ಲ. ಇವತ್ತು ಶಿವರಾಮ ಕಾರಂತ ಬಡಾವಣೆ ರಚನೆ ಮಾಡಲು 2008 ರಲ್ಲಿ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಿದ್ದರೂ ಕೂಡ 2022 ರಲ್ಲಿ ಅಂತಿಮ ಅಧಿಸೂಚನೆ ಹೊರಡಿಸಲಾಗುತ್ತದೆ. ಸುಪ್ರೀಂ ಕೋರ್ಟ್ ನಿರ್ದೇಶನದ ಮೇಲೆ ಸಮಿತಿ ರಚನೆ ಮಾಡಿ ಬಡಾವಣೆ ನಿರ್ಮಾಣವಾಗುತ್ತದೆ. ಇವತ್ತು ಅಲ್ಲಿರುವಂತಹ ರೈತರಿಗೆ ಒಂದು ರೂಪಾಯಿ ಲಂಚ ಇಲ್ಲದೆ ನಿವೇಶನ ಹಂಚಿಕೆಯಾಗುತ್ತಿದೆ. ಸಾರ್ವಜನಿಕರಿಗೆ ಹಂಚಿಕೆ

ಮಾಡುವುದಕ್ಕೆ ಬಿಡಲಿಲ್ಲ. ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಸಾರ್ವಜನಿಕರಿಗೆ 22,000 ನಿವೇಶನಗಳನ್ನು ಹಂಚಿಕೆ ಮಾಡಿದರು. ಕೆಲವು ನಿವೇಶನಗಳನ್ನು ಹರಾಜು ಕೂಡ ಮಾಡಿದರು. ಕೋಟ್ಯಂತರ ರೂಪಾಯಿಗಳು ಬಿ.ಡಿ.ಎ. ಗೆ ಆದಾಯವೂ ಬಂದಿದೆ. ರೈತರ ಬವಣೆ ಏನಾಗಿದೆ? ಅದರ ಜೊತೆಗೆ ಪ್ರಾಥಮಿಕ ಅಧಿಸೂಚನೆ ಹೊರಡಿಸಿ ಅಂತಿಮ ಅಧಿಸೂಚನೆಯಲ್ಲಿ 700 ಎಕರೆ ಜಮೀನನ್ನು ಕೈಬಿಡಲಾಗಿದೆ. ಮಾನ್ಯ ಉಪ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಅಧಿಕಾರಿಗಳು 2,105 ಎಕರೆ 35 ಗುಂಟೆ ಜಮೀನನ್ನು ಹೊಸದಾಗಿ ಭೂಸ್ವಾಧೀನಪಡಿಸಿಕೊಳ್ಳುತ್ತಿದ್ದೇವೆಂದು ಹೇಳುತ್ತಿದ್ದಾರೆ.

**ಸಭಾಪತಿಯವರು:-** ಮಾನ್ಯ ಜವರಾಯಿ ಗೌಡರವರೇ, ಇದು ಪ್ರಶ್ನೋತ್ತರ ವೇಳೆಯಾಗಿದೆ. ಈಗ ಮಾನ್ಯ ಉಪ ಮುಖ್ಯಮಂತ್ರಿಯವರು ಉತ್ತರ ಕೊಡುತ್ತಾರೆ.

**ಶ್ರೀ ಟಿ.ಎನ್.ಜವರಾಯಿ ಗೌಡ:-** ಮಾನ್ಯ ಸಭಾಪತಿಯವರೇ, ಇದು ಬಹಳ ಕಷ್ಟದ ವಿಚಾರವಾಗಿದೆ. ಪ್ರಾಥಮಿಕ ಅಧಿಸೂಚನೆಯಿಂದ ಅಂತಿಮ ಅಧಿಸೂಚನೆ ಹೊರಡಿಸಬೇಕಾದರೆ ರೈತ ಜಮೀನನ್ನು ಹಣ ಕೊಟ್ಟು ಬಿಡಿಸಿಕೊಂಡಿದ್ದಾನೆ. ಇವತ್ತು ಏಕಾಏಕಿ ಈ ರೀತಿ ಅಧಿಸೂಚನೆಯನ್ನು ಹೊರಡಿಸಿದರೆ ಕತೆ ಏನಾಗಬೇಕು? ಇವು ರಸ್ತೆಗಳಿಗೆ ಅಡ್ಡಿ ಇದೆಯೇ ಹಾಗೂ ಇದರಿಂದ ಬಡಾವಣೆಗೆ ತೊಂದರೆ ಇದೆಯೇ? ಅದಕ್ಕೆ acquisition ಮಾಡಿಕೊಳ್ಳಿ. ನಮ್ಮದೇನೂ ಅಭ್ಯಂತರವಿಲ್ಲ.

**ಸಭಾಪತಿಯವರು:-** ಮಾನ್ಯ ಜವರಾಯಿ ಗೌಡರವರೇ, ಈಗ ಮಾನ್ಯ ಉಪ ಮುಖ್ಯಮಂತ್ರಿಯವರು ಉತ್ತರ ಕೊಡುತ್ತಾರೆ, ಆಮೇಲೆ ಪ್ರಶ್ನೆಯನ್ನು ಕೇಳಿ.

**ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಜವರಾಯಿ ಗೌಡರವರು ಹಿರಿಯ ನಾಯಕರು. ಅದು ಅವರದ್ದೇ ಆದಂತಹ ಕ್ಷೇತ್ರವಾಗಿದೆ. ಅಲ್ಲಿ ಕೆಂಪೇಗೌಡ ಬಡಾವಣೆ ಕೆಲಸ ನಡೆಯುತ್ತಿದೆ. ಅವರು 2-3 ಆರೋಪಗಳನ್ನು ಕೂಡ ಮಾಡಿದ್ದಾರೆ. ಕೆಂಪೇಗೌಡ ಬಡಾವಣೆಯ ಬಗ್ಗೆ ಅವರೇ ವಿವರವಾಗಿ ಹೇಳಿದ್ದಾರೆ. ಎಷ್ಟು ಎಕರೆ ಮಾಡಿದ್ದೇವೆ, ಎಷ್ಟು ಎಕರೆ denotification ಮಾಡಿದ್ದೇವೆಂದು ಅವರೇ ಹೇಳಿದ್ದಾರೆ. ಅವರು ಒಂದು ಆರೋಪ ಏನು ಮಾಡಿದ್ದಾರೆಂದರೆ ರೈತ ಜಮೀನು ಬಿಡಿಸಿಕೊಳ್ಳಬೇಕಾದರೆ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ಎಂದು ಹೇಳಿದ್ದಾರೆ. ಇವತ್ತೇ ಯಾರಿಗೆ ಹಣ ಕೊಟ್ಟಿದ್ದಾರೆ, ಯಾರ ಕೈಗೆ ಕೊಟ್ಟಿದ್ದಾರೆ ಎಂದು ಅವರ ರೈತರ ಕೈಯಲ್ಲಿ ಬರೆಯಿಸಿ ಕೊಡಲಿ. ಇವತ್ತು ಸಾಯಂಕಾಲ ಹೊತ್ತು ಮುಳುಗುವಷ್ಟರಲ್ಲಿ ತನಿಖೆ ಏನು ಬೇಕಾದರೂ ಆಗಿರಲಿ, ಅವರನ್ನು ನಾನು ಸಸ್ಪೆಂಡ್ ಮಾಡುತ್ತೇನೆ. ಏಕೆಂದರೆ,

ಭೂಮಿ ಕಳೆದುಕೊಂಡ ಮೇಲೆ ರೈತನ ಕಷ್ಟ ಏನು ಎಂಬುದು ನಮಗೆ ಅರಿವು ಇದೆ. ರೈತನಿಗೆ ನಿವೇಶನ 9,600 ಚದರ ಅಡಿ ಸಿಗುತ್ತಿರುವಂಥದ್ದು. ನಿವೇಶನ ಅಭಿವೃದ್ಧಿಯಾದ ಮೇಲೆ ಒಂದಿಷ್ಟು ಹಣ ಸಿಗಬಹುದು, ಇಲ್ಲ ಎಂದು ನಾನು ಹೇಳುವುದಿಲ್ಲ. ಹಿಂದೆ ಒಂದು ಕಾನೂನು ಇತ್ತು, ಬೇರೆ land value ಮೇಲೆ ಮಾಡುತ್ತಿದ್ದರು. 2013ರ ಮೇಲೆ ದಿಟ್ಟವಾದ ತೀರ್ಮಾನವನ್ನು ಯು.ಪಿ.ಎ ಸರ್ಕಾರ ತೆಗೆದುಕೊಂಡ ಮೇಲೆ ಅದನ್ನು double, triple and four times ಕೊಡುವಂತಹ ತೀರ್ಮಾನವಾಯಿತು. ನಾವು 60x40 ನಿವೇಶನದ ಸ್ಕೀಮ್ ಅನ್ನು ಮಾಡಿದೆವು. 60x40 ನಿವೇಶನದ ಸ್ಕೀಮ್‌ನಲ್ಲಿ ರೈತರಿಗೆ 9,600 ಚದರ ಅಡಿ ವಿಸ್ತೀರ್ಣದ ನಿವೇಶನವನ್ನು ಪರಿಹಾರವಾಗಿ ನೀಡಿದೆವು. ಇವತ್ತು ಅದನ್ನು ಕೆಲವರು ಬಿಟ್ಟಿದ್ದಾರೆ ಎಂದು ಹೇಳಿದ್ದಾರಲ್ಲಾ, ಬೇಕಾದರೆ ಯಾವುದಾದರೂ ನಿರ್ದಿಷ್ಟವಾದ ವಿಚಾರವನ್ನು ಹೇಳಲಿ, ಕಾನೂನು ಬಾಹಿರವಾಗಿ ಬಿಟ್ಟಿದ್ದರೆ ಅದನ್ನು ಪೂರ್ಣವಾಗಿ ತನಿಖೆ ಮಾಡುವುದಕ್ಕೆ ತಯಾರಿದ್ದೇನೆ. ಕಾನೂನಿನ ಚೌಕಟ್ಟಿನಲ್ಲಿ ಯಾರೋ ಬೇಕಾದವನಿಗೆ ಬಿಡುವುದು, ಮತ್ತೊಂದು ನೋಟಿಫಿಕೇಶನ್ ಆದ ಮೇಲೆ ಪ್ರಶ್ನೆ ಇಲ್ಲ. ಅದಕ್ಕೆ ಗೈಡ್‌ಲೈನ್ಸ್ ಇರುತ್ತದೆ. ಅವರು ಕಾನೂನು ಬಾಹಿರವಾಗಿದೆ, ಯಾರ್ಯಾರು ಜಮೀನು ಕಳೆದುಕೊಂಡಿದ್ದಾರೆ ಅವರಿಗೆಲ್ಲಾ ಸಿಗಬೇಕು ಎನ್ನುವ ಉದ್ದೇಶವಿದೆ. ನಿವೇಶನ ಹಂಚಿಕೆಯೂ ಮಾಡಿದ್ದಾರೆ, ಸಾರ್ವಜನಿಕರಿಗೂ ಹಂಚಿಕೆ ಮಾಡಿದ್ದಾರೆ ಎಂದು ಅವರು ಹೇಳಿದ್ದಾರೆ. ಅಂದರೆ, ಅಲ್ಲಿ ಚಟುವಟಿಕೆಗಳು ನಡೆಯುತ್ತಿದೆ ಎಂಬುದಾಗಿದೆ. ಅವರು ಜನಪ್ರತಿನಿಧಿಗಳಾಗಿದ್ದಾರೆ, ಅವರು ವಿವರವಾದ ಮಾಹಿತಿಗಳನ್ನು ಕೊಡಲಿ. ನಾನು ಅದಕ್ಕೆ ನಿರ್ದಾಕ್ಷಿಣ್ಯವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಎರಡನೆಯದಾಗಿ, ಸುಪ್ರೀಂ ಕೋರ್ಟ್ ಗೈಡ್‌ಲೈನ್ಸ್ ಮೇಲೆ ಶಿವರಾಮ ಕಾರಂತ ಬಡಾವಣೆ ರಚನೆಯಾಗಿ ಒಂದು ಪರಿಸ್ಥಿತಿಗೆ ಬಂದಿದೆ. ಈ ವಿಚಾರವನ್ನು ಹೇಳುವುದಕ್ಕೆ ನನಗೂ ಬಹಳ ನೋವಾಗುತ್ತಿದೆ. ಅಲ್ಲಿ ಸರ್ಕಾರ 7,500 ಕೋಟಿ ರೂಪಾಯಿಗಳ ಬಂಡವಾಳವನ್ನು ಹಾಕಿದೆ. ಇವತ್ತಿನವರೆಗೂ ಒಬ್ಬ ರೈತನಿಗೂ ಒಂದು ನಿವೇಶನ ಕೊಡುವುದಕ್ಕಾಗಿಲ್ಲ. ನಾನು ಬಂದ ತಕ್ಷಣ ತೀರ್ಮಾನ ಮಾಡಿ, ಅರ್ಜಿಯನ್ನು ಆಹ್ವಾನ ಮಾಡಿದೆ. ಉಚ್ಛ ನ್ಯಾಯಾಲಯದವರು ಅರ್ಜಿಯನ್ನು ತೆಗೆದುಕೊಳ್ಳುವುದಕ್ಕೆ 'status quo' ಆದೇಶ ನೀಡಿದರು. ನಿವೇಶನ ಹಂಚಿಕೆ ಮಾಡುವುದಕ್ಕಲ್ಲ. ನಾನೇನು ಮಾಡಲಿ? ಜಸ್ಟೀಸ್ ಶ್ರೀ ಕೃಷ್ಣಾ ದೀಕ್ಷಿತ್ ರವರ ಬೆಂಚ್ ಅದಕ್ಕೆ ತಡೆಯಾಜ್ಞೆಯನ್ನು ಕೊಟ್ಟಿದ್ದಾರೆ. ನಾನು ನಮ್ಮ ಅಡ್ವೋಕೇಟ್ ಜನರಲ್‌ರವರಿಗೆ ಹೇಳುತ್ತಿದ್ದೇನೆ. ಯಾರಾದರೂ ಅರ್ಜಿಯನ್ನು ಹಾಕಿಕೊಂಡಿದ್ದರೆ ರೈತರದ್ದೇನಾದರೂ ಸಮಸ್ಯೆ ಇದ್ದರೆ ಅದಕ್ಕೇ ಬೇಕಾದರೆ ತೀರ್ಮಾನ ಏನು ಬೇಕಾದರೂ ಆಗಿಬಿಡಲಿ, ಆದರೆ ಅರ್ಜಿಯನ್ನು ತೆಗೆದುಕೊಳ್ಳುವುದಕ್ಕೆ ನಿಲ್ಲಿಸಿ ಬಿಟ್ಟರು ಎಂದರೆ ಸರ್ಕಾರ ಈ ತಡೆಯಾಜ್ಞೆ

ಇರುವುದರಿಂದ ಪ್ರತಿ ವರ್ಷ ಒಂದು ಸಾವಿರ ಕೋಟಿ ರೂಪಾಯಿಗಳು ನಷ್ಟವಾಗುತ್ತಿದೆ. ಆ ಜಮೀನಿಗೆ ಅಧಿಸೂಚನೆ ಹೊರಡಿಸಿ 15 ವರ್ಷಗಗಳಾಗಿಬಿಟ್ಟಿವೆ. 2008 ರಲ್ಲಿ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಇವತ್ತಿನವರೆಗೂ ಅವರಿಗೆ ಒಂದು ರೂಪಾಯಿಯೂ ಸಿಕ್ಕಿಲ್ಲ, ಜಮೀನೂ ಸಿಕ್ಕಿಲ್ಲ, ಆ ಪರಿಸ್ಥಿತಿ ಬಂದುಬಿಟ್ಟಿದೆ. ಏಕೆಂದರೆ, ಸರ್ಕಾರ ಬಂಡವಾಳ ಹಾಕಿರುವುದನ್ನು ಅರ್ಜಿಯ ಮುಖಾಂತರ ತೆಗೆದುಕೊಂಡಾಗ ಹಣವೂ ಕೊಡಬೇಕಾಗುತ್ತದೆ, ಇಲ್ಲದಿದ್ದರೆ ನಿವೇಶನ ಕೊಡಬೇಕಾಗುತ್ತದೆ. ಈ ರೀತಿಯ ಸಮಸ್ಯೆ ಇದೆ. ಆದಷ್ಟು ಬೇಗ ಯಾರು ಜಮೀನು ಕಳೆದುಕೊಂಡಿದ್ದಾರೆ ಅವರಿಗೆ ನಿವೇಶನ ಕೊಡುವಂತಹ ವ್ಯವಸ್ಥೆಯನ್ನು ನಾನು ಮಾಡುತ್ತೇನೆ. ಕೋರ್ಟ್ ನಮಗೆ ಆದಷ್ಟು ಬೇಗ relief ಕೊಡುತ್ತದೆ ಎಂಬ ನಂಬಿಕೆ ಇದೆ. ಮಾನ್ಯ ಸದಸ್ಯರೇನಾದರೂ ಅಕ್ರಮವಾಗಿದೆ ಎಂದು ಹೇಳಿದರೆ ಇಲ್ಲೂ ಹೇಳಿ, ಬರೆದು ಕೊಡಿ. I am ready to take any type of action in this regard. ಯಾರು ಜಮೀನು ಕಳೆದುಕೊಂಡಿದ್ದಾರೆ ಅದರ ಅನ್ಯಾಯದ ವಿರುದ್ಧ ಖಂಡಿತವಾಗಿಯೂ ಅವರಿಗೆ ಮತ್ತು ರೈತರಿಗೆ ರಕ್ಷಣೆ ಕೊಡುವುದಕ್ಕೆ ನಾನು ಬದ್ಧನಿದ್ದೇನೆ.

**ಶ್ರೀ ಟಿ.ಎನ್. ಜವರಾಯಿ ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಯವರು ಹೇಳಿರುವುದೆಲ್ಲಾ ನಾನು ಒಪ್ಪುತ್ತೇನೆ. ಡಾ॥ ಶಿವರಾಮ ಕಾರಂತ ಬಡಾವಣೆಯನ್ನು ಸುಪ್ರೀಂ ಕೋರ್ಟ್ ಆದೇಶದಂತೆ ಸಮಿತಿಯನ್ನು ರಚನೆ ಮಾಡಿ ನಿವೇಶನವನ್ನು ಹಂಚಿಕೆ ಮಾಡುತ್ತಿದ್ದಾರೆ ಅದನ್ನು ಮೊದಲು ರೈತರಿಗೆ ಕೊಟ್ಟು ಆನಂತರ ಸಾರ್ವಜನಿಕರಿಗೆ ಕೊಡುವುದಕ್ಕೆ ಹೈಕೋರ್ಟ್ ಹೇಳಿದೆ. ಅದನ್ನು ನಾವೇನು dispute ಮಾಡುತ್ತಿಲ್ಲ. ಅಲ್ಲಿ ಟೆಂಡರ್ ಕರೆದಾಗ ಕೆಲಸಕ್ಕಾಗಿ ಸಿವಿಲ್, ಸ್ಯಾನಿಟರಿ, ವಿದ್ಯುತ್, formation of roads, drains ಹಾಗೂ ಥಾರ್, ಇವುಗಳಿಗೆಲ್ಲಾ ಒಂದೇ ಟೆಂಡರ್‌ನಲ್ಲಿ ಕರೆದರು. ಅದೆಲ್ಲಾ ಕೆಲಸಗಳು ಮುಗಿದು ಪೂರ್ಣಗೊಳ್ಳುತ್ತಿದೆ. ಇನ್ನೇನು ಹಸ್ತಾಂತರವಾಗುತ್ತದೆ. ನಿವೇಶನವನ್ನು ಹಂಚಿಕೆ ಮಾಡುವುದಕ್ಕೆ ಹೈಕೋರ್ಟ್ ಅನುಮತಿ ಕೊಟ್ಟರೆ ಮಾಡಬಹುದು. ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಒಂದು ಕೋಟಿ ರೂಪಾಯಿಗಳವರೆಗೆ ಖರ್ಚಾಗುತ್ತಿದೆ. ಒಂದು ಅಡಿಗೆ ಒಂದು ಸಾವಿರ ರೂಪಾಯಿ ಖರ್ಚಾಗುತ್ತಿದೆ ಎಂದು ಹೇಳಿರುವುದು ಅಕ್ಷರಶಃ ಸತ್ಯ.

(ಮುಂದು)

(704) 14/08/2025 11:30 ಎಸ್‌ಪಿಆರ್/ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಟಿ.ಎನ್.ಜವರಾಯಿಗೌಡ(ಮುಂದು):-**

ಇದನ್ನು ಸಾಬೀತುಪಡಿಸಲು ಎಲ್ಲಿಂದಲೂ ದಾಖಲೆಗಳನ್ನು ತರುವುದಕ್ಕಾಗುವುದಿಲ್ಲ. ಇದು ಕೇವಲ ಆರೋಪವಷ್ಟೇ. ನೀವು ಈ ಹಿಂದೆ ಭಾರತೀಯ ಜನತಾ ಪಕ್ಷದ ಮೇಲೆ 40% ಕಮಿಷನ್‌ನ ಆರೋಪ ಹೊರಿಸಿದ್ದಿರಲ್ಲ; ಅದಕ್ಕೆ ಸಾಕ್ಷಿ ಮತ್ತು ದಾಖಲೆಗಳನ್ನೇನಾದರೂ ಒದಗಿಸಿದ್ದೀರಾ? ಅದೇ ರೀತಿಯಾಗಿ ಇದೂ ಸಹ ಆಗಿದೆ. ಇದರ ಜೊತೆಗೆ ಹೇಳುವುದಾದರೆ, ಉಪ ಮುಖ್ಯಮಂತ್ರಿಗಳು ರೈತರ ಮಗ ಆಗಿದ್ದಾರೆ. ಹೀಗಾಗಿ ಬಡ ರೈತರಿಗೆ ಅನುಕೂಲ ಮಾಡಿಕೊಡಬೇಕು. ಈ ನಿಟ್ಟಿನಲ್ಲಿ ಅಂದು ಪರಿಹಾರ ಧನ ಘೋಷಣೆಯಾದಾಗ ಅದನ್ನು ಠೇವಣಿ ಮಾಡಿದ್ದರು. ಅದನ್ನು ರಿವರ್ಸ್ ಅವಾರ್ಡ್ ಆಗಿ ಮಾಡಿಕೊಡಬೇಕು. ಹಣವನ್ನು ನೀವೇ ಇಟ್ಟುಕೊಂಡು ನಮಗೆ ನಿವೇಶನ ಕೊಡಿ ಎಂತಲೂ ಸಹ ಕೇಳುತ್ತಿದ್ದಾರೆ. ಅವರುಗಳಿಗೆ ನಿವೇಶನ ದೊರೆತರೆ, ಸ್ವಲ್ಪ ಹೆಚ್ಚಿನ ಪ್ರಮಾಣದ ಲಾಭ ಬರುತ್ತದೆ. ಪ್ರಾಥಮಿಕ ಹಾಗೂ ಅಂತಿಮ ಅಧಿಸೂಚನೆಗಳನ್ನು ಹೊರಡಿಸುವಾಗ..., ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸುವುದಕ್ಕೂ ಮುಂಚಿತವಾಗಿ ಪರಿಶೀಲಿಸಿ, ತೋಟಗಳು, ಕನ್ವರ್ಷನ್ ಹಾಗೂ ಬಿಲ್ಟ್-ಅಪ್ ಗಳನ್ನು ಕೈಬಿಡಲಾಗಿತ್ತು. 2,105 ಎಕರೆ ಪ್ರದೇಶದ ಅಧಿಸೂಚನೆಯನ್ನು ಹೊರಡಿಸಲು ಸರ್ಕಾರವು ಹೊರಟಿದ್ದು, ಇದನ್ನು ದಯಮಾಡಿ ದೊಡ್ಡ ಮನಸ್ಸು ಮಾಡಿ ಕೈಬಿಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಇದರಿಂದಾಗಿ ಸಾರ್ವಜನಿಕರಿಗೆ ನಿಜವಾಗಿಯೂ ಸಹ ಅನ್ಯಾಯವಾಗುತ್ತದೆ. ಅವತ್ತಿನ ದಿವಸ ಅಧಿಸೂಚನೆಯಿಂದ ಜಮೀನನ್ನು ಸುಮ್ಮನೆ ಬಿಡಿಸಿಕೊಂಡಿರುವುದಿಲ್ಲ. ಅವಶ್ಯಕವಾದಲ್ಲಿ ನಾನು ಅನೇಕ ಉದಾಹರಣೆಗಳನ್ನು ನೀಡುತ್ತೇನೆ. ಈ ಸಂದರ್ಭದಲ್ಲಿ ಉದಾಹರಣೆಯೊಂದನ್ನು ಹೇಳಬಯಸುತ್ತೇನೆ. 12 ಎಕರೆ ಜಮೀನು ಹೊಂದಿದ ವ್ಯಕ್ತಿಯೊಬ್ಬರು ಕೇವಲ 3 ಎಕರೆ ಜಮೀನನ್ನು ಮಾತ್ರವೇ ನೀಡಿದ್ದು, ಇನ್ನುಳಿದ 9 ಎಕರೆ ಜಮೀನನ್ನು ತಮ್ಮ ಬಳಿಯೇ ಉಳಿಸಿಕೊಂಡಿರುತ್ತಾನೆ. ಸದರಿ ವ್ಯಕ್ತಿಯು ಕೇವಲ 3 ಎಕರೆ ಜಮೀನನ್ನು ಮಾತ್ರವೇ ನೋಂದಣಿ ಮಾಡಿಸಿರುವುದಕ್ಕೆ ನಾನು ದಾಖಲೆಗಳನ್ನು ಒದಗಿಸುತ್ತೇನೆ. ಅವರುಗಳು ಒಂದು ಎಕರೆಯನ್ನು ಬಿಡಿಸಿಕೊಳ್ಳಬೇಕಾದರೆ, ಅದಕ್ಕೆ 10 ಗುಂಟೆ ಜಮೀನನ್ನು ಬಿಟ್ಟುಕೊಡಬೇಕು. ದಯಮಾಡಿ ಸಚಿವರು ಇದರ ಬಗ್ಗೆ ಗಮನ ವಹಿಸಬೇಕು.

**ಶ್ರೀ ಡಿ.ಕೆ.ಶಿವಕುಮಾರ (ಉಪಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೆ, ಸದಸ್ಯರು ಈ ವಿಷಯದ ಬಗ್ಗೆ ಬೆಳಕು ಚೆಲ್ಲಿರುವುದು ಬಹಳ ಸಂತೋಷದ ಸಂಗತಿಯಾಗಿದೆ. ಸದಸ್ಯರೇ ಎರಡೂ ರೀತಿಯ ಪ್ರಸಂಗಗಳನ್ನು ವ್ಯಕ್ತಪಡಿಸುತ್ತಿದ್ದಾರೆ. ಅಲ್ಲಿ ಡಿ-ನೋಟಿಫೈ ಮಾಡಿದ್ದಾರೆ ಎಂತಲೂ ಹಾಗೂ ಯಾವುದೋ ಜಮೀನನ್ನು ಅಂತಿಮ ಅಧಿಸೂಚನೆಯಿಂದ ಕೈಬಿಟ್ಟಿರುವ ಬಗ್ಗೆಯೂ ಸಹ ಹೇಳುತ್ತಿದ್ದಾರೆ. ನಂತರದ ಭೂ ಸ್ವಾಧೀನ ಪ್ರಕ್ರಿಯೆಯನ್ನೂ ಸಹ ಕೈಬಿಡುವಂತೆ ಸದಸ್ಯರು ಹೇಳುತ್ತಿದ್ದಾರೆ. ಸದಸ್ಯರೂ ಸಹ ಆ ಭಾಗದ ಭೂ ಮಾಲೀಕರಾಗಿದ್ದಾರೆ. ಅವರಿಗೆ

ನನಗಿಂತಲೂ ಹೆಚ್ಚಿನ ಮಾಹಿತಿ ಇದೆ. ಶ್ರೀ ಜವರಾಯಿಗೌಡ ರವರೇ, ಬನ್ನಿ ನಾವಿಬ್ಬರೂ ಕಾಫಿಯನ್ನು ಕುಡಿಯುತ್ತಾ, ಮಾತನಾಡುತ್ತಾ, ಅಲ್ಲಿನ ಸಮಸ್ಯೆಗಳನ್ನೆಲ್ಲಾ ಬಗೆಹರಿಸೋಣ.

**ಶ್ರೀ ಟಿ.ಎನ್.ಜವರಾಯಿಗೌಡ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಉಪ ಮುಖ್ಯಮಂತ್ರಿಗಳ ಕಡೆಯಿಂದ ಇದು ಸಾಧ್ಯವಾಗುತ್ತದೆ; ಹೀಗಾಗಿ ಇದನ್ನು ಮಾಡಿಕೊಡುವಂತೆ ನಾನು ಪುನಃ ಮನವಿ ಮಾಡಿಕೊಳ್ಳುತ್ತೇನೆ.

**ಪ್ರಶ್ನೆ ಸಂಖ್ಯೆ: 541**

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸಿಎ ನಿವೇಶನ ಹಂಚಿಕೆ ಮಾಡಿರುವ ಬಗ್ಗೆ**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವತಿಯಿಂದ ನಿರ್ಮಾಣವಾದ 2ನೇ ಬ್ಲಾಕ್‌ನ ಸರ್.ಎಂ. ವಿಶೇಶ್ವರಯ್ಯ ಬಡಾವಣೆಯಲ್ಲಿ ಆಸ್ಪತ್ರೆಗಾಗಿ ಬೆಂಗಳೂರು ಮಹಾನಗರ ಪಾಲಿಕೆಗೆ ಸಿ.ಎ ನಿವೇಶನ ಹಂಚಿಕೆ ಮಾಡಲಾಗಿದೆಯೇ; ಈ ನಿವೇಶನಕ್ಕೆ ಬಿ.ಡಿ.ಎ ಪಡೆದ ಒಟ್ಟು ಮೊತ್ತವೆಷ್ಟು; ಬೆಂಗಳೂರು ಮಹಾನಗರ ಪಾಲಿಕೆಯು ಈ ಮೊತ್ತವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಪಾವತಿಸಿದೆಯೇ? | ಹೌದು<br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಒಟ್ಟಾರೆ ಗುತ್ತಿಗೆ ಮೌಲ್ಯ ರೂ. 1,71,70,290/- ಗಳನ್ನು ಪಾವತಿಸಲಾಗಿರುತ್ತದೆ. |
| (ಆ) | ಈ ನಿವೇಶನವನ್ನು ಯಾವ ವರ್ಷದಲ್ಲಿ ಹಂಚಿಕೆ ಮಾಡಲಾಯಿತು; ಸದರಿ ನಿವೇಶನವನ್ನು ಬೆಂಗಳೂರು ಮಹಾನಗರ ಪಾಲಿಕೆಗೆ ನೋಂದಣಿ ಮಾಡಿಕೊಂಡಿದೆಯೇ; | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ದಿನಾಂಕ:06.01.2011ರಂದು ಸದರಿ ನಾಗರೀಕ ಸೌಲಭ್ಯ ನಿವೇಶನದ ಹಂಚಿಕೆ ಪತ್ರವನ್ನು ನೀಡಲಾಗಿರುತ್ತದೆ.<br>ದಿನಾಂಕ:22.07.2025 ರಂದು 30 ವರ್ಷಗಳ ಅವಧಿಗೆ ಗುತ್ತಿಗೆ ಕರಾರು ಪತ್ರವನ್ನು ನೊಂದಾಯಿಸಲಾಗಿರುತ್ತದೆ. |
| (ಇ) | ಈ ವಲಯದಲ್ಲಿ ಸರ್ಕಾರಿ ಆಸ್ಪತ್ರೆ ಇಲ್ಲದಿರುವುದರಿಂದ ಸಾರ್ವಜನಿಕರು ಖಾಸಗಿ ಆಸ್ಪತ್ರೆಗಳ ಮೊರೆ ಹೋಗುತ್ತಿರುವುದು ಸರ್ಕಾರದ ಗಮನಕ್ಕಿದೆಯೇ; | ಸರ್.ಎಂ.ವಿಶ್ವೇಶ್ವರಯ್ಯ ಬಡಾವಣೆಯಿಂದ 1.5 ರಿಂದ 02 ಕಿ.ಮೀ ದೂರದಲ್ಲಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ನಮ್ಮ ಕ್ಲಿನಿಕ್ ಲಭ್ಯವಿರುತ್ತದೆ. |
| (ಈ) | ಅತಿ ಹೆಚ್ಚು ಆರ್ಥಿಕವಾಗಿ ಹಿಂದುಳಿದ ಸಮುದಾಯಗಳೇ ಇರುವ ವಲಯಕ್ಕೆ ಆಸ್ಪತ್ರೆಗೆ ನಿವೇಶನ ಇದ್ದರೂ ಆಸ್ಪತ್ರೆ ನಿರ್ಮಾಣ ಮಾಡಲು ಸರ್ಕಾರ ವಿಳಂಭ ನೀತಿ ಏಕೆ ಅನುಸರಿಸುತ್ತಿದೆ? | ದಿನಾಂಕ: 22.07.2025 ರಂದು ನಾಗರೀಕ ಸೌಲಭ್ಯ ನಿವೇಶನದ ಗುತ್ತಿಗೆ ಕರಾರು ಪತ್ರವನ್ನು ನೋಂದಾಯಿಸಲಾಗಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಆಸ್ಪತ್ರೆ ನಿರ್ಮಾಣ ಮಾಡಲು ಕ್ರಮವಹಿಸಲಾಗುವುದು. |

**ಡಾ॥ ಉಮಾಶ್ರೀ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ನಾನು ಕೇಳಿರುವ ಪ್ರಶ್ನೆಗೆ ಉಪ ಮುಖ್ಯಮಂತ್ರಿಗಳು ಉತ್ತರಿಸಿರುತ್ತಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿರ್ಮಾಣವಾದ ಸರ್ ಎಂ.ವಿಶ್ವೇಶ್ವರಯ್ಯ ಬಡಾವಣೆಯ 2 ನೇ ಬ್ಲಾಕ್‌ನಲ್ಲಿ ಆಸ್ಪತ್ರೆಗಾಗಿ ಬೆಂಗಳೂರು ಮಹಾನಗರ ಪಾಲಿಕೆಗೆ ನಾಗರೀಕ ಸೌಲಭ್ಯ ನಿವೇಶನವನ್ನು ಹಂಚಿಕೆ ಮಾಡಲಾಗಿರುತ್ತದೆ. 2011 ನೇ ಇಸ್ವಿಯಲ್ಲಿ ಇದು ಹಂಚಿಕೆಯಾಗಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಒಟ್ಟಾರೆ ಗುತ್ತಿಗೆ ಮೌಲ್ಯ 1,71,70,290/- ರೂಪಾಯಿಗಳನ್ನು ಪಾವತಿಸಲಾಗಿರುತ್ತದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ದಿನಾಂಕ 06/01/2011 ರಂದು ಸದರಿ ನಾಗರೀಕ ಸೌಲಭ್ಯ ನಿವೇಶನದ ಹಂಚಿಕೆ ಪತ್ರವನ್ನು ನೀಡಲಾಗಿರುತ್ತದೆ. 2024 ನೇ

ಸಾಲಿನ ಜನವರಿ ಮಾಹೆಯ 17 ನೇ ತಾರೀಖಿನಂದು ಗುತ್ತಿಗೆ ಮೌಲ್ಯವನ್ನು ಪಾವತಿಸಲಾಗಿರುತ್ತದೆ. ಉಪ ಮುಖ್ಯಮಂತ್ರಿಗಳ ಗಮನಕ್ಕೆ ಬಂದ ನಂತರ, ಅವರು ಮಧ್ಯಸ್ಥಿಕೆ ವಹಿಸಿದ ನಂತರ, ಈ ಹಣವನ್ನು ಪಾವತಿಸಲಾಗಿರುತ್ತದೆ. ಒಂದು ಸಾರ್ವಜನಿಕ ಕೆಲಸಕ್ಕೆ ಇಲಾಖಾಧಿಕಾರಿಗಳು ಬಹಳಷ್ಟು ನಿಧಾನಗತಿಯಲ್ಲಿ ಕೆಲಸ ಮಾಡುತ್ತಾರೆ. ಅಲ್ಲಿ ಬಹಳಷ್ಟು ಹಿಂದುಳಿದ ವರ್ಗದ ಜನರಿದ್ದಾರೆ. ಈ ಬಗ್ಗೆ ವಿಚಾರಿಸಿದಾಗ, ಅಲ್ಲಿ ನಮ್ಮ ಕ್ಲಿನಿಕ್ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ ಇವುಗಳು ಈಗಾಗಲೇ ಇವೆ ಎನ್ನುವ ಅರ್ಥದಲ್ಲಿ ಉತ್ತರವನ್ನು ನೀಡುತ್ತಾರೆ. ಅಲ್ಲಿ ಆಸ್ಪತ್ರೆಯ ಅಗತ್ಯವಿದೆ ಎಂದು ಉಪ ಮುಖ್ಯಮಂತ್ರಿಗಳ ಅರಿವಿಗೆ ಬಂದ ನಂತರ ಈ ಕೆಲಸವನ್ನು ಮಾಡಿದ್ದಾರೆ. ಇಷ್ಟು ವಿಳಂಬ ಮಾಡಿರುವ ಅಧಿಕಾರಿ ವರ್ಗದವರ ವಿರುದ್ಧ ಸಚಿವರು ಕ್ರಮ ತೆಗೆದುಕೊಂಡಿದ್ದಾರೆಯೇ ಹಾಗೂ ಯಾವ ಕಾರಣಕ್ಕಾಗಿ ಅಲ್ಲಿ ಇಷ್ಟೊಂದು ಲೋಪವುಂಟಾಗಿದೆ ಎಂದು ನಾನು ಕೇಳಬಯಸುತ್ತೇನೆ. ಸದರಿ ಆಸ್ಪತ್ರೆಯನ್ನು ಎಷ್ಟು ವರ್ಷಗಳಲ್ಲಿ ನಿರ್ಮಾಣ ಮಾಡಲಾಗುತ್ತದೆ ಎಂದು ಸಹ ಕೇಳಬಯಸುತ್ತೇನೆ. ಸದರಿ ಆಸ್ಪತ್ರೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವೇ ನಿರ್ಮಾಣ ಮಾಡುತ್ತದೆಯೇ ಅಥವಾ ಅದನ್ನು ಆರೋಗ್ಯ ಇಲಾಖೆಗೆ ವಹಿಸುತ್ತದೆಯೇ ಎಂದೂ ಸಹ ನಾನು ಕೇಳಬಯಸುತ್ತೇನೆ. ಒಟ್ಟಾರೆಯಾಗಿ ಶೀಘ್ರದಲ್ಲಿ ಅಲ್ಲಿ ಆಸ್ಪತ್ರೆ ನಿರ್ಮಾಣ ಮಾಡುವುದಕ್ಕೆ ಉಪ ಮುಖ್ಯಮಂತ್ರಿಗಳು ಕ್ರಮ ವಹಿಸಬೇಕೆಂದು ನಾನು ಕೋರುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್ (ಉಪಮುಖ್ಯಮಂತ್ರಿ):-** ಮಾನ್ಯ ಸಭಾಪತಿಯವರೆ, ನಾನು ಪ್ರಭಾರವನ್ನು ವಹಿಸಿಕೊಂಡ ನಂತರ ಸದರಿ ನಾಗರೀಕ ಸೌಲಭ್ಯ ನಿವೇಶನವನ್ನು ಹಸ್ತಾಂತರಿಸಲಾಗಿದೆ. ಸದರಿ ಆಸ್ಪತ್ರೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದಲೇ ನಿರ್ಮಾಣ ಮಾಡಲಾಗುವುದು. ಪಾಲಿಕೆಯ ವತಿಯಿಂದಲೇ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಗುತ್ತಿಗೆ ಮೌಲ್ಯವನ್ನು ಪಾವತಿಸಲಾಗಿರುತ್ತದೆ. ಈ ವಿಚಾರವಾಗಿ ಆರೋಗ್ಯ ಇಲಾಖೆಯವರೊಂದಿಗೆ ಚರ್ಚಿಸಿ, ಅವರ ಸಹಕಾರವನ್ನೂ ಸಹ ಪಡೆದುಕೊಳ್ಳಲಾಗುವುದು. ಪಾಲಿಕೆಯ ವತಿಯಿಂದಲೇ ಆದಷ್ಟು ಶೀಘ್ರದಲ್ಲಿ ಅಲ್ಲಿ ಆಸ್ಪತ್ರೆಯನ್ನು ನಿರ್ಮಿಸಲಾಗುವುದು.

**ಡಾ|| ಉಮಾಶ್ರೀ:-** ಮಾನ್ಯ ಸಭಾಪತಿಯವರೆ, ಇಷ್ಟು ವಿಳಂಬ ಮಾಡಿರುವುದಕ್ಕಾಗಿ ಸಂಬಂಧಿತ ಅಧಿಕಾರಿಗಳ ವಿರುದ್ಧ ಉಪ ಮುಖ್ಯಮಂತ್ರಿಗಳೇನಾದರೂ ಕ್ರಮವನ್ನು ಜರುಗಿಸುತ್ತಾರೆಯೇ ಎಂದು ನಾನು ಕೇಳಬಯಸುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೆ, ಅದು ಏಕೆ ವಿಳಂಬವಾಯಿತು ಎನ್ನುವುದನ್ನು ನಾನು ಪರಿಶೀಲಿಸುತ್ತೇನೆ. ಯಾವುದೇ ಅಧಿಕಾರಿಗಳು ಇಲ್ಲಿ ನಿಜವಾಗಿಯೂ ಸಹ ವಿಳಂಬ ಮಾಡಿ, ಕಡತವನ್ನು ಸಲ್ಲಿಕೆ ಮಾಡದಿರುವುದು ಕಂಡುಬಂದಲ್ಲಿ ಖಂಡಿತವಾಗಿಯೂ ಸಹ ಅವರುಗಳ ವಿರುದ್ಧ ಕ್ರಮ ಕೈಗೊಳ್ಳುವ ವ್ಯವಸ್ಥೆಯನ್ನು ನಾನು ಮಾಡುತ್ತೇನೆ.

## ಪ್ರಶ್ನೆ ಸಂಖ್ಯೆ: 525

## ನಗರದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಸುರಂಗ ಮಾರ್ಗಗಳ ಬಗ್ಗೆ

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದಲ್ಲಿ ಭೂಗತ ಸುರಂಗ ರಸ್ತೆ ನಿರ್ಮಾಣಕ್ಕೆ ಸಚಿವ ಸಂಪುಟ ಅನುಮೋದನೆ ನೀಡಿದೆಯೇ; ಯೋಜನೆಗೆ ಡಿ.ಪಿ.ಆರ್ ಸಿದ್ಧಪಡಿಸಲು ಯಾವ ಸಂಸ್ಥೆಗೆ ನೀಡಲಾಗಿದೆ; ಈ ಸಂಸ್ಥೆಗೆ ನೀಡಿರುವ ಹಣಎಷ್ಟು; ಸಂಸ್ಥೆ ವರದಿ ಸಲ್ಲಿಸಿದೆಯೇ; ವರದಿಯ ಪ್ರಮುಖ ಅಂಶಗಳೇನು; | • ಹೌದು.<br>• ಡಿಪಿಆರ್ ಸಿದ್ಧಪಡಿಸಲು ಟೆಂಡರ್ ಕರೆದು ಮೆ॥ ರೋಡಿಕ್ ಕನ್ಸಲ್‌ಟೆಂಟ್ಸ್ ಪ್ರೈವೇಟ್ ಲಿಮಿಟೆಡ್, ನವದೆಹಲಿ ರವರಿಗೆ ವಹಿಸಲಾಗಿದೆ.<br>• ಉತ್ತರ – ದಕ್ಷಿಣ ಕಾರಿಡಾರ್ ಯೋಜನೆಯ ಡಿ.ಪಿ.ಆರ್ ತಯಾರಿಸಲು ರೂ.9.45 ಕೋಟಿಗಳಿಗೆ ಹಾಗೂ ಪೂರ್ವ – ಪಶ್ಚಿಮ ಕಾರಿಡಾರ್ ಯೋಜನೆಗೆ ಡಿ.ಪಿ.ಆರ್ ತಯಾರಿಸಲು ರೂ.9.89 ಕೋಟಿಗಳಿಗೆ ಕರಾರು ಒಪ್ಪಂದ ಮಾಡಿಕೊಳ್ಳಲಾಗಿದೆ.<br>• ಯೋಜನೆಯ ವರದಿಯ ಪ್ರಮುಖ ಅಂಶಗಳನ್ನು **ಅನುಬಂಧ-1** ರಲ್ಲಿ ನೀಡಿದೆ. |
| ಆ) | ಯೋಜನೆಗೆ ಅಗತ್ಯವಿರುವ ಸರ್ಕಾರಿ ಭೂಮಿ ಲಭ್ಯವಿದೆಯೇ; ಖಾಸಗಿ ಭೂಮಿ ಸ್ವಾಧೀನಪಡಿಸಿಕೊಳ್ಳುವ ಅಗತ್ಯತೆ ಇದೆಯೇ; ಖಾಸಗಿ ಭೂಮಿಗೆ ನಿಗದಿಪಡಿಸಿರುವ ಭೂ ಪರಿಹಾರ ಮೊತ್ತ ಎಷ್ಟು; ಭೂ ಸ್ವಾಧೀನ ಪ್ರಕ್ರಿಯೆ ಯಾವ ಹಂತದಲ್ಲಿದೆ; | • ಸದರಿ ಯೋಜನೆಗೆ ಶೇ.80 ರಷ್ಟು ಸರ್ಕಾರದ ಭೂಮಿಗಳನ್ನೇ ಆಯ್ದುಕೊಳ್ಳಲಾಗಿದ್ದು, ಒಟ್ಟು 05 Inter Change ಗಳ ಪೈಕಿ 04 ಜಾಗಗಳಲ್ಲಿ ಸರ್ಕಾರದ ವಿವಿಧ ಇಲಾಖೆಗಳ ಭೂಮಿಯನ್ನು ಗುರುತಿಸಲಾಗಿದೆ. ಉಳಿಕೆ 01 ಜಾಗವು St. John Hospital ಒಡೆತನಕ್ಕೆ ಸೇರಿದ ಖಾಸಗಿ ಜಮೀನನ್ನು ಗುರುತಿಸಲಾಗಿದೆ.<br>• ಪ್ರಸ್ತುತ ಸರ್ವೇ ಕಾರ್ಯ ಪ್ರಗತಿಯಲ್ಲಿದ್ದು, ಖಾಸಗಿ ಭೂಮಿಗೆ ಟಿ.ಡಿ.ಆರ್ ನಿಯಮಗಳನ್ವಯ ಭೂಸ್ವಾಧೀನ ಪಡಿಸಿಕೊಳ್ಳಲು ಕ್ರಮವಹಿಸಲಾಗುತ್ತದೆ.<br>• ಖಾಸಗಿ ಸ್ವತ್ತಿನ ಮಾಲೀಕರು ಟಿ.ಡಿ.ಆರ್. ಗೆ ಒಪ್ಪದಿದ್ದ ಪ್ರಕರಣಗಳಲ್ಲಿ ನಗದು ಪರಿಹಾರ ನೀಡುವ ಮೂಲಕ ಭೂಸ್ವಾಧೀನಪಡಿಸಿಕೊಳ್ಳಲು ರೂ.800.00 ಕೋಟಿಗಳನ್ನು ಕಾಯ್ದಿರಿಸಲಾಗಿದೆ. |

| | | |
|---|---|---|
| ಇ) | ಯೋಜನೆಯಿಂದ ಪರಿಸರದ ಮೇಲೆ ಆಗುವ ಪರಿಣಾಮಗಳ ಕುರಿತು ಅಧ್ಯಯನ ನಡೆದಿದೆಯೇ; ಯೋಜನೆಗೆ ಮಣ್ಣಿನ ಪರೀಕ್ಷೆ ಅಗಿದೆಯೇ; (ವಿವರ ನೀಡುವುದು) | • ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯವು ಹೊರಡಿಸಿರುವ 2006 ರ ಅಧಿಸೂಚನೆ ಅನುಸಾರ, ಪ್ರಸ್ತಾಪಿತ ವಾಹನ ಸುರಂಗ ಮಾರ್ಗ ಯೋಜನೆಯ ವಿಸ್ತೃತ ಯೋಜನಾ ವರದಿಗೆ ಅನ್ವಯಿಸುವುದಿಲ್ಲವೆಂದು ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯ ಹೊರಡಿಸಿರುವ ಅಧಿಸೂಚನೆಯ 7(f) ಅನುಸಾರ ಇಂತಹ ಯೋಜನೆಗಳಿಗೆ ವಿನಾಯಿತಿ ನೀಡಲಾಗಿದೆ ಎಂದು ಸದಸ್ಯ ಕಾರ್ಯದರ್ಶಿಗಳು, State level Environmental Impact Assessment Agency (SEIAA) ಸಂಸ್ಥೆಯವರು ದಿನಾಂಕ:26-11-2024 ರ ಪತ್ರದಲ್ಲಿ ವರದಿ ಮಾಡಿರುತ್ತಾರೆ. ಪ್ರತಿಯನ್ನು **ಅನುಬಂಧ-2** ರಲ್ಲಿ ಒದಗಿಸಿದೆ.<br>• ಮಣ್ಣಿನ ಪರೀಕ್ಷೆಯನ್ನು ಮಾಡಲಾಗಿರುತ್ತದೆ. |
| ಈ) | ಡಿ.ಪಿ.ಆರ್. ಅನ್ವಯ ಯೋಜನೆಯ ಅಂದಾಜು ವೆಚ್ಚ ಎಷ್ಟು; ಪ್ರತಿ ಕಿ.ಮಿ ಸುರಂಗ ರಸ್ತೆ ನಿರ್ಮಾಣಕ್ಕೆ ಆಗುವ ವೆಚ್ಚ ಎಷ್ಟು; ಯೋಜನೆಗೆ ಅಗತ್ಯವಿರುವ ಹಣವನ್ನು ಯಾವ ಮೂಲದಿಂದ ಸಂಗ್ರಹಿಸಲಾಗುವುದು; ಸರ್ಕಾರ ಬಿಡುಗಡೆ ಮಾಡಿರುವ ಹಣ ಎಷ್ಟು; | • ಡಿ.ಪಿ.ಆರ್. ಅನ್ವಯ ಉತ್ತರ-ದಕ್ಷಿಣ ಸುರಂಗ ಮಾರ್ಗ ಯೋಜನೆಯ ಅಂದಾಜು ವೆಚ್ಚ ರೂ.17780.00 ಕೋಟಿಗಳು.<br>• ಪ್ರತಿ ಕಿ.ಮೀಗೆ ರೂ.531.00 ಕೋಟಿಗಳು (ಜಿ.ಎಸ್.ಟಿ ಒಳಗೊಂಡಂತೆ) ವೆಚ್ಚವಾಗುತ್ತದೆ. ಜೋಡಿ ಸುರಂಗ (ದ್ವಿಪಥ / Twin Tube Tunnel) ಮಾರ್ಗಕ್ಕೆ ರೂ.1062.00 ಕೋಟಿಗಳು ಆಗುತ್ತದೆ.<br>• ಸದರಿ ಸುರಂಗ ಮಾರ್ಗ ಯೋಜನೆಗೆ ಅಗತ್ಯವಿರುವ ಹಣವನ್ನು ಕರ್ನಾಟಕ ಸರ್ಕಾರದ ಗ್ಯಾರಂಟಿ ಆಧಾರದ ಮೇಲೆ, ಹುಡ್ಕೋ ವತಿಯಿಂದ ಸಾಲದ ರೂಪದಲ್ಲಿ ಸಂಗ್ರಹಿಸಲಾಗುವುದು. ಈ ಯೋಜನೆಯನ್ನು ಸುಧಾರಿತ ಆಧಾರದಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದ್ದು, ಶೇ.60% ರಷ್ಟನ್ನು ಖಾಸಗಿ ಪಾಲುದಾರರು ಹೂಡಿಕೆ ಮಾಡುತ್ತಿದ್ದು, ಶೇ.40% ರಷ್ಟು ಮೊತ್ತವನ್ನು ಸರ್ಕಾರವು ವೆಚ್ಚ ಮಾಡಬೇಕಾಗಿರುತ್ತದೆ. ಸದರಿ ವೆಚ್ಚವನ್ನು ಮೆ.ಹುಡ್ಕೋ ಸಂಸ್ಥೆಯವರಿಂದ ರೂ.9303.66 ಕೋಟಿಗಳು ಶೇ. 8.95 ರಷ್ಟು ಬಡ್ಡಿ ದರದಲ್ಲಿ ಸಾಲದ ನೆರವನ್ನು ಪಡೆಯಲು ಉದ್ದೇಶಿಸಲಾಗಿದೆ.<br>• ಈವರೆಗೂ ಡಿ.ಪಿ.ಆರ್ ತಯಾರಿಕೆಗಾಗಿ ಮಾತ್ರ ಹಣ ವೆಚ್ಚ ಮಾಡಲಾಗಿದೆ. |

| | | |
|---|---|---|
| ಉ) | ಸುರಂಗ ರಸ್ತೆ ನಿರ್ಮಾಣಕ್ಕೆ ಟೆಂಡರ್ ಕರೆಯಲಾಗಿದೆಯೇ; ಟೆಂಡರ್ ಪ್ರಕ್ರಿಯೆ ಯಾವ ಹಂತದಲ್ಲಿದೆ? (ಯೋಜನೆಯ ಹಾಲಿ ಸ್ಥಿತಿ ಗತಿ ವಿವರ ನೀಡುವುದು) | • ಟೆಂಡರ್ ಆಹ್ವಾನಿಸಲಾಗಿದೆ.<br>• ಟೆಂಡರ್ ಸಲ್ಲಿಸಲು ದಿನಾಂಕ: 23.09.2025 ರವರೆಗೆ ಅವಕಾಶ ನೀಡಲಾಗಿದೆ. ಸದರಿ ಟೆಂಡರ್‌ಗೆ ಪ್ರೀಬಿಡ್ ದಿನಾಂಕ: 04.08.2025 ರಂದು ನಡೆಸಲಾಗಿದ್ದು, ಹಲವಾರು ಸಂಸ್ಥೆಗಳಿಂದ ಭಾಗವಹಿಸುವಿಕೆ ಬಗ್ಗೆ ಆಸಕ್ತಿ ವ್ಯಕ್ತವಾಗಿರುತ್ತದೆ.<br>• ಟೆಂಡರ್ ಮೊತ್ತ ನಮೂದಿಸುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br>• ಭೂಸ್ವಾಧೀನ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br>• ಮರಗಳ ತೆರವು ಮತ್ತು ಸ್ಥಳಾಂತರದ ಬಗ್ಗೆ ಯೋಜನೆಯನ್ನು ರೂಪಿಸಲಾಗುತ್ತಿರುತ್ತದೆ.<br>• ಹುಡ್ಕೋ ಸಂಸ್ಥೆಯು ಈಗಾಗಲೇ ಸಾಲ ಮಂಜೂರಾತಿಯನ್ನು ನೀಡಿದ್ದು, ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br>• ಸಂಚಾರ ಬದಲಾವಣೆ ಮತ್ತು ಬದಲಿ ಮಾರ್ಗಯೋಜನೆ ರೂಪಿಸುವ ಕ್ರಮ ಜಾರಿಯಲ್ಲಿರುತ್ತದೆ.<br>• ಸುರಂಗ ಮಾರ್ಗ ನಿರ್ಮಾಣದಿಂದ ಹೊರಬರಬಹುದಾದ ತ್ಯಾಜ್ಯ ವಿಲೇವಾರಿ ಯೋಜನೆ ಜಾರಿಯಲ್ಲಿರುತ್ತದೆ. |

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಾನು ಕೇಳಿರುವ ಪ್ರಶ್ನೆಗೆ ಉಪ ಮುಖ್ಯಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ. ಉಪ ಮುಖ್ಯಮಂತ್ರಿಗಳು ಟನಲ್ ರಸ್ತೆಗೆ ಸಂಬಂಧಪಟ್ಟಂತೆ ಮಾತನಾಡುವ ಸಂದರ್ಭವೊಂದರಲ್ಲಿ ಇದನ್ನು 'It is a game changer' ಎಂಬುದಾಗಿ ಹೇಳಿದ್ದಾರೆ. ಹೀಗಾಗಿ ನಾನು ಅವರಿಗೆ ಕೇಳಬಯಸುವುದೇನೆಂದರೆ, ಸುರಂಗ ರಸ್ತೆಯು ದೀರ್ಘಾವಧಿಯಲ್ಲಿ ಸಂಚಾರ ದಟ್ಟಣೆಯ ಸಮಸ್ಯೆಯನ್ನು ಬಗೆಹರಿಸುವುದಿಲ್ಲ ಎಂಬ ಅಂಶವನ್ನು ಸಾರಿಗೆ ಸಂಸ್ಥೆಯ ಅಧ್ಯಯನಗಳು ತೋರಿಸುತ್ತವೆ. ಹೀಗಾಗಿ ಇದು game changer ಹೇಗೆ ಆಗುತ್ತದೆ ಎನ್ನುವುದನ್ನು ಉಪ ಮುಖ್ಯಮಂತ್ರಿಗಳು ಮನವರಿಕೆ ಮಾಡಿಕೊಡಬೇಕು. ಇದರ ವಿಸ್ತೃತ ಯೋಜನಾ ವರದಿ (Detailed Project Report) ಸಿದ್ಧಪಡಿಸಲು ಟೆಂಡರ್ ಕರೆದು ಮೆ॥ ರೋಡಿಕ್ ಕನ್ಸಲ್‌ಟೆಂಟ್ಸ್ ಪ್ರೈವೇಟ್ ಲಿಮಿಟೆಡ್, ನವದೆಹಲಿ ರವರಿಗೆ ವಹಿಸಲಾಗಿರುತ್ತದೆ. ಈ ಕಂಪೆನಿಯು ಈಗಾಗಲೇ ಬ್ಲ್ಯಾಕ್ ಲಿಸ್ಟ್‌ಗೆ ಸೇರಿದ ಕಂಪೆನಿಯಾಗಿರುತ್ತದೆ ಎಂಬ ಆರೋಪವಿದೆ. ನಮ್ಮ ಮೆಟ್ರೋದ ಡಿ.ಪಿ.ಆರ್. ವೆಚ್ಚ 1.6 ಕೋಟಿ ರೂಪಾಯಿಗಳು ಆಗಿದ್ದರೆ, ಇದರ ಡಿ.ಪಿ.ಆರ್. ವೆಚ್ಚ 9.5 ಕೋಟಿ ರೂಪಾಯಿಗಳು ಆಗಿರುತ್ತದೆ. ಅಂದರೆ ಒಟ್ಟು ಆರು ಪಟ್ಟು ಹೆಚ್ಚಳವಾಗಿರುತ್ತದೆ. ಇಷ್ಟೊಂದು ಹೆಚ್ಚಳ ಮೊತ್ತ ಏಕೆ ಆಯಿತು ಎಂದು

ನಾನು ಪ್ರಶ್ನಿಸಬಯಸುತ್ತೇನೆ. ಇದರ ನೂರಕ್ಕೂ ಹೆಚ್ಚು ಪುಟಗಳನ್ನು ನಮ್ಮ ಮೆಟ್ರೋದ ಭೂಗತ ಕಾರಿಡಾರ್ ವರದಿಯಿಂದ ನಕಲು ಮಾಡಲಾಗಿದೆ. ಹೀಗಾಗಿ ಇದು ಕಟ್ ಎಂಡ್ ಪೇಸ್ಟ್ ಮಾಡಿದ ಎಕ್ಸ್‌ಪರ್ಟ್ ಕೆಲಸವಾಗಿದೆ. ಇದರ ಕಾರ್ಯಸಾಧ್ಯತೆಯ ವರದಿಯನ್ನು ನಮ್ಮ ನೆರೆಯ ಮಹಾರಾಷ್ಟ್ರದ ರಾಜ್ಯದ ನಾಸಿಕ್ ಮತ್ತು ಮಾಲೇಗಾಂವ್ ಸಂಚಾರದ ದತ್ತಾಂಶಗಳನ್ನು ಬೆಂಗಳೂರು ಸುರಂಗ ರಸ್ತೆಯ ವರದಿಯಲ್ಲಿ ಉಲ್ಲೇಖಿಸಿದ್ದಾರೆ. ಈ ರೀತಿಯ ದೂರುಗಳು ಡಿ.ಪಿ.ಆರ್. ಸಿದ್ಧಪಡಿಸಿದ ಮೆ॥ ರೋಡಿಕ್ ಕನ್ಸಲ್‌ಟೆಂಟ್ಸ್ ಪ್ರೈವೇಟ್ ಲಿಮಿಟೆಡ್ ಕಂಪೆನಿಯ ಮೇಲೆ ಇವೆ. ಹೆಬ್ಬಾಳ-ಸಿಲ್ಕ್ ಬೋರ್ಡ್ ರಸ್ತೆಗೆ 18,500 ಕೋಟಿ ರೂಪಾಯಿಗಳ ಹಾಗೂ ನಾಯಂಡನಹಳ್ಳಿ ರಸ್ತೆಗೆ 28,000 ಕೋಟಿ ರೂಪಾಯಿಗಳ ವೆಚ್ಚವನ್ನು ಉಲ್ಲೇಖಿಸಲಾಗಿದೆ. ಮೇಲ್ಮೈ ರಸ್ತೆಗಳ ಸಂಚಾರ ದಟ್ಟಣೆಯನ್ನು ತಪ್ಪಿಸುವುದು ಈ ಟನಲ್ ರಸ್ತೆಯ ಉದ್ದೇಶ ಎಂಬುದಾಗಿ ಅದರಲ್ಲಿ ಉಲ್ಲೇಖಿಸಲಾಗಿದೆ. ಇಲ್ಲಿ ಕೇವಲ ಕಾರುಗಳು ಮಾತ್ರವೇ ಸಂಚರಿಸಿದರೆ, ಸಂಚಾರ ದಟ್ಟಣೆಯನ್ನು ಹೇಗೆ ಕಡಿಮೆ ಮಾಡಲು ಸಾಧ್ಯವಾಗುತ್ತದೆ ಎಂಬ ಅಂಶದ ಬಗ್ಗೆ ಉಪ ಮುಖ್ಯಮಂತ್ರಿಗಳು ತಿಳಿಸಬೇಕು. ಏಕೆಂದರೆ ಬೆಂಗಳೂರು ನಗರದಲ್ಲಿ ಒಟ್ಟು ಸುಮಾರು 1 ಕೋಟಿ 23 ಲಕ್ಷ ಸಂಖ್ಯೆಯಷ್ಟು ವಾಹನಗಳಿವೆ. ಪ್ರಯಾಣಿಕರು ಒಂದು ವರ್ಷಕ್ಕೆ ಒಟ್ಟು 117 ಗಂಟೆಗಳ ಕಾಲ ಸಂಚಾರ ದಟ್ಟಣೆಯಲ್ಲಿ ಸಿಕ್ಕಿಹಾಕಿಕೊಳ್ಳುತ್ತಾರೆ ಎಂಬುದಾಗಿ ಅಧ್ಯಯನದ ವರದಿಗಳು ತಿಳಿಸುತ್ತಿವೆ. ಹಾಲಿ ಇರುವ ಬೆಂಗಳೂರು ನಗರದ ಜನಸಂಖ್ಯೆಗೆ ಒಟ್ಟು 18 ಸಾವಿರ ಬಿ.ಎಂ.ಟಿ.ಸಿ. ಬಸ್ಸುಗಳ ಅವಶ್ಯಕತೆ ಇದೆ. ಆದರೆ, ಪ್ರಸ್ತುತ ಕೇವಲ 6,835 ಬಿ.ಎಂ.ಟಿ.ಸಿ. ಬಸ್ಸುಗಳು ಮಾತ್ರವೇ ಇವೆ. ಇಂತಹ ಪರಿಸ್ಥಿತಿ ಇದೆ. ವಿಮಾನ ನಿಲ್ದಾಣಕ್ಕೆ ಹೋಗಬೇಕಾದರೆ, 75 ಪ್ರತಿಶತ ಪ್ರಯಾಣಿಕರು ತಮ್ಮ ಸ್ವಂತ ಕಾರುಗಳನ್ನೇ ಬಳಸುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಸಂಚಾರ ದಟ್ಟಣೆಯನ್ನು ಸರ್ಕಾರವು ಹೇಗೆ ತಪ್ಪಿಸಬಹುದು ಎಂಬ ಅಂಶದ ಬಗ್ಗೆ ತಿಳಿಸಬೇಕು. ನಂತರದಲ್ಲಿ ನಾನು ಇನ್ನುಳಿದ ಪ್ರಶ್ನೆಗಳನ್ನು ಕೇಳುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್ (ಉಪಮುಖ್ಯಮಂತ್ರಿ):-** ಮಾನ್ಯ ಸಭಾಪತಿಯವರೆ, ಸದಸ್ಯರಾದ ಶ್ರೀ ಸಿ.ಟಿ.ರವಿಯವರು ಬಹಳ ಪ್ರಮುಖವಾದ ಪ್ರಶ್ನೆಯನ್ನು ಕೇಳಿದ್ದಾರೆ. ಇದು ಬಹಳ ಸಂತೋಷದ ವಿಚಾರವಾಗಿದೆ. ಅವರು ಬಹಳ ಚೆನ್ನಾಗಿ ಹೋಂ ವರ್ಕ್ ಅನ್ನೂ ಸಹ ಮಾಡಿಕೊಂಡು ಬಂದಿದ್ದಾರೆ. ಬೆಂಗಳೂರು ನಗರದಲ್ಲಿ ಒಟ್ಟು 1 ಕೋಟಿ 23 ಲಕ್ಷ ಸಂಖ್ಯೆಯಷ್ಟು ವಾಹನಗಳಿವೆ ಎಂಬ ಅಂಶವನ್ನು ಅವರು ತಿಳಿಸಿದ್ದಾರೆ. ಇಷ್ಟು ಸಂಖ್ಯೆಯ ವಾಹನಗಳು ನೋಂದಣಿಗೊಳ್ಳುತ್ತಿವೆ. ಇದು ಅಧಿಕೃತ ಅಂಕಿ ಅಂಶವಾಗಿದೆ. ಪ್ರತಿ ದಿನ ಸುಮಾರು 40 ಲಕ್ಷ ಸಂಖ್ಯೆಯ ವಾಹನಗಳು ಬೆಂಗಳೂರು ನಗರದಿಂದ ಹೊರಗಡೆ ಹೋಗುತ್ತಿವೆ. ಇದರ ವಿಚಾರವಾಗಿ ನಾನು ಸಂಚಾರಿ ವಿಭಾಗದವರೊಂದಿಗೆ ಮಾತನಾಡುತ್ತಿದ್ದೆನು. ಇವರುಗಳು ಕ್ಯಾಮೆರಾಗಳನ್ನು ಇಟ್ಟುಕೊಂಡು ವಾಹನಗಳ ಸಂಚಾರದ ಲೆಕ್ಕವನ್ನು ಇಟ್ಟುಕೊಂಡಿದ್ದಾರೆ. 25 ವರ್ಷಗಳ ಹಿಂದೆ ನಾನು ನಗರಾಭಿವೃದ್ಧಿ ಸಚಿವನಾಗಿದ್ದೆನು. ಆಗ ಬೆಂಗಳೂರು ನಗರದ ಜನಸಂಖ್ಯೆ 70 ಲಕ್ಷದಷ್ಟು ಇತ್ತು. ಆದರೆ, ಈಗ ನಗರದ ಜನಸಂಖ್ಯೆ 1 ಕೋಟಿ 40 ಲಕ್ಷದಷ್ಟು ಆಗಿದೆ. ಬೆಂಗಳೂರು ನಗರಕ್ಕೆ ಬಂದವರು ಯಾರೂ ಸಹ ಇಲ್ಲಿಂದ ವಾಪಸ್ಸು ಹೋಗುತ್ತಿಲ್ಲ. ಮುಖ್ಯಮಂತ್ರಿಗಳು, ನಾನು

ಹಾಗೂ ಸದಸ್ಯರು ಆದಿಯಾಗಿ ಯಾರೂ ಸಹ ಬೆಂಗಳೂರಿನಿಂದ ವಾಪಸ್ಸು ಹೋಗುತ್ತಿಲ್ಲ; ಬೆಂಗಳೂರಿನಲ್ಲಿಯೇ ಸೇರಿಕೊಂಡಿದ್ದೇವೆ. ಇದಕ್ಕೆ ಏನೂ ಮಾಡುವುದಕ್ಕಾಗುವುದಿಲ್ಲ. ಇಲ್ಲಿನ ಹವಾಮಾನ, ವಾತಾವರಣ ಹಾಗೂ ಸಂಸ್ಕೃತಿಗಳು ಪೂರಕವಾಗಿವೆ. ಇತ್ತೀಚೆಗೆ ದೇಶದ ಪ್ರಧಾನ ಮಂತ್ರಿಗಳು ನಮ್ಮ ಬೆಂಗಳೂರು ನಗರಕ್ಕೆ ಭೇಟಿ ನೀಡಿದ್ದರು. ಆ ಸಂದರ್ಭದಲ್ಲಿ ಶ್ರೀ ಸಿ.ಟಿ. ರವಿಯವರು ನನಗೆ ಎಲ್ಲಿಯೂ ಸಹ ಕಾಣಿಸಿರುವುದಿಲ್ಲ. ಬೆಂಗಳೂರು ನಗರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಪ್ರಧಾನ ಮಂತ್ರಿಗಳು “ಇಡೀ ಭಾರತ ದೇಶವನ್ನು ಬೆಂಗಳೂರು ನಗರದ ಮುಖಾಂತರ ನೋಡಲಾಗುತ್ತಿದೆ” ಎನ್ನುವ ಮಾತನ್ನು ಅವರು ಹೇಳಿದರು. ಬೆಂಗಳೂರು ನಗರದಲ್ಲಿ ಏನೇನು ಅಭಿವೃದ್ಧಿ ಕಾರ್ಯಗಳಾಗುತ್ತಿವೆ ಹಾಗೂ ಮುಂದಿನ ದಿನಗಳಲ್ಲಿ ಏನೇನು ಆಗಬೇಕು ಎನ್ನುವುದರ ಬಗ್ಗೆಯೂ ಸಹ ಅವರು ಪ್ರಸ್ತಾಪಿಸಿದರು. ಮುಂದುವರೆದು, ಬೆಂಗಳೂರು ನಗರವನ್ನು ಅವರು “ಗ್ಲೋಬಲ್ ಸಿಟಿ” ಎಂಬುದಾಗಿ ಉಲ್ಲೇಖಿಸಿದರು. ಈ ಹಿಂದೆ ಮಾಜಿ ಪ್ರಧಾನ ಮಂತ್ರಿಗಳಾದ ದಿವಂಗತ ಅಟಲ್ ಬಿಹಾರಿ ವಾಜಪೇಯಿರವರೂ ಸಹ ಈ ಮಾತನ್ನು ಹೇಳಿದ್ದರು. ಹಾಲಿ ಪ್ರಧಾನ ಮಂತ್ರಿಗಳು ಈ ಮಾತನ್ನೇ ಪುನಃ ದೃಢೀಕರಿಸಿದರು. ಇದನ್ನು ಕೇವಲ ಕಾಂಗ್ರೆಸ್ ಪಕ್ಷವು ಮಾಡಿದೆ ಎಂದು ನಾನು ಹೇಳುವುದಿಲ್ಲ. ಎಲ್ಲಾ ರಾಜಕೀಯ ಪಕ್ಷಗಳು ಸೇರಿಕೊಂಡು ಇದನ್ನು ಮಾಡಿದ್ದಾರೆ. ಬೆಂಗಳೂರು ನಗರದಲ್ಲಿ ವಿದ್ಯಾವಂತರು, ಬುದ್ಧಿವಂತರು ಮತ್ತು ಪ್ರಜ್ಞಾವಂತರು ಇದ್ದಾರೆ. ಇಲ್ಲಿನ ಮೂಲಭೂತ ಶಿಕ್ಷಣ, ತಂತ್ರಜ್ಞಾನ ಮತ್ತಿತರೆ ಎಲ್ಲಾ ಅಂಶಗಳು ಇದಕ್ಕೆ ಕಾರಣವಾಗಿವೆ. ಇಲ್ಲಿನ ಹವಾಗುಣವೂ ಸಹ ಇದಕ್ಕೆ ಪೂರಕವಾಗಿದೆ. ಹೀಗಾಗಿ ಜನರು ಬೆಂಗಳೂರು ನಗರಕ್ಕೆ ಬರುತ್ತಲೇ ಇದ್ದಾರೆ. ಹೀಗಾಗಿ ಪ್ರತಿ ವರ್ಷವೂ ಸಹ ಜನಸಂಖ್ಯೆಯು ಹೆಚ್ಚುತ್ತಲೇ ಇದೆ. ಸುಮ್ಮನೆ ಹೇಳುವುದಾದರೆ, ಸುಮಾರು 25 ಲಕ್ಷ ಐ.ಡಿ.ಪ್ರೋಫೆಷನಲ್ಸ್ ಹಾಗೂ ಇಂಜಿನಿಯರ್‌ಗಳು ಬೆಂಗಳೂರು ನಗರದಲ್ಲಿ ಇದ್ದಾರೆ.

(ಮುಂದು)

(705) 14-08-2025 11.40 bkp-md

**ಶ್ರೀ ಡಿ.ಕೆ. ಶಿವಕುಮಾರ್(ಮುಂದು..)**

ಸುಮ್ಮನೆ ಹೇಳುವುದಾದರೆ, ಸುಮಾರು 25 ಲಕ್ಷ IT professionals ಬೆಂಗಳೂರು ನಗರದಲ್ಲಿದ್ದಾರೆ. ಅದೇ ಕ್ಯಾಲಿಫೋರ್ನಿಯಾದಲ್ಲಿ ಬರಿ 13 ಲಕ್ಷ ಜನರು ಇದ್ದಾರೆ. ಅಂದರೆ, ಬರಿ IT Sector ದಲ್ಲಿ ಇಷ್ಟು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಅಂದರೆ, IT professionals ಇರುವ ಬೆಂಗಳೂರನ್ನು “Silicon Valley” ಎಂದು ನಾವು ಏನು ಕರೆಯುತ್ತೇವೆ. ಇದು ಎಲ್ಲದಕ್ಕೂ ಇದೆ. ಇನ್ನು ಹೆಚ್ಚಾಗಿ ಬೆಂಗಳೂರಿನ ಬಗ್ಗೆ ಪ್ರಶಂಸಿಸಿ ಹೇಳಬೇಕಾಗಿಲ್ಲ. ಇಲ್ಲಿರುವ ದೊಡ್ಡ ಸಮಸ್ಯೆ ಏನೆಂದರೆ, ನಮ್ಮ ನವದೆಹಲಿಯ ರೀತಿಯಲ್ಲಿ ಅಂದರೆ ನಾನು ಹಳೆ ದೆಹಲಿಯ ಬಗ್ಗೆ ಮಾತನಾಡುತ್ತಿಲ್ಲ. It is not planned city. ಕೆಂಪೇಗೌಡರು ಈ ವಿಚಾರದಲ್ಲಿ ಕೆಲಸ ಮಾಡಿದರು. ರಸ್ತೆ ಸಮಸ್ಯೆ ಏನೆಂದರೆ, ರಸ್ತೆಗಳು ಇರುವಷ್ಟೆ ಇದೆ, ವಾಹನಗಳು ಜಾಸ್ತಿಯಾದವು ಜನರಿಗೆ 6-7 ಗಂಟೆಗೆ 10. ಕಿ.ಮೀ

ಮೇಲೆ ನಾವು ಗಾಡಿ ಓಡಿಸಲಿಕ್ಕೆ ಆಗುವುದಿಲ್ಲ. ಅಂತಹ ಟ್ರಾಫಿಕ್ ಪರಿಸ್ಥಿತಿ ಇದೆ. ಏನಪ್ಪಾ, ನಾನು ಅಲ್ಲಿಂದ ಇಲ್ಲಿಗೆ ಬರಬೇಕಾದರೆ ಒಂದೂವರೆ-ಎರಡು ಮತ್ತು ಮೂರು ಗಂಟೆಯಾಗುತ್ತದೆ ಎಂದು ಹೇಳಿ ನನ್ನ ಮನೆಯ ಮಕ್ಕಳೇ ನನಗೆ ಮನೆಯಲ್ಲಿ ಪ್ರತಿದಿನ ಬಾಯಿಗೆ ಬಂದಂತೆ ಬಯ್ಯುತ್ತಾರೆ. ಇಂತಹ ಪರಿಸ್ಥಿತಿ ಇದೆ. ನಾವು ಈಗ 2013ರಲ್ಲಿ The Right to Fair Compensation and Transparency in Land Acquisition, Rehabilitation and Resettlement Act, 2013 ವಿಚಾರವಾಗಿ ತೀರ್ಪು ಬಂದ ಮೇಲೆ, fair compensation ಕೊಡಬೇಕಾದರೆ ಈಗ ಎಲ್ಲಾ ಆಸ್ತಿಯ ಬೆಲೆ ಯಾವ ಮುಖ್ಯ ರಸ್ತೆಯನ್ನು ತೆಗೆದುಕೊಂಡರೂ ಸಹಿತ ಒಂದು ಅಡಿ ಸುತ್ತಳತೆಗೆ 10,000 ರೂಪಾಯಿಗಳಿಗಿಂತ ಕಡಿಮೆ ಎಲ್ಲಿಯೂ ಇರುವುದಿಲ್ಲ. ಕೆಲವು ಕಡೆ 20,000 ರೂಪಾಯಿಗಳಿದೆ, ಮತ್ತೆ ಕೆಲವು ಕಡೆ 30,000 ರೂಪಾಯಿಗಳಿದೆ. ಅದಕ್ಕೆ double ಬೆಲೆ ಕೊಡಬೇಕಾಗುತ್ತದೆ. ಬಿಲ್ಡಿಂಗ್‌ಗೂ ಸಹ ಪರಿಹಾರವನ್ನು ಕೊಡಬೇಕಾಗುತ್ತದೆ. ಯಾವ ಸರ್ಕಾರವೂ ಸಹ ಆ ರೀತಿಯ ಪರಿಹಾರವನ್ನು ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಹಿಂದೆ, ನಾನು ಇಲ್ಲಿಯೇ TDR (Transferable Development Rights) rule ಅನ್ನು ತೆಗೆದುಕೊಂಡು ಬಂದಿರುತ್ತೇನೆ. ಈ ಬಗ್ಗೆ ನಾನು ಬಾಂಬೆಗೆ ಹೋಗಿ ನೋಡಿಕೊಂಡು ಬಂದು ಇಲ್ಲಿ TDR rule ಅನ್ನು ತೆಗೆದುಕೊಂಡು ಬಂದಿರುತ್ತೇನೆ. ಆಗಲೂ ಸಹ ಬೇಕಾದಷ್ಟು ಹೆಚ್ಚು ಕಡಿಮೆಯಾಯಿತು. ಯಾರು ಸಹ ಮುಖ್ಯ ರಸ್ತೆಯಲ್ಲಿರುವಂತಹ ತಮ್ಮ ಆಸ್ತಿಯನ್ನು ಹೊಡೆದುಕೊಂಡು ಹೋಗಲಿಕ್ಕೆ ಬಿಡಲಿಲ್ಲ. ಎಲ್ಲವೂ ಸಹ ಕೋರ್ಟ್‌ನಲ್ಲಿ litigation ಆಯಿತು. ಆದರೆ, ಮೆಟ್ರೋ ವ್ಯವಸ್ಥೆಗೆ ಸಂಬಂಧಪಟ್ಟಂತೆ ಸ್ವಲ್ಪ ಯಶಸ್ವಿಯಾಗಿದೆ. So, road widening is impossible. ಎಲ್ಲೆಲ್ಲಿ Peripheral Ring Road ಮಾಡಲಿಕ್ಕೆ ಸಾಧ್ಯವೋ ಮತ್ತು ಫ್ಲೈಓವರ್ ಮಾಡಲಿಕ್ಕೆ ಸಾಧ್ಯವೋ ಅಲ್ಲಿ ಒಂದಿಷ್ಟು ಭೂಮಿ ಬೆಂಗಳೂರಿನಲ್ಲಿ ಒತ್ತುವರಿ ಮಾಡಿಬಿಟ್ಟಿದ್ದಾರೆ. ಈ ಮಧ್ಯೆ ಮೆಟ್ರೋ ವ್ಯವಸ್ಥೆ ಬಂದು ಬಿಟ್ಟಿತು. ಮೆಟ್ರೋದಿಂದ ಈ ಒಂದು ಟ್ರಾಫಿಕ್ ಸಮಸ್ಯೆ ಕಡಿಮೆಯಾಗುತ್ತದೆ ಎಂದು ಹೇಳಿ ಮೆಟ್ರೋ ಲೈನ್ ಹಾಕಿ ಬಿಟ್ಟಿದ್ದಾರೆ. ಆ ಮೆಟ್ರೋ ಲೈನ್ ಹಾಕಿದ ಮೇಲೆ ಅಲ್ಲಿ ಮೆಟ್ರೋ ಹಾಕಿದಂತ ಕಡೆ ನಾವು ಹೊಸದಾಗಿ ಫ್ಲೈಓವರ್ ಮಾಡಲಿಕ್ಕೆ ಆಗುತ್ತಿಲ್ಲ. It is not possible. ನಾನು ಎಲ್ಲವನ್ನು ನೋಡಿದ್ದೇನೆ, Feasibility ನೋಡಿದ್ದೇನೆ. ನಾನು ಈ ಬಗ್ಗೆ ಪೂನಾಕ್ಕೆ ಮತ್ತು ಮತ್ತೊಂದು ಕಡೆ ಹೋಗಿ ನೋಡಿಕೊಂಡು ಬಂದಿದ್ದೇನೆ. ನಮ್ಮ ಕೇಂದ್ರ ಸರ್ಕಾರದ ಹೈವೇ ಮಿನಿಸ್ಟರ್ ಆದ ನಮ್ಮ ಶ್ರೀ ಗಡ್ಕರಿ ಸಾಹೇಬರು ಅಲ್ಲೊಂದು Double-Decker Flyover model ಮಾಡಿದ್ದಾರೆ. ಅದನ್ನು ನಾನು ನೋಡಿಕೊಂಡು ಬಂದೆ. ಶ್ರೀ ರಾಮಲಿಂಗಾರೆಡ್ಡಿಯವರು ನಮ್ಮ ಬೆಂಗಳೂರು ನಗರ ಮಿನಿಸ್ಟರ್ ಇದ್ದಂತಹ ಸಂದರ್ಭದಲ್ಲಿ ಅವರು ರಾಗಿಗುಡ್ಡದಿಂದ ಸಿಲ್ಕ್ ಬೋರ್ಡ್‌ವರೆಗೂ ಒಂದು ವ್ಯವಸ್ಥೆಯನ್ನು trial basis ಆಗಿ ಮಾಡಿದ್ದಾರೆ. It is a very unique project. ಮೊನ್ನೆ ಅದನ್ನು ನಾನು ಪ್ರಧಾನ ಮಂತ್ರಿಗಳಿಗೂ ತೋರಿಸಿದ್ದೇನೆ. He was very happy. ಡಿ.ಕೆ. ನೀವು ಒಳ್ಳೆಯ ಕೆಲಸ ಮಾಡಿದ್ದೀರಿ, ಇದನ್ನು ಮುಂದುವರಿಸಿ ಎಂದು ಹೇಳುತ್ತಾ, ಅದರ ಮೇಲೆ ಸೋಲಾರ್ ಬರಬೇಕೆಂದು ಹೇಳಿದರು. ಆ ಸಂದರ್ಭದಲ್ಲಿ

ನಮ್ಮ ಮುಖ್ಯಮಂತ್ರಿಗಳು, ಮಾನ್ಯ ಶ್ರೀ ವಿ. ಸೋಮಣ್ಣನವರು ಸಹ ಇದ್ದರು. ಅವರ ಎದುರುಗಡೆಯೇ ನಾನು ಅವರಿಗೆ ಹೇಳಿದೆ. ಕೇಂದ್ರ ಸಚಿವರಾದ ಶ್ರೀಮತಿ ಶೋಭಾ ಕರಂದ್ಲಾಜೆಯವರು ಸಹ ಇದು ಒಂದು ಒಳ್ಳೆಯ ಕೆಲಸ ಎಂದು ಹೇಳಿ, ಮುಂದುವರಿಸಿ ಎಂದವರು ಹೇಳಿದರು. ಈಗ ಅದನ್ನು ನಿಲ್ಲಿಸಬೇಕೆಂದು ಹೇಳಿ, for the first time I have taken a decision for Bengaluru. 44 ಕಿ.ಮೀ ಆ ರೀತಿಯ Double-Decker Flyover ಮಾಡಿ ಅದರ ಮೇಲೆ Metro Train ಹೋಗಬೇಕೆಂದು ತೀರ್ಮಾನ ಮಾಡಲಾಗಿದೆ. ಬೆಂಗಳೂರು ನಗರದಲ್ಲಿ ಈ ರೀತಿಯ ವ್ಯವಸ್ಥೆಯನ್ನು ಮಾಡಲಾಗಿದೆ. ಏಕೆಂದರೆ, ಬೆಂಗಳೂರು ನಗರದಲ್ಲಿ ಜಾಗ ಇರುವುದಿಲ್ಲ. ಅದಕ್ಕೆ ತಗಲುವ ವೆಚ್ಚವನ್ನು ಯಾರು ಕೊಡುತ್ತಾರೆನ್ನುವ ಒಂದು ಪ್ರಶ್ನೆಯಾಗಿದೆ. ಹೀಗಾಗಿ, ನಮ್ಮ ಬಿ.ಬಿ.ಎಂ.ಪಿ.ಗೂ BMRCL (Bangalore Metro Rail Corporation Limited) ಗೂ ನ್ಯಾಯ ಪಂಚಾಯಿತಿ ಮಾಡಿ ರಾಜಿ ಮಾಡಿ ನೀವು ಅರ್ಧ, ಅವರು ಅರ್ಧ ಹಣವನ್ನು ಎಂದು ಹೇಳಿ ಇದನ್ನು ತೀರ್ಮಾನ ಮಾಡಿದ್ದೇವೆ. ಅದಕ್ಕೆ ಎಲ್ಲರೂ ಒಪ್ಪಿಕೊಂಡಿದ್ದೇವೆ. ಬಹುತೇಕ 44 ಕಿ.ಮೀ we are working on that issue. ನಮ್ಮ ಹತ್ತಿರ Elevated Corridor ಎನ್ನುವುದು ಇದೆ. ಎಲ್ಲಾ ಕಡೆ ಹುಡುಕಿದ್ದೇನೆ. 113 ಕಿ.ಮೀ ನಷ್ಟು Elevated Corridor ಗೆ DPR (Detailed Project Report) ಮಾಡಿ ಟೆಂಡರ್ ಕರೆಯಲಿಕ್ಕೆ ಸಿದ್ಧತೆಯನ್ನು ಮಾಡಿಕೊಂಡಿದ್ದೇವೆ. Next option ಏನೆಂದರೆ, ಏರ್ಪೋರ್ಟ್‌ನಿಂದ ಬರಬೇಕಾದರೆ ಸಮಯ ಆಗುತ್ತದೆ, ಅದಕ್ಕೆ ಬೇರೆ ಕಡೆಯಿಂದ ಬರುವುದಕ್ಕೆ ಬೇರೆ options ಇರುವುದಿಲ್ಲ. ನಾನು ಬೇಕಾದಷ್ಟು ದೇಶಗಳಿಗೆ ಹೋಗಿದ್ದೇನೆ, ಎಲ್ಲವನ್ನು ನೋಡಿದ್ದೇನೆ. ವಿಧಿ ಇಲ್ಲದೇ, ತಲೆಯಲ್ಲಿ ಒಂದೇ ಒಂದು option ಇದೆ. ನಾನು ಮಾನ್ಯ ಶ್ರೀ ಗಡ್ಕರಿಯವರಿಗೆ ಈ ವಿಚಾರವಾಗಿ ಮಾತನಾಡಿದೆ. ಏನು ಮಾಡುವುದು? ನೀವು ನೆಲಮಂಗಲದಿಂದ ಫ್ಲೈಓವರ್‌ಗೆ ಬರೆದುಕೊಟ್ಟಿದ್ದೀರಿ, ಈ ಕಡೆ ಎಲೆಕ್ಟ್ರಾನಿಕ್ ಸಿಟಿಯಿಂದ ಒಂದು ಫ್ಲೈಓವರ್ ಮಾಡಿದ್ದೀರಿ, ಏರ್‌ಪೋರ್ಟ್‌ನಿಂದ ಒಂದು ಫ್ಲೈಓವರ್ ಮಾಡಿದ್ದೀರಿ. All National Highways ಗಳ ಮೂಲಕ ಬೆಂಗಳೂರು ನಗರದೊಳಗೆ ವಾಹನಗಳು ಬರುತ್ತವೆ. ಅದನ್ನು ನೀವೇ takeover ಮಾಡಬೇಕೆಂದು, ಇದಕ್ಕೆ ನೀವೇ ಉತ್ತರ ಕೊಡಬೇಕೆಂದು ಹೇಳಿದೆ. ಈ ಸಂಬಂಧ ನಾನು ಮತ್ತು ಮಾನ್ಯ ಮುಖ್ಯಮಂತ್ರಿಗಳು ಹೋಗಿದ್ದೆವು. ಅದಕ್ಕೆ ಅವರು ಇದಕ್ಕೆ ಏನೂ ಆಗುವುದಿಲ್ಲ. ಇದಕ್ಕೆ ಒಂದೇ ಒಂದು ಬದಲಿ ವ್ಯವಸ್ಥೆಗೆ ಮುಂಬೈಗೆ ಹೋಗಿ ಬನ್ನಿ ಎಂದು ನಮಗೆ ಹೇಳಿದರು. ಮುಂಬೈಗೆ ಹೋಗಿ ನೋಡಿದೆ. ಅಲ್ಲಿ L & T company ಯವರು 5-6 ಕಡೆ tunnel ಕೆಲಸವನ್ನು ಶುರು ಮಾಡಿದ್ದಾರೆ. ಕಾರ್ಪೋರೇಷನ್‌ನವರು ಶುರು ಮಾಡಿದ್ದಾರೆ. ಅವರು ಏನೇನು ಮಾಡಿದ್ದಾರೆ, ಅದನ್ನು ನಾನು ನೋಡಿಕೊಂಡು ಬಂದಿದ್ದೇನೆ. ಮತ್ತೆ, ಬೇರೆ ಬೇರೆ ಕಡೆ ಏನೇನು ಆಗಿದೆ, ಅದೆಲ್ಲವನ್ನು ನೋಡಿಕೊಂಡು ಬಂದಿದ್ದೇನೆ. ಇತ್ತೀಚೆಗೆ ಬೇರೆ ಯಾವುದೋ ಒಂದು ದೇಶಕ್ಕೆ ಹೋಗಿ ಬಂದಿದ್ದೇನೆ. ಅಂದರೆ ಇಸ್ರೇಲ್‌ಗೆ ಹೋಗಿ ನೋಡಿಕೊಂಡು ಬಂದಿದ್ದೇನೆ.

**ಶ್ರೀ ಶರವಣ.ಟಿಎ.(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಾವು ಬೋಸ್ಟನ್, ಅಮೇರಿಕಾ, ವಾಸಿಂಗ್‌ಟನ್ ಎಲ್ಲಾ ಕಡೆ ಹೋದಾಗ, ಅಲ್ಲಿನ ರಸ್ತೆಗಳನ್ನು ನೋಡಿದಂತಹ ಸಂದದರ್ಭದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳನ್ನು ನಾವೆಲ್ಲರೂ ನೆನಪು ಮಾಡಿಕೊಂಡಿದ್ದೇವೆ. ಈ ರೀತಿ ಮಾಡಿದರೆ ಹೇಗೆ ಇರುತ್ತದೆ ಎಂದು ಹೇಳಿ ನೆನಪು ಮಾಡಿಕೊಂಡೆವು.

**ಶ್ರೀ ಡಿ.ಕೆ. ಶಿವಕುಮಾರ್:-** ಬಹಳ ಸಂತೋಷ. ಅದೇ ಕೆಲಸವನ್ನು ನಾವು ಸಹ ಮಾಡುತ್ತಿದ್ದೇವೆ. ನಿಮ್ಮ ಬಯಕೆಯಂತೆ, ನಿಮ್ಮ ಆಸೆಯಂತೆ ನಿಮ್ಮ ಆಶೀರ್ವಾದದಂತೆ ನಾವು ಈ ಒಂದು ಕೆಲಸವನ್ನು ಮಾಡುತ್ತಿದ್ದೇವೆ. ಈಗ ಬೇರೆ options ಇರುವುದಿಲ್ಲ. ಅದಕ್ಕೆ ನಾನು tunnel road ಮಾಡಬೇಕೆಂದು ತೀರ್ಮಾನ ಮಾಡಿ ಈ ವಿಚಾರವನ್ನು ಕ್ಯಾಬಿನೆಟ್‌ನಲ್ಲಿಟ್ಟು ತೀರ್ಮಾನಿಸಿದ್ದೇವೆ. ಒಂದೆರಡು ದಿನಗಳಿಂದ ಈ ಕೆಲಸವನ್ನು ಮಾತ್ರ ಮಾಡುತ್ತಿಲ್ಲ. ಇದರ ಬಗ್ಗೆ ಒಂದು ವರ್ಷ, ಆರು ತಿಂಗಳುಗಳಿಂದ ಇದರ ಬಗ್ಗೆ research ಮಾಡಿದ್ದೇವೆ. Cost ಬಗ್ಗೆ research ಮಾಡಿದ್ದೇವೆ. ಈ ನಿಟ್ಟಿನಲ್ಲಿ ಕೆಲಸ ಮಾಡಲು ಈಗ ಚೈನಾದಿಂದ machines ತರಲಿಕ್ಕೆ ಬಿಡುತ್ತಿಲ್ಲ. ಈಗ ಬೆಂಗಳೂರಿನಲ್ಲಿ ನಡೆಯುತ್ತಿದೆ. ನನ್ನ ಸ್ನೇಹಿತರಾದ ಶ್ರೀಯುತ ಸಿ.ಟಿ. ರವಿಯವರು metro tunnel ದ್ದು ಕಡಿಮೆ ಬೆಲೆ ಇದೆ, ಇದರದ್ದು ಜಾಸ್ತಿ ಇದೆ ಎಂದು ಹೇಳಿದರು. ಅದು ಅಂದಿನ ಕಾಲದಲ್ಲಿ ಅದನ್ನು ಮಾಡಿದ್ದಾರೆ, ನಾನು ಇಲ್ಲವೆಂದು ಹೇಳುತ್ತಿಲ್ಲ. That is very small diameter, and the road tunnel is very big diameter. This is Twin Tube Tunnel Road. ಇದು cut and cover ಆಗಿರುವುದಿಲ್ಲ. ಅದನ್ನು ಮಾಡಬೇಕಾದರೆ cut and cover ಎಲ್ಲವೂ ಇದ್ದು, ಆ Detailed Project Report ಮಾಡುವಂತಹ ಸಂದರ್ಭದಲ್ಲಿ ಇದೇ ಬೇರೆ. ಅದು ಒಳಗಡೆ safe route ಇದ್ದು, ಅದು ಒಳಗಡೆ ಜಾಸ್ತಿ ಬೇರೆ ಇರಲಿಲ್ಲ. ಇದು ಬಹಳ ಬಿಲ್ಡಿಂಗ್ ಕೆಳಗಡೆಯೇ ಅಂದರೆ, ಇದನ್ನು ವಿಧಾನಸೌಧದ ಕೆಳಗಡೆಯೇ ತೆಗೆದುಕೊಂಡು ಹೋಗಬೇಕಾಗಿದ್ದು, ಇದನ್ನು ರೋಡ್ ಕೆಳಗಡೆ ತೆಗೆದುಕೊಂಡು ಹೋಗಲಿಕ್ಕೆ ಆಗುವುದಿಲ್ಲ. ರೋಡ್‌ನಲ್ಲಿ ತೆಗೆದುಕೊಂಡು ಹೋದರೆ ಕೆಲಸವನ್ನು ರೋಡ್‌ನಲ್ಲಿಯೇ ನಿಲ್ಲಿಸಬೇಕಾಗುತ್ತದೆ. ಎಲ್ಲವನ್ನು ಬಿಲ್ಡಿಂಗ್ ಕೆಳಗಡೆಯೇ ತೆಗೆದುಕೊಂಡು ಹೋಗಬೇಕು. ಹೋಗಬೇಕಾದರೆ, ಪ್ರತಿಯೊಂದು ಮೀಟರ್‌ಗೂ ಕೂಡ ಲಿಂಕ್‌ಗೆ ಹಾಕಿಕೊಂಡು safety create ಮಾಡಿಕೊಂಡು ಅದನ್ನು ಮಾಡಬೇಕಾಗುತ್ತದೆ. ಇದಲ್ಲದೆ, ಇಲ್ಲಿ ಇರುವಂತಹ silt ಇತ್ಯಾದಿಯಾಗಿ ಎಲ್ಲಿಯಾದರೂ ಹಾಕಬೇಕೆಂದರೆ ಅದನ್ನು ಎಲ್ಲಿ ಹಾಕಬೇಕೆನ್ನುವುದನ್ನು ಸಹ ತೀರ್ಮಾನ ಮಾಡಬೇಕಾಗಿದೆ. ಇದೆಲ್ಲವೂ ಕೂಡ highly technical issue ಇರುವುದರಿಂದ, ಇದನ್ನು Boston Institute of Analytics and the Big Dig ನವರ ಜೊತೆಗೆ ಕೂಡ ನಾವು ಇದನ್ನು ತೆಗೆದುಕೊಂಡು ಹೋಗಿ International Level ನಲ್ಲಿ ಜೊತೆಗೆ National Level ನಲ್ಲಿ ಎಲ್ಲೆಲ್ಲಿ ಈ ಕೆಲಸ ನಡೆಯುತ್ತಿದೆ, ಅವರ ಜೊತೆ ಚರ್ಚೆ ಮಾಡಿಕೊಂಡು ಇದರ ಬಗ್ಗೆ ಒಂದು ತೀರ್ಮಾನ ಮಾಡಿದ್ದೇವೆ. ಇದಕ್ಕೆ ನಾವು traffic survey ಯನ್ನು ಕೂಡ ಮಾಡಿದ್ದೇವೆ. ಬೇರೆ options ಇರುವುದಿಲ್ಲ. This is the only option. ಅದಕ್ಕೆ ಇಲ್ಲಿ ಏನು ನಮ್ಮ ಏರ್‌ಪೋರ್ಟ್‌ನಿಂದ

ಬರಬೇಕಾದರೆ ಮತ್ತು ಇಲ್ಲಿಗೆ ಬರಬೇಕಾದರೆ ಹೆಚ್ಚು ಕಡಿಮೆ ಬಹುತೇಕ 45 ನಿಮಿಷಗಳಾಗುತ್ತದೆ. ಏರ್‌ಪೋರ್ಟ್‌ನಿಂದ ಅಲ್ಲ, ಹೆಬ್ಬಾಳನಿಂದ ಇಲ್ಲಿಗೆ ಬರಬೇಕಾದರೆ 45 ನಿಮಿಷಗಳಾಗುತ್ತದೆ. ಈ ಬಗ್ಗೆ ನ್ಯಾಯಾಧೀಶರುಗಳೆಲ್ಲರೂ ಪೋನ್ ಮಾಡಿ ಬಾಯಿಗೆ ಬಂದಂತೆ ಹೇಳುತ್ತಿದ್ದಾರೆ. ನಮ್ಮ ಅಧಿಕಾರಿಗಳಗೂ ಸಹ ಪೋನ್ ಮಾಡಿ ಹೇಳುತ್ತಿದ್ದಾರೆ. ಏಕೆಂದರೆ, ಅಲ್ಲಿಂದ ಬರುವ ಮಾರ್ಗದಲ್ಲಿ ನ್ಯಾಯಾಧೀಶರುಗಳ ಚಿಕ್ಕ ಕ್ವಾಟರ್ಸ್‌ಗಳಿದ್ದು, ಅಲ್ಲಿಂದ ಅವರುಗಳು ಬರುತ್ತಾರೆ. ಈ ರೀತಿಯ ಸಮಸ್ಯೆ ಇದೆ. I can understand the problem. ಜೊತೆಗೆ ಸಾಮಾನ್ಯ ಜನರಿಗೂ ಸಹ ಬೇಕಾದಷ್ಟು ಸಮಸ್ಯೆ ಇದೆ. ಅದಕ್ಕೋಸ್ಕರ ನಾವು ಅದಕ್ಕೆ ಬದಲಿ ವ್ಯವಸ್ಥೆಗೆ ಒಂದೂವರೆ ಕಿ.ಮೀ ನಷ್ಟು ರಸ್ತೆಯನ್ನು ನಾವು ಸಿದ್ಧ ಮಾಡಿದ್ದೇವೆ. ಇದರ ಬಗ್ಗೆ ದೀರ್ಘವಾಗಿ ಮಾತನಾಡಿ ಸರ್ಕಾರದ ವತಿಯಿಂದ ಇದನ್ನು BOT (Build Operate Transfer) model. ನಾನು ಇದನ್ನು Hamad model ಮಾಡಬೇಕೆಂದು ಇದ್ದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು "ಬೇಡ ಕಣಯ್ಯ, International Tender ಕರೆದು BOOT (Build-Own-Operate-Transfer) model ಮಾಡು. ಅವರೇ ಬಂಡವಾಳವನ್ನು ಹಾಕಿಕೊಂಡು ಮಾಡಲಿ, ಇದಕ್ಕೆ ಗ್ಲೋಬಲ್ ಟೆಂಡರ್ ಮಾಡಬೇಕೆಂದು ಹೇಳಿದರು. ಆಗ ಗ್ಲೋಬಲ್ ಟೆಂಡರ್ ಕರೆದು ಇದಕ್ಕೆ ನಾವು 40% ನಷ್ಟು VGF (Viability Gap Fund) ಕೊಡುವಂತಹದ್ದು, 60% ರಷ್ಟು ಹಣವನ್ನು ಅವರೇ ಬಂಡವಾಳ ಹಾಕಿಕೊಂಡು ಮಾಡುವಂತಹದ್ದು. Toll collect ಮಾಡಲೇಬೇಕಾಗಿದೆ, ವಿಧಿಯಿಲ್ಲವೆಂದು ಈ ರೀತಿ ಮಾಡಿದ್ದೇವೆ. 800 ಕೋಟಿ ರೂಪಾಯಿಗಳಷ್ಟು ಭೂಸ್ವಾಧೀನವಾಗಿದೆ. ಎಲ್ಲಾ ಕಡೆಯೂ ಸರ್ಕಾರಿ ಜಾಗವಿದೆ. ಈ ಸೆಂಟ್‌ಜಾನ್ ಆಸ್ಪತ್ರೆಯ ಹತ್ತಿರ ಮಾತ್ರ ಒಂದು ಖಾಸಗಿ ಜಮೀನು ಇದೆ. ಅದರ ಒಂದು ಕೆಲಸವನ್ನು ಮಾಡಬೇಕಾಗಿದೆ. ಅವರಿಗೆ TDR (Term Deposit Receipt) ಕೊಡುವಂತಹದ್ದು ಅಥವಾ ಅವರಿಗೆ ದುಡ್ಡನ್ನು ಕೊಡುವುದೋ ಎನ್ನುವುದರ ಬಗ್ಗೆ ತೀರ್ಮಾನ ಮಾಡಬೇಕಾಗುತ್ತದೆ. ಕೆಲವು ಎಂ.ಪಿ.ಗಳು ಏನು ಹೇಳಿದರು ಎಂದರೆ ಈ ಕೆಲಸವನ್ನು ದುಡ್ಡು ಹೊಡೆಯಲಿಕ್ಕೆ ಮಾಡುತ್ತಿದ್ದಾರೆಂದು ಹೇಳಿ ನನ್ನ ಮೇಲೆ ಆರೋಪ ಮಾಡಿದರು. ಸಂತೋಷ. I am not looking at business, I am not looking at finance. ನಾನು ಈ ಬೆಂಗಳೂರಿಗೆ passion ಆಗಿ ಬಂದಿದ್ದೇನೆ, ರಾಜಕಾರಣ ಮಾಡುತ್ತಿದ್ದೇನೆ.ನಮ್ಮದೇ ಆದಂತಹ ಇತಿಹಾಸ ಇದೆ. ನಾನೇ ಏನಾದರೂ ಈ ಬೆಂಗಳೂರಿಗೆ ಮತ್ತು ಈ ರಾಜ್ಯಕ್ಕೆ ಒಂದು ಸಾಕ್ಷಿ ಗುಡ್ಡೆಯನ್ನು ಬಿಟ್ಟು ಹೋಗಬೇಕೆನ್ನುವುದರಿಂದ ಈ ಒಂದು ತೀರ್ಮಾನ ಮಾಡಿದ್ದೇವೆ. ನಮ್ಮಲ್ಲಿ ಏನಾದರೂ ತಪ್ಪು ಇದ್ದರೆ, ಲೋಪದೋಷ ಆಗಿದ್ದರೆ, ಭ್ರಷ್ಟಾಚಾರ ಇದ್ದರೆ, if anything is there, I am ready to accept it, face it, take your suggestions and cooperation. ನಾನು ಈ ಬಗ್ಗೆ ಮಾನ್ಯ ಪ್ರಧಾನ ಮಂತ್ರಿಗಳಿಗೂ ಸಹ ಈ ನಿಟ್ಟಿನಲ್ಲಿ ವಿನಂತಿ ಮಾಡಿಕೊಂಡಿದ್ದೇನೆ. ಇಡೀ ಪ್ರಪಂಚದವರು ಬೆಂಗಳೂರು, ಬೆಂಗಳೂರು ಎಂದು ಹೊಗಳುತ್ತಿದ್ದೀರಿ, ಬರಿ ಖಾಲಿ ಕೈಯಲ್ಲಿ ಹೋಗಬೇಡಿ, ದುಡ್ಡನ್ನು ಕೊಡಿ ಎಂದು ಹೇಳಿ ಅವರಿಗೂ ಸಹ ಒಂದು ವಿನಂತಿ ಪತ್ರವನ್ನು ಕೊಟ್ಟಿದ್ದೇನೆ. ಅವರೊಂದಿಗೆ ಮಾತನಾಡಿದ್ದೇನೆ. ಅವರು

ಸಹ go ahead D.K., I will fully cooperative with you ಎಂದರು. ನಾನು ನಿಮ್ಮ ವಿನಂತಿ ಪತ್ರವನ್ನು ನೋಡುತ್ತೇನೆಂದು ಹೇಳಿ, ಅವರು ಕೂಡ ನನಗೆ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ನಿಮ್ಮ ಪಕ್ಷದ ಕೆಲವು ರಾಜಕಾರಣಿಗಳು ಈ ಬಗ್ಗೆ ಮಾತನಾಡುತ್ತಾರೆ ಬಿಡಿ. ಈಗ ನೀವು ಎಷ್ಟೋ ಪ್ರಾಜೆಕ್ಟ್‌ಗಳನ್ನು ಮಾಡಿದ್ದೀರಿ, ಬಿಡಿ. ನೀವುಗಳು ದುಡ್ಡು ಹೊಡೆಯಲಿಕ್ಕೆ ಮಾಡಿದ್ದೀರಾ? ನೀವು ಸಹ ಜನರಿಗೆ ಸೇವೆ ಮಾಡಬೇಕೆನ್ನುವ ನಿಟ್ಟಿನಲ್ಲಿ ಮಾಡಿರುತ್ತೀರಿ. ಹೀಗಾಗಿ, ನಾನು ಕೂಡ ಈ ಬೆಂಗಳೂರಿನಲ್ಲಿ Elevated Corridor, Tunnel Road, ಮೆಟ್ರೋಗೂ ಮತ್ತು ಫ್ಲೈಓವರ್‌ಗೂ Double-Decker Flyover ವ್ಯವಸ್ಥೆ ಇವೆಲ್ಲವನ್ನು ಮಾಡುವುದರ ಮೂಲಕ ಇಲ್ಲಿಗೆ ಬಂದ ಮೇಲೆ ಏನಾದರೂ ಮಾಡಿ ಬೆಂಗಳೂರಿನಲ್ಲಿ ಟ್ರಾಫಿಕ್ ಇಲ್ಲದಂತಾಗಬೇಕೆಂದು ಬಹಳ ಆಸೆಯನ್ನು ಪಟ್ಟು ಈ ಜವಾಬ್ದಾರಿಯನ್ನು ತೆಗೆದುಕೊಂಡಿದ್ದೇನೆ. ಇದು ನಿಮಗೂ ಅರ್ಥವಾಗುತ್ತದೆ. You can give any suggestions. ಯಾವುದೇ ತನಿಖೆಯನ್ನು ಬೇಕಾದರೂ ಮಾಡಿಸಿ, ತಪ್ಪು ಮಾಡಿದ್ದರೆ ಬೇಕಾದರೆ ಶಿಕ್ಷೆಯೂ ಆಗಲಿ. ಆದರೆ, ಈ ಒಂದು ಪ್ರಾಜೆಕ್ಟ್‌ಗಳು ಆಗಬೇಕೆನ್ನುವುದು ನನ್ನ ಆಸೆಯಾಗಿದೆ. ಆ ದೃಷ್ಟಿಯಿಂದ ಇದನ್ನು ಮಾಡಿದ್ದೇನೆ. ಮಾನ್ಯ ಶ್ರೀ ಸಿ.ಟಿ.ಯವರು ಒಳ್ಳೆಯ ಕೆಲಸ ಮಾಡಿ ಈ ಒಂದು ಪ್ರಶ್ನೆಯನ್ನು ಕೇಳಿದ್ದಾರೆ. So, it is the right question. ರಾಜ್ಯದ ಜನಕ್ಕೂ ತೆಗೆದುಕೊಳ್ಳಬೇಕು, ಇನ್ನು ಏನಾದರೂ ತಿದ್ದುಕೊಳ್ಳುವುದು ಇದ್ದರೆ ಬೇಕಾದರೆ ಹೇಳಿ, we are ready to accept your suggestions.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ಅವರ ಅಧ್ಯಯನ ವರದಿಯನ್ನು ಕೊಟ್ಟಿದ್ದಾರೆ, bottleneck ಸಂಚಾರದ ದಟ್ಟಣೆಯನ್ನು ಹೇಗೆ ತಪ್ಪಿಸುತ್ತೀರಿ ಎನ್ನುವುದರ ಬಗ್ಗೆ ಒಂದು ಸ್ಪಷ್ಟವಾದ ಉದಾಹರಣೆಯನ್ನು ಕೊಡಿ.

(ಮುಂದು)

(706) 14.08.2025 11.50 ಎಸ್‌ವಿ-ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಸಿ.ಟಿ.ರವಿ (ಮುಂದು):-**

ಅದರ ಬಗ್ಗೆ ಒಂದು ಸ್ಪಷ್ಟವಾದ ಉದಾಹರಣೆ ಕೊಡಿ. ಈಗ blacklisted companies ಬಗ್ಗೆ ನಾನು ಹೇಳಿದೆನು. Lion Engineering Consultants and Synergy Engineering Group Private Limited ಇವೆಲ್ಲಾ National Highways Authority of India ಅಡಿಯಲ್ಲಿ ಕಪ್ಪುಪಟ್ಟಿಗೆ ಸೇರಿರುವಂಥದ್ದು. ಯಾಕೆ blacklisted companies ಗಳನ್ನೇ ಇಟ್ಟುಕೊಂಡು ನೀವು DPR (Detailed Project Report) ಮಾಡಿಸಿದಿರಿ? ಹಾಗೆಯೇ cut and paste ಬಗ್ಗೆ ನೀವು ಸ್ಪಷ್ಟವಾದ ಉದಾಹರಣೆ ಕೊಡಲಿಲ್ಲ. 100ಕ್ಕೂ ಹೆಚ್ಚು ಪುಟಗಳು cut and paste ಆಗಿವೆಯೆಂದರೆ ಆ ವರದಿಯ ಬಗ್ಗೆ ಅಪನಂಬಿಕೆ ಪ್ರಾರಂಭವಾಗುತ್ತದೆ. ನಿಮ್ಮ ಬಗ್ಗೆ ಅಪನಂಬಿಕೆಯಿಲ್ಲ. ಆ ಕಂಪನಿಯ ಬಗ್ಗೆ. ನಿಮ್ಮ ಬಗ್ಗೆ ಅಪನಂಬಿಕೆಯನ್ನು ನಾನು ಪ್ರಶ್ನೆ ಮಾಡಿಲ್ಲ. ನೀವು ಅದನ್ನೂ ಸೇರಿಸಿ ಉತ್ತರ ಕೊಟ್ಟಿರಿ. ನೀವು ಆಧಾರ ಇಲ್ಲದೆ ಮಾಡುವುದಿಲ್ಲ. ಮಾಡುವುದೇ ಇಲ್ಲ ಎಂದು ನಾನು ಹೇಳುವುದಿಲ್ಲ. ಆಧಾರ ಸಿಕ್ಕಿದಾಗ ಮುಖ-ಮುಲಾಜು ನೋಡದೆ ಹೇಳುತ್ತೇವೆ. ಅದರಲ್ಲಿ ಯಾವುದೇ ಪ್ರಶ್ನೆಯಿಲ್ಲ.

ಈಗ ನೀವು ಬಿಎಂಆರ್‌ಸಿಎಲ್‌ನ ಕಾರ್ಯನಿರ್ವಾಹಕ ನಿರ್ದೇಶಕ ಹೆಗ್ಗರಡಿ ನೇತೃತ್ವದಲ್ಲಿ ವಿಚಾರಣೆಗೆ ಒಂದು ಸಮಿತಿಯನ್ನು ನೇಮಕ ಮಾಡಿದ್ದಿರಿ. ವರದಿಯನ್ನು ನೀಡಲಾಗಿದೆಯೇ, ಅದರಲ್ಲಿ ಏನಿದೆ ಎಂಬುದನ್ನು ಸದನದ ಗಮನಕ್ಕೆ ತರಬೇಕು.

**ಸಭಾಪತಿಯವರು:-** ಮಾನ್ಯ ರವಿಯವರೇ, ಸಾಕು ಮುಗಿಸಿ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ವೇ 119 ಕಿ.ಮೀ. ಇದ್ದು, ಇದರ ವೆಚ್ಚ ರೂ.8480 ಕೋಟಿ ವೆಚ್ಚವಾಗಿದೆ. ಅಂದರೆ ಒಂದು ಕಿ.ಮೀ. ಗೆ ರೂ.71 ಕೋಟಿ ವೆಚ್ಚವಾಗುತ್ತದೆ. ಅಟಲ್ ಸುರಂಗ 9 ಕಿ.ಮೀ. ಉದ್ದವಿದ್ದು, ರೂ.365 ಕೋಟಿ ಒಂದು ಕಿ.ಮೀ. ಗೆ ಖರ್ಚಾಗುತ್ತದೆ. ಮುಂಬೈ ಕೋಸ್ಟಲ್ ರಸ್ತೆಯು 29 ಕಿ.ಮೀ. ಉದ್ದವಿದ್ದು, ರೂ.445 ಕೋಟಿ ಒಂದು ಕಿ.ಮೀ.ಗೆ ಖರ್ಚಾಗುತ್ತದೆ. ಇಲ್ಲಿ ಹೆಬ್ಬಾಳ-ಸಿಲ್ಕ್‌ಬೋರ್ಡ್ ಸುರಂಗ 16 ಕಿ.ಮೀ. ರೂ.18,500 ಕೋಟಿ...

**ಸಭಾಪತಿಯವರು:-** ಮಾನ್ಯ ರವಿಯವರೆ, ಮುಗಿಸಿ.. ಸಾಕು.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಎರಡೇ ಪ್ರಶ್ನೆ. ರೂ.1,156 ಕೋಟಿ ಒಂದು ಕಿ.ಮೀ.ಗೆ ಎಂದು approximate ಆಗಿ ಹೇಳಿದ್ದಾರೆ. ಕೆ.ಆರ್.ಪುರ-ನಾಯಂಡಹಳ್ಳಿ ಸುರಂಗ ಮಾರ್ಗ 28 ಕಿ.ಮೀ. ಇದೆ. ರೂ.893 ಕೋಟಿ ಒಂದು ಕಿ.ಮೀ. ಗೆ ಎಂದು ವೆಚ್ಚವಾಗುತ್ತದೆ approximate ಆಗಿ ಹೇಳಿದ್ದಾರೆ.

**ಸಭಾಪತಿಯವರು:-** ಸಾಕು. ಉತ್ತರ ಹೇಳಿ ಉಪಮುಖ್ಯಮಂತ್ರಿಯವರೆ..

**ಶ್ರೀ ಸಿ.ಟಿ.ರವಿ:-** ಮಾನ್ಯ ಉಪ ಮುಖ್ಯಮಂತ್ರಿಯವರೆ, ನೀವು ಅಟಲ್ ಸುರಂಗ ರಸ್ತೆಯೊಂದಿಗೆ, ಮುಂಬೈ ಕೋಸ್ಟಲ್ ರಸ್ತೆಯೊಂದಿಗೆ ಹೋಲಿಕೆ ಮಾಡಿದಾಗ ಇದರ cost more than double ಇದೆ. ಏಕೆ ಇದು more than double? ಸರ್ಕಾರದ ದುಡ್ಡಿನಲ್ಲಿ ಕಾಮಗಾರಿ ಮಾಡಿಸಿ ಲಾಭ ಅವರಿಗೆ ಕೊಡುತ್ತೀರೇನೋ ಎಂದೆನಿಸುತ್ತದೆ. ನೀವು ಶೇ.40 BG (Bank Guarantee) ಗೆ ಕೊಡುತ್ತೇವೆಂದು ಹೇಳಿದಿರಿ. ಇದು ಇನ್ನೊಂದು ನೈಸ್ ರಸ್ತೆಯ ಕಥೆಯಾಗಬಾರದು. ಹಾಗಾಗಬಾರದೆನ್ನುವಂತಿದ್ದರೆ ಇದರ ಬಗ್ಗೆ ಎಚ್ಚರಿಕೆ ವಹಿಸಿ. ನಾನು ಅಭಿವೃದ್ಧಿಯೇ ಬೇಡ ಎಂದು ಹೇಳುವುದಿಲ್ಲ. ನೀವು ನಿಮ್ಮ ಕನಸಿಗೆ ಸಾಕ್ಷಿಗುಡ್ಡೆಗಳನ್ನು ಬಿಟ್ಟುಹೋಗಬೇಕು ಎನ್ನುವ ಮಾತನ್ನು ಹೇಳಿದಿರಿ. ಇಂಥ ಮಹತ್ವಾಕಾಂಕ್ಷಿ ಕನಸುಗಳು ಪ್ರತಿಯೊಬ್ಬ ರಾಜಕಾರಣಿಗೂ ಇರಬೇಕಾದುದೇ.

**ಸಭಾಪತಿಯವರು:-** ಮಾನ್ಯ ರವಿಯವರೆ, ನಿಮಗೇನು ಕೇಳುವುದಿಲ್ಲವೇ? ಮಾನ್ಯ ಉಪಮುಖ್ಯಮಂತ್ರಿಯವರೆ, ಉತ್ತರ ಹೇಳಬೇಡಿ. ನಾನು ಆಗಿನಿಂದಲೂ ಬೆಲ್ ಮಾಡುತ್ತಿದ್ದೇನೆ. ನಿಮಗೆ ಕೇಳುವುದಿಲ್ಲವೇ? ಆಯಿತು.. ಮಾನ್ಯ ಉಪ ಮುಖ್ಯಮಂತ್ರಿಯವರೆ, ಉತ್ತರ ಹೇಳಿಬಿಡಿ.

**ಶ್ರೀ ನಸೀರ್ ಅಹ್ಮದ್:-** ಪ್ರಶ್ನೆ ಕೇಳಲಿ.. ಸುಮ್ಮನೆ ಭಾಷಣ ಮಾಡುತ್ತಾ ಇರಬೇಡಿ.

**ಶ್ರೀ ಸಿ.ಟಿ.ರವಿ:-** ಸ್ವಾಮಿ..ನಾನು ಬೇರೆ ಏನೂ ಪ್ರಸ್ತಾಪ ಮಾಡಿಲ್ಲ. ನಾನು ಇಲ್ಲಿ ಭಾಷಣವನ್ನೂ ಮಾಡಿಲ್ಲ. ನಾನು point wise clarification ಕೇಳುತ್ತಿದ್ದೇನೆ. ಈ ಸದನದ ಸದಸ್ಯನಾಗಿ ರಾಜ್ಯದ

ಜವಾಬ್ದಾರಿಯಿರುವವನಾಗಿ ಅವರು ಹೇಗೆ ಮಹತ್ವಾಕಾಂಕ್ಷೆ, ಸಾಕ್ಷಿಗುಡ್ಡೆ ಆಗಬೇಕು ಎಂದು ಹೇಳುತ್ತಿದ್ದಾರೆಯೋ ಅದಕ್ಕೆ ಧಕ್ಕೆಯಾಗಬಾರದು ಎಂದು ಹೇಳುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ರವಿಯವರೇ, ಏನ್ರೀ ನೀವು.. ನನ್ನ ಮಾತನ್ನೂ ಕೇಳುವುದಿಲ್ಲವೆ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಅವರು ಸ್ಪಷ್ಟವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಪ್ರಶ್ನೆಯೂ ಅಷ್ಟೇ ಗಂಭೀರವಾಗಿದೆ. ಅದನ್ನು ಕೇಳಲಿ. ಸ್ಪಷ್ಟವಾದ ಉತ್ತರ ಒಂದು ಬಾರಿ ಕೊಟ್ಟ ಮೇಲೆ ಇಡೀ ಸದನಕ್ಕೆ ಅರ್ಥವಾದರೆ ಮತ್ತೆ ನಾವ್ಯಾರೂ ಪ್ರಶ್ನೆ ಕೇಳುವ ಅವಶ್ಯಕತೆ ಬರುವುದಿಲ್ಲ. ಏಕೆಂದರೆ ಇದು ಬಹಳ ಜವಾಬ್ದಾರಿಯುತ ಪ್ರಶ್ನೆ ಹಾಗೂ ಜವಾಬ್ದಾರಿಯುತ ಉತ್ತರ ಕೂಡ ಆಗಿದೆ.

**ಸಭಾಪತಿಯವರು:-** ನೀವು ಅದನ್ನು ಅವರಿಗೆ ಹೇಳಿ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ನನ್ನ ಯಾವ ಪ್ರಶ್ನೆಯು ಅಸಂಬದ್ಧವಾಗಿತ್ತೆಂಬುದನ್ನು ಹೇಳಿ. ನಿಮಗೆ ಗೌರವ ಕೊಟ್ಟು, ಪೀಠಕ್ಕೆ ಗೌರವ ಕೊಟ್ಟು ಕೇಳುತ್ತಿದ್ದೇನೆ. ನಾನು ಕೇಳಿದ ಪ್ರಶ್ನೆಯಲ್ಲಿ ಯಾವುದು ಅಸಂಬದ್ಧವಾಗಿತ್ತು ಎಂಬುದನ್ನು ಹೇಳಿ. ಯಾವುದು ಕಥೆ ಇತ್ತು ಹೇಳಿ, ಯಾವುದು ಈ ವಿಷಯವನ್ನು ಬಿಟ್ಟು ಇತ್ತು ಹೇಳಿ.

**ಸಭಾಪತಿಯವರು:-** ಮಾನ್ಯ ರವಿಯವರೆ, ಕುಳಿತುಕೊಳ್ಳಿ. ನಿಮ್ಮ ನಿಮ್ಮ ಹಾರಾಟಗಳನ್ನು ನನ್ನ ಮೇಲೆ ಏಕೆ ತೋರಿಸುತ್ತೀರಿ?

**ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೆ, M/s Rodic Consultants Private Limited blacklisted ಬಗ್ಗೆ ಏನು ಕೇಳುತ್ತಿದ್ದಾರೆ ಅವರು ಕೋರ್ಟ್‌ಗೆ ಹೋಗಿ ಸ್ಟೇ ತಂದಿದ್ದಾರೆ. ಎರಡನೆಯದು cut and paste ವಿಚಾರ ಹೇಳಿದ್ದಾರೆ. That's a fact. What you are telling is a fact. ನಾನು ಇಲ್ಲವೆಂದು ಹೇಳುವುದಿಲ್ಲ. ತಕ್ಷಣ ಯಾವುದೋ ಮೀಡಿಯಾದವರು ಇದನ್ನು identify ಮಾಡಿದರು. ತಕ್ಷಣ ಅದಕ್ಕೆ ಏನು ಬೇಕೋ fine ಹಾಕಬೇಕೆಂದು ನಾವು ಮಾಡಿದ್ದೇವೆ. ಎರಡನೆಯದಾಗಿ bottleneck ವಿಚಾರ ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ, ಅದಕ್ಕೆ we have taken cap. Bottleneck ಗೆ ಎಷ್ಟು ಜಾಗ extra ಬೇಕು. ತಕ್ಷಣ ಎಲ್ಲಾ ಕ್ಯೂಗಳಲ್ಲಿ ನಿಲ್ಲುತ್ತವೆ, ಟೋಲ್ ಒಳಗೆ ಹೋಗಬೇಕಾಗುತ್ತದೆ. Automatic Toll System ತರಬೇಕಾಗುತ್ತದೆ. ಈಗ FASTag ಬಂದಿದೆ. ಅವುಗಳನ್ನೆಲ್ಲಾ ಮಾಡುವುದಕ್ಕೆ bottleneck ನಲ್ಲಿ ಜಾಗ ಮಾಡಲು ಪ್ರಯತ್ನಿಸುತ್ತಿದ್ದೇವೆ. ಒಳಗಡೆ ಕೂಡ ಕೆಲವು ಜಾಗಗಳಲ್ಲಿ ಎಮರ್ಜೆನ್ಸಿಗಾಗಿ ಮೀಸಲಿಡಬೇಕು. That is why it has been three lanes plus. ಇದು 14 ಮೀಟರ್ tunnel. It is not a small tunnel. 3 vehicles plus additional space for emergency ಇರುತ್ತದೆ, ಆ ರೀತಿ ಮಾಡುತ್ತಿರುವ ಒಂದು ಟನಲ್. we will give a presentation. ಬೇಕಾದರೆ ಕುಳಿತುಕೊಂಡು ನೋಡಿ. ನೀವು ಅಟಲ್ ಟನಲ್‌ನೊಂದಿಗೆ ಹೋಲಿಕೆ ಮಾಡಿಕೊಳ್ಳಬೇಡಿ. Atal

Tunnel is a small tunnel. ನಾವು ಮಾಡುತ್ತಿರುವುದು ಇಡೀ ಭಾರತದಲ್ಲಿಯೇ biggest tunnel. ಎರಡೂ ಟನಲ್‌ಗಳಿಂದ 35-49 ಕಿ.ಮೀ. ನಷ್ಟು ಆಗುತ್ತಿದೆ. ಆ price ಕೇಳಿದರೆ ನೀವು ಶಾಕ್ ಆಗುತ್ತೀರಿ. ನೀವು ನಮ್ಮದನ್ನು ಬಹಳ excess cost ಎಂದು ಹೇಳುತ್ತಿದ್ದೀರಿ. ಬೆಂಗಳೂರು 16.8 ಕಿ.ಮೀ., ಥಾಣೆ ಘೋರ್‌ವೇನಲ್ಲಿ 12 ಕಿ.ಮೀ. ನಮ್ಮ estimated cost 16 ಕಿ.ಮೀ. ಗೆ ರೂ. 17,780 ಕೋಟಿ. ಅವರ estimated cost ರೂ.16,600 ಕೋಟಿ. It should be on record for the media also. Our expenditure per unit length of the tunnel is Rs.770 Crore. ಅವರದು ರೂ.1215 ಕೋಟಿ. Orange Gate-Marine Drive Tunnel Project, Gainike Tunnel Project ಅವರದ್ದು ರೂ.1316 ಕೋಟಿ per kilometer. ಬೆಂಗಳೂರಿಗಿಂತಲೂ ಅವರದ್ದೆಲ್ಲಾ ಶೇ.60-70 ಜಾಸ್ತಿಯಿದೆ. ನಮ್ಮದು ರೂ.4.6 ಕೋಟಿ per kilometer. ಅವರದ್ದು ರೂ.9.1 ಕೋಟಿ per kilometer ಆಗುತ್ತದೆ. ಹಾಗೆ ನಮಗೂ ಅವರಿಗೂ ಇರುವ ವ್ಯತಾಸದಲ್ಲಿ ಶೇ.60 ನಾವು ಕಡಿಮೆಯಲ್ಲಿದ್ದೇವೆ. ನನಗೆ ಇದೆಲ್ಲಾ ಗೊತ್ತಿದೆ. ನಾನು financial ದೃಷ್ಟಿಯಿಂದ ಯೋಚನೆ ಮಾಡುತ್ತಿಲ್ಲ. ನಮಗೆ competition ಇರಬೇಕು. ನಾನು, ಮುಖ್ಯಮಂತ್ರಿಗಳು ಕೇಂದ್ರ ಸಚಿವರಾದ ಹೋಗಿ ಮಾನ್ಯ ನಿತಿನ್ ಗಡ್ಕರಿಯವರೊಂದಿಗೆ ಹತ್ತಾರು ಬಾರಿ ಇದರ ಬಗ್ಗೆ ಚರ್ಚೆ ಮಾಡಿದ್ದೇವೆ. ಅವರಿಗೂ ಮಾದರಿಯನ್ನು ತೋರಿಸಿ ವಿವರಿಸಿದ್ದೇವೆ. ನೀವೇ ಮಾಡಿ ಎಂದು ಕೂಡ ನಾವು ಮನವಿಯನ್ನು ಮಾಡಿದ್ದೇವೆ. ನೀವೇ ಬಂಡವಾಳ ಹಾಕಿಕೊಂಡು, ನೀವೇ ಟೆಂಡರ್ ಕರೆದಾದರೂ ಸರಿ, ಮಾಡಿ ಎಂದು ಹೇಳಿದ್ದೇವೆ. ನಮಗೇನು ಕೆಲಸ ಆಗಬೇಕು ಅಷ್ಟೆ. ಯಾರು ಮಾಡಿದರೇನು? ಪಿಡಬ್ಲ್ಯೂಡಿಯವರು ಮಾಡಲಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದರು ಮಾಡಲಿ ಅಥವಾ ಪಂಚಾಯಿತಿಯವರು ಆದರೂ ಮಾಡಲಿ, ಅದಕ್ಕೆ ಏಕೆ ಹೆಸರು ಬೇಕು. ಬೆಂಗಳೂರಿನಲ್ಲಿ ಆಯಿತು ಎನ್ನುವುದು ಮುಖ್ಯ,

ಆದ್ದರಿಂದ ನಿಮಗೆ ಏನಾದರೂ ಅನುಮಾನಗಳಿದ್ದಲ್ಲಿ ಬನ್ನಿ. ನಾನು ನಿಮಗೆ ಒಂದು presentation ಮಾಡಿಸುತ್ತೇನೆ. ಇದು ಹೊಸ ಚಿಂತನೆಯಾಗಿರುವುದರಿಂದ ಏನೇ ಸಲಹೆಗಳಿದ್ದರೂ ಸ್ವಾಗತಿಸುತ್ತೇನೆ. ಟೆಂಡರ್ ಕರೆದು ಆಗಿದೆ. ದಿನಾಂಕವನ್ನು ಸ್ವಲ್ಪ ದಿನಗಳ ಮಟ್ಟಿಗೆ extend ಮಾಡುತ್ತೇನೆ. ಸುಮಾರು 10 ಜನ participate ಮಾಡುತ್ತೇವೆಂದು ಬಂದಿದ್ದರು. ಬಹಳ ಸಂತೋಷ, ಬರಲಿ. To provide better infrastructure for Bengaluru City our doors are open for more suggestions. ಹಿಂದೆ ಇದೇ ವಿಧಾನಸೌಧದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ದಿವಂಗತ ಅಟಲ್ ಬಿಹಾರಿ ವಾಜಪೇಯಿಯವರು "The world Leaders are first coming to Bengaluru and then they are coming to Delhi" ಎಂದು ಹೇಳಿದ್ದರು. ಹಾಗಾಗಿ ಈ ಸಂದರ್ಭದಲ್ಲಿ ನಿಮ್ಮ ಬೆಂಗಳೂರು, ನಮ್ಮ ಬೆಂಗಳೂರು, ರಾಜ್ಯದ ಜನತೆಯ ಬೆಂಗಳೂರು, ಎಲ್ಲಾ ವರ್ಗದ ಜನರಿರುವ ಬೆಂಗಳೂರು...ಅಂದು amendment ನಲ್ಲಿ ನಾನು ಹೇಳಿದ್ದೆನು. ಇದು ಕೇವಲ ಬೆಂಗಳೂರು ನಗರವಷ್ಟೇ ಅಲ್ಲ, ಇದು ರಾಜ್ಯದ ಹೃದಯ ಎಂದು ಹೇಳಿದ್ದೆನು.

**ಶ್ರೀ ಸಿ.ಟಿ.ರವಿ:-** ಇದು ಕೇವಲ ರಾಜ್ಯದ ಹೃದಯವಷ್ಟೇ ಅಲ್ಲ, ಇಡೀ ದೇಶದ ಹೃದಯ.

**ಶ್ರೀ ಡಿ.ಕೆ.ಶಿವಕುಮಾರ್:-** ಹೌದು.. ಈ ಹೃದಯಕ್ಕೆ nerve system ನಲ್ಲಿ ಹೇಗೆ ರಕ್ತ ಸಂಚಾರವಾಗುತ್ತದೆಯೋ ಹಾಗೆ ಪ್ರಧಾನಿ ನರೇಂದ್ರ ಮೋದಿಯವರು ಭಾರತದ ಬಗ್ಗೆ ಏನೇ ಪ್ರಚಾರ ಮಾಡಬೇಕಾದರೂ ಬೆಂಗಳೂರಿನ ಮೂಲಕವೇ ಮಾಡಬೇಕು. ಅಂಥ ಪರಿಸ್ಥಿತಿ ನಾವು-ನೀವು ಸೇರಿ ತಂದುಕೊಟ್ಟಿದ್ದೇವೆ. ಅದಕ್ಕೆ ನಾನು ಬಹಳ ದೂರದೃಷ್ಟಿಯಿಂದ ಈ ಒಂದು ಯೋಜನೆಯನ್ನು ತಂದಿದ್ದೇನೆ. ನಿಮ್ಮೆಲ್ಲರ ಸಹಕಾರ ಇದಕ್ಕಿದೆ ಎಂಬುದು ನನಗೆ ಗೊತ್ತಿದೆ. ಕೇಳಬೇಕಾದುದನ್ನು ಕೇಳುತ್ತಿದ್ದೀರಿ. I am not doubting, I am so happy. ಒಳ್ಳೆಯ ಪ್ರಶ್ನೆ ಕೇಳಿದ್ದೀರಿ, ರಾಜ್ಯಕ್ಕೆ ಒಂದು ಒಳ್ಳೆಯ ಸಂದೇಶವನ್ನು ಕೊಟ್ಟಿದ್ದೀರಿ. ನಿಮಗೆ ತುಂಬಾ ಥ್ಯಾಂಕ್ಸ್.

**ಸಭಾಪತಿಯವರು:-** ಮಾನ್ಯ ಧನಂಜಯ ಸರ್ಜಿಯವರೆ, ನಿಮ್ಮ ಪ್ರಶ್ನೆಗೆ ಸಂಬಂಧಪಟ್ಟ ಸಚಿವರು ಕಾಲಾವಕಾಶವನ್ನು ಕೇಳಿದ್ದಾರೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಉಪ ಮುಖ್ಯಮಂತ್ರಿಯವರೆ, ಯೋಜನೆ ಪಾರದರ್ಶಕವಾಗಿ, ಪ್ರಾಮಾಣಿಕವಾಗಿ ಇರುವಂತೆ ನೋಡಿಕೊಳ್ಳಿ. ಏಕೆಂದರೆ ಲಾಭ ಇಲ್ಲದೆ ಮಾನ್ಯ ಡಿ.ಕೆ.ಶಿವಕುಮಾರ್ ಏನೂ ಮಾಡುವುದಿಲ್ಲ ಎನ್ನುವ ಒಂದು ಭಾವನೆ ಎಲ್ಲಾ ಕಡೆ ಇದೆ. ಇದರಿಂದಾಗಿ ಬೆಂಗಳೂರಿಗೆ ಕೆಟ್ಟ ಹೆಸರು ಬರುವುದು ಬೇಡ.

**(ಗೊಂದಲ)**

**ಶ್ರೀ ಡಿ.ಕೆ.ಶಿವಕುಮಾರ್:-** ನೋಡಪ್ಪ ಲಾಭ-ನಷ್ಟ ಯೋಚನೆ ಮಾಡುವವನು ನೀನು. ನಾನು, ನನ್ನ ವಂಶ, ನನ್ನ ಪಕ್ಷದ ಹೆಸರಿನ ಬಗ್ಗೆ ಯೋಚನೆ ಮಾಡುವವರು ನಾವು.

**(ಆಡಳಿತ ಪಕ್ಷದ ಮಾನ್ಯ ಸದಸ್ಯರು ಮೇಜು ತಟ್ಟುವ ಮೂಲಕ ಹರ್ಷ ವ್ಯಕ್ತಪಡಿಸಿದರು)**

**ಸಭಾಪತಿಯವರು:-** ಮಾನ್ಯ ಶಶಿಲ್ ನಮೋಶಿ ಇವರು ಗೈರಾಗಿದ್ದಾರೆ. ಮಾನ್ಯ ಮಂಜೇಗೌಡ ಅವರೆ, ನಿಮ್ಮ ಪ್ರಶ್ನೆಗೆ ಸಂಬಂಧಪಟ್ಟ ಸಚಿವರು ಸಮಯ ಕೇಳಿದ್ದಾರೆ.

**ಶ್ರೀ ಸಿ.ಎನ್.ಮಂಜೇಗೌಡ:-** ಮಾನ್ಯ ಸಭಾಪತಿಯವರೆ, ಉತ್ತರ ಯಾವಾಗ ಸಿಗುತ್ತದೆ?

**ಸಭಾಪತಿಯವರು:-** ಸಮಯ ಕೇಳಿದ್ದಾರೆ. ಮುಂದಿನ ಪ್ರಶ್ನೆ ಮಾನ್ಯ ಬಲ್ಕಿಸ್ ಬಾನು ಅವರದ್ದು.

**(ಮುಂದು)**

(707) 14-08-2025 (12.00) ಕೆಜಿ:ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

## ಪ್ರಶ್ನೆ ಸಂಖ್ಯೆ 547
## ಭದ್ರಾ ಜಲಾಶಯ ಆವರಣದಲ್ಲಿ ಉದ್ಯಾನವನ ನಿರ್ಮಾಣ ಮಾಡುವ ಬಗ್ಗೆ

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಶಿವಮೊಗ್ಗ ಜಿಲ್ಲೆಯ ಭದ್ರಾ ಜಲಾಶಯ ಆವರಣದಲ್ಲಿ ಮೈಸೂರು ಕೆ.ಆರ್.ಎಸ್. ಬೃಂದಾವನ ಮಾದರಿಯಲ್ಲಿ ಉದ್ಯಾನವನ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇಲ್ಲವಾದಲ್ಲಿ ಉದ್ಯಾನವನ ನಿರ್ಮಾಣ ಮಾಡಲು ಇರುವ ಅಡಚಣೆಗಳಾವುವು; (ವಿವರ ನೀಡುವುದು) | ಹೌದು. ಬಂದಿದೆ. ಸದರಿ ಜಲಾಶಯವು ಜಲ ಸಂಪನ್ಮೂಲ ಇಲಾಖೆಯ ವ್ಯಾಪ್ತಿಗೆ ಬರುತ್ತಿದ್ದು, ಸರ್ಕಾರದ ಆದೇಶ ಸಂಖ್ಯೆ: ಪ್ರಇ/250/ಪ್ರವಾಯೋ/2018, ದಿನಾಂಕ:19.09.2018 ರಲ್ಲಿ ಶಿವಮೊಗ್ಗ ಜಿಲ್ಲೆ ಭದ್ರಾ ಜಲಾಶಯದ ಆವರಣದಲ್ಲಿ ಉದ್ಯಾನವನ ಹಾಗೂ ಸಂಗೀತ ಕಾರಂಜಿ ನಿರ್ಮಾಣ ಕಾಮಗಾರಿಯನ್ನು ರೂ. 200.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು, ಸದರಿ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯ ಮೂಲಕ ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ಸಂಖ್ಯೆ: ಪ್ರಇ/316/ಪ್ರವಾಯೋ/2018, ದಿನಾಂಕ:23.11..2018 ರಲ್ಲಿ ಅನುಮೋದನೆ ನೀಡಲಾಗಿರುತ್ತದೆ.<br><br>ನಂತರ, ಸರ್ಕಾರದ ಆದೇಶ ಸಂಖ್ಯೆ: ಪ್ರಇ/50/ಟಿಡಿಪಿ/2019, ದಿನಾಂಕ:10.07.2019 ರನ್ವಯ ಸದರಿ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯ ಬದಲಾಗಿ KRIDL ಸಂಸ್ಥೆಯ ಮೂಲಕ ಅನುಷ್ಠಾನಗೊಳಿಸಲು ಸರ್ಕಾರದ ಪರಿಷ್ಕೃತ ಅನುಮೋದನೆ ನೀಡಲಾಗಿರುತ್ತದೆ.<br><br>ತದನಂತರ, ಸರ್ಕಾರದ ಆದೇಶ ಸಂಖ್ಯೆ: ಪ್ರಇ/50/ಟಿಡಿಪಿ/2020, ದಿನಾಂಕ:20.02.2020 ರಲ್ಲಿ ಈ ಕೆಳಕಂಡಂತೆ ಕಾಮಗಾರಿಗಳನ್ನು ಬದಲಿಸಿ, ತಿದ್ದುಪಡಿ ಆದೇಶ ನೀಡಲಾಗಿರುತ್ತದೆ:- |

| ಕ್ರ.. ಸಂ. | ದಿನಾಂಕ: 19.09.2018 ರ ಸರ್ಕಾರದ ಆದೇಶದಲ್ಲಿ ಮಂಜೂರಾದ ಕಾಮಗಾರಿ | ಅಂದಾಜು ಮೊತ್ತ | ಪರಿಷ್ಕೃತ ಮಂಜೂರು ಮಾಡಿರುವ ಕಾಮಗಾರಿ | ಅಂದಾಜು ಮೊತ್ತ |
|---|---|---|---|---|
| 01 | ಶಿವಮೊಗ್ಗ ಜಿಲ್ಲೆ, ಭದ್ರಾವತಿ ಅಣೆಕಟ್ಟು ಯೋಜನೆ (ಬಿಆರ್‌ಪಿ) ಭದ್ರಾವತಿ ತಾಲ್ಲೂಕು ಕೃಷ್ಣರಾಜಸಾಗರ ಅಣೆಕಟ್ಟು ಉದ್ಯಾನವನದ ಮಾದರಿಯಲ್ಲಿ ಉದ್ಯಾನವನ ಹಾಗೂ ಸಂಗೀತ ಕಾರಂಜಿ ನಿರ್ಮಾಣ ಕಾಮಗಾರಿ | ರೂ. 200.00 ಲಕ್ಷಗಳು | ಶಿವಮೊಗ್ಗ ಜಿಲ್ಲೆ, ಭದ್ರಾವತಿ ಅಣೆಕಟ್ಟು ಯೋಜನೆ (ಬಿಆರ್‌ಪಿ) ಪ್ರವಾಸಿ ತಾಣದಲ್ಲಿ ಚೈನ್ ಲಿಂಕ್ ಫೆನ್ಸಿಂಗ್, ಕಾಬಲ್ ಸ್ಟೋನ್ ಫ್ಲೋರಿಂಗ್ (ಪಾತ್ ವೇ) ನಿರ್ಮಾಣ ಕಾಮಗಾರಿ | ರೂ. 200.00 ಲಕ್ಷಗಳು |

| | | |
|---|---|---|
| | | ಸದರಿ ಕಾಮಗಾರಿ ಕೈಗೊಳ್ಳಲು ಮೊದಲ ಕಂತಾಗಿ ರೂ. 100.00 ಲಕ್ಷಗಳನ್ನು ವ್ಯವಸ್ಥಾಪಕ ನಿರ್ದೇಶಕರು, KRIDL ಸಂಸ್ಥೆ, ಬೆಂಗಳೂರು ಇವರಿಗೆ ಬಿಡುಗಡೆ ಮಾಡಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. |
| ಆ) | ಉದ್ಯಾನವನ ನಿರ್ಮಾಣ ಮಾಡಲು ಜಲಾಶಾಯದ ಬಳಿ ಎಷ್ಟು ಎಕರೆ ಜಾಗ ಲಭ್ಯವಿರುತ್ತದೆ; (ವಿವರ ನೀಡುವುದು) | ಉದ್ಯಾನವನ ನಿರ್ಮಾಣ ಮಾಡಲು ಭದ್ರಾ ಜಲಾಶಯದ ಕೆಳಗಡೆ (ನದಿಯ ಎಡಭಾಗದಲ್ಲಿ) ಸಿಂಗನಮನೆ ಗ್ರಾಮದ ಸರ್ವೆ ನಂ.112ರಲ್ಲಿ ಸುಮಾರು 180 ಎಕರೆ ಜಮೀನು ಲಭ್ಯವಿರುತ್ತದೆ. |
| ಇ) | ಉದ್ಯಾನವನ ನಿರ್ಮಾಣ ನಿರ್ಮಾಣದ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು; ಉದ್ಯಾನವನ ನಿರ್ಮಾಣಕ್ಕೆ ತಗಲುವ ಮೊತ್ತ ಸರ್ಕಾರ ಮೀಸಲಿಟ್ಟಿದೆಯೇ? (ವಿವರ ನೀಡುವುದು) | ಪ್ರವಾಸೋದ್ಯಮ ಇಲಾಖೆಯಿಂದ ಸದರಿ ಉದ್ಯಾನವನ ನಿರ್ಮಾಣ ಯೋಜನೆಯನ್ನು ಕೈಗೊಳ್ಳಲು ಸ್ಥಳೀಯ ಜನ ಪ್ರತಿನಿಧಿಗಳೊಂದಿಗೆ ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ, ವಿವರವಾದ ಯೋಜನಾ ವರದಿಯನ್ನು ತಯಾರಿಸಲು ವಹಿವಾಟು ಸಲಹೆಗಾರರನ್ನು (Transaction Advisor) ನೇಮಿಸಿ, ಅವರ ವರದಿಯನ್ವಯ ಯೋಜನೆಗೆ ತಗಲಬಹುದಾದ ಅಂದಾಜು ಮೊತ್ತದ ಅನುಗುಣವಾಗಿ ಯೋಜನೆಯನ್ನು ಅನುಷ್ಠಾನಗೊಳಿಸಲು ವಿಶೇಷ ಅನುದಾನವನ್ನು ಆರ್ಥಿಕ ಇಲಾಖೆಯಿಂದ ಪಡೆಯುವ ಬಗ್ಗೆ, ಅಥವಾ P.P.P ಮಾದರಿಯಲ್ಲಿ ಅನುಷ್ಠಾನಗೊಳಿಸುವ ಬಗ್ಗೆ, ಪರಿಶೀಲಿಸಲಾಗುವುದು. |

**ಶ್ರೀಮತಿ ಬಲ್ಕಿಸ್ ಬಾನು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಮರ್ಪಕವಾದ ಉತ್ತರವನ್ನು ಒದಗಿಸಿದ್ದಾರೆ. ನಾನು ಮೊದಲನೆಯದಾಗಿ, ಶಿವಮೊಗ್ಗ ಜಿಲ್ಲೆಯ ಭದ್ರಾ ಜಲಾಶಯ ಆವರಣದಲ್ಲಿ ಮೈಸೂರಿನ ಬಳಿ ಇರುವ ಕೆ.ಆರ್.ಎಸ್ ಬೃಂದಾವನ ಮಾದರಿಯಲ್ಲಿ ಉದ್ಯಾನವನ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ಎಂಬ ಪ್ರಶ್ನೆಯನ್ನು ಕೇಳಿದ್ದೆ. ಮಾನ್ಯ ಸಚಿವರು ಪ್ರಸ್ತಾವನೆ ಸರ್ಕಾರದ ಮುಂದಿದೆ ಎಂದು ಒಪ್ಪಿಕೊಂಡಿದ್ದಾರೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಸಿದ್ದರಾಮಯ್ಯನವರ ಹಿಂದಿನ ಸರ್ಕಾರದಲ್ಲಿ ದಿನಾಂಕ 19-09-2018 ರಲ್ಲಿ ಈ ಯೋಜನೆ ಮಂಜೂರಾಗಿತ್ತು. ಈ ಯೋಜನೆಗೆ ಕೇವಲ 2 ಕೋಟಿ ರೂಪಾಯಿಗಳ ವೆಚ್ಚವಾಗುತ್ತದೆ. ಆಗ ಶ್ರೀ ಹೆಚ್.ಸಿ.ಮಹಾದೇವಪ್ಪನವರು ಲೋಕೋಪಯೋಗಿ ಇಲಾಖೆಯ ಸಚಿವರಾಗಿದ್ದರು. ಇದು 2018 ರಲ್ಲಿ ಮಂಜೂರಾತಿ ಪಡೆದಿದೆ. ನಂತರ ಲೋಕೋಪಯೋಗಿ ಇಲಾಖೆಗೆ ಕೊಟ್ಟಿರುವಂತಹ ಈ ಯೋಜನೆಯನ್ನು 2019 ರಲ್ಲಿ KRIDL (Karnataka Rural Infrastructure Development Limited) ನ ಮೂಲಕ ಮಾಡಬೇಕೆಂದು ತಿದ್ದುಪಡಿ ಮಾಡಿದ್ದಾರೆ. ಇದಾದ ನಂತರ 2020 ರಲ್ಲಿ ಏನೇನು ಮಾಡಬೇಕೆಂಬ ಒಂದು ಪಟ್ಟಿಯನ್ನು ಸಿದ್ಧಪಡಿಸಿದ್ದಾರೆ. ಅಂದರೆ, ಕಾರಂಜಿ, ಪಾರ್ಕ್ ಹಾಗೂ fountain ಮಾಡಬೇಕು, ಇವುಗಳನ್ನು ಎಲ್ಲಿಂದ-ಎಲ್ಲಿಗೆ ಹೇಗೆ ಮಾಡಬೇಕೆಂಬ ರೂಪುರೇಷೆಯನ್ನು ಕೊಡುತ್ತಾರೆ. ಇದಕ್ಕೆ ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆಂದು ಸಹ ಹೇಳಿದ್ದಾರೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇದರ ಕಾಮಗಾರಿ ಪ್ರಗತಿಯಲ್ಲಿದೆ ಎಂದು ಹೇಳಿದ್ದಾರೆ. ನಾನು ಅದೇ ಕ್ಷೇತ್ರದ ಜಿಲ್ಲಾ ಪಂಚಾಯಿತಿಯ ಸದಸ್ಯರಾಗಿ, ಅಧ್ಯಕ್ಷರಾಗಿ ಸುಮಾರು ಮೂರು ಅವಧಿಯಲ್ಲಿ ಕೆಲಸ ಮಾಡಿದ್ದೇನೆ. ಇಲ್ಲಿಯವರೆಗೆ ಇದಕ್ಕೆ ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ, ಇದಕ್ಕೆ ತಗಲುವ ವೆಚ್ಚ 2 ಕೋಟಿ ರೂಪಾಯಿಗಳೆಂದು ಹೇಳಿದ್ದಾರೆ. ಮೊದಲನೆಯದಾಗಿ, ಈ ಯೋಜನೆಗೆ 2 ಕೋಟಿ ರೂಪಾಯಿಗಳು ಸಾಕಾಗುವುದಿಲ್ಲ. ಏಕೆಂದರೆ, ಈ ಯೋಜನೆಯನ್ನು 2018 ರಲ್ಲಿ ಮಾಡಲಾಗಿದ್ದು, ಈಗ ಇದು ಬದಲಾವಣೆಯಾಗಬೇಕಾಗಿದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಪ್ರಶ್ನೆಯನ್ನು ಕೇಳಿ.

**ಶ್ರೀಮತಿ ಬಲ್ಕಿಸ್ ಬಾನು:-** ಮಾನ್ಯ ಸಭಾಪತಿಯವರೇ, ಈಗ ಅಲ್ಲಿ ಒಂದು ಇಂಚಿನ ಕೆಲಸವನ್ನು ಮಾಡಿಲ್ಲ ಹಾಗೂ ಮಾಡುತ್ತಿಲ್ಲ. ಆದರೆ, ಸರ್ಕಾರ ಸದರಿ ಕಾಮಗಾರಿ ಪ್ರಗತಿಯಲ್ಲಿದೆ ಎಂದು ಹೇಳಿದೆ.

**ಶ್ರೀ ಎಚ್.ಕೆ.ಪಾಟೀಲ್ (ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನಮ್ಮ ಉತ್ತರವನ್ನು ಪೂರ್ಣವಾಗಿ ಗಮನಿಸಲಿಲ್ಲವೆಂದು ಕಾಣುತ್ತದೆ. ದಿನಾಂಕ 19-09-2018 ರಂದು ಸರ್ಕಾರದ ಆದೇಶ ಆಗಿದ್ದು, ಈ ಆದೇಶದಲ್ಲಿ 2 ಕೋಟಿ ರೂಪಾಯಿಗಳ ಕಾಮಗಾರಿಯನ್ನು ಮಂಜೂರು ಮಾಡಲಾಗಿದೆ ಎಂದು ತಿಳಿಸಿದ್ದೇವೆ. ಆದರೆ, ಕಾಮಗಾರಿ ಪ್ರಾರಂಭವಾಗಿಲ್ಲ. ಮತ್ತೆ ಈ ಯೋಜನೆಯ ವೆಚ್ಚವನ್ನು ಪರಿಷ್ಕೃತ ಅಂದಾಜು ಮಾಡಿ ಮಂಜೂರು ಮಾಡುವುದರ ಸಲುವಾಗಿ, ಕಾಮಗಾರಿಯ ಬದಲಾವಣೆ ಸಲುವಾಗಿ ಕೊಟ್ಟಿದ್ದ ಪ್ರಸ್ತಾವನೆಯ ಬಗ್ಗೆ ನಾವು ನಿರ್ಣಯವನ್ನು ತೆಗೆದುಕೊಂಡು ಸದರಿ ಕಾಮಗಾರಿಯನ್ನು ಪ್ರಾರಂಭ ಮಾಡುವುದಕ್ಕಾಗಿ ಮೊದಲ ಕಂತಾಗಿ ಒಂದು ಕೋಟಿ ರೂಪಾಯಿಗಳನ್ನು ವ್ಯವಸ್ಥಾಪಕ ನಿರ್ದೇಶಕರು, KRIDL ಇವರಿಗೆ ಬಿಡುಗಡೆ ಮಾಡಿದ್ದೇವೆ.

ಮಾನ್ಯ ಸಭಾಪತಿಯವರೇ, ನಮ್ಮ ಮೂಲ ಉದ್ದೇಶ ಈ ಭದ್ರಾ ಜಲಾಶಯದ ಬಳಿ ಇರುವಂತಹ ಜಮೀನಿನ ಹಿನ್ನೀರಿನಲ್ಲಿ ಕೆಆರ್‌ಎಸ್‌ನಲ್ಲಿರುವ ಬೃಂದಾವನ ಮಾದರಿಯ ಒಂದು ಉದ್ಯಾನವನ ಆಗಬೇಕು ಎನ್ನುವುದಾಗಿದೆ. ಈಗಾಗಲೇ ಭದ್ರಾ ಜಲಾಶಯದ ಏರಿಯಾದಲ್ಲಿ Jungle Lodges and Resorts projects ಬಂದ ಮೇಲೆ ಬಹಳಷ್ಟು ಪ್ರವಾಸಿಗರನ್ನು ಆಕರ್ಷಣೆ ಮಾಡುತ್ತಿದೆ. ಅದು ಒಂದು ಪ್ರವಾಸಿ ತಾಣವಾಗಿ ಅಭಿವೃದ್ಧಿಯಾಗುತ್ತಿದೆ. ಈಗಾಗಲೇ ನಾವು ಸ್ಥಳೀಯ ಜನ ಪ್ರತಿನಿಧಿಗಳೊಂದಿಗೆ ಹಾಗೂ ನಮ್ಮ ಅಧಿಕಾರಿಗಳೊಂದಿಗೆ ಚರ್ಚಿಸಿ, ವಿವರವಾದಂತಹ ಯೋಜನಾ ವರದಿ DPR ಅನ್ನು ತಯಾರಿಸುವುದರ ಸಲುವಾಗಿ Transaction Advisor ರವರನ್ನು ನೇಮಿಸಿ ಅವರಿಂದ ವರದಿಯನ್ನು ಬೇಗ ಪಡೆದುಕೊಂಡು ವಿಶೇಷ ಅನುದಾನವನ್ನು ಆರ್ಥಿಕ ಇಲಾಖೆಯಿಂದ ಪಡೆಯುವ ಬಗ್ಗೆ ಪರಿಶೀಲಿಸಲಾಗುವುದು. ಒಂದು ವೇಳೆ ಅದು ಯಾವುದಾದರೊಂದು ಕಾರಣಕ್ಕೆ ವಿಳಂಬವಾಗುವುದು ಅಥವಾ ಸಾಧ್ಯವಿಲ್ಲ ಎನ್ನುವುದಾದರೆ, PPP ಮಾದರಿಯಲ್ಲಿ ಅನುಷ್ಠಾನ ಮಾಡುವುದಕ್ಕೆ ರಾಜ್ಯ

ಸರ್ಕಾರ ಕ್ರಮವನ್ನು ತೆಗೆದುಕೊಳ್ಳುತ್ತದೆ. DPR ಪೂರ್ಣವಾಗುವುದರ ಸಲುವಾಗಿ ಏನೇನು ಹೆಜ್ಜೆಗಳನ್ನು ಇಡಬೇಕಾಗಿದೆ ಅದನ್ನು ಇಟ್ಟಿದೆ. DPR ಬಂದ ತಕ್ಷಣ ಆದಷ್ಟು ಬೇಗ ನಿರ್ಣಯ ಮಾಡುತ್ತೇವೆ.

**ಶ್ರೀಮತಿ ಬಲ್ಕಿಸ್ ಬಾನು:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇಡೀ ರಾಜ್ಯದಲ್ಲಿ ಈ ಒಂದು ಯೋಜನೆಯಲ್ಲಿ ಹಲವಾರು ಜನರ ಹೋಗಳಿಕೆಗೆ ಪಾತ್ರರು ಸಹ ಆಗಿದ್ದಾರೆ. ನಮ್ಮ ಶಿವಮೊಗ್ಗ ಜಿಲ್ಲೆಯನ್ನು 'ಮಲೆನಾಡಿನ ಹೆಬ್ಬಾಲು' ಮತ್ತು 'ಮಲೆನಾಡು ರಾಜಧಾನಿ' ಎಂದು ಕರೆಯುತ್ತಿದ್ದಾರೆ. ಒಂದು Tourism Trenzen, ಜೋಗಜಲಪಾತ ಪ್ರಸಿದ್ಧವಾಗಿರುವಂತಹದ್ದು ಎಲ್ಲರಿಗೂ ಗೊತ್ತಿರುವಂತಹ ವಿಷಯವಾಗಿದೆ. ಈ ಯೋಜನೆಯನ್ನು 2018 ರಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಈಗ ನಾವು 2025 ರಲ್ಲಿ ಇದ್ದೇವೆ. ಸರ್ಕಾರಗಳು ಬರುತ್ತವೆ, ಹೋಗುತ್ತವೆ. ಅದೇ ಬೇರೆ ಪ್ರಶ್ನೆ. ನಮ್ಮ ಡ್ಯಾಂ ಹತ್ತಿರ ಹತ್ತಾರು ಜನರಲ್ಲ, ಲಕ್ಷಾಂತರ ಜನರು ಬಂದು ಆ ಡ್ಯಾಂನಿಂದ ಹರಿಯುವ ನೀರನ್ನು ನೋಡಿ ಕಣ್ಣು ತುಂಬಿಸಿಕೊಂಡು ಸಂತೋಷ ಪಡುತ್ತಿರುವುದಕ್ಕೆ ಜನರು ಸಾಕ್ಷಿಯಾಗಿದ್ದಾರೆ. ಈ ಯೋಜನೆ 2018 ರಿಂದ 2025ರವರೆಗೆ ಆಗಿಲ್ಲವೆಂದರೆ, ಇದರ ಬಗ್ಗೆ ಅಧಿಕಾರಿಗಳು ಏಕೆ ಇಷ್ಟು ವರ್ಷಗಳ ಕಾಲ ನಿರ್ಲಕ್ಷ್ಯ ಮಾಡಿದ್ದಾರೆ? ನಾನು ಮಾನ್ಯ ಸಚಿವರ ಬಗ್ಗೆ ಹೇಳುತ್ತಿಲ್ಲ. ಈಗಾಗಲೇ ಒಂದು ಸಭೆಯನ್ನು ಕರೆದು PPP model ನಲ್ಲಿ ಈ ಯೋಜನೆಯನ್ನು ಪುನಃ estimate ಮಾಡಬೇಕು ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ. ಈಗ ಇಷ್ಟು ವರ್ಷಗಳು ಆಗಿವೆ. ಮಾನ್ಯ ಸಚಿವರು ಈ ತರಹದ ಒಂದು ಯೋಜನೆ ಯಶ್ವಸಿಯಾಗಬೇಕೆಂದು ಜಾರಿಗೊಳಿಸಿದ್ದರೂ ಸಹ, ಇಲ್ಲಿಯವರೆಗೂ ಅದು ಪೂರ್ಣಗೊಂಡಿಲ್ಲ. ನಾನು ಆ ಕ್ಷೇತ್ರದವಳಾಗಿದ್ದೇನೆ. ಅಲ್ಲಿನ ಸ್ಥಳೀಯ ಶಾಸಕರ ಗಮನಕ್ಕೂ ಸಹ ಇದನ್ನು ತಂದಿರುವುದಿಲ್ಲ. ಇದರ ಬಗ್ಗೆ ಇಲ್ಲಿಯವರೆಗೆ ಒಂದು ಸಭೆಯನ್ನು ಸಹ ಕರೆದಿಲ್ಲ. ಹಾಗಾಗಿ, ಆದಷ್ಟು ಬೇಗ ಈ ಯೋಜನೆಯನ್ನು ಪ್ರಾರಂಭ ಮಾಡಿಸಬೇಕು. ಈ ಯೋಜನೆ ನಮ್ಮ ಸರ್ಕಾರದಲ್ಲಿಯೇ ಮುಗಿಯಬೇಕು. ಈ ಯೋಜನೆಯನ್ನು ಮತ್ತೆ ಪುನರ್ ಪ್ರಾರಂಭ ಮಾಡುವುದಕ್ಕೆ ಎಷ್ಟು ವೆಚ್ಚ ತಗಲುತ್ತದೆ ಎಂಬುದನ್ನು ಪುನರ್ ಪರಿಶೀಲನೆ ಮಾಡಿ ಅಗತ್ಯವಾದ ಕಾರ್ಯಕ್ರಮವನ್ನು ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಎಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಉತ್ತರವನ್ನು ಹೇಳಿದ್ದೇನೆ. ಈಗಾಗಲೇ Transaction Advisor ರವರಿಗೆ DPR ಅನ್ನು ತಯಾರಿಸಿ ಬೇಗ ಕೊಡಬೇಕು ಎನ್ನುವಂತಹ ಸೂಚನೆಯನ್ನು ಕೊಟ್ಟಿದ್ದೇವೆ. DPR ರೆಡಿಯಾದ ತಕ್ಷಣ, DPR ಅನ್ನು ತೆಗೆದುಕೊಂಡು ಮುಂದಿನ ಹೆಜ್ಜೆಗಳನ್ನು ಇಡುತ್ತೇವೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಮಾನ್ಯ ಮುಖ್ಯಮಂತ್ರಿಯವರನ್ನು ಪ್ರಶ್ನೆಗಳಿಗೆ ಉತ್ತರಗಳನ್ನು ನೀಡದಿರುವ ಕುರಿತು ಕೇಳಬೇಕೆಂದು ಹೇಳಿದ್ದೀರಿ ಅಲ್ಲವೇ ಹಾಗಾಗಿ, ತಾವು ಈಗ ಆ ಬಗ್ಗೆ ಮಾತನಾಡಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಮ್ಮ ಕೇಳಿರುವಂತಹ ಪ್ರಶ್ನೆಗಳಿಗೆ ಅನೇಕ ಸಂದರ್ಭಗಳಲ್ಲಿ ಉತ್ತರ ನೀಡುವುದಕ್ಕೆ ಸುಮಾರು 2-3 ವಾರಗಳ ಸಮುಮಕಾಶವನ್ನು ಕೇಳುತ್ತಾರೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಅದು ತಪ್ಪು.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರನ್ನು ಮಾನ್ಯ ಸದಸ್ಯರಾದ ಡಾ॥ ಧನಂಜಯ ಸರ್ಜಿಯವರು ಕೇಳಿರುವಂತಹ ಪ್ರಶ್ನೆ ಬಹಳ simple.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಅದು ಬೇರೆ. ತಾವು ಅದನ್ನು ಹೇಳಬೇಡಿ. ಅದರಲ್ಲಿ ಟೈಮ್ ಕೇಳಿದ್ದಾರೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇರಲಿ. ಇದು ಒಂದೇ ಎಂದಲ್ಲ. ನಿನ್ನೆ ದಿವಸ ಮಾನ್ಯ ಸದಸ್ಯರಾದ ಶಾಂತಾರಾಮ್ ಬುಡ್ನ ಸಿದ್ದಿಯವರು ನಾನು ಇಲ್ಲಿಯವರೆಗೆ ಕೇಳಿದ್ದ ಯಾವುದೇ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರ ಕೊಡಬೇಕಾಗಿರುವಂತಹದ್ದರಲ್ಲಿ ಯಾವುದೇ ಉತ್ತರ ಬಂದಿಲ್ಲವೆಂದು ಹೇಳಿದ್ದಾರೆ. ಮಾನ್ಯ ಸದಸ್ಯರಾದ ಗೋವಿಂದರಾಜು ರವರು ಸಹ ನಿನ್ನೆ ದಿವಸ ಅದನ್ನೇ ಹೇಳಿದ್ದಾರೆ. ಒಂದು ಬಾರಿ ಪ್ರಶ್ನೆ ಕೇಳಿ ಬಿಟ್ಟ ಮೇಲೆ, ಅದು ಮರೆತುಹೋದಂತೆ. ಅದಕ್ಕೆ ಉತ್ತರ ಬರುವುದಿಲ್ಲ. ಇದು ಅಷ್ಟೇ simple ಆಗಿತ್ತು. ಇದನ್ನು ಹೇಳಬಹುದಾಗಿತ್ತು. ಇದನ್ನು ಹೊಸದಾಗಿ ಸೃಷ್ಟಿ ಮಾಡಬೇಕಾಗಿಲ್ಲ. ಹಾಗಾಗಿ, ದಯವಿಟ್ಟು ಆಗಿಂದಾಗಿ ಉತ್ತರವನ್ನು ಕೊಡಿಸುವಂತಹ ಕೆಲಸವನ್ನು ತಾವು ಮಾಡಿಸಬೇಕು.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಆಯಿತು. ಮಾನ್ಯ ಸಭಾನಾಯಕರೇ, ಇದರ ಬಗ್ಗೆ ತಾವು ಸ್ವಲ್ಪ ನೋಡಿ. ತಮಗೆ ಮೊನ್ನೆ ದಿವಸ ಹೇಳಿದ್ದೇನೆ. ಈ ರೀತಿ ಪದೇ ಪದೇ ಆಗಬಾರದು.

ಶ್ರೀ **ಎನ್.ಎಸ್.ಬೋಸರಾಜು, (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಉತ್ತರಗಳನ್ನು ತರಿಸಿಕೊಡುತ್ತೇವೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಅಧಿಕಾರಿಗಳು 14 ದಿವಸಗಳ ಟೈಮ್ ಕೇಳುತ್ತಾರೆ. ಅವರಿಗೆ common sense ಬೇಡವೇ?

ಶ್ರೀ **ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸವೇ, ಅವರಿಗೆ ಈ ರೀತಿ ಸೂಚನೆ ಕೊಟ್ಟಿದ್ದಾರೆಂದು ಹೇಳಿದ್ದೇನೆ.

## ಪ್ರಶ್ನೆ ಸಂಖ್ಯೆ 542
## ಬಾಗಲಕೋಟೆ ಜಿಲ್ಲೆಯ ವ್ಯಾಪ್ತಿಯ ಗುಡ್ಡದ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಪ್ರವಾಸೋದ್ಯಮ ಇಲಾಖೆಯಿಂದ ಮೂಲಸೌಕರ್ಯಗಳನ್ನು ನಿರ್ಮಿಸುವ ಕುರಿತು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| 1. | ಬಾಗಲಕೋಟೆ ನಗರಕ್ಕೆ ಕೇವಲ 1 ಕಿ.ಮೀ ಅಂತರದಲ್ಲಿ ಪುರಾತನ ಪ್ರಸಿದ್ಧವಾದ ಗುಡ್ಡದ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನಕ್ಕೆ ನಿತ್ಯ ಸಹಸ್ರಾರು ಪ್ರವಾಸಿಗರು, ಭಕ್ತರು ಹೋಗಿ ಬರುತ್ತಿದ್ದು, ಅದು ಮಲ್ಲಾಪುರ ಗ್ರಾಮ ವ್ಯಾಪ್ತಿಯಲ್ಲಿ ಬರುತ್ತಿದ್ದು, ದೇವಸ್ಥಾನ ಹೊರತುಪಡಿಸಿ ಗ್ರಾಮದ ಸಹಸ್ರಾರು ಎಕರೆ ಜಮೀನುಗಳು ಮತ್ತು ಸಂಪೂರ್ಣ ಗ್ರಾಮವು ಕೂಡ ಆಲಮಟ್ಟಿ ಜಲಾಶಯದಲ್ಲಿ 20 ವರ್ಷಗಳ ಹಿಂದೆ ಮುಳುಗಡೆ ಆಗಿರುವುದು ಸರ್ಕಾರಕ್ಕೆ ತಿಳಿದ ವಿಷಯವಲ್ಲವೇ; | ಹೌದು.<br><br>ದಿನಾಂಕ:26.07.2025ರ ಪತ್ರದಲ್ಲಿ ಬಾಗಲಕೋಟ ಯುನಿಯನ್ ಆಫ್ ಮರ್ಚಂಟ್ಸ್ ಆಂಡ್ ಎಂಟರಪ್ರೈನರ್ಸ್ ಅಸೋಸಿಯೇಷನ್ (ರಿ) ಬಾಗಲಕೋಟೆ ಇವರು ಬಾಗಲಕೋಟೆ ತಾಲ್ಲೂಕಿನ ಗುಡ್ಡದ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನಕ್ಕೆ ಸೇತುವೆ ನಿರ್ಮಾಣ ಮಾಡಿ ಸುಗಮ ಪ್ರವೇಶದ ವ್ಯವಸ್ಥೆ ಕಲ್ಪಿಸುವುದು, ಸ್ಥಳದಲ್ಲಿ ಉದ್ಯಾನವನ, ವೀಕ್ಷಣಾ ಗೋಪುರ ಹಾಗೂ ಶಿವನ ಮಹಾಮೂರ್ತಿ ಸ್ಥಾಪನೆ, ಹಿನ್ನೀರಿನಲ್ಲಿ ಜಲಸಾಹಸ ಚಟುವಟಿಕೆಗಳು - ಕಯಾಕಿಂಗ್, ಜೆಟ್ ಸ್ಕೀ, ಬೋಟಿಂಗ್, ವಿಹಾರ ಇತ್ಯಾದಿಗಳನ್ನು ಪ್ರಾರಂಭಿಸುವುದು, ಮಲ್ಲಯ್ಯನ ಗುಡ್ಡದಿಂದ ಹೆರಕಲ್ ಅಣೆಕಟ್ಟೆವರೆಗೆ ಬೋಟಿಂಗ್ ವ್ಯವಸ್ಥೆ ಕಲ್ಪಿಸುವ ಕಾಮಗಾರಿಗಳಿಗೆ ಅನುಮೋದನೆ ನೀಡಿ ಅನುದಾನ ಬಿಡುಗಡೆ ಮಾಡುವಂತೆ ಮನವಿ ಸ್ವೀಕೃತವಾಗಿರುತ್ತದೆ.<br><br>ಆದರೆ, ಸದರಿ ದೇವಸ್ಥಾನವು ಶ್ರೀ ಮಲ್ಲಿಕಾರ್ಜುನ ಜೀರ್ಣೋದ್ಧಾರ ಸಮಿತಿ ಬಾಗಲಕೋಟೆ ರವರ ಒಡೆತನದಲ್ಲಿದ್ದು, ಈ ದೇವಸ್ಥಾನವು ಬಾಗಲಕೋಟೆ ತಾಲ್ಲೂಕಿನ ಮಲ್ಲಾಪುರ ಎಂಬ ಗ್ರಾಮದ ವ್ಯಾಪ್ತಿಯಲ್ಲಿದ್ದು, ಆಲಮಟ್ಟಿ ಹಿನ್ನೀರಿನಲ್ಲಿ ಸದರಿ ಗ್ರಾಮವು ಮುಳುಗಡೆಯಾದ ಪ್ರಯುಕ್ತ ಗುಡ್ಡದ ಮೇಲಿರುವ ಮಲ್ಲಿಕಾರ್ಜುನ ದೇವಸ್ಥಾನ ಹೊರತುಪಡಿಸಿ ಇಡೀ ಗ್ರಾಮವನ್ನು ಬೇರೆಡೆಗೆ ಸ್ಥಳಾಂತರಿಸಿರುವುದು ತಿಳಿದುಬಂದಿರುತ್ತದೆ.<br><br>ಈ ದೇವಸ್ಥಾನವು ಕೃಷ್ಣಾ ನದಿ ತಟದಲ್ಲಿದ್ದು, ಸುತ್ತಮುತ್ತಲಿನ ಪ್ರದೇಶವು ಪರಿಭಾವಿತ ಅರಣ್ಯ ಪ್ರದೇಶವಾಗಿರುತ್ತದೆ (Deemed Forest). ಈ ಪ್ರದೇಶವು ಅರಣ್ಯ ಇಲಾಖೆ ಹಾಗೂ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಇಲಾಖೆಗಳ ವ್ಯಾಪ್ತಿಯಡಿಯಲ್ಲಿ ಬರುವುದರಿಂದ ಹಾಗೂ ಗುಡ್ಡದ ಮೇಲಿರುವ ಮಲ್ಲಿಕಾರ್ಜುನ ದೇವಸ್ಥಾನದ ಸುತ್ತಮುತ್ತಲಿನ ಪ್ರದೇಶವು ಆಲಮಟ್ಟಿ ಹಿನ್ನೀರಿನಲ್ಲಿ ಮುಳಗಡೆಯಾಗಿರುವುದರಿಂದ ಕೃಷ್ಣಾ ಮೇಲ್ದಂಡೆ ಯೋಜನೆ, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಇಲಾಖೆಯಿಂದ ಸುತ್ತಮುತ್ತಲಿನ ಪ್ರದೇಶದಲ್ಲಿರುವ ಗ್ರಾಮಗಳನ್ನು ಸ್ಥಳಾಂತರಿಸಲಾಗಿರುತ್ತದೆ. |
| 2. | ಈ ದೇವಸ್ಥಾನವು ಎತ್ತರದ ಸುಂದರ ಪರಿಸರ ಪ್ರದೇಶದಲ್ಲಿದ್ದು, ಘಟಪ್ರಭಾ ನದಿಯ ದಡದಲ್ಲಿದ್ದು, ಕಾರಣ, ಕಳೆದ 20 ವರ್ಷಗಳ ಅಲ್ಲಿ ಹೋಗಿ ಬರುತ್ತಿದ್ದು, ಪ್ರವಾಸಿಗರು ಹೋಗಿ ಬರಲು ರಸ್ತೆ ಯಾವ ಆಲಮಟ್ಟಿ ಹಿನ್ನಿರಿನಲ್ಲಿ ರಸ್ತೆ ಮುಳುಗಡೆಯಾದ ಕಾರಣ ಅನಿವಾರ್ಯವಾಗಿ ಸಿಗಂಧೂರು ಚೌಡೇಶ್ವರಿ ದೇವಸ್ಥಾನಕ್ಕೆ ಹೋಗಿ ಬರುವ ರೀತಿ 15-20 ಕಿ.ಮೀ ಹಿನ್ನೀರು ಸುತ್ತು ಬಳಸಿ ಜನರು ತೊಂದರೆ ಅನುಭವಿಸುತ್ತಿರುವ ಮಾಹಿತಿ ಸರ್ಕಾರಕ್ಕೆ ಬಂದಿದೆಯೇ; | |
| 3. | ಈ ಎಲ್ಲ ಕಾರಣಗಳಿಂದ ಅಲ್ಲಿಗೆ ವಾಹನಗಳ ಮೂಲಕ ಹೋಗಿ ಬರಲು ಹಿನ್ನೀರಿಗೆ ಒಂದು ಸೇತುವೆ ನಿರ್ಮಾಣ, ಪ್ರವಾಸಿ ಭಕ್ತರ ಅನುಕೂಲಕ್ಕಾಗಿ ಸರ್ಕಾರಿ ವಸತಿ ಗೃಹ, ಉದ್ಯಾನವನ, ನದಿಗೆ ಇಳಿಯಲು ರಸ್ತೆ, ಪಾವಟಿಗಳ ವ್ಯವಸ್ಥೆ, ಬೋಟಿಂಗ್ ವ್ಯವಸ್ಥೆ, ಹೀಗೆ ಹಲವಾರು ರೀತಿಯಿಂದ ಆ ಇಡೀ ಕ್ಷೇತ್ರವನ್ನು ಪ್ರವಾಸೋದ್ಯಮ ಇಲಾಖೆಯಿಂದ ಅಭಿವೃದ್ಧಿ ಪಡಿಸಲು ಕಳೆದ 20 ವರ್ಷಗಳಿಂದ ಭಕ್ತರು, ಪ್ರವಾಸಿಗರು ಬೇಡಿಕೆ ಇಟ್ಟಿರುವುದು ನಿಜವಲ್ಲವೇ; | |
| 4. | ಹಾಗಿದ್ದಲ್ಲಿ, ಈ ಕುರಿತಂತೆ ಇದನ್ನು ಪ್ರವಾಸೋದ್ಯಮ ಇಲಾಖೆಯಿಂದ ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವ ದಿಶೆಯಲ್ಲಿ ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು? (ವಿವರ ನೀಡುವುದು) | |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| | | ಆದ್ದರಿಂದ, ಸದರಿ ದೇವಸ್ಥಾನದ ಬಳಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯ ಸಭೆಯನ್ನು ಆಯೋಜಿಸಿ ಸದರಿ ಸಭೆಗೆ ಶ್ರೀ ಪಿ.ಹೆಚ್.ಪೂಜಾರ್, ಮಾನ್ಯ ವಿಧಾನ ಪರಿಷತ್ ಸದಸ್ಯರನ್ನೊಳಗೊಂಡಂತೆ ಸ್ಥಳೀಯ ಜನ ಪ್ರತಿನಿಧಿಗಳು ಹಾಗೂ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿ ಈ ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಸವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸಿ ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಅಗತ್ಯವಿರುವ ನಿರಕ್ಷೇಪಣಾ ಪತ್ರಗಳೊಂದಿಗೆ ಸಲ್ಲಿಸಲು ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗುವುದು. ಸದರಿ ವರದಿಗಳು ಸ್ವೀಕೃತವಾದ ನಂತರ ಕ್ರಮವಹಿಸಲಾಗುವುದು.<br><br>ಇದಲ್ಲದೇ, ಪ್ರಸ್ತುತ ಭಾರತ ಸರ್ಕಾರದ ಬಂದರುಗಳು, ಹಡಗು ಮತ್ತು ಜಲಮಾರ್ಗಗಳ ಸಚಿವಾಲಯದ ಅಧೀನದಲ್ಲಿರುವ Inland Waterways Authority of India (IWAI) ಪ್ರಾಧಿಕಾರವು ರಿವರ್ ಕ್ರೂಸ್ ಪ್ರವಾಸೋದ್ಯಮದ (River Cruise Tourism) ಅಭಿವೃದ್ಧಿಗಾಗಿ "River Cruise in India) ಎಂಬ ವರದಿಯನ್ನು ಸಿದ್ಧಪಡಿಸಿರುತ್ತದೆ. ಈ ವರದಿಯಲ್ಲಿ ಕರ್ನಾಟಕದಲ್ಲಿ 12 ಸಂಭಾವ್ಯ ರಾಷ್ಟ್ರೀಯ ಜಲಮಾರ್ಗಗಳನ್ನು (National Waterways) ಗುರುತಿಸಲಾಗಿದೆ. ಅದರಲ್ಲಿ, ವಿಜಯಪುರ ಮತ್ತು ಬಾಗಲಕೋಟೆ ಅವಳಿ ಜಿಲ್ಲೆಗಳಿಗೆ ಹೊಂದಿಕೊಂಡಿರುವ ಕೃಷ್ಣಾ ನದಿಯು ಕೂಡ ಒಂದಾಗಿರುತ್ತದೆ.<br><br>ವಿಜಯಪುರ ಮತ್ತು ಬಾಗಲಕೋಟೆ ಅವಳಿ ಜಿಲ್ಲೆಗಳಿಗೆ ಹೊಂದಿಕೊಂಡಿರುವ ಕೃಷ್ಣಾ ನದಿ ತೀರದಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸುವ ದೃಷ್ಟಿಯಿಂದ ಕ್ರೂಸ್ ಟೂರಿಸಂ ಅನ್ನು ಕೈಗೊಳ್ಳಲು ಆಲಮಟ್ಟಿ ಮತ್ತು ಹೆರಕಲ್ ನಡುವಿನ ಒಟ್ಟು 112 ಕಿಲೋಮೀಟರ್ ಕ್ರೂಸ್ ಸಂಚರಿಸುವ ಮಾರ್ಗದಲ್ಲಿ ಅಂದಾಜು ವೆಚ್ಚ ರೂ.16.95 ಕೋಟಿಗಳಲ್ಲಿ ಎರಡು ಕಾಂಕ್ರೀಟ್ ಫ್ಲೋಟಿಂಗ್ ಜೆಟ್ಟಿಗಳನ್ನು ಹಾಗೂ ಯಾದಗಿರಿ ಜಿಲ್ಲೆಯ ನಾರಾಯಣಸಾಗರ ಆಣೆಕಟ್ಟಿನ ಹತ್ತಿರ ಒಂದು ಕಾಂಕ್ರೀಟ್ ಫ್ಲೋಟಿಂಗ್ ಜೆಟ್ಟಿಯನ್ನು ನಿರ್ಮಿಸಲು ಹಾಗೂ ಸದರಿ ಸ್ಥಳಗಳಲ್ಲಿ Land side facilities ಗಳನ್ನು ಕೈಗೊಳ್ಳಲು ಯೋಜನೆಗಳನ್ನು ರೂಪಿಸಲಾಗಿದೆ. |

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಮಾನ್ಯ ಸಚಿವರು ಸಮಧಾನಕರವಾಗಿ ಉತ್ತರವನ್ನು ಒದಗಿಸಿದ್ದಾರೆ. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಮಲ್ಲಾಪುರ ಗ್ರಾಮದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನ 400 ವರ್ಷಗಳಷ್ಟು ಪುರಾತನವಾದ ದೇವಸ್ಥಾನವಾಗಿದೆ. ಅಲ್ಲಿ ಪ್ರತಿನಿತ್ಯ ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು/ಜನರು ಆ ದೇವರ ದರ್ಶನಕ್ಕಾಗಿ ಹೋಗುತ್ತಿರುವುದನ್ನು ಯಾರು ಸಹ ಅಲ್ಲಗಳೆಯುವುದಕ್ಕೆ ಸಾಧ್ಯವಿಲ್ಲ. ಆ ಮಲ್ಲಾಪುರ ಗ್ರಾಮ ಮುಳುಗಡೆಯ ಕಬಂಧಬಾಹುಗಳಲ್ಲಿ ಸಿಲುಕಿ ಮುಳುಗಡೆಯಾದ ಕಾರಣಕ್ಕೆ ಅಲ್ಲಿ ಸಮಸ್ಯೆಗಳು ಸೃಷ್ಟಿಯಾದವು. ಮಲ್ಲಯ್ಯನಗುಡ್ಡ ಅದು ಮುಳಗಡೆಯಾಗದಿರುವ ಕಾರಣಕ್ಕಾಗಿ ಇವತ್ತಿಗೂ ಕೂಡ

ಬೇರೆ ಬೇರೆ ಮಾರ್ಗಗಳಿಂದ ಅಲ್ಲಿಗೆ ಪ್ರವಾಸಿಗರು ಹಾಗೂ ಭಕ್ತರು ಹೋಗಿ ಬರುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಅಲ್ಲಿ ಮಾರ್ಗ ಬಂದ್ ಆದ ಕಾರಣಕ್ಕಾಗಿ ಅಲ್ಲಿಗೆ ಹೋಗುವಂತಹ ರಸ್ತೆ ಕೂಡ ಮುಳುಗಡೆ ಆಗಿರುವಂತಹದ್ದು ಆಗಿದೆ. ಅಲ್ಲಿಗೆ ಅನಿವಾರ್ಯವಾಗಿ ಭಕ್ತರು ಯಾವುದೇ ಒಂದು ಹಾದಿಯನ್ನು ಹುಡುಕಿಕೊಂಡು ಹೋಗಬೇಕೆಂದರೆ, ಈ ಹಿಂದೆ ಅಲ್ಲಿ ಒಂದು incident ಆಗಿತ್ತು. 2001ನೇ ಸಾಲಿನಲ್ಲಿ ರೈಲ್ವೆ ಹಳಿಗಳ ಮುಖಾಂತರ ಹೋಗಿ ಹಿನ್ನೀರನ್ನು ದಾಟುವುದಕ್ಕೆ ಆ ದೇವಸ್ಥಾನಕ್ಕೆ ಹೋಗಿ ಬರುವಂತಹದ್ದು ಇದೆ. ನಾವು ಗಂಗಾನದಿಯ ಮೇಲೆ ಹಾಕಿರುವಂತಹ ರೈಲ್ವೆ ಬ್ರಿಡ್ಜ್‌ನ ಮೇಲಿಂದ ಸುಂದರವಾದಂತಹ ಒಂದು ದೃಶ್ಯವನ್ನು ನೋಡುತ್ತಿರುತ್ತೇವೆ. ಆ ರೀತಿಯ ದೃಶ್ಯ ಅಲ್ಲಿ ಕಾಣುತ್ತದೆ. ಆ ಹೂವಿನಂತಹ ಅಮಾಯಕ ಭಕ್ತರು ಎದುರುಗಡೆಯಿಂದ ರೈಲು ಬಂದ ಕಾರಣಕ್ಕಾಗಿ ಕೆಲವರು ನದಿಗೆ ಹಾರಿದರು, ಕೆಲವರು ರೈಲ್ವೆ ಹಳಿಗಳ ಮೇಲೆ ಸಿಕ್ಕಿಕೊಂಡರು. ಇದರಿಂದ 7 ಜನರು ಪ್ರಾಣ ಕಳೆದುಕೊಂಡಿದ್ದು ಸಹ ನಮ್ಮ ಬಾಗಲಕೋಟೆ ಜಿಲ್ಲೆ ದುರಂತದಲ್ಲಿ ಒಂದಾಗಿರುವಂತಹದ್ದು ಆಗಿದೆ.

**(ಮುಂದು)**

(708) 14-08-2025/12.10/ಎಂವಿ-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪಿ.ಹೆಚ್.ಪೂಜಾರ್ (ಮುಂದು):-**

ಇವತ್ತು ಈ ಹಿನ್ನೀರು ದಾಟುವಂತಹ ಭಕ್ತರ ಆತ್ಮಕ್ಕೆ ಶಾಂತಿ ತರಬೇಕು ಎನ್ನುವ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ಒತ್ತಾಯ ಮಾಡುವಂಥದ್ದು. ಬಾಗಲಕೋಟೆಯ ಬಾದಾಮಿ ಮತ್ತು ಹಂಪಿಗಳಂತೆ ವಿದೇಶಿ ಪ್ರವಾಸಿಗರನ್ನು ಆಕರ್ಷಣೆ ಮಾಡುವಂತಹ ಸ್ಥಳವಲ್ಲ. ಆದರೆ, ಮುಳುಗಡೆಯಿಂದ ಬಹಳಷ್ಟು ಅನುಕೂಲತೆಗಳು ಒಂದು ಭಾಗದಲ್ಲಿ ಆಗಿವೆ. ಈಗ blessing in disguise ಎಂದು ಹೇಳುತ್ತಾರೆ. ಅನೇಕ ಪ್ರವಾಸೋದ್ಯಮದ ಆಕರ್ಷಣೆಗೆ ಈ ಹಿನ್ನೀರಿನಿಂದ ಅನೇಕ ಅವಕಾಶಗಳು ಅಲ್ಲಿ ತೆರೆದಿರುವಂಥದ್ದು ಆಗಿದೆ. ಅಲ್ಲಿಗೆ ಪರಿಸರದ ಸೃಷ್ಟಿ ಸೌಂದರ್ಯವನ್ನು ನೋಡುವುದಕ್ಕೆ ಪ್ರವಾಸಿಗರು ಬರುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ವಿದೇಶಿ ಪಕ್ಷಿಗಳ ಕಲರವ ಸಹ ಕಾಣುತ್ತಿದೆ. ಈ ದಿಶೆಯಲ್ಲಿ ಸಾಗರದಂತೆ ಕಾಣುವಂತಹ ಹಿನ್ನೀರಿನ ಪರಿಸರವನ್ನು ಅಭಿವೃದ್ಧಿಪಡಿಸಬೇಕು. ಶಿವಮೊಗ್ಗ ಜಿಲ್ಲೆಯಲ್ಲಿ ಮುಳುಗಡೆಯಾದಂತಹ ಸಿಗಂದೂರಿನಲ್ಲಿ ಮೊನ್ನೆಯ ದಿವಸ ಮಾನ್ಯ ಕೇಂದ್ರ ಸಚಿವರಾದ ಶ್ರೀ ನಿತೀನ್ ಗಡ್ಕರಿಯವರು ಸೇತುವೆಯನ್ನು ಉದ್ಘಾಟನೆ ಮಾಡಿದ್ದಾರೆ. ಆ ಸೇತುವೆ ಇಡೀ ರಾಷ್ಟ್ರ ಮತ್ತು ರಾಜ್ಯಕ್ಕೆ ಕೊಟ್ಟಂತಹ ಕೊಡುಗೆಯಾಗಿದೆ. ಆ ಮಾದರಿಯ ಸ್ಥಿತಿಯನ್ನು ಆ ಹಿನ್ನೀರಿನಲ್ಲಿ ನೋಡುವಂತಹವರಿಗೆ ಕಾಣುವಂಥದ್ದು ಆಗಬೇಕು. ಸರ್ಕಾರ ಇದಕ್ಕೆ ಏಕೆ ಅಲಕ್ಷ್ಯ ಮಾಡಿದೆ? ಮಾನ್ಯ ಸಚಿವರು ಜವಾಬ್ದಾರಿಯನ್ನು ತೆಗೆದುಕೊಂಡು ಹೇಳಿದ್ದಾರೆ. ಅದನ್ನು ಶೀಘ್ರದಲ್ಲಿ ಪೂರ್ತಿಗೊಳಿಸುವಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಪಿ.ಹೆಚ್.ಪೂಜಾರ್‌ರವರು ಕೇಳಿರುವಂತಹ ಪ್ರಶ್ನೆ ಹಾಗೂ ಅವರು ವ್ಯಕ್ತ ಮಾಡಿರತಕ್ಕಂತಹ ಕೆಲವು ಮಾತುಗಳು ಕೇವಲ ಆ ಮಲ್ಲಯಜ್ಜನ ಗುಡ್ಡ ಮಲ್ಲಿಕಾರ್ಜುನ ಸ್ವಾಮಿಯ ಬಗ್ಗೆ ಇರುವಂತಹ ಶ್ರದ್ಧಾ ಭಾವನೆ ಅಥವಾ ಆ ಭಕ್ತಿ ಭಾವದ ಕಾರಣಕ್ಕಾಗಿ ಮಾತ್ರವೆಂದು ನಾನು ಭಾವಿಸುವುದಿಲ್ಲ. ಅವರ ಈ ಪ್ರಶ್ನೆ ಏನಿದೆ, ಅದಕ್ಕೆ ಬಹಳಷ್ಟು dimensions ಇದೆ. ನಾನು ಅದಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ನೀಡಿದ್ದೇನೆ. ಬಾಗಲಕೋಟೆಯ ಜಿಲ್ಲಾಧಿಕಾರಿಗಳು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಕೌನ್ಸಿಲ್‌ನ ಅಧ್ಯಕ್ಷರಾಗಿದ್ದಾರೆ. ನಾವು ಅವರಿಗೆ ಸೂಚನೆಯನ್ನು ಸಹ ಕೊಟ್ಟಿದ್ದೇವೆ. ಅಂದರೆ, ಮಾನ್ಯ ಸದಸ್ಯರ ಜೊತೆ ಹಾಗೂ ಇತರೆ ಶಾಸಕರ ಜೊತೆ ಈ ವಿಚಾರವಾಗಿ ಚರ್ಚೆ ಮಾಡಿ, ಅದರ ವಿವರವಾದ ವರದಿಯನ್ನು ನಮಗೆ ಕಳುಹಿಸಿಕೊಡಿ, ಮತ್ತೆ ಅದಕ್ಕೆ ಏನು ಮಾಡಬಹುದು ಎಂಬುದನ್ನು ಸಹ ತಿಳಿಸಬೇಕು ಎಂದು ಸೂಚನೆ ಕೊಟ್ಟಿದ್ದೇವೆ. ಇದು ಇಷ್ಟಕ್ಕೆ ನಿಲ್ಲುವುದಿಲ್ಲ. ನಾನು ಮಾನ್ಯ ಸದಸ್ಯರಿಗೆ ನೀಡಿರುವ ಉತ್ತರದಲ್ಲಿ ಇವತ್ತಿನ ದಿವಸದಲ್ಲಿ ಭಾರತ ಸರ್ಕಾರದವರು Inland Waterways Authority of India ದವರು River Cruise ಪ್ರವಾಸದ ಅಭಿವೃದ್ಧಿಗಾಗಿ ಒಂದು ವರದಿಯನ್ನು ಸಿದ್ಧಪಡಿಸಿದ್ದರು. ಈ ವರದಿಯಲ್ಲಿ 12 ಸಂಭಾವ್ಯ ರಾಷ್ಟ್ರೀಯ ಜಲ ಮಾರ್ಗಗಳನ್ನು National Waterways ಗಳನ್ನು ಗುರುತಿಸಲಾಗಿದೆ. ಅದರ ಅಡಿಯಲ್ಲಿ ವಿಜಯಪುರ ಮತ್ತು ಬಾಗಲಕೋಟೆಯ ಅವಳಿ ಜಿಲ್ಲೆಗಳಿಗೆ ಹೊಂದಿಕೊಂಡಿರುವಂತಹ ಕೃಷ್ಣಾ ನದಿ ಕೂಡ ಬರುತ್ತದೆ. ಅವರು 'ಮಲ್ಲಯಜ್ಜನ ಗುಡ್ಡ' ವನ್ನು ನೆನಪು ಮಾಡಿಕೊಂಡಿರುವುದರ ಒಳಗೆ ನಮ್ಮ ಪ್ರವಾಸೋದ್ಯಮಕ್ಕೆ ಹಾಗೂ ಉತ್ತರ ಕರ್ನಾಟಕದ ಪ್ರವಾಸೋದ್ಯಮದ ಅಭಿವೃದ್ಧಿಗೆ ಅವಕಾಶ ಇರುವಂಥದ್ದನ್ನು ಈ ಸಂದರ್ಭದಲ್ಲಿ ತಿಳಿಸಿದ್ದೇನೆ. ಈಗ ಆಲಮಟ್ಟಿ ಮತ್ತು ಹಿಡಕಲ್ ಜಲಾಶಯಗಳ ನಡುವಿನ 12 ಕಿಲೋಮೀಟರ್ Cruise ಸಂಚರಿಸುವ ಮಾರ್ಗದಲ್ಲಿ ಈಗಾಗಲೇ 16.95 ಕೋಟಿ ರೂಪಾಯಿಗಳ ಎರಡು Concrete Floating Jetty ಗಳನ್ನು ಹಾಗೂ ಯಾದಗಿರಿ ಜಿಲ್ಲೆಯ ನಾರಾಯಣ ಸಾಗರ ಅಣೆಕಟ್ಟಿನ ಹತ್ತಿರ ಒಂದು Concrete Floating Jetty ಅನ್ನು ನಿರ್ಮಿಸುವುದರ ಸಲುವಾಗಿ ನಾವು Landslide facilities ಯನ್ನು create ಮಾಡುವುದಕ್ಕೆ ಯೋಜನೆಯನ್ನು ರೂಪಿಸಿದ್ದೇವೆ. ನಾವು ಈ ಯೋಜನೆಯನ್ನು ಅನುಷ್ಠಾನಕ್ಕೆ ಎಂದು ಪ್ರಾರಂಭ ಮಾಡಿದಾಗ, ನನಗೆ ವಿಶ್ವಾಸವಿರುವಂತೆ ಅಲ್ಲಿರುವಂತಹ ಪ್ರವಾಸೋದ್ಯಮದ ಅವಕಾಶಗಳು ಬಹಳಷ್ಟು ಜಾಸ್ತಿಯಾಗುತ್ತದೆ. ಹಾಗೂ ಈ ಒಂದು National Waterways ಆಯಿತು ಎಂದರೆ, ವಿಜಯಪುರ ಮತ್ತು ಬಾಗಲಕೋಟೆಯ ಮಧ್ಯ ಇದು ಒಂದು ದೊಡ್ಡ ಹೆಜ್ಜೆಯಾಗಬಹುದು. ಮಾನ್ಯ ಜಲಸಂಪನ್ಮೂಲ ಮಂತ್ರಿಗಳಾದ ಮಾನ್ಯ ಉಪ ಮುಖ್ಯಮಂತ್ರಿಗಳು ಇದಕ್ಕೆ ವಿಶೇಷವಾದ ಅನುಮತಿಯನ್ನು ಕೊಡಬೇಕಾಗುತ್ತದೆ. ಈ ಸಂದರ್ಭದಲ್ಲಿ ಅದನ್ನು ಸಹ ಪ್ರಸ್ತಾಪ ಮಾಡುತ್ತೇನೆ. ಅದೇ ರೀತಿ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಸಹ ಚರ್ಚೆ ಮಾಡಿ, ಈ National Waterways ಮಾಡುವುದಕ್ಕೆ ಏನೇನು ಸಾಧ್ಯ ಆ ಕಾರ್ಯಕ್ರಮವನ್ನು ರೂಪಿಸುತ್ತೇವೆ.

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿರುವಂಥದ್ದು ಸಂಪೂರ್ಣ ಸತ್ಯವಿದೆ. ನಾನು ಮಾನ್ಯ ಸಚಿವರು ಹೇಳಿರುವಂಥದ್ದನ್ನು ಸ್ವಾಗತ ಮಾಡುತ್ತೇನೆ. ಅದಕ್ಕೆ ಇನ್ನು ಎರಡು ಅಂಶಗಳನ್ನು ಸೇರಿಸಬೇಕಾಗಿದೆ. ಬೀಳಗಿ ತಾಲ್ಲೂಕಿನಲ್ಲಿ 'ಚಿಕ್ಕ ಸಂಗಮ' ಎನ್ನುವಂಥದ್ದು ಕೂಡ ಇದೆ.

**ಶ್ರೀ ಹೆಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದು ಬೇರೆ ವಿಷಯವಾಗಿದೆ.

**ಸಭಾಪತಿಯವರು:-** ತಾವು ಅದನ್ನು ಆಮೇಲೆ ಹೇಳಿ.

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ಇದನ್ನು ಕೂಡ ಪ್ರಾರಂಭ ಮಾಡಬೇಕು ಎಂದು ಪ್ರವಾಸೋದ್ಯಮ ಸಚಿವರಿಗೆ ಹೇಳುತ್ತಿದ್ದೇನೆ. ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಜಲಸಂಪನ್ಮೂಲ ಸಚಿವರು ಸಹ ಇದ್ದಾರೆ. ಈ ಹಿಂದಿನ equation ಅನ್ನು ನಾನು ನೋಡಿದ್ದೇನೆ. 2004ರ ಸಂದರ್ಭದಲ್ಲಿ ಈ ಇಬ್ಬರೂ ಸಚಿವರು ಇದ್ದರು. ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾದಂತಹ ಸಂದರ್ಭದಲ್ಲಿ ಅದೇ equation ಮುಂದುವರೆದಿತ್ತು ಎಂದರೆ, ಈ ಆಲಮಟ್ಟಿ ಯೋಜನೆ ಕಾಮಗಾರಿ ಹತ್ತು ವರ್ಷದಲ್ಲಿಯೇ ಮುಗಿದು ಹೋಗುತ್ತಿತ್ತು. ಏಕೋ ಏನೋ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ.ಶಿವಕುಮಾರ್ ರವರು ಉತ್ತರ ಕರ್ನಾಟಕದ ಎಲ್ಲಾ ಯೋಜನೆಗಳ ಬಗ್ಗೆ ಉದಾಸೀನ ಮಾಡುತ್ತಿದ್ದಾರೆನೋ ಎಂಬ ಭಾವನೆ ಒಟ್ಟಾರೆ ಆ ಭಾಗದ ಜನರಿಗೆ ಬಂದಿದೆ. ಮಾನ್ಯ ಪ್ರವಾಸೋದ್ಯಮ ಸಚಿವರು ಬಹಳ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಅವರು ಐಹೊಳೆ ಮತ್ತು ಪಟ್ಟದಕಲ್ಲು ಮತ್ತೆ ಎಲ್ಲಾ ಕಡೆಗಳಿಗೆ ಪ್ರವಾಸ ಮಾಡುತ್ತಿದ್ದಾರೆ. ಅಲ್ಲಿಗೆ ಹೆಚ್ಚಿನ ಅನುದಾನ ನೀಡಲಿ. ಆ ಪ್ರವಾಸೋದ್ಯಮಕ್ಕೆ ಏನು blessing in disguise ಎಂದು, ಈಗ ಎಲ್ಲೆಲ್ಲಿ ಅನುಕೂಲಗಳು ಮತ್ತು ಪ್ರವಾಸೋದ್ಯಮಕ್ಕೆ ಇಂಬು ಕೊಡುವಂತಹ ಅವಕಾಶಗಳಿವೆಯೋ ಆ ಎಲ್ಲಾ ಅವಕಾಶಗಳನ್ನು explore ಮಾಡಿ, ಅಲ್ಲಿ ಅನುಕೂಲತೆ ಮಾಡಿ, ಆ ಪ್ರವಾಸಿಗರಿಗೆ ಮತ್ತು ಅಲ್ಲಿನ ಸಂತ್ರಸ್ತ ಬಂಧುಗಳು ನಾಲ್ಕು ಕಾಸು ದುಡ್ಡನ್ನು ಗಳಿಸುವುದಕ್ಕೆ ಆ ಪ್ರವಾಸೋದ್ಯಮದ ಇತಿಹಾಸದಿಂದ ಅನುಕೂಲವಾಗಲಿ ಎಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಒತ್ತಾಯ ಮಾಡುತ್ತೇನೆ.

**ಶ್ರೀ ಹೆಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸದಸ್ಯರು ಹೇಳಿರುವಂಥದ್ದನ್ನು ಇದರಲ್ಲಿ ಪ್ರಸ್ತಾಪ ಮಾಡಿಲ್ಲ. ಈ 'ಚಿಕ್ಕ ಸಂಗಮ' ಮತ್ತು 'ಆಲಮಟ್ಟಿ' ಯನ್ನು ಪೂರ್ಣಗೊಳಿಸುವುದಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕ ಸಮಯವನ್ನು ತೆಗೆದುಕೊಳ್ಳಲಿ. ಮಾನ್ಯ ಸದಸ್ಯರು ಈ ಪ್ರವಾಸೋದ್ಯಮದಲ್ಲಿ ಅದನ್ನೂ ಸೇರಿಸುವುದು ಬೇಡ. ನಾನು ಈ ಸಂದರ್ಭದಲ್ಲಿ ಹೇಳುವುದು ಏನೆಂದರೆ, ನಾನು ಮಾನ್ಯ ಸದಸ್ಯರ ಕಳಕಳಿಯನ್ನು ಅರ್ಥ ಮಾಡಿಕೊಂಡಿದ್ದೇನೆ. ಇದನ್ನು ಪ್ರವಾಸೋದ್ಯಮದ ದೃಷ್ಟಿಯಿಂದ ಏನು ಆಲಮಟ್ಟಿಯ ಹಿನ್ನೀರು ಇದೆ, ಆ ಆಲಮಟ್ಟಿ ಹಿನ್ನೀರು ಮುಳುಗಿಸಿತು ಎಂಬುದು ಮಾತ್ರವಲ್ಲ. ಇದು ಒಂದು ಪ್ರಸಿದ್ಧವಾಗಿರುವಂತಹ ಹಿನ್ನೀರು ಪ್ರವಾಸೋದ್ಯಮದ ತಾಣ ಮಾಡುವುದಕ್ಕೆ ಸಾಧ್ಯವಿದೆ. ಏಕೆಂದರೆ, ಆ ಹಿನ್ನೀರು ಕನಿಷ್ಠ ಎಂಟು ತಿಂಗಳು

ಸಂಪೂರ್ಣವಾಗಿ ಲಭ್ಯವಿರುತ್ತದೆ. ಅದನ್ನು ಉಪಯೋಗ ಮಾಡತಕ್ಕಂತಹ ಎಲ್ಲಾ ಕಾರ್ಯಕ್ರಮವನ್ನು National Waterways ಅನ್ನು ಏನು ಮಾಡಬೇಕೆಂದು ಇವತ್ತು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಕೂಡಿಕೊಂಡು ಅದರ ಬಗ್ಗೆ ಚಿಂತನೆ ಮಾಡುತ್ತಿದ್ದೇವೆ. ನಾವು ಆ ಕೆಲಸ ಮಾಡುವುದಕ್ಕೆ ಹೆಜ್ಜೆಯನ್ನು ಇಡುತ್ತೇವೆ.

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ಅವರು ಕೂಡಲ ಸಂಗಮದಲ್ಲಿಯೂ ಸಹ ಮಾಡಲಿ. ಕೇಂದ್ರ ಸರ್ಕಾರದ ಜಲಸಂಪನ್ಮೂಲ ಇಲಾಖೆಯ ಜೊತೆ ಮಾತನಾಡಿಕೊಂಡು National Highways Authority of India ಜೊತೆಯಲ್ಲಿ ಅದನ್ನು ಒಯ್ಯುವುದಕ್ಕೆ ಬರುತ್ತದೆ. ಇವರ ಮೇಲೆ ಹೆಚ್ಚಿಗೆ ಖರ್ಚು ಬರುವುದಿಲ್ಲ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ತಾವು ಅವರುಗಳಿಗೆ ಹೇಳಿ. ಅವರಿಗೆ ಹೇಳಿದರೆ ಕೇಳುವುದಿಲ್ಲ.

## ತಡೆ ಹಿಡಿಯಲಾದ ಪ್ರಶ್ನೆ ಸಂಖ್ಯೆ:443

## ಪೆರಿಫೆರಲ್ ವರ್ತುಲ ರಸ್ತೆ-2 ಕಾಮಗಾರಿಯ ಬಗ್ಗೆ

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಪೆರಿಫೆರಲ್ ವರ್ತುಲ ರಸ್ತೆ-2 ಪ್ರಾರಂಭವಾಗಿದ್ದು, ಯಾವಾಗ; ಪ್ರಸ್ತುತ ಕಾಮಗಾರಿ ಯಾವ ಹಂತದಲ್ಲಿದೆ; (ವಿವರ ನೀಡುವುದು) | • ಪೆರಿಫೆರಲ್ ರಿಂಗ್ ರಸ್ತೆ-2 ಯೋಜನೆಗಾಗಿ ದಿನಾಂಕ:12.12.2005 ರಂದು ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿರುತ್ತದೆ.<br>• ಉದ್ದೇಶಿತ 52.60 ಕಿ.ಮೀ ಉದ್ದದ ಫೆರಿಫೆರಲ್ ರಿಂಗ್ ರಸ್ತೆ-2 ಪೈಕಿ ಮಾಗಡಿ ರಸ್ತೆಯಿಂದ ಮೈಸೂರು ರಸ್ತೆವರೆಗಿನ (ಎಂ.ಎ.ಆರ್.) 10.77 ಕಿ.ಮೀ ಉದ್ದದ ರಸ್ತೆ ಕಾಮಗಾರಿಯು ಮುಕ್ತಾಯ ಹಂತದಲ್ಲಿರುತ್ತದೆ. ಉಳಿದ ಜಮೀನುಗಳಿಗೆ ಸಂಬಂಧಿಸಿದಂತೆ ಜೆ.ಎಂ.ಸಿ ಕಾರ್ಯ ಪ್ರಗತಿಯಲ್ಲಿರುತ್ತದೆ. |
| ಆ | ಪೆರಿಫೆರಲ್ ವರ್ತುಲ ರಸ್ತೆ-2ರ ಉಪಯೋಗಕ್ಕಾಗಿ ರೈತರಿಂದ ಎಷ್ಟು ಎಕರೆ ಜಮೀನನ್ನು ಭೂಸ್ವಾಧೀನ ವಶಪಡಿಸಿಕೊಳ್ಳಲಾಗಿದೆ; | • ಪೆರಿಫೆರಲ್ ವರ್ತುಲ ರಸ್ತೆ ಭಾಗ-2 ಯೋಜನೆಗಾಗಿ ದಿನಾಂಕ:12.12.2005ರಂದು 1862ಎಕರೆ 10ಗುಂಟೆ ಹಾಗೂ ದಿನಾಂಕ:15.11.2006 ರಂದು 854ಎಕರೆ ಒಟ್ಟು 2716 ಎಕರೆ 10 ಗುಂಟೆ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಪ್ರಾಥಮಿಕ ಅಧಿಸೂಚನೆಗಳನ್ನು ಹೊರಡಿಸಲಾಗಿರುತ್ತದೆ.<br>• ಮಾಗಡಿ ರಸ್ತೆಯಿಂದ ಮೈಸೂರು ರಸ್ತೆವರೆಗಿನ ಫೆರಿಫೆರಲ್ ವರ್ತುಲ (ಎಂ.ಎ.ಆರ್.) ರಸ್ತೆಗೆ ಅವಶ್ಯಕವಾದ 321ಎಕರೆ 10ಗುಂಟೆ ಜಮೀನಿಗೆ ದಿನಾಂಕ:27.07.2011 ರಂದು ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. |
| ಇ | ರೈತರ ಜಮೀನುಗಳನ್ನು ವಶಪಡಿಸಿಕೊಳ್ಳಲು ಇರುವ ಮಾನದಂಡಗಳೇನು; | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ 1976 ರಂತೆ ಭೂಸ್ವಾಧೀನದ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. |
| ಈ | ಪೆರಿಫೆರಲ್ ವರ್ತುಲ ರಸ್ತೆ-2 ಕಾಮಗಾರಿ ಪ್ರಸ್ತುತ ಯಾವ ಹಂತದಲ್ಲಿದೆ ಮತ್ತು ಯಾವಾಗ ಪ್ರಾರಂಭ ಮಾಡಲಾಗುವುದು; ಎಷ್ಟು ಗ್ರಾಮಗಳಲ್ಲಿ ಈ ರಸ್ತೆ ಹಾದು ಹೋಗುತ್ತದೆ (ಸಂಪೂರ್ಣ ವಿವರ ನೀಡುವುದು)? | • 10.77 ಕಿ. ಮೀ ಉದ್ದದ ಮಾಗಡಿ ರಸ್ತೆಯಿಂದ ಮೈಸೂರು ರಸ್ತೆವರೆಗಿನ ಫೆರಿಫೆರಲ್ ರಿಂಗ್ ರಸ್ತೆ-2 (ಎಂ.ಎ.ಆರ್.) ಕಾಮಗಾರಿಯು ಮುಕ್ತಾಯ ಹಂತದಲ್ಲಿರುತ್ತದೆ.<br>• ಉಳಿದಂತೆ, ಫೆರಿಫೆರಲ್ ರಿಂಗ್ ರಸ್ತೆ-2 ನಿರ್ಮಾಣಕ್ಕಾಗಿ ಅವಶ್ಯವಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ಜಾರಿಯಲ್ಲಿದ್ದು, ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡ ನಂತರ ಕಾಮಗಾರಿಯನ್ನು ಕೈಗೊಳ್ಳಲಾಗುವುದು.<br>• ಸದರಿ ರಸ್ತೆಗೆ ಭೂಸ್ವಾಧೀನಪಡಿಸಿಕೊಳ್ಳಲು ಅಧಿಸೂಚನೆಗೊಂಡಿರುವ ಗ್ರಾಮಗಳ ವಿವರವನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |

ಅನುಬಂಧ.

## ABSTRACT

ಪ್ರಾಥಮಿಕ ಅಧಿಸೂಚನೆ ದಿನಾಂಕ: 12.12.2

| Name of the District | Name of the Taluk | Name of the Hobli | Village Name | Extent Proposed for Acquisition | |
|---|---|---|---|---|---|
| | | | | A | G |
| 1 | 2 | 3 | 4 | 5 | 6 |
| Bangalore Urban | Bangalore South | Beguru | 1. Beretena Agrahara | 0 | 5 |
| | | | 2. Bettadasanapura | 37 | 23 |
| | | | 3. Chikka Thoguru | 1 | 19 |
| | | | 4. Dodda Thoguru | 106 | 39 |
| | | | 5. Mylasandra | 22 | 19 |
| | | | 6. Vittasandra | 21 | 00 |
| | Anekal | Jigani | 1. Banneraghatta | 33 | 6 |
| | | | 2. Bhutanahalli | 43 | 30 |
| | | | 3. Bilvaradahalli | 96 | 0 |
| | | | 4. Gollahalli | 56 | 11 |
| | | | 5. Hullahalli | 44 | 36 |
| | | | 6. Kannaikana Agrahara | 5 | 34 |
| | | | 7. Lakshmipura | 23 | 00 |
| | | | 8. Sakalavara | 14 | 6 |

| 1 | 2 | 3 | 4 | 5 | 6 |
|---|---|---|---|---|---|
| Bangalore Urban | Anekal | Jigani | 9. Vaderahalli | 7 | 28 |
| | Bangalore South | Uttarahalli | 1. Gulakamale | 69 | 20 |
| | | | 2. Kaggalipura | 122 | 33 |
| | | | 3. Uttari | 39 | 20 |
| | | Kengeri | 1. Agara | 95 | 32 |
| | | | 2. B M Kaval | 39 | 0 |
| | | | 3. Challaghatta | 95 | 22 |
| | | | 4. Devagere | 45 | 19 |
| | | | 5. Gangasandra | 42 | 8 |
| | | | 6. Gudimavu | 14 | 36 |
| | | | 7. K Krishnasagara | 34 | 33 |
| | | | 8. Kambipura | 112 | 08 |
| | | | 9. Kenchanapura | 33 | 17 |
| | | | 10. Kommaghatta | 38 | 1 |
| | | | 11. Soolikere | 93 | 14 |
| | Bangalore North | Yeshwantpura | 1. Kannalli | 49 | 36 |
| | | | 2. Kodagehalli | 36 | 32 |
| | | | 3. Seegehalli | 52 | 16 |

ಅನುಬಂಧ

ಪ್ರಥಮಿಕ ಅಧಿಸೂಚನೆ ದಿನಾಂಕ: 15.11.2006

ABSTRACT

| Name of the District | Name of the Taluk | Name of the Hobli | Name of the Village | Extent Proposed for A | G |
|---|---|---|---|---|---|
| Bangalore Urban | Anekal | Attibele | 1. Hebbagodi | 10 | 36 |
| | | | 2. Veerasandra | 23 | 13 |
| | | | 3. Gollahalli | 12 | 12 |
| 1 2 | 3 4 5 6 | 7 8 9 | 10 11 12 | 13 | 14 |
| Bangalore Urban | Anekal | Jigani | 4. Maragondanahalli | 37 | 18 |
| | | | 5. Hulimangala | 29 | 1 |
| | | | 6. Bingipura | 48 | 35 |
| | | | 7. Hullahalli | 38 | 18 |
| Bangalore Urban | Anekal | Jigani | 8. Bilvardahalli | 120 | 25 |
| | | | 9. Bhutanahalli | 29 | 5 |
| | Bangalore South | Begur | 10. Kannaikana Agrahara | 17 | 6 |
| | | | 11. Hommadevanahalli | 32 | 9 |
| | | Uttarahalli | 12. Basavanapura | 24 | 0 |
| | | | 13. Gottigere | 10 | 22 |
| | | | 14. Pillaganahalli | 18 | 0 |
| | | | 15. Gulakamale | 30 | 1 |
| | | | 16. Kaggalipura | 16 | 6 |
| | | | 17 Uttari | 8 | 14 |
| | | Kengeri | 18. B.M.Kaval | 8 | 9 |
| | | | 19. Agara | 8 | 29 |
| | | | 20. Devagere | 10 | 27 |
| | | | 21. Gudimavu | 1 | 12 |
| | | | 22. Kambipura | 17 | 21 |
| | | | 23. Challaghatta | 4 | 35 |
| | | | 24. K.Krishnasagara | 9 | 0 |
| | | | 25. Bhimanakuppe | 0 | 20 |
| | | | 26. Komaghatta | 0 | 10 |
| | | | 27. Soolikere | 3 | 30 |
| | Bangalore North | | 28. Kenchenapura | 5 | 1 |
| | | Yeshwanthapura | 29. Kannalli | 5 | 1 |
| | | | 30. Seegehalli | 2 | 38 |
| | | Dasanapura | 31. Machohalli | 125 | 37 |
| | | | 32. Vaddarahalli | 36 | 1 |
| | | | 33. Lakshmipura | 24 | 16 |
| | | | 34. Kadarenahalli | 41 | 29 |
| | | | 35. Harokyathanahalli | 2 | 12 |
| | | | 36. Dombarahalli | 6 | 34 |
| | | | 37. Siddanahosahalli | 20 | 4 |
| | | | 38. Madanayakanahalli | 12 | 13 |
| | | | GRAND TOTAL | 854 | 0 |

**ಶ್ರೀ ಹೆಚ್.ಎಸ್.ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಪೆರಿಫೆರಲ್ ವರ್ತುಲ ರಸ್ತೆ-2 ಅನ್ನು 52.60 ಕಿಲೋಮೀಟರ್ ಮಾಡಬೇಕೆಂದು ಇರತಕ್ಕಂಥದ್ದು. ಆದರೆ, ಇದುವರೆವಿಗೂ 10.77 ಕಿಲೋಮೀಟರ್ ಉದ್ದದ ರಸ್ತೆಯನ್ನು 321 ಎಕರೆಯಲ್ಲಿ ನಿರ್ಮಾಣ ಮಾಡಿದ್ದಾರೆ. ಈ ಪೆರಿಫೆರಲ್ ವರ್ತುಲ ರಸ್ತೆಯನ್ನು ನಿರ್ಮಾಣ ಮಾಡುವುದಕ್ಕೆ ಇನ್ನು 2,400 ಎಕರೆಯಷ್ಟು ಭೂ-ಸ್ವಾಧೀನ ಮಾಡಬೇಕು. ಇದಕ್ಕೆ 2006ರಲ್ಲಿ preliminary notification ಆಗಿದೆ. ಆದರೆ, ಇನ್ನೂ ಕೂಡ final notification ಆಗಿಲ್ಲ. ನಾನು ಇದನ್ನು ಅವರ ಗಮನಕ್ಕೆ ತರುವುದೇನೆಂದರೆ, ಹೊಸೂರು ರಸ್ತೆಯ ಪಕ್ಕದಲ್ಲಿ ಎಲೆಕ್ಟ್ರಾನಿಕ್ ಸಿಟಿ ಇದೆ. ಅಲ್ಲಿ ರೆವಿನ್ಯೂ ಸೈಟ್‌ಗಳನ್ನು ನಿರ್ಮಾಣ ಮಾಡಿಬಿಟ್ಟಿದ್ದಾರೆ. ಈ ರಸ್ತೆ ಹೋಗುವಂತಹ ಸ್ಥಳಗಳಲ್ಲಿ ಅನೇಕ ಕಡೆಗಳಲ್ಲಿ ರಸ್ತೆ ಬರುವುದಿಲ್ಲವೆಂಬ ಜ್ಞಾನದಿಂದ ಮತ್ತೆ ಅಲ್ಲಿ ವಸತಿಗೆ ಬೇಡಿಕೆ ಇರುವುದರಿಂದ ರೆವಿನ್ಯೂ ಸೈಟ್‌ಗಳನ್ನು ನಿರ್ಮಾಣ ಮಾಡಿದ್ದಾರೆ. ಅಲ್ಲಿ ಮನೆಗಳನ್ನು ಸಹ ಕಟ್ಟಿಕೊಂಡಿದ್ದಾರೆ. ಅಲ್ಲಿ ಸುಮಾರು ಹತ್ತು ಸಾವಿರ ಮನೆಗಳಿವೆ ಎಂಬುದು ನನ್ನ ಭಾವನೆ. ಆದುದರಿಂದ, ನಾನು ಅವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಅವರು ಮೊದಲು feasibility ಯನ್ನು ತಯಾರು ಮಾಡಲಿ. ಅಂದರೆ, ಅಲ್ಲಿ ಎಷ್ಟು ಮನೆಗಳು ಬರುತ್ತವೆ? ಅಲ್ಲಿ ಎಷ್ಟು ಬಿಲ್ಡಿಂಗ್‌ಗಳು ಇವೆ? ಮತ್ತೆ ಅಷ್ಟು ಮನೆಗಳನ್ನು ಹೊಡೆಯುವುದಕ್ಕೆ ಆಗುತ್ತದೆಯೇ? ಅಂದರೆ, ಪೆರಿಫೆರಲ್ ವರ್ತುಲ ರಸ್ತೆ ಮಾಡುವುದಕ್ಕೆ ಮುಂಚೆ.

ಏಕೆಂದರೆ, ಇವತ್ತಿನ ಬೆಳಗ್ಗೆಯ ದಿನಪತ್ರಿಕೆಯಲ್ಲಿ ನೋಡಿದ್ದೇನೆ. ಅಂದರೆ, ಆರು ಹೊಸ ಬಡಾವಣೆಗಳಿಗೆ notification ಮಾಡುತ್ತೇವೆಂದು ಹೇಳುತ್ತಿದ್ದಾರೆ. ಅದು ಇದರ ಮೇಲೆ depend ಆಗುತ್ತದೆ. ಅವರು ಪೆರಿಫೆರಲ್ ವರ್ತುಲ ರಸ್ತೆ ಇಟ್ಟುಕೊಂಡು ಅದರ ಸುತ್ತಲೂ ಮಾಡಬೇಕು ಎಂಬುದು ಅವರ ಭಾವನೆ. ಈಗ ಪೆರಿಫೆರಲ್ ವರ್ತುಲ ರಸ್ತೆ ಅನ್ನು ಮಾಡುವುದಕ್ಕೆ ಆಗುವುದಿಲ್ಲವೆಂದ ಮೇಲೆ ಅಥವಾ ರಸ್ತೆಯ feasibility ಆಗಲಿಲ್ಲವೆಂದರೆ, ಬಡಾವಣೆಗಳನ್ನು ಮಾಡುವುದಕ್ಕೆ ಅರ್ಥವಿದೆಯೇ ಎಂಬುದು ನನ್ನ ಪ್ರಶ್ನೆಯಾಗಿದೆ. ಆದುದರಿಂದ, ದಯವಿಟ್ಟು ಒಂದು ಬಾರಿ clean ಆಗಿ clarify ಮಾಡಿ, ಸರ್ವೆ ಮಾಡಿ ಎಷ್ಟು ಬಿಲ್ಡಿಂಗ್‌ಗಳು ಬರುತ್ತಿವೆ? ಎಷ್ಟು ಬಡಾವಣೆಗಳು ಬರುತ್ತಿವೆ? ಅಲ್ಲಿ ಎಷ್ಟು ಮನೆಗಳನ್ನು ಕಟ್ಟಿದ್ದಾರೆ? ಇವತ್ತಿನ ಪರಿಸ್ಥಿತಿಯಲ್ಲಿ ಆ ಮನೆಗಳನ್ನು ಹೊಡೆಯುವುದಕ್ಕೆ ಆಗುತ್ತದೆಯೇ ಎಂದು ರಾಜಕೀಯವಾಗಿಯೂ ಸಹ ಆಲೋಚನೆ ಮಾಡಲಿ. ದಯವಿಟ್ಟು ಇದನ್ನು consider ಮಾಡಿ, ನಂತರ ಅವರು ಲೇಔಟ್‌ಗಳನ್ನು ಮಾಡುವುದರ ಬಗ್ಗೆ notification ಮಾಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

(ಮುಂದು)

(709) 14.08.2025 12.20 LL-VK (ಸಭಾಪತಿಯವರ ಉಪಸ್ಥಿತಿ)

**ಶ್ರೀ ಡಿ.ಕೆ. ಶಿವಕುಮಾರ್ (ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದಂತಹ ಶ್ರೀ ಹೆಚ್.ಎಸ್. ಗೋಪಿನಾಥ್‌ರವರು ಆ ಭಾಗದವರು ಮತ್ತು ಆ ಭಾಗವನ್ನು ಪ್ರತಿನಿಧಿಸುತ್ತಿದ್ದಾರೆ. ಇದು ಪೆರಿಫೆರಲ್ ರಿಂಗ್ ರೋಡ್-2 ಮೊದಲನೇ ನೋಟಿಫಿಕೇಷನ್ 2005-06ರಲ್ಲಿ ಆಗಿರುತ್ತದೆ. ಆದರೆ, ಹಿಂದಿನ ಯಾವ ಸರ್ಕಾರಗಳು ಕೂಡ ಡಿ ನೋಟಿಫಿಕೇಷನ್ ಮಾಡಲಿಲ್ಲ. ಬಿಜೆಪಿ ಸರ್ಕಾರ, ಜನತಾದಳ ಸರ್ಕಾರ ಹಾಗೂ ಕಾಂಗ್ರೆಸ್ ಸರ್ಕಾರ ಕೂಡ ಮಾಡಿರುವುದಿಲ್ಲ. ಡಿನೋಟಿಫೈ ಮಾಡದೇ, ಅವರಿಗೆ ಪ್ಲಾನ್ ಅನುಮೋದನೆ ಆಗಿರುವುದಿಲ್ಲ. ಇಲ್ಲವಾದರೆ, ಆ ಯೋಜನೆಯನ್ನು ಕೈಬಿಡಬೇಕಾಗಿತ್ತು ಅಥವಾ ಪೂರ್ಣ ಮಾಡಬೇಕಾಗಿತ್ತು. ಆದರೆ, ಇದು ಈಗ ನನ್ನ ಕಾಲಕ್ಕೆ ಬಂದಿರುತ್ತದೆ. ನಾನು ಇದನ್ನು ಡಿನೋಟಿಫಿಕೇಷನ್ ಮಾಡಿ ಜೈಲಿಗೆ ಹೋಗುವುದಕ್ಕೆ ನಾನು ತಯಾರಿರುವುದಿಲ್ಲ. This is my personal and Government is stand. We don't want to do any denotification. ನೈಸ್ ರಸ್ತೆ ಇಲ್ಲವಾಗಿದ್ದರೆ, ಬೆಂಗಳೂರು ಸತ್ತು ಹೋಗುತ್ತಿತ್ತು. Because of NICE road ಹೇಗೋ ಆಯಿತು. ಇದು ನೈಸ್ ರಸ್ತೆ ಸಮನಾಂತರವಾಗಿ ಬರುವಂತಹ ರಸ್ತೆಯಾಗಿರುತ್ತದೆ. ಅದನ್ನು ನಾನು ಕೂಡ ಒಪ್ಪುತ್ತೇನೆ. ಆದರೆ, ಬೆಂಗಳೂರಿಗೆ ನಾವು ಇವೊತ್ತಿನ ದಿವಸ ಪೆರಿಫೆರಲ್ ರಿಂಗ್ ರೋಡ್-1 ಏನು ಮಾಡುತ್ತಿದ್ದೇವೆ, ಅದು ಸುಮಾರು 72 ರಿಂದ 73 ಕಿಲೋಮೀಟರ್ ಇದೆ. ಅದಕ್ಕೆ ರೂ.26,000/- ಕೋಟಿಗಳ ಹಣ ಬೇಕಾಗುತ್ತದೆ. ಆದರೆ, ಆ ದಿನವೇ ಈ ಯೋಜನೆಯನ್ನು ಪೂರ್ಣಗೊಳಿಸಿದ್ದರೆ, ಅದು ಸುಮಾರು ರೂ.4,000/- ರಿಂದ ರೂ.5,000/- ಕೋಟಿಗಳ ಹಣದಲ್ಲಿ ಯೋಜನೆ ಪೂರ್ಣಗೊಳ್ಳುತ್ತಿತ್ತು. ಆದರೆ, ಇವೊತ್ತಿನ ದಿವಸ ಅದಕ್ಕೆ ರೂ.26,000/- ಕೋಟಿಗಳ ಹಣ ಬೇಕಾಗುತ್ತದೆ. ಏಕೆಂದರೆ, ರೈತರಿಗೆ ದುಪ್ಪಟ್ಟು ಹಣ

ಕೊಡಬೇಕಾಗಿರುತ್ತದೆ. ಅದಕ್ಕೂ ಸಹ ರೈತರು ಒಪ್ಪುತ್ತಿಲ್ಲ. ನಮ್ಮ ಕಾನೂನಿನಲ್ಲಿ ಬಿಡಿಎ ಗೆ ಹೊಸ ಪರಿಹಾರ ಹಣ ಕೊಡುವುದಕ್ಕೆ ಅವಕಾಶವಿರುವುದಿಲ್ಲ. ಆದರೆ, ರೈತರಿಗೆ ತೊಂದರೆ ಕೊಡಬಾರದು ಎನ್ನುವ ದೃಷ್ಟಿಯಿಂದ ಹಾಗೂ ಇವೊತ್ತಿನ ದಿವಸ ಎಲ್ಲಾ ಬೆಲೆಗಳು ಜಾಸ್ತಿಯಾಗಿವೆ ಮತ್ತು ಆ ದಿನವೇ ನಾವು ಪರಿಹಾರ ಹಣ ನೀಡದೇ ಇರುವುದು ನಮ್ಮ ಸರ್ಕಾರದ ತಪ್ಪು ಎಂದು ತಿಳಿದು, ರೈತರಿಗೆ ಒಂದು ಒಳ್ಳೆಯ ಬೆಲೆಯನ್ನು ಕೊಟ್ಟು ಅಂತಿಮ ಮಾಡಿ ಎಂದು ನಮ್ಮ ಅಧಿಕಾರಿಗಳ ನೇತೃತ್ವದ ಒಂದು ವಿಶೇಷ ತಂಡ ರಚನೆ ಮಾಡಿ, ಅವರಿಗೆ ಸೂಚನೆ ನೀಡಿ ಕಳುಹಿಸಿಕೊಟ್ಟಿರುತ್ತೇನೆ. That is going on. ಈ ಪೆರಿಫೆರಲ್ ರಿಂಗ್ ರೋಡ್ ಕೂಡ viable ಆಗಬೇಕು. ಅದಕ್ಕೆ ಸುಮಾರು ರೂ.27,000/- ಕೋಟಿಗಳ ಹಣ ಸಾಲ ತೆಗೆದುಕೊಂಡು ಯೋಜನೆ ಮಾಡುವುದಕ್ಕೆ ಆಗುವುದಿಲ್ಲ. ಆದಾಗ್ಯೂ, ಈ ರಸ್ತೆಯ ಅಕ್ಕಪಕ್ಕದಲ್ಲಿರುವ ಜಾಗವನ್ನು ತೆಗೆದುಕೊಂಡು 60:40 ಯೋಜನೆ ಮಾಡಬೇಕೆಂದು ತೀರ್ಮಾನ ಮಾಡಿರುತ್ತೇವೆ. ಮಾನ್ಯ ಸದಸ್ಯರು ಕೆಲವು ಕಡೆ ಮನೆಗಳನ್ನು ಕಟ್ಟಿದ್ದಾರೆ, ಇನ್ನು ಕೆಲವು ಕಡೆಗಳಲ್ಲಿ ಕಟ್ಟುತ್ತಿದ್ದಾರೆಂದು ಏನು ಹೇಳುತ್ತಿದ್ದಾರೆ, ಅದನ್ನು ನಾನು ಇಲ್ಲವೆಂದು ಹೇಳುತ್ತಿಲ್ಲ. ಅವರಿಗೂ ಕೂಡ ಯಾವುದೇ ಅನ್ಯಾಯ ಆಗಬಾರದು ಎನ್ನುವ ದೃಷ್ಟಿಯಿಂದ ಪಕ್ಕದಲ್ಲಿ ಜಮೀನನ್ನು ಸ್ವಾಧೀನಪಡಿಸಿಕೊಂಡಿರುತ್ತೇವೆ. ಪ್ರತಿ ಪ್ರಕರಣವನ್ನು ಪ್ರತ್ಯೇಕ ಪ್ರಕರಣವಾಗಿ ನೋಡುತ್ತೇವೆ. ಅದಕ್ಕೆ ತಮ್ಮ ಸಲಹೆ ಏನಿದೆ ಅದನ್ನು ಕೊಡಿ, ಅದನ್ನು ನಾವು ಪರಿಶೀಲಿಸುತ್ತೇವೆ. But you can't stop the road. ನಾವು ರಸ್ತೆ ಮಾಡಲೇಬೇಕು ಮತ್ತು ಅಡಿಷನಲ್ ರೋಡ್ ಬರಲೇಬೇಕು. ಆ ಅಡಿಷನಲ್ ರೋಡ್ ಆಗಲಿಲ್ಲವೆಂದರೆ ಕಷ್ಟವಾಗುತ್ತದೆ. ಮಾನ್ಯ ಸದಸ್ಯರು ಹೇಳಿದಂತೆ, ಗೊಟ್ಟಿಗೆರೆ ಬಳಿ 7-8 ಕಿಲೋಮೀಟರ್ ದೂರದಲ್ಲಿ ಸುಮಾರು 5,000 ಮನೆಗಳು ಇವೆ. ಆ ಎಲ್ಲಾ ಮನೆಗಳನ್ನು ಹೊಡೆದು ಹಾಕುವುದಕ್ಕೆ ಆಗುತ್ತದೆಯೇ ಎನ್ನುವುದು ಕೂಡ ದೊಡ್ಡ ಪ್ರಶ್ನೆಯಾಗಿದೆ. ಇನ್ನು ಕೆಲವು ಕಡೆ 1,2,3,4 ಮನೆಗಳು ಇರಬಹುದು. ಗೊಟ್ಟಿಗೆರೆಯಿಂದ ಬನ್ನೇರುಘಟ್ಟದ ಕಡೆಗೆ ಮುಂದೆ ಹೋಗಬೇಕಾದರೆ, ಸುಮಾರು 5,000 ಮನೆಗಳು ಇವೆ. ಅದಕ್ಕಾಗಿ ಆ ಮಾರ್ಗದಲ್ಲಿ ಒಂದು ಪರ್ಯಾಯ ಮಾರ್ಗವಾಗಿ ಫ್ಲೈ ಓವರ್ ತೆಗೆದುಕೊಂಡು ಹೋಗುವುದಕ್ಕೆ ಆಗುತ್ತದೆಯೇ ಎಂಬ feasibility workout ಮಾಡುತ್ತಿದೇವೆ. As you are the Legislative Council Member of that area. ಮಾನ್ಯ ಸದಸ್ಯರನ್ನು ನಾನು ನಮ್ಮ ಅಧಿಕಾರಿಗಳ ಜೊತೆ ಸಭೆ ನಡೆಸಿ, ಅಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಆ ಸಭೆಯಲ್ಲಿ you give your best valuable suggestions. ಆದರೆ, ರಸ್ತೆಯನ್ನು ಯಾವುದೇ ಕಾರಣಕ್ಕೂ ಕೂಡ ಡ್ರಾಪ್ ಮಾಡುವುದಕ್ಕಾಗುವುದಿಲ್ಲ. ಆದರೆ, ಆ ರಸ್ತೆಗೆ viability ಬರಬೇಕು. ಆ ದೃಷ್ಟಿಯಿಂದ ನಾವು ಬಂದಿರುತ್ತೇವೆ. ಅಲ್ಲಿ ಯಾವ ರೈತರು ಕೂಡ ವ್ಯವಸಾಯ ಮಾಡುತ್ತಿಲ್ಲ. It has become a commercial venture, ಅವರು ಕೂಡ ಲಾಸ್ ಆಗಬಾರದೆಂಬ ದೃಷ್ಟಿಯಿಂದ 60:40 ಸ್ಕೀಮ್ ಮಾಡಿರುತ್ತೇವೆ. I know the value of the land over there and it is too high. ಕೆಲವು ಕಡೆ ಬಿಟ್ಟರೆ, ಯಾವ ಜಮೀನು ಕೂಡ ಐದು, ಆರು, ಏಳು ಕೋಟಿ ರೂಪಾಯಿಗೆ ಕಡಿಮೆ ಇರುವುದಿಲ್ಲ. ಇನ್ನು ಕೆಲವು ಕಡೆಗಳಲ್ಲಿ ಹತ್ತು ಕೋಟಿ ರೂಪಾಯಿ ಇರುತ್ತದೆ.

ನನ್ನ ವೈಯಕ್ತಿಕ ಸ್ನೇಹಿತರು ಈ ಯೋಜನೆಯಲ್ಲಿ ಬೇಕಾದಷ್ಟು ಜಮೀನು ಕಳೆದುಕೊಂಡಿರುತ್ತಾರೆ. "ನಾನಂತು ಡಿನೋಟಿಫಿಕೇಷನ್ ಮಾಡುವುದಕ್ಕೆ ಆಗುವುದಿಲ್ಲ" ಎಂದು ಅವರಿಗೆ ಕೈ ಮುಗಿದು ಹೇಳಿರುತ್ತೇನೆ. ಕಳೆದ 20 ವರ್ಷಗಳಿಂದ ಪರಿಹಾರ ಹಣ ಕೂಡ ಇರುವುದಿಲ್ಲ ಮತ್ತು ಅಲ್ಲಿ ಯಾವುದೇ ಅಭಿವೃದ್ಧಿ ಮಾಡದೇ ಇರುವ ಪರಿಸ್ಥಿತಿ ಇರುತ್ತದೆ ಎಂದು ಹೇಳಿರುತ್ತೇನೆ. Please you are most welcome. ಆದರೆ, ಇದನ್ನು ಡ್ರಾಪ್ ಮಾಡುವುದಕ್ಕೆ ಬರುವುದಿಲ್ಲ. We are taking it forward.

**ಶ್ರೀ ಹೆಚ್.ಎಸ್. ಗೋಪಿನಾಥ್:-** ಮಾನ್ಯ ಸಭಾಪತಿಯವರೇ, ಆ ನೈಸ್ ರಸ್ತೆ ಅಕ್ಕಪಕ್ಕದಲ್ಲಿ ಯಾರು ಜಮೀನು ಮಾಲೀಕರು ಇದ್ದರು, ಅವರು ರೆವಿನ್ಯೂ ಸೈಟ್‌ಗಳನ್ನು ಮಾಡಿ ಮಾರಾಟ ಮಾಡಿರುತ್ತಾರೆ. ಅದರಂತೆ, ಅಲ್ಲಿ ಕೆಲವರು ಮನೆ ಕಟ್ಟಿರುತ್ತಾರೆ. ಹಾಗಾಗಿ, ಪರಿಹಾರ ಹಣವನ್ನು ತಾವು ಯಾರಿಗೆ ಕೊಡುತ್ತೀರಿ. ಅಂದರೆ, ಆ ಪರಿಹಾರ ಹಣವನ್ನು ಮೂಲ ಜಮೀನು ಮಾಲೀಕರಿಗೆ ಕೊಡುತ್ತೀರಾ ಅಥವಾ ಮನೆ ಕಟ್ಟಿರುವಂತಹವರಿಗೆ ಕೊಡುತ್ತೀರಾ ಎಂಬ ಬಗ್ಗೆ ಸ್ಪಷ್ಟನೆ ನೀಡಬೇಕು. ಒಂದು ವೇಳೆ ರೈತರಿಗೆ ಪರಿಹಾರ ನೀಡಿದರೆ, ಅವರು ಈಗಾಗಲೇ ಜಮೀನು ಮಾರಾಟ ಮಾಡಿಕೊಂಡು ಹೋಗಿರುತ್ತಾರೆ. ಅದರಂತೆ, ಇವೊತ್ತಿನ ದಿವಸ ಆ ಸೈಟ್‌ಗಳನ್ನು ಖರೀದಿ ಮಾಡಿ ಮನೆಗಳನ್ನು ಕಟ್ಟಿರುತ್ತಾರೆ. ಆ ಮನೆಗಳನ್ನು ತಾವು ಹೊಡೆದು ಹಾಕುತ್ತಿದ್ದು, ಅವರಿಗೆ ಪರಿಹಾರ ಹಣ ನೀಡಬೇಕು.

**ಶ್ರೀ ಡಿ.ಕೆ. ಶಿವಕುಮಾರ್:-** ಯಾರು ಭೂಮಿಯಲ್ಲಿದ್ದಾರೆ, ಯಾರ ಬಳಿ ದಾಖಲೆ ಇದೆ. ಅವರಿಗೆ ಮಾತ್ರ ಪರಿಹಾರ ಹಣ ಕೊಡುವಂತಹ ವ್ಯವಸ್ಥೆ ಮಾಡುತ್ತೇವೆ.

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಎನ್.ಎಸ್. ಬೋಸರಾಜು(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ:14ನೇ ಆಗಸ್ಟ್-2025, ಸಮೂಹ-4ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 146 ಪ್ರಶ್ನೆಗಳ ಪೈಕಿ 56 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**02. ನಿಯಮ 58ಎ ಮೇರೆಗೆ ಶೂನ್ಯವೇಳೆ ಪ್ರಸ್ತಾವಗಳಿಗೆ ಸರ್ಕಾರದಿಂದ ಲಿಖಿತ ಉತ್ತರಗಳು**

**ಅ) ವಿಷಯ:- ಕೋಲಾರ ಜಿಲ್ಲೆ, ಕೆಜಿಎಫ್‌ನಲ್ಲಿ ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ ವಿತರಿಸಲು ತಂದಿದ್ದ ಪರಿಕರಗಳು ಕಳಪೆ ಗುಣಮಟ್ಟದಿಂದ ಕೂಡಿದೆ ಎಂದು ರೈತರು ಸ್ವೀಕರಿಸಲು ನಿರಾಕರಿಸುವ ಬಗ್ಗೆ.**

- - -

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ಗೋವಿಂದರಾಜುರವರು ದಿನಾಂಕ 12.08.2025ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

** ** **

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿರುತ್ತದೆ. ಕರ್ನಾಟಕ ರಾಜ್ಯದಲ್ಲಿ, 2ನೇ ಅಕ್ಟೋಬರ್ 1975 ರಂದು ಪ್ರಾಯೋಗಿಕವಾಗಿ ಮೈಸೂರು ಜಿಲ್ಲೆಯ, ಟಿ. ನರಸೀಪುರ ತಾಲ್ಲೂಕಿನಲ್ಲಿ 100 ಅಂಗನವಾಡಿ ಕೇಂದ್ರಗಳೊಂದಿಗೆ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯನ್ನು ಪ್ರಾರಂಭಿಸಲಾಯಿತು. ಈಗ ರಾಜ್ಯದ ಎಲ್ಲಾ ತಾಲ್ಲೂಕುಗಳಿಗೂ ವಿಸ್ತರಿಸಲಾಗಿದೆ. 6 ವರ್ಷದ ಒಳಗಿನ ಮಕ್ಕಳ, ಗರ್ಭಿಣಿ, ಬಾಣಂತಿ ಮತ್ತು ಕಿಶೋರಿಯರ ಸರ್ವತೋಮುಖ ಅಭಿವೃದ್ಧಿಯು ಈ ಯೋಜನೆಯ ಮುಖ್ಯ ಗುರಿಯಾಗಿರುತ್ತದೆ.

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯನ್ನು ರಾಜ್ಯದ 204 ಯೋಜನೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, 69922 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ರಾಜ್ಯದ ಅಂಗನವಾಡಿ ಕೇಂದ್ರಗಳಿಂದ ಗರ್ಭಿಣಿಯರಿಗೆ ಹಾಗೂ ಬಾಣಂತಿಯರಿಗೆ ಪೂರೈಕೆಯಾಗುತ್ತಿರುವ ಆಹಾರ ವ್ಯವಸ್ಥೆಗೆ ಮತ್ತಷ್ಟು ಪಾರದರ್ಶಕತೆ ತರಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯವು Face Recognition System ವ್ಯವಸ್ಥೆಯನ್ನು ಅನುಷ್ಠಾನಗೊಳಿಸಿದೆ.

Face Recognition System ಮೂಲಕ ನೋಂದಣಿಯಾದ ಮತ್ತು ಹಾಜರಾದ ಫಲಾನುಭವಿಗಳ ಆಧಾರದ ಮೇಲೆ ಕೇಂದ್ರ ಸರ್ಕಾರದ ವತಿಯಿಂದ ಅಕ್ಕಿ, ಗೋಧಿ ಹಂಚಿಕೆ ಹಾಗೂ ಪೂರಕ ಪೌಷ್ಟಿಕ ಆಹಾರ ಯೋಜನೆಗೆ ಅನುದಾನ ಬಿಡುಗಡೆ ಮಾಡಲಾಗುತ್ತದೆ. ಈ ತಂತ್ರಾಂಶದ ಮೂಲಕ ಕಾರ್ಯ ನಿರ್ವಹಿಸುವ ರಾಜ್ಯಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಪ್ರಸ್ತುತ ಶೇ.94.2 ರಷ್ಟು ಫಲಾನುಭವಿಗಳನ್ನು Face Recognition System ಮೂಲಕ ನೋಂದಣಿ ಮಾಡುವ ಮೂಲಕ ದೇಶದಲ್ಲಿ ಕರ್ನಾಟಕ ರಾಜ್ಯ 2ನೇ ಸ್ಥಾನ ಪಡೆದಿದೆ.

**FRS ತಂತ್ರಾಂಶದ ಕಾರ್ಯವೈಖರಿ:**

- ಸ್ಥಳೀಯ ಅಂಗನವಾಡಿ ಕೇಂದ್ರಗಳಲ್ಲಿ ನೋಂದಣಿ ಮಾಡಿಕೊಂಡ ಗರ್ಭಿಣಿ, ಬಾಣಂತಿಯರಿಗೆ ಹಾಗೂ 6 ತಿಂಗಳಿಂದ 03 ವರ್ಷದವರೆಗಿನ ಮಕ್ಕಳಿಗೆ ಮನೆಗೆ ಪೂರಕ ಪೌಷ್ಟಿಕ ಆಹಾರ ಪೂರೈಕೆ ಮಾಡಲಾಗುತ್ತದೆ.
- ಮನೆಗೆ ಆಹಾರ ಪಡೆಯುವ ಫಲಾನುಭವಿಗಳು ಮೊದಲಿಗೆ ಪೋಷಣ್ ಟ್ರ್ಯಾಕರ್‌ನಲ್ಲಿ ನೋಂದಣಿ ಮಾಡಿಕೊಳ್ಳಬೇಕು.
- ನೋಂದಣಿಯಾದ ಫಲಾನುಭವಿಯ Profile ನಲ್ಲಿ Photo Capture ಮಾಡಲಾಗುತ್ತದೆ.
- ನಂತರ ಫಲಾನುಭವಿಯ ಆಧಾರ್ ಕಾರ್ಡ್‌ಗೆ ಮೊಬೈಲ್ ಸಂಖ್ಯೆ ಜೋಡಣೆ, ಇ-ಕೆವೈಸಿ ಮಾಡಲಾಗುತ್ತದೆ.
- ಪ್ರತಿ ತಿಂಗಳು ಈಗಾಗಲೇ ಸೆರೆ ಹಿಡಿಯಲಾದ ಫಲಾನುಭವಿಗಳ Photoವನ್ನು ಹೋಲಿಕೆ ಮಾಡಿ ಪೋಷಣ್ ಟ್ರ್ಯಾಕರ್‌ನಲ್ಲಿ ಅಳವಡಿಸಿ ಮನೆಗೆ ಆಹಾರ ವಿತರಿಸಲಾಗುತ್ತಿದೆ.
- ಆಹಾರ ವಿತರಣೆಯಾದ ಬಳಿಕ ಫಲಾನುಭವಿಗಳ ಮೊಬೈಲ್‌ಗೆ ಸ್ವೀಕೃತಿಯ ಮೆಸೇಜ್ ರವಾನೆಯಾಗುತ್ತದೆ.
- ಇದರಿಂದ ನಕಲಿ ಫಲಾನುಭವಿಗಳು ಆಹಾರ ತೆಗೆದುಕೊಳ್ಳುವುದನ್ನು ಹಾಗೂ ನೋಂದಣಿಯಾಗದೆ ಆಹಾರ ಪಡೆಯಲು ಬರುವ ಅನರ್ಹ ಫಲಾನುಭವಿಗಳ ಪತ್ತೆಗೂ ಇದು ಸಹಕಾರಿಯಾಗಲಿದೆ.

**FRS ತಂತ್ರಾಂಶದಲ್ಲಿ ಎದುರುಸುತ್ತಿರುವ ತೊಂದರೆಗಳ ಬಗ್ಗೆ :**

- ಉಳಿದ ಶೇ.6 ಫಲಾನುಭವಿಗಳನ್ನು Face Recognition System ಮೂಲಕ ನೋಂದಣಿ ಮಾಡಲು ಕರಾವಳಿ ಭಾಗದ ಅಂಗನವಾಡಿ ಕೇಂದ್ರಗಳಲ್ಲಿ ನೆಟ್‌ವರ್ಕ್ ಸಮಸ್ಯೆಯನ್ನು ಎದುರಿಸಲಾಗುತ್ತಿದೆ.
- ಫಲಾನುಭವಿಗಳ ಆಧಾರ್‌ಸಂಖ್ಯೆಗೆ ಮೊಬೈಲ್ ಸಂಖ್ಯೆ ಲಿಂಕ್ ಆಗದೇ ಇರುವುದರಿಂದ ಫಲಾನುಭವಿಗಳನ್ನು FRS ಮೂಲಕ ನೋಂದಣಿಗೆ ಸಮಸ್ಯೆಯನ್ನು ಎದುರಿಸಲಾಗುತ್ತಿದೆ.
- ವಲಸೆ ಮೂಲಕ ಬಂದಂತಹ ಫಲಾನುಭವಿಗಳ ಆಧಾರ್ ಸಂಖ್ಯೆಗೆ ಮೊಬೈಲ್ ಸಂಖ್ಯೆ ಲಿಂಕ್ ಇರುವುದಿಲ್ಲ ಹಾಗೂ ಈ ಫಲಾನುಭವಿಗಳು ಅಂಗನವಾಡಿ ಕೇಂದ್ರಗಳಲ್ಲಿ ನೋಂದಣಿಯಾಗಿ ಬೇರೆ ಕಡೆ ವಲಸೆ ಹೋಗಿರುವುದರಿಂದ ಈ ಫಲಾನುಭವಿಗಳನ್ನು ಟ್ರ್ಯಾಕ್ ಮಾಡಲು ಸಮಸ್ಯೆಗಳನ್ನು ಎದುರಿಸಲಾಗುತ್ತಿದೆ.

ದೇಶದಲ್ಲಿಯೇ ಪ್ರ ಪ್ರಥಮ ಬಾರಿಗೆ ಐಸಿಡಿಎಸ್.ಯೋಜನೆಯಡಿ ಪಾರದರ್ಶಕತೆಯನ್ನು ತರಲು Face Recognition System ನ್ನು ಜಾರಿಗೆ ತರಲಾಗಿದ್ದು, ಪ್ರಸ್ತುತ ಜಾರಿಯಾಗಿ 03 ತಿಂಗಳಾಗಿರುವ ಕಾರಣ ಕಂಡು ಬಂದಿರುವ ತಾಂತ್ರಿಕ ಸಮಸ್ಯೆಗಳನ್ನು ಪರಿಹರಿಸಲು ಕೇಂದ್ರ ಸರ್ಕಾರದೊಂದಿಗೆ ಚರ್ಚಿಸಿ, ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

**ಆ) ವಿಷಯ:- ರಾಜ್ಯದಲ್ಲಿ ಕಳೆದ 30 ವರ್ಷಗಳಲ್ಲಿ 98 ಕಾರ್ಮಿಕರು ಶೌಚ ಗುಂಡಿಗೆ ಬಿದ್ದು ಸಾವನ್ನಪ್ಪಿರುವ ಬಗ್ಗೆ.**

- - -

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)(ಪೌರಾಡಳಿತ ಮತ್ತು ಹಜ್ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ತಿಪ್ಪಣಪ್ಪ ಕಮಕನೂರ ರವರು ದಿನಾಂಕ 12.08.2025ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ರಾಜ್ಯದಲ್ಲಿ "The Prohibition of Employment as Manual Scavengers and their Rehabilitation Act, 2013" ರೀತ್ಯಾ ಒಳಚರಂಡಿ, ಮಷಿನ್‌ಹೋಲ್, ಸೆಪ್ಟಿಕ್ ಟ್ಯಾಂಕ್ ಗಳನ್ನು ಬರಿಗೈಯಿಂದ ಸ್ವಚ್ಛಗೊಳಿಸುವುದನ್ನು ಕಡ್ಡಾಯವಾಗಿ ನಿಷೇಧಿಸಿದ್ದು, ಆಧುನಿಕ ಯಂತ್ರೋಪಕರಣಗಳ ಮೂಲಕ ಸುರಕ್ಷತೆಯಿಂದ ಸ್ವಚ್ಛಗೊಳಿಸಲು ನಗರಸ್ಥಳೀಯ ಸಂಸ್ಥೆಗಳಿಗೆ ತಿಳಿಸಲಾಗಿರುತ್ತದೆ.

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ (ಬಿ.ಬಿ.ಎಂ.ಪಿ ಹೊರತುಪಡಿಸಿ) 1993ನೇ ಸಾಲಿನಿಂದ ಇಲ್ಲಿಯವರೆಗೂ 45 ಕೆಲಸಗಾರರು ಸೋಕ್ ಪಿಟ್/ಸೆಪ್ಟಿಕ್ ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸುತ್ತಿರುವ ಸಂಧರ್ಭಗಳಲ್ಲಿ ಮರಣ ಹೊಂದಿರುವುದಾಗಿ ವರದಿಯಾಗಿರುತ್ತದೆ. ಈ ಎಲ್ಲಾ ಪ್ರಕರಣಗಳಲ್ಲಿಯೂ ಸರ್ಕಾರದ ಆದೇಶದ ರೀತ್ಯ ಪರಿಹಾರ ಮೊತ್ತವನ್ನು ಒದಗಿಸಲಾಗಿರುತ್ತದೆ. ವಿವರವನ್ನು **ಅನುಬಂಧ-1ರಲ್ಲಿ** ನೀಡಲಾಗಿದೆ.

ಇಂತಹ ಪ್ರಕರಣಗಳನ್ನು ತಡೆಗಟ್ಟಲು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಒಳಚರಂಡಿ, ಮಷಿನ್‌ಹೋಲ್, ಸೆಪ್ಟಿಕ್ ಟ್ಯಾಂಕ್ ಗಳನ್ನು ಕಡ್ಡಾಯವಾಗಿ ಯಂತ್ರೋಪಕರಣಗಳಿಂದ ಸ್ವಚ್ಛಗೊಳಿಸಲು ಹೆಚ್ಚಿನ ಒತ್ತು ನೀಡಿದೆ. ಪ್ರಸ್ತುತ 579 ಯಂತ್ರೋಪಕರಣಗಳು ಲಭ್ಯವಿರುತ್ತದೆ. ವಿವರ **ಅನುಬಂಧ-2ರಲ್ಲಿ** ನೀಡಲಾಗಿದೆ.

ಸರ್ಕಾರದ ಸುತ್ತೋಲೆ ಸಂಖ್ಯೆ ನಅಇ 79 ಜಿಇಎಲ್ 2021 ದಿನಾಂಕ 07.04.2021 ರೀತ್ಯಾ ನಗರಸ್ಥಳೀಯ ಸಂಸ್ಥೆಗಳಿಗೆ ಹೆಚ್ಚುವರಿಯಾಗಿ ಅಗತ್ಯವಿರುವ ಯಂತ್ರೋಪಕರಣಗಳನ್ನು ಮತ್ತು ಸುರಕ್ಷತಾ ಉಪಕರಣಗಳನ್ನು 15ನೇ ಹಣಕಾಸಿನ ಆಯೋಗದಲ್ಲಿ ಖರೀದಿಸಲು ಸೂಚಿಸಲಾಗಿರುತ್ತದೆ.

ಸ್ವಚ್ಛ ಭಾರತ ಮಿಷನ್ (ನಗರ)-2.0ರಡಿ ಒಂದು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ 110 ನಗರಸ್ಥಳೀಯ ಸಂಸ್ಥೆಗಳಿಗೆ 147 ಸಕ್ಷನ್ ಯಂತ್ರ ಖರೀದಿಸಲು ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. 73 ನಗರಸ್ಥಳೀಯ ಸಂಸ್ಥೆಗಳಿಗೆ ಸಕ್ಷನ್ ವಿತ್ ಜೆಟ್ಟಿಂಗ್ ಯಂತ್ರಗಳನ್ನು ಖರೀದಿಸಲು ಅನುಮೋದನೆಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮ್ಯಾನುಯಲ್ ಸ್ಕ್ಯಾವೆಂಜಿಂಗ್ ಪದ್ಧತಿಯನ್ನು ತಡೆಗಟ್ಟಲು ಕಾಲಕಾಲಕ್ಕೆ ನೀಡಿರುವಂತಹ ನಿರ್ದೇಶನಗಳು ಈ ಕೆಳಕಂಡಂತ್ತಿದೆ.

- ಮ್ಯಾನುಯಲ್ ಸ್ಕ್ಯಾವೆಂಜಿಂಗ್ ಪದ್ಧತಿ ನಿಷೇಧಿಸಿರುವ ಬಗ್ಗೆ, ಜನ ಜಾಗೃತಿ ಮೂಡಿಸಿ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಒಳಚರಂಡಿ / ಸೆಪ್ಟಿಕ್ ಟ್ಯಾಂಕ್‌ಗಳ ಸ್ವಚ್ಛತೆಗೆ ಸಕ್ಷನ್ ಜೆಟ್ಟಿಂಗ್ ಯಂತ್ರಗಳ ಲಭ್ಯತೆ ಬಗ್ಗೆ, ಸಾರ್ವಜನಿಕರಿಗೆ ತಿಳಿಯಪಡಿಸಲು

ಹೋರ್ಡಿಂಗ್ಸ್ ಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಅಳವಡಿಸಿ ಜನಜಾಗೃತಿ ಚಟುವಟಿಕೆಗಳನ್ನು ನಿರಂತರವಾಗಿ ಕೈಗೊಳ್ಳಲು ಸೂಚನೆ ನೀಡಲಾಗಿರುತ್ತದೆ.

- ನಗರ ವ್ಯಾಪ್ತಿಯಲ್ಲಿ ಯಾವುದೇ ಸಂದರ್ಭದಲ್ಲಿಯೂ ಒಳಚರಂಡಿ ಗಳನ್ನು ಸ್ವಚ್ಛಗೊಳಿಸುವಾಗ ಪೌರಕಾರ್ಮಿಕರನ್ನಾಗಲಿ ಅಥವಾ ಇತರೆ ಕೆಲಸಗಾರರನ್ನಾಗಲಿ ಮಷಿನ್‌ಹೋಲ್ ಒಳಗೆ ಇಳಿಸದಂತೆ ಯುಜಿಡಿ ನಿರ್ಮಾಣದ ಗುತ್ತಿಗೆದಾರರು, ಯುಜಿಡಿ ವ್ಯವಸ್ಥೆಗಳ ನಿರ್ವಹಣೆ ಗುತ್ತಿಗೆದಾರರು, ಸಂಬಂಧಪಟ್ಟ ಮೇಲ್ವಿಚಾರಕರು ಅಭಿಯಂತರರುಗಳಿಗೆ ಕಟ್ಟುನಿಟ್ಟಾದ ಸೂಚನೆ ನೀಡಲು ತಿಳಿಸಲಾಗಿದೆ.
- UGD, Machine hole, Septic tank, Soak pit ಗಳನ್ನು ಸ್ವಚ್ಛಗೊಳಿಸುವ ಸಲುವಾಗಿ Emergency Response Sanitation Unit (ERSU) ತಂಡವನ್ನು ರಚಿಸಿದ್ದು, ಸದರ ತಂಡದಲ್ಲಿ ಸಕ್ಷನ್ ಜೆಟ್ಟಿಂಗ್ ಯಂತ್ರದ ಆಪರೇಟರ್, ಹೆಲ್ಪರ್, ಯುಜಿಡಿ ಆಪರೇಟರ್, ಸುಪರ್‌ವೈಸರ್, ಕಿರಿಯ/ಸಹಾಯಕ ಅಭಿಯಂತರರನ್ನು ಒಳಗೊಂಡಿರುತ್ತದೆ. ಎಲ್ಲಾ ನಗರಸ್ಥಳೀಯ ಸಂಸ್ಥೆಗಳಲ್ಲಿ Emergency Response Sanitation Unit ತಂಡದ ಮೂಲಕವೇ ಒಳಚರಂಡಿ ಮಷಿನ್‌ಹೋಲ್ ಸ್ವಚ್ಛಗೊಳಿಸುವಂತೆ ಕಟ್ಟುನಿಟ್ಟಾಗಿ ತಿಳಿಸಲಾಗಿರುತ್ತದೆ. ಸದರಿ ತಂಡಕ್ಕೆ ಅಗತ್ಯ ತರಬೇತಿಯನ್ನು ನೀಡಿ, ಮ್ಯಾನ್ಯುಯಲ್ ಸ್ಕ್ಯಾವೆಂಜರ್ ವೃತ್ತಿ ನಿಷೇಧ ಮತ್ತು ಪುನರ್ವಸತಿ ನಿಯಮಗಳು 2013 ರಲ್ಲಿ ಸೂಚಿಸಲಾದ ಸುರಕ್ಷಾ ಪರಿಕರಗಳನ್ನು ಒದಗಿಸುವಂತೆ ತಿಳಿಸಲಾಗಿರುತ್ತದೆ.
- ನಗರ ವ್ಯಾಪ್ತಿಯಲ್ಲಿ ಒಳಚರಂಡಿ/ ಮಷಿನ್ ಹೋಲ್ ಸ್ವಚ್ಛಗೊಳಿಸಲು ಕಾರ್ಯಾಚರಿಸುತ್ತಿರುವ ಖಾಸಗಿ ಸಂಸ್ಥೆಗಳನ್ನು ಗುರುತಿಸಿ, ತರಬೇತಿ ಪಡೆದ ಆಪರೇಟರ್ ಮೂಲಕವೇ ಸೆಪ್ಟಿಕ್ ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸುವುದನ್ನು ಖಾತರಿ ಪಡಿಸಿಕೊಳ್ಳಲು ತಿಳಿಸಲಾಗಿರುತ್ತದೆ.
- ಸುರಕ್ಷತಾ ಪರಿಕರಗಳನ್ನು ನೀಡದೆ STP ಗಳಲ್ಲಿ ಕೆಲಸ ಮಾಡಿಸುತ್ತಿದ್ದಲ್ಲಿ, ಅಂತಹ ಏಜನ್ಸಿ/ಗುತ್ತಿಗೆದಾರರಿಗೆ ಪ್ರತಿ ಪ್ರಕರಣಕ್ಕೆ ರೂ 50,000/- ದಂಡ ವಿಧಿಸಲು ಸಕ್ಷಮ ಪ್ರಾಧಿಕಾರಿಗಳಿಗೆ ಸರ್ಕಾರದ ಆದೇಶದ ಸಂಖ್ಯೆ: ನಅಇ 41 ಜಿಇಎಲ್ 2021, ದಿನಾಂಕ 24-02-2021 ರೀತ್ಯಾ ಸೂಚನೆ ನೀಡಲಾಗಿರುತ್ತದೆ.
- NAMASTE (National Action for Mechanised Eco System) ಯೋಜನೆಯಡಿ ಸುಮಾರು 6300 ನೈರ್ಮಲ್ಯ ಮತ್ತು ಒಳಚರಂಡಿ ಸ್ವಚ್ಛತಾ ಕಾರ್ಮಿಕರನ್ನು ಗುರುತಿಸಲಾಗಿದ್ದು, ಸದರಿ ಕಾರ್ಮಿಕರಿಗೆ ಆರೋಗ್ಯ ವಿಮಾ ಸೌಲಭ್ಯ, PPE Kit ಗಳು ಮತ್ತು ಸುರಕ್ಷತಾ ತರಬೇತಿಯ ಅನುಕೂಲಗಳನ್ನು ಒದಗಿಸಲಾಗುತ್ತಿದೆ.
- ಈ ಹಿಂದೆ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮ್ಯಾನುಯಲ್ ಸ್ಕ್ಯಾವೆಂಜಿಂಗ್ ವೃತ್ತಿಯಲ್ಲಿ ತೊಡಗಿದ್ದ 2610 ಮ್ಯಾನುಯಲ್ ಸ್ಕ್ಯಾವೆಂಜರ್‌ಗಳನ್ನು ಗುರುತಿಸಿದ್ದು, ರಾಜ್ಯ ಮಟ್ಟದಲ್ಲಿ ಅನುಮೋದಿಸಿ ವಿವಿಧ ಪುನರ್ ವಸತಿ ಸೌಲಭ್ಯಗಳನ್ನು ನಗರ ಸ್ಥಳೀಯ ಸಂಸ್ಥೆಗಳಿಂದ ಕಲ್ಪಿಸಲಾಗುತ್ತಿದೆ.

ಮುಂದಿನ ದಿನಗಳಲ್ಲಿ ಈ ರೀತಿ ಪ್ರಕರಣಗಳು ಮರುಕಳಿಸದಂತೆ ರಾಜ್ಯ ಸರ್ಕಾರದಿಂದ ಎಲ್ಲಾ ಕ್ರಮವಹಿಸಲಾಗಿದೆ.

**ANNEXURE-2**

**Availability of Machineries**

| SL NO | District | Number of Sewer Line Cleaning bucketing machine | Number of Jetting machine | Number of Suction machine (gully emptier) | Number of Combined machine (Jetting cum suction) | Number of deep suction combined machine (Jetting cum suction) | No of other machinery | Total |
|---|---|---|---|---|---|---|---|---|
| 1 | Bagalkote | 0 | 2 | 6 | 5 | 0 | 3 | **16** |
| 2 | Ballary | 1 | 7 | 7 | 4 | 0 | 0 | **19** |
| 3 | Belagavi | 0 | 17 | 19 | 5 | 0 | 1 | **42** |
| 4 | Bengaluru Rural | 0 | 1 | 4 | 4 | 0 | 1 | **10** |
| 5 | Bengaluru Urban | 2 | 1 | 0 | 7 | 0 | 4 | **14** |
| 6 | Bidar | 0 | 0 | 0 | 2 | 0 | 0 | **2** |
| 7 | Chamarajanagara | 0 | 0 | 1 | 4 | 0 | 1 | **6** |
| 8 | Chikkaballapura | 1 | 3 | 3 | 5 | 0 | 0 | **12** |
| 9 | Chikkamagaluru | 0 | 0 | 6 | 4 | 0 | 0 | **10** |
| 10 | Chitradurga | 0 | 1 | 7 | 4 | 0 | 0 | **14** |
| 11 | Dakshina kannada | 0 | 5 | 7 | 1 | 0 | 8 | **21** |
| 12 | Davangere | 3 | 4 | 5 | 5 | 0 | 8 | **25** |
| 13 | Dharwada | 3 | 6 | 15 | 24 | 0 | 38 | **86** |
| 14 | Gadaga | 0 | 3 | 7 | 5 | 1 | 2 | **18** |
| 15 | Hassan | 0 | 1 | 6 | 4 | 0 | 2 | **13** |
| 16 | Haveri | 0 | 1 | 8 | 3 | 0 | 1 | **14** |
| 17 | Kalaburagi | 0 | 3 | 6 | 1 | 6 | 0 | **18** |
| 18 | Kodagu | 0 | 1 | 3 | 1 | 0 | 0 | **5** |
| 19 | Kolar | 0 | 3 | 2 | 3 | 1 | 0 | **9** |
| 20 | Koppala | 0 | 0 | 2 | 0 | 0 | 1 | **3** |
| 21 | Mandya | 0 | 0 | 3 | 9 | 0 | 6 | **20** |

| SL NO | District | Number of Sewer Line Cleaning bucketing machine | Number of Jetting machine | Number of Suction machine (gully emptier) | Number of Combined machine (Jetting cum suction) | Number of deep suction combined machine (Jetting cum suction) | No of other machinery | Total |
|---|---|---|---|---|---|---|---|---|
| 22 | Mysuru | 2 | 16 | 2 | 13 | 1 | 45 | **81** |
| 23 | Raichuru | 1 | 1 | 6 | 3 | 0 | 0 | **11** |
| 24 | Ramanagara | 1 | 2 | 1 | 7 | 0 | 5 | **16** |
| 25 | Shivamogga | 0 | 0 | 1 | 9 | 0 | 10 | **20** |
| 26 | Tumakuru | 7 | 2 | 5 | 6 | 0 | 4 | **24** |
| 27 | Udupi | 0 | 2 | 6 | 3 | 0 | 0 | **11** |
| 28 | Uttara Kannada | 0 | 0 | 11 | 2 | 0 | 1 | **14** |
| 29 | Vijayanagara | 0 | 0 | 1 | 1 | 0 | 3 | **5** |
| 30 | Vijayapura | 0 | 0 | 1 | 1 | 0 | 0 | **2** |
| 31 | Yadagiri | 5 | 0 | 7 | 6 | 0 | 0 | **18** |
| | **Total** | **26** | **82** | **158** | **151** | **9** | **144** | **579** |

## ANNEXURE -1

**The details of death due to manual cleaning of Sewers and Compensation**

*(as information obtained by the ULBs)*

| Sl No | Name of the ULB | Sl no | Name of the deceased person | Date of Death | Compensation Paid | Remarks |
|---|---|---|---|---|---|---|
| 1 | Shimogga City Corporation | 1 | Annappa | 23-11-2012 | Rs 10 lakhs | ಸರ್ಕಾರದ ಆದೇಶ ಸಂಖ್ಯೆ: ನಅಇ 74 ಎಂ.ಡಬ್ಲ್ಯೂ.ಪಿ 2015 Dated: 23.11.2015 ತಿದ್ದುಪಡಿ ಆದೇಶ ದಿನಾಂಕ: 12.02.2016 |
| | | 2 | Ratnakar | 23-11-2012 | Rs 12 lakhs | |
| 2 | Hubli Dharwad Municipal Corporation | 3 | Ramesh | 22-07-2012 | Rs 10.00 lakhs | |
| | | 4 | Santosh | 22-07-2012 | Rs 10.00lakhs | |
| | | 5 | Hanumanth Varadia | 01-04-2015 | Rs 11 lakhs | |
| | | 6 | Sufal Biswas | 01-04-2015 | Rs 11 lakhs | |
| | | 7 | Shankar Kumar | 06-04-2017 | Rs 10.00 lakhs | |
| | | 8 | Shivaputrappa | 06-04-2007 | Rs 10.00 lakhs | |
| | | 9 | Yakub | 16-02-2013 | Rs 10.00 lakhs | |
| 3 | Mysore City Corporation | 10 | Shankar | 2001 | Rs 10.00 lakhs | |
| | | 11 | Kumar | 02-03-2014 | Rs 10.00 lakhs | |
| 4 | Tumkur City Corporation | 12 | Narasimhamurthy | 29-11-2015 | Rs 10.00 lakhs | |
| | | 13 | Chikkanna | 29-11-2015 | Rs 10.00 lakhs | |
| 5 | Doddaballapur City Municipal Council | 14 | Muniswamy | 04-03-2016 | Rs 10.00 lakhs | |
| | | 15 | K. Jagannath | 04-03-2016 | Rs 10.00 lakhs | |
| | | 16 | S. Madhu | 04-03-2016 | Rs 10.00 lakhs | |
| | | 17 | M. Muniraju | 04-03-2016 | Rs 10.00 lakhs | |
| 6 | Kolar City Municipal Council | 18 | Manjunath | 12-02-2010 | Rs 10.00 lakhs | |
| | | 19 | Rajanna | 12-02-2010 | Rs 10.00 lakhs | |
| 7 | KGF(Robertsonpet) City Municipal Council | 20 | Nagendra Babu | 24-10-2011 | Rs 10.00 lakhs | |
| | | 21 | Ravi | 24-10-2011 | Rs 10.00 lakhs | |
| | | 22 | Prasad | 24-10-2011 | Rs 10.00 lakhs | |
| 8 | Tiptur City Municipal Council | 23 | K.M. Jagadish | 17-12-2011 | Rs 10.00 lakhs | |
| | | 24 | Dharma | 17-12-2011 | Rs 10.00 lakhs | |
| 9 | Mandya City Municipal Council | 25 | Rangaswamy | 01-04-2013 | Rs 10.00 lakhs | |
| 10 | Chamarajanagar City Municipal Council | 26 | Chinnaswamy | Treasury cheque 817923 25-05-2017 | Rs 10.00 lakhs | |
| 11 | Krishnarajanagar Town Municipal Council | 27 | Kariya | 2008 | Rs 10.00 lakhs | |
| | | 28 | Lakshman | 2008 | Rs 10.00 lakhs | |
| 12 | Raichur | 29 | Venkatesh | 28-04-2013 | Rs 10.00 lakhs | |
| 13 | Channarayapatna | 30 | Maranna | 1998-99 | Rs 10.00 lakhs | |

| Sl No | Name of the ULB | Sl no | Name of the deceased person | Date of Death | Compensation Paid | Remarks |
|---|---|---|---|---|---|---|
| | Town Municipal Council | 31 | Narasimharaju | | Rs 10.00 lakhs | |
| | | 32 | Nagaraju | | Rs 10.00 lakhs | |
| 14 | Kundapura Town Municipal Council | 33 | Sandeep bin Das | 07-04-2018 | Rs 10.00 lakhs | |
| 15 | Shimogga City Corporation | 34 | Anjanappa | 06-08-2018 | Rs 10.00 lakhs | |
| | | 35 | Venkatesh | 06-08-2018 | Rs 10.00 lakhs | |
| 16 | Indi Town Municipal Council | 36 | Lalappa | 02-04-2019 | Rs 10 lakhs | |
| | | 37 | Nabilal | | Rs 10 lakhs | |
| | | 38 | Gudusaba | | Rs 10 lakhs | |
| 18 | Karwar City Municipal Council | 39 | B. Kotayya | 11-08-2019 | Rs 10 lakhs | |
| 19 | Kalburgi City Corporation | 40 | Rashid Shek | 28-01-2021 | Rs 10 lakhs | |
| | | 41 | Lal Ahmed | 28-01-2021 | Rs 10 lakhs | |
| 20 | Ramanagar CMC | 42 | Manjunatha | 04-06-2021 | Rs 10 lakhs | |
| | | 43 | Manjunatha | | Rs 10 lakhs | |
| | | 44 | Rajesha | | Rs 10 lakhs | |
| 21 | **Vijayapura CC** | 45 | Vikram Pathre | 27.03.2025 | Rs 30 lakhs | ಸರ್ಕಾರದ ಆದೇಶ ಸಂಖ್ಯೆ: ನಅಇ 239 ಜಿಇಎಲ್ 2023 (ಭಾ-1)(ಇ) ಬೆಂಗಳೂರು ದಿನಾಂಕ:01.07.2025 |

**ಇ) ವಿಷಯ:- ಕಲಬುರಗಿ ಜಿಲ್ಲೆ ಸೇಡಂ ತಾಲ್ಲೂಕಿನ ಮಳಖೇಡ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವ ಕೊಂಕನಹಳ್ಳಿ ಅಂಬಿಗರ ಚೌಡಯ್ಯರವರ ಧ್ವಜದ ಕಟ್ಟೆ ಕುರಿತು**

– – –

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)(ಗೃಹ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಡಾ॥ ತಳವಾರ್ ಸಾಬಣ್ಣಾರವರು ದಿನಾಂಕ 12.08.2025ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಉತ್ತರ:**

ಸೇಡಂ ತಾಲ್ಲೂಕಿನ ಕೊಂಕನಹಳ್ಳಿ ಗ್ರಾಮದ ಶ್ರೀ ಮಲ್ಲಿಕಾರ್ಜುನ ಪಾಟೀಲ ಇವರಿಗೆ ಸೇರಿದ ಜಮೀನು ಸರ್ವೆ ನಂ: 01 ರಲ್ಲಿ ದಿನಾಂಕ:25-07-2025ರ ಮಧ್ಯರಾತ್ರಿ ಯಾರೋ ಅಂಬಿಗರ ಚೌಡಯ್ಯನವರ ಮೆಟಾಲಿಕ್ ಧ್ವಜಸ್ತಂಭ ಸ್ಥಾಪಿಸಿರುತ್ತಾರೆ. ಆದರಂತೆ ಮಲ್ಲಿಕಾರ್ಜುನ ಪಾಟೀಲ್ ರವರು ಮಳಖೇಡ ಪೊಲೀಸ್ ಠಾಣೆಗೆ ಬಂದು ಸದರಿ ವಿಷಯದ ಕುರಿತು ಅರ್ಜಿ ಸಲ್ಲಿಸಿದ್ದು ಇರುತ್ತದೆ. ಪಿ.ಎಸ್.ಐ ರವರು ಸದರಿ ವಿಷಯದ ಕುರಿತು ಕಾನೂನು ಮತ್ತು ಸುವ್ಯವಸ್ಥೆಗೆ ಯಾವುದೇ ಧಕ್ಕೆ ಆಗದಂತೆ ನಿಗಾ ವಹಿಸಿರುತ್ತಾರೆ. ದಿನಾಂಕ:05-08-2025 ರಂದು ವಿ.ಎ., ಆರ್.ಐ, ರವರೊಂದಿಗೆ ಪಿ.ಎಸ್.ಐ ರವರು ಘಟನಾ ಸ್ಥಳಕ್ಕೆ ಭೇಟಿ ನೀಡಿರುತ್ತಾರೆ. ಆ ಸಂದರ್ಭದಲ್ಲಿ ಆರ್.ಐ ರವರು ಅಂಬಿಗರ ಚೌಡಯ್ಯ ಸಮಾಜಕ್ಕೆ ಸೇರಿದ ಹಿರಿಯರಿಗೆ ಸದರಿ ಜಾಗವು ಮಲ್ಲಿಕಾರ್ಜುನ ಪಾಟೀಲ ಇವರಿಗೆ ಸೇರಿದ್ದು, ಖಾಸಗಿ ಜಾಗ ಆಗಿರುತ್ತದೆ ಎಂದು ತಿಳಿಸಿರುತ್ತಾರೆ. ಅದರಂತೆ ಅಲ್ಲಿ ಸೇರಿದ್ದ ಹಿರಿಯರು ಹಾಕಿದಂತಹ ಧ್ವಜಸ್ತಂಭ ತೆರವುಗೊಳಿಸುತ್ತೇವೆ ಎಂದು ಒಪ್ಪಿಕೊಂಡಿರುತ್ತಾರೆ. ಅದರಂತೆ ದಿನಾಂಕ: 06.08.2025 ರಂದು ತೆರವುಗೊಳಿಸಿರುತ್ತಾರೆ. ಮುಂದಾಳತ್ವ ವಹಿಸಿಕೊಂಡು ಬರುತ್ತಿದ್ದ ಶ್ರೀ.ಹಣಮಂತ ಭಾವನೂರ ಇವರಿಗೆ ಪಿ.ಎಸ್.ಐ ಮಳಖೇಡ ರವರು ಯಾವುದೇ ರೀತಿಯ ಕಿರುಕುಳ ನೀಡಿರುವುದಿಲ್ಲ. ಆರ್.ಐ ಮತ್ತು ವಿ.ಎ. ರವರು ಅಂಬಿಗರ ಚೌಡಯ್ಯ ಸಮಾಜದ ಹಿರಿಯರಿಗೆ ಧ್ವಜಸ್ತಂಭ ತೆರವುಗೊಳಿಸುವಂತೆ ಮನವೊಲಿಸಿ ತೆರವುಗೊಳಿಸಿರುತ್ತಾರೆ.

**ಈ) ವಿಷಯ:- ಕೇಂದ್ರ ಸರ್ಕಾರವು ಸಾಕಷ್ಟು ಯೂರಿಯಾ ಮತ್ತು ಡಿ.ಎ.ಪಿ. ರಸಗೊಬ್ಬರವನ್ನು ಪೂರೈಸಿದ್ದು, ರಾಜ್ಯ ಸರ್ಕಾರವು ರೈತರಿಗೆ ಸಮರ್ಪಕವಾಗಿ ಪೂರೈಸುವ ಕುರಿತು**

- - -

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)(ಕೃಷಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪ ರವರು ದಿನಾಂಕ 12.08.2025ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯವಾದ ಕೇಂದ್ರ ಸರ್ಕಾರವು ಸಾಕಷ್ಟು ಯೂರಿಯಾ ಮತ್ತು ಡಿ.ಎ.ಪಿ ರಸಗೊಬ್ಬರವನ್ನು ಪೂರೈಸಿದ್ದು, ರಾಜ್ಯ ಸರ್ಕಾರವು ರೈತರಿಗೆ ಸಮರ್ಪಕವಾಗಿ ಪೂರೈಸುವ ಕುರಿತು ಈ ಕೆಳಕಂಡಂತೆ ಮಾಹಿತಿಯನ್ನು ಒದಗಿಸಲಾಗಿದೆ.

**ರಸಗೊಬ್ಬರ:**

ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಡಿ.ಎ.ಪಿ. ಮತ್ತು ಯೂರಿಯಾ ರಸಗೊಬ್ಬರದ ಸಮಸ್ಯೆ ಉಂಟಾಗಲು ಕಾರಣಗಳು ಕೆಳಕಂಡಂತಿವೆ:

- ರಾಜ್ಯದಲ್ಲಿ ಮುಂಗಾರು ಹಂಗಾಮಿನಲ್ಲಿ ಮುಂಚಿತವಾಗಿ ಉತ್ತಮವಾಗಿ ಮಳೆಯಾಗಿದ್ದು, ಸಾಮಾನ್ಯ ಅವಧಿಗಿಂತ ಮುಂಚೆ ಬಿತ್ತನೆ ಪ್ರಾರಂಭವಾಗಿರುತ್ತದೆ.

- ಹೆಚ್ಚು ರಸಗೊಬ್ಬರ ಅವಶ್ಯವಿರುವ ಮುಸುಕಿನ ಜೋಳದ ವಿಸ್ತೀರ್ಣವು ಗಣನೀಯವಾಗಿ ಹೆಚ್ಚಳವಾಗಿರುತ್ತದೆ (ಅಂದಾಜು 2.00ಲಕ್ಷ ಹೆಕ್ಟೇರ್)
- ಅಂದಾಜು 13,000 ಹೆಕ್ಟೇರ್ ಪ್ರದೇಶದಲ್ಲಿ ಮರುಬಿತ್ತನೆ ಕೈಗೊಳ್ಳಲಾಗಿರುತ್ತದೆ.
- ಪ್ರಮುಖ ಜಲಾಶಯಗಳಿಂದ (ತುಂಗಭದ್ರಾ, ಕೃಷ್ಣಾ, ಕಾವೇರಿ ಇತ್ಯಾದಿ) ಅವಧಿಗಿಂತ ಮುಂಚಿತವಾಗಿ ಅಚ್ಚುಕಟ್ಟು ಪ್ರದೇಶಗಳಿಗೆ ನೀರನ್ನು ಬಿಟ್ಟಿರುವುದರಿಂದ ಮುಂಚಿತವಾಗಿ ನಾಟಿ ಕೈಗೊಳ್ಳಲಾಗಿರುತ್ತದೆ.
- ಕೇಂದ್ರ ಸರ್ಕಾರದಿಂದ ಪ್ರತಿ ಮಾಹೆಯ ಬೇಡಿಕೆ/ಹಂಚಿಕೆಗನುಗುಣವಾಗಿ ರಸಗೊಬ್ಬರಗಳು ಸರಬರಾಜಾಗಿರುವುದಿಲ್ಲ.

ರಾಜ್ಯಕ್ಕೆ ಪ್ರಸಕ್ತ ಮುಂಗಾರು ಹಂಗಾಮಿಗೆ ಆವರಿಸಬಹುದಾದ ಬೆಳೆಗಳ ವಿಸ್ತೀರ್ಣವನ್ನು ವಾಡಿಕೆಯಂತೆ ಅಂದಾಜಿಸಿ, 12.95 ಲಕ್ಷ ಮೆ.ಟನ್ ಯೂರಿಯಾ ಮತ್ತು 4.15 ಲಕ್ಷ ಮೆ.ಟನ್ ಡಿ.ಎ.ಪಿ ರಸಗೊಬ್ಬರಕ್ಕೆ ಕೇಂದ್ರ ಸರ್ಕಾರಕ್ಕೆ ಬೇಡಿಕೆಯನ್ನು ಸಲ್ಲಿಸಲಾಗಿತ್ತು. ಇದಕ್ಕೆ ಪೂರಕವಾಗಿ ಕೇಂದ್ರ ಸರ್ಕಾರದಿಂದ 11.17 ಲಕ್ಷ ಮೆ.ಟನ್ ಯೂರಿಯಾ ಮತ್ತು 4.00 ಲಕ್ಷ ಮೆ.ಟನ್ ಡಿ.ಎ.ಪಿ ರಸಗೊಬ್ಬರವನ್ನು ಹಂಚಿಕೆ ಮಾಡಲಾಗಿರುತ್ತದೆ.

ಏಪ್ರಿಲ್ ಮಾಹೆಯಿಂದ ಜುಲೈ-2025ರ ಮಾಹೆಯವರೆಗೆ 6.82 ಲಕ್ಷ ಮೆ.ಟನ್ **ಯೂರಿಯಾ** ರಸಗೊಬ್ಬರದ ಹಂಚಿಕೆಗೆ, ಕೇಂದ್ರ ಸರ್ಕಾರದಿಂದ ಇಲ್ಲಿಯವರೆಗೆ 5.55 ಲಕ್ಷ ಮೆ.ಟನ್ ಸರಬರಾಜಾಗಿದ್ದು 1.27 ಲಕ್ಷ ಮೆ.ಟನ್ ಪ್ರಮಾಣದ ಯೂರಿಯಾ ರಸಗೊಬ್ಬರದ ಸರಬರಾಜಿನಲ್ಲಿ ಕೊರತೆಯಾಗಿರುತ್ತದೆ. ಆರಂಭಿಕ ಶಿಲ್ಕು 3.46 ಲಕ್ಷ ಮೆ.ಟನ್ ಸೇರಿ 7.90 ಲಕ್ಷ ಮೆ.ಟನ್ ಮಾರಾಟವಾಗಿ, 1.10 ಲಕ್ಷ ಮೆ.ಟನ್ ದಾಸ್ತಾನಿರುತ್ತದೆ.

ಆಗಸ್ಟ್-2025ರ ಮಾಹೆಗೆ 2.23 ಲಕ್ಷ ಮೆ.ಟನ್ ಯೂರಿಯಾ ರಸಗೊಬ್ಬರದ ಹಂಚಿಕೆಗೆ, ಕೇಂದ್ರ ಸರ್ಕಾರದಿಂದ ಇಲ್ಲಿಯವರೆಗೆ 0.67 ಲಕ್ಷ ಮೆ.ಟನ್ ಸರಬರಾಜಾಗಿದ್ದು, ಪ್ರಸ್ತುತ ಮಾಹೆಗೆ ಕೇಂದ್ರ ಸರ್ಕಾರದಿಂದ ಇನ್ನೂ 1.56 ಲಕ್ಷ ಮೆ.ಟನ್ ಸರಬರಾಜು ಬಾಕಿ ಇರುತ್ತದೆ.

ಒಟ್ಟಾರೆ ಏಪ್ರಿಲ್ ಮಾಹೆಯಿಂದ ಆಗಸ್ಟ್-2025 ಮಾಹೆಯ ಅಂತ್ಯದವರೆಗೆ 2.83 ಲಕ್ಷ ಮೆ.ಟನ್ ಯೂರಿಯಾ ರಸಗೊಬ್ಬರದ ಸರಬರಾಜಿಗೆ ಬಾಕಿ ಇರುತ್ತದೆ.

ಏಪ್ರಿಲ್ 2025 ರಿಂದ ಜುಲೈ-2025ರವರೆಗೆ 3.10 ಲಕ್ಷ ಮೆ.ಟನ್ **ಡಿ.ಎ.ಪಿ** ಹಂಚಿಕೆಗೆ, ಇಲ್ಲಿಯವರೆಗೆ 2.39 ಲಕ್ಷ ಮೆ.ಟನ್ ರಸಗೊಬ್ಬರ ಸರಬರಾಜಾಗಿದ್ದು, 0.71 ಲಕ್ಷ ಮೆ.ಟನ್ ರಸಗೊಬ್ಬರದ ಸರಬರಾಜಿಗೆ ಬಾಕಿ ಇರುತ್ತದೆ. ಆರಂಭಿಕ ಶಿಲ್ಕು-0.76 ಲಕ್ಷ ಮೆ.ಟನ್ ಸೇರಿ 2.49 ಲಕ್ಷ ಮೆ.ಟನ್ ಮಾರಾಟವಾಗಿ, 0.67 ಲಕ್ಷ ಮೆ.ಟನ್ ದಾಸ್ತಾನಿರುತ್ತದೆ.

ಆಗಸ್ಟ್-2025ರ ಮಾಹೆಗೆ 0.78 ಲಕ್ಷ ಮೆ.ಟನ್ ಡಿ.ಎ.ಪಿ ರಸಗೊಬ್ಬರದ ಹಂಚಿಕೆಗೆ, ಕೇಂದ್ರ ಸರ್ಕಾರದಿಂದ ಇಲ್ಲಿಯವರೆಗೆ 0.21 ಲಕ್ಷ ಮೆ.ಟನ್ ಸರಬರಾಜಾಗಿದ್ದು, ಪ್ರಸ್ತುತ ಮಾಹೆಗೆ ಕೇಂದ್ರ ಸರ್ಕಾರದಿಂದ ಇನ್ನೂ 0.57 ಲಕ್ಷ ಮೆ.ಟನ್ ಸರಬರಾಜು ಬಾಕಿ ಇರುತ್ತದೆ. ಡಿ.ಎ.ಪಿ ರಸಗೊಬ್ಬರ ಸರಬರಾಜು ಪ್ರಕ್ರಿಯೆ ಜಾರಿಯಲ್ಲಿದೆ.

ಒಟ್ಟಾರೆ ಏಪ್ರಿಲ್ ಮಾಹೆಯಿಂದ ಆಗಸ್ಟ್-2025 ಮಾಹೆಯ ಅಂತ್ಯದವರೆಗೆ 1.28 ಲಕ್ಷ ಮೆ.ಟನ್ ಡಿ.ಎ.ಪಿ. ರಸಗೊಬ್ಬರದ ಸರಬರಾಜಿಗೆ ಬಾಕಿ ಇರುತ್ತದೆ.

ಮೇ ಮತ್ತು ಜೂನ್ ಮಾಹೆಗಳಲ್ಲಿ ಬೇಡಿಕೆ ಅಥವಾ ಹಂಚಿಕೆಗೆ ಅನುಗುಣವಾಗಿ ಡಿ.ಎ.ಪಿ ರಸಗೊಬ್ಬರ ಸರಬರಾಜಾಗದ ಕಾರಣ ಮುಂಗಾರು ಬಿತ್ತನೆ ಸಮಯದಲ್ಲಿ ಕೆಲವು ಜಿಲ್ಲೆಗಳಲ್ಲಿ ಡಿ.ಎ.ಪಿ ರಸಗೊಬ್ಬರದ ಕೊರತೆ ಉಂಟಾಗಿತ್ತು. ಡಿ.ಎ.ಪಿ ರಸಗೊಬ್ಬರಕ್ಕೆ ಪರ್ಯಾಯವಾಗಿ

ಕಾಂಪ್ಲೆಕ್ಸ್ ರಸಗೊಬ್ಬರವನ್ನು ಬಳಸಲು ರೈತರಲ್ಲಿ ವ್ಯಾಪಕ ಪ್ರಚಾರವನ್ನು ನೀಡಿ ಡಿ.ಎ.ಪಿ ರಸಗೊಬ್ಬರದ ಕೊರತೆಯನ್ನು ನಿಭಾಯಿಸಲಾಗಿದೆ.

**ಕೇಂದ್ರ ಸರ್ಕಾರದಿಂದ ಹಂಚಿಕೆ ಪ್ರಮಾಣದಷ್ಟು ಯೂರಿಯಾ ಮತ್ತು ಡಿ.ಎ.ಪಿ. ರಸಗೊಬ್ಬರ ಪೂರೈಕೆಯಾಗದಿದ್ದರೂ ಸಹ ಸರಬರಾಜಾದ ಪ್ರಮಾಣವನ್ನು ಜಿಲ್ಲೆಗಳ ಬೇಡಿಕೆಯನ್ನು ಪ್ರತಿ ದಿನ ಪರಿಶೀಲಿಸಿ ಅವಶ್ಯವಿರುವ ಜಿಲ್ಲೆಗಳಿಗೆ ಸಮರ್ಪಕವಾಗಿ ವಿತರಣೆ ಮಾಡಲು ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗಿದೆ.**

**ಬಿತ್ತನೆ ಬೀಜ:**

ರೈತರಿಗೆ ವಿವಿಧ ಬೆಳೆಗಳ ಉತ್ತಮ ಗುಣಮಟ್ಟದ ಬಿತ್ತನೆ ಬೀಜಗಳನ್ನು ಒದಗಿಸಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.

- ರಾಜ್ಯದ ಎಲ್ಲಾ ವರ್ಗದ ರೈತರಿಗೆ ಗರಿಷ್ಠ 2 ಹೆಕ್ಟೇರ್ ಮಿತಿಯೊಳಗೆ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜಗಳನ್ನು ಸರಬರಾಜು ಮಾಡಲು 'ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣ' ಯೋಜನೆಯಡಿ "ಬೀಜಗಳ ಪೂರೈಕೆ" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.
- ರೈತ ಸಂಪರ್ಕ ಕೇಂದ್ರಗಳು ಹಾಗೂ ಗುರುತಿಸಿದ ಮಾರಾಟ ಕೇಂದ್ರಗಳ ಮುಖಾಂತರ ಸಕಾಲದಲ್ಲಿ ಬಿತ್ತನೆ ಬೀಜ ಸರಬರಾಜು ಮಾಡಲು ಹಾಗೂ ಸಮೀಪದಲ್ಲಿಯೇ ಬಿತ್ತನೆ ಬೀಜಗಳನ್ನು ದೊರಕಿಸುವ ಸಲುವಾಗಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಆಯ್ದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕವು ವಿತರಣೆಗೆ ವ್ಯವಸ್ಥೆ ಮಾಡಲಾಗಿದೆ.
- ರೈತರಿಗೆ ಜೋಳ, ಸಜ್ಜೆ, ಭತ್ತ, ರಾಗಿ ಗೋಧಿ, ಉದ್ದು, ಹೆಸರು, ಅಲಸಂದೆ, ಮೆಕ್ಕೆಜೋಳ, ತೊಗರಿ, ನೆಲಗಡಲೆ, ತೃಣ ಧಾನ್ಯಗಳು, ಕಡಲೆ, ಕುಸುಬೆ, ಸೋಯಾಅವರೆ, ಅವರೆ ಮತ್ತು ಸೂರ್ಯಕಾಂತಿ ಬೆಳೆಗಳ ಬಿತ್ತನೆ ಬೀಜಗಳನ್ನು ರಿಯಾಯಿತಿ ದರದಲ್ಲಿ ಸಕಾಲದಲ್ಲಿ ವಿತರಿಸಲಾಗುತ್ತದೆ.
- ರಾಜ್ಯ ಸರ್ಕಾರದ 'ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣ' ಯೋಜನೆಯಡಿ "ಬೀಜಗಳ ಪೂರೈಕೆ" ಕಾರ್ಯಕ್ರಮದಲ್ಲಿ 2025 ರ ಮುಂಗಾರು ಹಂಗಾಮಿನಲ್ಲಿ ದಿನಾಂಕ 11.08.2025ರವರೆಗೆ 3.17ಲಕ್ಷ ಕ್ವಿಂಟಾಲ್ ಬಿತ್ತನೆ ಬೀಜಗಳನ್ನು ರಿಯಾಯಿತಿ ದರದಲ್ಲಿ 7.29 ಲಕ್ಷ ರೈತರಿಗೆ ವಿತರಿಸಲಾಗಿರುತ್ತದೆ. ಪ್ರಸ್ತುತ ಹಂಗಾಮಿನಲ್ಲಿ ಬೀಜ ವಿತರಣೆಯು ಪ್ರಗತಿಯಲ್ಲಿದ್ದು, ಯಾವುದೇ ಬಿತ್ತನೆ ಬೀಜದ ಕೊರತೆಯಿರುವುದಿಲ್ಲ.

**ಉ) ನೆಲಮಂಗಲ ಅರಶಿನಕುಂಟೆ ಮತ್ತು ಬಿನ್ನಮಂಗಲದ ಕೆರೆಗಳ ಕಾಯಕಲ್ಪ” ಕುರಿತು**

– – –

**ಶ್ರೀ ಎನ್.ಎಸ್. ಬೋಸರಾಜು (ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ಎಂ. ನಾಗರಾಜುರವರು ದಿನಾಂಕ 12.08.2025ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

- ಅರಿಶಿನಕುಂಟೆ, ಬಿನ್ನಮಂಗಲದ ಕೆರೆಗಳು ಪ್ರತ್ಯೇಕವಾಗಿರದೆ ಒಂದೇ ಆಗಿರುತ್ತದೆ. ಮಾನ್ಯ ಶಾಸಕರು, ನೆಲಮಂಗಲ ವಿಧಾನಸಭಾ ಕ್ಷೇತ್ರ ರವರು ಬಿನ್ನಮಂಗಲ ಕೆರೆ ಅಭಿವೃದ್ಧಿ, ಪುನಶ್ಚೇತನ ಮತ್ತು ಸೌಂದರ್ಯೀಕರಣ ಕಾಮಗಾರಿಗಳ ಹಂತ-1ನ್ನು ರೂ. 950.00 ಲಕ್ಷಗಳಲ್ಲಿ ಮತ್ತು ಹಂತ -2ನ್ನು ರೂ. 850.00 ಲಕ್ಷಗಳಲ್ಲಿ ಕೈಗೊಳ್ಳಲು ಸದಸ್ಯ ಕಾರ್ಯದರ್ಶಿ, ನೆಲಮಂಗಲ ಯೋಜನಾ ಪ್ರಾಧಿಕಾರ ಇವರಿಗೆ ಸೂಚಿಸಿರುವ ಹಿನ್ನಲೆಯಲ್ಲಿ, ದಿನಾಂಕ:19-12-2024 ರಂದು ನಡೆದ ನೆಲಮಂಗಲ ಯೋಜನಾ ಪ್ರಾಧಿಕಾರದ 121 ನೇ ಸಭೆಯ ವಿಷಯ ಸಂಖ್ಯೆ: 121.14.4 ರಲ್ಲಿ ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ನಿರ್ಣಯಿಸಲಾಗಿರುತ್ತದೆ.
- ಬಿನ್ನಮಂಗಲ ಕೆರೆಯು ನಗರಸಭೆ, ನೆಲಮಂಗಲ ರವರ ಸುಪರ್ಧಿಗೆ ಒಳಪಟ್ಟಿರುವ ಕಾರಣ ಪೌರಾಯುಕ್ತರು, ನಗರಸಭೆ, ನೆಲಮಂಗಲ ರವರು ದಿನಾಂಕ:26-05-2025 ರಂದು ಸದರಿ ಕೆರೆ ಅಭಿವೃದ್ಧಿ ಕಾಮಗಾರಿಗಳ ವಿಸ್ತೃತ ಯೋಜನಾ ವರದಿ ಮತ್ತು ಅಂದಾಜು ಪಟ್ಟಿಯನ್ನು ಸದಸ್ಯ ಕಾರ್ಯದರ್ಶಿ, ನೆಲಮಂಗಲ ಯೋಜನಾ ಪ್ರಾಧಿಕಾರ ರವರಿಗೆ ಸಲ್ಲಿಸಿದ್ದು, ನೆಲಮಂಗಲ ಯೋಜನಾ ಪ್ರಾಧಿಕಾರವು ಸದರಿ ಕೆರೆಯ ಅಭಿವೃದ್ಧಿ ಕಾಮಗಾರಿಯ ಹಂತ-1 ರ ವಿಸ್ತೃತ ಯೋಜನಾ ವರದಿಯನ್ನು ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ರವರಿಗೆ ದಿನಾಂಕ:28-05-2025 ರಂದು ಸಲ್ಲಿಸಿರುತ್ತಾರೆ.
- ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರವು ಕೆರೆಗಳ ಅಭಿವೃದ್ಧಿ ಪ್ರಸ್ತಾವನೆಗಳಿಗೆ ತಾಂತ್ರಿಕ ತೆರವು ನೀಡಲು ಪರಿಶೀಲನಾ ಶುಲ್ಕ ರೂ. 4.75 ಲಕ್ಷಗಳನ್ನು ಪಾವತಿಸುವಂತೆ ದಿನಾಂಕ: 09-06-2025 ರ ಪತ್ರದಲ್ಲಿ ನೆಲಮಂಗಲ ಯೋಜನಾ ಪ್ರಾಧಿಕಾರವನ್ನು ಕೋರಿದ್ದು, ಪ್ರಾಧಿಕಾರದ ವತಿಯಿಂದ ಪರಿಶೀಲನಾ ಶುಲ್ಕವನ್ನು ಪಾವತಿಸುವ ಕುರಿತು ಕ್ರಮವಹಿಸಲಾಗುತ್ತಿದೆ.
- ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರವು ವಿಸ್ತೃತ ಯೋಜನಾ ವರದಿಗೆ ತಾಂತ್ರಿಕ ತೆರವು ನೀಡಿದ ನಂತರದಲ್ಲಿ ಬಿನ್ನಮಂಗಲ ಕೆರೆಯ ಅಭಿವೃದ್ಧಿ (ಹಂತ-1) ಕಾಮಗಾರಿಯನ್ನು ಕೈಗೊಳ್ಳಲು ನಿಯಮಾನುಸಾರ ಕ್ರಮವಹಿಸಲಾಗುವುದು.

**ಊ) ವಿಷಯ:- ರಾಷ್ಟ್ರೀಯ ಸ್ವಯಂ ಸೇವಕ ಸಂಘದ ವಿರುದ್ಧ ಸುಳ್ಳು ಸುದ್ದಿ ಹರಡುತ್ತಿರುವ ಕುರಿತು**

- - -

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)(ಗೃಹ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ಕಿಶೋರ್ ಕುಮಾರ ಪುತ್ತೂರು ರವರು ದಿನಾಂಕ 12.08.2025ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ದಿನಾಂಕ 11.08.2025 ರಂದು ಹೊಸದಿಗಂತ ದಿನ ಪತ್ರಿಕೆಯಲ್ಲಿ "ರಾಷ್ಟ್ರೀಯ ಸ್ವಯಂ ಸಂಘದ ವಿರುದ್ಧ ಸುಳ್ಳು ಸುದ್ದಿ ಹರಡುತ್ತಿರುವುದು ವಿಷಾದನೀಯ" ಎಂಬ ಶೀರ್ಷಿಕೆ ಅಡಿಯಲ್ಲಿ ಸುದ್ದಿ ಪ್ರಕಟವಾಗಿರುತ್ತದೆ. ಹೊಸ ದಿಗಂತ ದಿನ ಪತ್ರಿಕೆಯ ಕಛೇರಿ ಬೆಂಗಳೂರಿನ ಮಲ್ಲೇಶ್ವರಂ ನಲ್ಲಿ ಇದ್ದು, ಇದುವರೆಗೂ ಈ ಸಂಬಂಧ ಬೆಂಗಳೂರು ನಗರದಲ್ಲಿ ಯಾವುದೇ ದೂರು ದಾಖಲಾಗಿರುವುದಿಲ್ಲ.

**ಋ) ವಿಷಯ:- ರಾಜ್ಯದ ವಿವಿಧ ಭಾಗಗಳಲ್ಲಿ ಹಸುಗಳ ಹತ್ಯೆ, ಕತ್ತು ಕೊಯ್ಯುವುದು, ಕೆಚ್ಚಲು ಕತ್ತರಿಸುವಂತಹ ಅಮಾನುಷ ಕೃತ್ಯಗಳು ನಡೆದಿರುವ ಕುರಿತು**

- -

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)(ಗೃಹ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ಸಿ.ಟಿ. ರವಿರವರು ದಿನಾಂಕ 12.08.2025ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ದಿನಾಂಕ: 11.08.2025 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕು, ಅರಳಸಂದ್ರ ಗ್ರಾಮದಲ್ಲಿ ಬೆಳಗ್ಗೆ 8.25 ಗಂಟೆಗೆ ಆನಂದ ನಗರದಿಂದ ಗೋವಿಂದಪುರಕ್ಕೆ ಸಂಪರ್ಕಿಸುವ ನಡುವೆ ಇರುವ ಸೇತುವೆಯ ಬಳಿ ಹಳ್ಳೀಕಾರ್ ಥಳಿಯ 02 ನಾಟಿ ಹೋರಿಗಳ ಕತ್ತು ಕೊಯ್ದು ಸ್ಥಿತಿಯಲ್ಲಿ ಬಿದ್ದಿರುವ ಬಗ್ಗೆ ಪೋಲೀಸರಿಗೆ ಮಾಹಿತಿ ಬಂದಿದ್ದು, ಕೂಡಲೇ ನೆಲಮಂಗಲ ಗ್ರಾಮಾಂತರ ಠಾಣಾ ಪೋಲೀಸರು ಸ್ಥಳಕ್ಕೆ ತೆರಳಿ ಸ್ಥಳ ಪರಿಶೀಲನೆ ನಡೆಸಿ ಬೆಳಗ್ಗೆ 9.30 ಗಂಟೆಗೆ ಪೋಲೀಸ್ ಠಾಣಾ ಮೊಕದ್ದಮೆ ಸಂಖ್ಯೆ 286/2025 ಕಲಂ. 4 & 5 Karnataka Prevention of Cow Slaughter & Cattle prevention Act 2020 & u/s 177-192(A) Indian Motor Vehicle Act 1988 ರೀತ್ಯಾ ಪ್ರಕರಣ ದಾಕಲಾಗಿರುತ್ತದೆ.

ಈ ಪ್ರಕರಣದ ಪತ್ತೆಗಾಗಿ 02 ತನಿಖಾ ತಂಡಗಳನ್ನು ರಚಿಸಲಾಗಿದ್ದು, ವಾಹನ ಸಾಗಾಟ ಮಾಡಿದ ಅಪರಿಚಿತ ವಾಹನ ಮತ್ತು ಆರೋಪಿಗಳ ಪತ್ತೆಗೆ ಶ್ರಮಿಸಲಾಗುತ್ತಿದೆ. ಹಾಗೂ ಸ್ಥಳದಲ್ಲಿ ಲಭ್ಯವಿರುವ ಸಿಸಿ ಕ್ಯಾಮೆರಾ ದೃಶ್ಯಾವಳಿಗಳನ್ನು ಪಡೆಯಲಾಗಿರುತ್ತದೆ. ಮತ್ತು ಹೆಚ್ಚಿನ ಮಾಹಿತಿಗಾಗಿ ಬಾತ್ಮಿದಾರರನ್ನು ಸಂಪರ್ಕಿಸಲಾಗುತ್ತಿದೆ.

ಈ ಪ್ರಕರಣದ ಆರೋಪಿಗಳನ್ನು ಶೀಘ್ರವಾಗಿ ಪತ್ತೆ ಹಚ್ಚಲಾಗುವುದು.

**ಎ) ವಿಷಯ:- ಮಂಗಳೂರಿನ ಕೇಂದ್ರ ಕಾರಾಗೃಹಕ್ಕೆ ಜಾಮರ್ ಅಳವಡಿಸಿರುವ ಕುರಿತು**

\- - -

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)(ಗೃಹ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ಐವನ್ ಡಿ' ಸೋಜಾರವರು ದಿನಾಂಕ 13.08.2025ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಉತ್ತರ:-** 2022-23ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಆಯವ್ಯಯ ಭಾಷಣದಲ್ಲಿ ಕಾರಾಗೃಹಗಳಲ್ಲಿ ಮೊಬೈಲ್ ಬಳಕೆ ತಡೆಯಲು ಹಾಗೂ ಇನ್ನಿತರೇ ನಿಷೇಧಿತ ವಸ್ತುಗಳ ತಪಾಸಣೆ ಮಾಡಿ ಪತ್ತೆ ಹಚ್ಚಲು ಅತ್ಯಾಧುನಿಕ ಮಾದರಿಯ ಉಪಕರಣಗಳು ಮತ್ತು ಮೊಬೈಲ್ ಜಾಮರ್‌ಗಳನ್ನು ಅಳವಡಿಸಲಾಗುವುದು ಎಂದು ಘೋಷಿಸಲಾಗಿರುತ್ತದೆ. ಸದರಿ ಯೋಜನೆಯ ಅನುಷ್ಠಾನಕ್ಕೆ ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ.

ಮಂಗಳೂರು ಜಿಲ್ಲಾ ಕಾರಾಗೃಹದಲ್ಲಿನ 05 ಸಂಖ್ಯೆ ಮೊಬೈಲ್ ಜಾಮರ್‌ಗಳ ದುರಸ್ಥಿ ಮತ್ತು ಮೇಲ್ದರ್ಜೆಗೇರಿಸುವ ಕಾರ್ಯ ಪ್ರಗತಿಯಲ್ಲಿದ್ದು, ಜಾಮರ್ ಅಳವಡಿಕೆಯಿಂದ ಉಂಟಾಗುವ ಸಾಧಕ-ಬಾಧಕಗಳನ್ನು ಪರಿಶೀಲಿಸಲಾಗುತ್ತಿದ್ದು, ಪರಿಶೀಲನಾ ಹಂತದಲ್ಲಿ ನೆಟ್‌ವರ್ಕ್ ಕುರಿತಂತೆ ಉಂಟಾಗುವ ಸಮಸ್ಯೆಗಳನ್ನು ತಕ್ಷಣವೇ ಪರಿಹರಿಸಲು ಕ್ರಮವಹಿಸುವಂತೆ ಹಾಗೂ ಮೊಬೈಲ್ ಜಾಮರ್ ಅನ್ನು ದುರಸ್ಥಿ ಮತ್ತು ಮೇಲ್ದರ್ಜೆಗೇರಿಸುವ ಕಾರ್ಯ ಕೈಗೊಂಡಿರುವ M/s. Telecommunications Consultants India Limited ರವರಿಗೆ ಜಾಮರ್‌ಗಳ Frequency ಯನ್ನು Recalibration ಮಾಡುವಂತೆ ಸೂಚಿಸಲಾಗಿರುತ್ತದೆ.

ಮುಂದುವರೆದು, ಸದರಿ ಸಂಸ್ಥೆಗೆ, ಎಲ್ಲಾ 04 Service Providers (Airtel, BSNL, VI, JIO) ಗಳ ಅಧಿಕಾರಿಗಳು ಮತ್ತು Department of Telecommunications (DOT) ಅಧಿಕಾರಿಗಳೊಂದಿಗೆ ದಿ:04-03-2025 ಮತ್ತು 07-03-2025 ರಂದು ಸಭೆಯನ್ನು ನಡೆಸಿ ಕಾರಾಗೃಹಗಳಲ್ಲಿ ಯಾವುದೇ ಕಾರಣಕೂ, ಮೊಬೈಲ್ ಸಿಗ್ನಲ್ ದೊರೆಯದಂತೆ, ಜಾಮರ್‌ಗಳು ಸಂಪೂರ್ಣ ಕಾರ್ಯಕ್ಷಮತೆ ಹೊಂದಿರಬೇಕು ಹಾಗೂ ಸಾರ್ವಜನಿಕರಿಗೆ ಜಾಮರ್‌ಗಳ ಪ್ರಭಾವದಿಂದ ತೊಂದರೆ ಉಂಟಾಗಬಾರದು ಎಂದು ಸಭೆಯಲ್ಲಿ ಸೂಚಿಸಲಾಗಿರುತ್ತದೆ.

ಮಾನ್ಯ ಗೃಹ ಸಚಿವರು, ಕರ್ನಾಟಕ ರಾಜ್ಯ ಸರ್ಕಾರ ರವರು ಮಂಗಳೂರು ಜಿಲ್ಲಾ ಕಾರಾಗೃಹಕ್ಕೆ ದಿನಾಂಕ:13-06-2025ರಂದು ಭೇಟಿ ನೀಡಿ, ಕಾರಾಗೃಹದಲ್ಲಿ ಅಳವಡಿಸಲಾಗಿರುವ ಜಾಮರ್‌ಗಳು ಕಾರ್ಯನಿರ್ವಹಿಸದೇ ಇರುವ ಕುರಿತಂತೆ, ತಕ್ಷಣ ಸಂಬಂಧಪಟ್ಟವರಿಂದ ಸರಿಪಡಿಸಲು ಅಗತ್ಯ ಕ್ರಮ ಕೈಗೊಂಡು, ಇನ್ನು ಮುಂದೆ ಸದರಿ ಉಪಕರಣಗಳನ್ನು ಸುಸ್ಥಿಯಲ್ಲಿಟ್ಟುಕೊಂಡು ಕಾರ್ಯ ನಿರ್ವಹಿಸುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಲು ಸೂಚಿಸಿರುತ್ತಾರೆ. ಅದರಂತೆ, ಕ್ರಮವಹಿಸಲು M/s. Telecommunications Consultants India Limited ರವರಿಗೆ ಸೂಚಿಸಲಾಗಿರುತ್ತದೆ.

ಮಂಗಳೂರಿನ ಬಂಟ್ವಾಳ ತಾಲ್ಲೂಕು ಚೇಳೂರು ಮತ್ತು ಕುರ್ನಾಡು ಗ್ರಾಮದಲ್ಲಿ ನೂತನ ಕೇಂದ್ರ ಕಾರಾಗೃಹ ನಿರ್ಮಾಣಕ್ಕೆ ಜಿಲ್ಲಾಡಳಿತವು 63 ಎಕರೆ 89 ಸೆಂಟ್ಸ್ ಜಮೀನನ್ನು ಮಂಜೂರು ಮಾಡಿರುತ್ತದೆ. 2018-19ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಆಯವ್ಯಯ ಭಾಷಣದ ಕಂಡಿಕೆ 435ರಲ್ಲಿ ಬಂಟ್ವಾಳ ನೂತನ ಕಾರಾಗೃಹವನ್ನು ನಿರ್ಮಾಣ ಮಾಡಲಾಗುವುದೆಂದು ಘೋಷಿಸಿದ್ದು, ಅದರಂತೆ, ಮಂಗಳೂರು ನೂತನ ಕೇಂದ್ರ ಕಾರಾಗೃಹದ ವಸತಿಯೇತರ ಕಟ್ಟಡ ಮತ್ತು ರಸ್ತೆಗಳ ನಿರ್ಮಾಣ ಯೋಜನೆಗೆ ನಿಗದಿಪಡಿಸಲಾಗಿದ್ದ ರೂ.8500.00 ಲಕ್ಷಗಳ ಅಂದಾಜು ವೆಚ್ಚಗಳನ್ನು ಪರಿಷ್ಕರಿಸಿ ರೂ.11000.00 ಲಕ್ಷಗಳನ್ನು ನಿಗಧಿಪಡಿಸಲಾಗಿರುತ್ತದೆ. ಸರ್ಕಾರದ ಆದೇಶ ದಿನಾಂಕ: 01-03-2019ರಲ್ಲಿ, ನೂತನ ಕೇಂದ್ರ ಕಾರಾಗೃಹ ನಿರ್ಮಾಣ ಕಾಮಗಾರಿಯ ರೂ.11000-00 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿ ಅನುದಾನವನ್ನು ಬಿಡುಗಡೆಗೊಳಿಸಲಾಗಿರುತ್ತದೆ.

ಮುಂದುವರೆದು, ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಮಂಗಳೂರು ವಿಭಾಗರವರು ಮಂಗಳೂರು ನೂತನ ಕೇಂದ್ರ ಕಾರಾಗೃಹದ 2ನೇ ಹಂತದ ಕಾಮಗಾರಿಗೆ ರೂ.179.00 ಕೋಟಿಗಳ ಪರಿಷ್ಕೃತ ಅನುದಾನ ಪಟ್ಟಿಯನ್ನು ಕಾರಾಗೃಹ ಇಲಾಖೆಗೆ ಸಲ್ಲಿಸಿದ್ದು, ಕಾರಾಗೃಹ ಇಲಾಖೆಯಲ್ಲಿ ಸದರಿ ಕಾಮಗಾರಿಗೆ 2025-26ನೇ ಸಾಲಿನ ಕ್ರಿಯಾ ಯೋಜನೆಗಯಲ್ಲಿ ಮಂಜೂರಾತಿ ನೀಡಲು, ಪ್ರಸ್ತಾವನೆ ಸಲ್ಲಿಸಿದ್ದು, ಪ್ರಸ್ತುತ ಸದರಿ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಚಾಲ್ತಿಯಲ್ಲಿರುವ ಮಾರ್ಗಸೂಚಿಗಳನ್ವಯ ಪರಿಶೀಲನಾ ಹಂತದಲ್ಲಿರುತ್ತದೆ.

**ಏ) "ಕೊಪ್ಪಳ ಕೇಂದ್ರೀಯ ವಿದ್ಯಾಲಯ ರಸ್ತೆ, ನೂರಾರು ಸಂಖ್ಯೆಯಲ್ಲಿ ಮಕ್ಕಳು ಓಡಾಡುತ್ತಿದ್ದರೂ ಬಸ್ ಸೌಲಭ್ಯ" ಇಲ್ಲದ ಬಗ್ಗೆ.**

\- - -

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)(ಸಾರಿಗೆ ಮತ್ತು ಮುಜರಾಯಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀಮತಿ ಹೇಮಲತಾ ನಾಯಕರವರು ದಿನಾಂಕ 12.08.2025ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಕೊಪ್ಪಳ ದಿಂದ ಬಹದ್ದೂರ್ ಬಂಡಿಗೆ ಹೋಗುವ ರಸ್ತೆಯಲ್ಲಿ ಬರುವ ಸರಸ್ವತಿ ವಿದ್ಯಾಮಂದಿರದ ಹತ್ತಿರ ಇರುವ ಕ್ರಾಸ್‌ನಿಂದ ಕೇಂದ್ರಿಯ ವಿದ್ಯಾಲಯವು 1.5 ಕಿ.ಮೀ ಅಂತರದಲ್ಲಿದ್ದು, ಸದರಿ ಮಾರ್ಗದಲ್ಲಿ 18 ಸರತಿಗಳಲ್ಲಿ ನಿಗಮದ ಬಸ್‌ಗಳ ಸಂಚಾರ ಇರುತ್ತದೆ. ಕ್ರಾಸ್ ನಿಂದ ಕೇಂದ್ರಿಯ ವಿದ್ಯಾಲಯಕ್ಕೆ ಹೋಗುವ ಮಾರ್ಗದಲ್ಲಿ ಬಸ್ ಸಂಚಾರ ಮಾಡಿದಲ್ಲಿ ಎದುರಿನಿಂದ ವಾಹನಗಳು ಬಂದಲ್ಲಿ ವಾಹನಗಳು ದಾಟುವುದು ಕಷ್ಟಸಾಧ್ಯವಾಗಿದೆ. ದಿನ ಪತ್ರಿಕೆಯಲ್ಲಿ ತಿಳಿಸಿದಂತೆ ಒಂದು ವಾಹನ ಓಡಾಡುವಷ್ಟು ಜಾಗವಿದ್ದು, ಎಲ್ಲಿಂದರಲ್ಲಿ ಗುಂಡಿಗಳು ಬಿದ್ದಿರುತ್ತವೆ. ಈಗಾಗಲೇ ಕೇಂದ್ರಿಯ ವಿದ್ಯಾಲಯಕ್ಕೆ ಹೋಗುವ ರಸ್ತೆ ಅಭಿವೃದ್ಧಿಪಡಿಸುವಂತೆ ಮಾನ್ಯ ಅಪರ ಜಿಲ್ಲಾಧಿಕಾರಿಗಳು ಕೊಪ್ಪಳ ಇವರು ದಿನಾಂಕ:16.07.2025 ರಂದು ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ, ಕೊಪ್ಪಳ ಇವರಿಗೆ ಪತ್ರ ಬರೆದಿರುತ್ತಾರೆ. ಮುಂದುವರೆದು ನಿಗಮದ ವತಿಯಿಂದ ಸದರಿ ರಸ್ತೆ ಅಭಿವೃದ್ಧಿಪಡಿಸಲು ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಕೊಪ್ಪಳ ಜಿಲ್ಲೆ ಇವರಿಗೆ ದಿನಾಂಕ:12.08.2025 ರಂದು ಪತ್ರ ಬರೆಯಲಾಗಿದ್ದು, ಲೋಕೋಪಯೋಗಿ ಇಲಾಖೆ/ ಜಿಲ್ಲಾಪಂಚಾಯತ್, ಕೊಪ್ಪಳ ಇವರಿಂದ ರಸ್ತೆ ದುರಸ್ತಿಯಾಗಿ ವಾಹನಗಳ ಸಂಚಾರಕ್ಕೆ ತಕ್ಕಂತೆ ಅಗಲೀಕರಣವಾಗಿ ಮೋಟರೆಬಲ್ ರಸ್ತೆ ನಿರ್ಮಾಣವಾದಲ್ಲಿ, ಅಗತ್ಯಕ್ಕೆ ತಕ್ಕಂತೆ ಆದ್ಯತೆಯ ಮೇರೆಗೆ ಪರಿಶೀಲಿಸಿ ನಿಗಮದ ಬಸ್ ಕಾರ್ಯಚರಣೆಗೆ ಕ್ರಮ ಜರುಗಿಸಲಾಗುವುದು.

ಸಭಾಪತಿಯವರು:- ಈಗ ಶೂನ್ಯವೇಳೆ ಪ್ರಸ್ತಾವಗಳು.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಮ್ಮ ಅನುಮತಿಯನ್ನು ಕೋರುತ್ತಾ, ಮಾನ್ಯ ಮುಖ್ಯಮಂತ್ರಿಗಳು ಈ ದಿನ ಸದನದಲ್ಲಿ ಹಾಜರಿದ್ದಾರೆ. ಮೊನ್ನೆಯ ದಿವಸ ಚರ್ಚೆ ಮಾಡುತ್ತಿರುವ ಸಂದರ್ಭದಲ್ಲಿ, ಮಾನ್ಯ ಸಭಾನಾಯಕರು ನಾವು ಕೇಳಿದಂತಹ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳು ಬರಲಿ ಎಂದು ಹೇಳಿದ್ದರು.

**(ಈ ಹಂತದಲ್ಲಿ ವೈಸ್ ಛೇರ್ಮನ್‌ರವರಾದ ಶ್ರೀ ಮಂಜುನಾಥ್ ಭಂಡಾರಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಎನ್.ಎಸ್. ಬೋಸರಾಜು(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈ ವಿಷಯ ತಮ್ಮ ಸಮ್ಮುಖದಲ್ಲಿ ಇತ್ಯರ್ಥವಾಗಬೇಕು. ಮಾನ್ಯ ಮುಖ್ಯಮಂತ್ರಿಗಳು ಬರಲಿ ಎಂದು ನಾನು ಹೇಳಿರುವುದಿಲ್ಲ. ಬದಲಾಗಿ, ನಾನು ಸರ್ಕಾರದ ನಿಲುವನ್ನು ಬಹಳ ಸ್ಪಷ್ಟವಾಗಿ ಹೇಳಿರುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಶ್ರೀ ಕೆ.ಎನ್. ರಾಜಣ್ಣನವರನ್ನು ... ಎಂದು ಹೇಳಿದ್ದಾರೆ.

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಬೇಕಾದರೆ ರೆಕಾರ್ಡ್ ಪರಿಶೀಲನೆ ಮಾಡಿ ನೋಡಲಿ. ಸುಮ್ಮನೆ ನನ್ನ ಹೇಳಿಕೆಯನ್ನು ತಿರುಚಬೇಡಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದನ್ನು ನಾವು ಕೇಳಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸಿ ಎಂದು ಕೇಳಿರುತ್ತೇವೆ.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಹೌದು. ನೀವು ಕೇಳಿದ್ದೀರಿ. ಆದರೆ, ನಾನು ಹೇಳಿರುವುದಿಲ್ಲ. ನಾನು ಸರ್ಕಾರದ ನಿಲುವನ್ನು ಬಹಳ ಸ್ಪಷ್ಟವಾಗಿ ಹೇಳಿರುತ್ತೇನೆ. ಬೇಕಾದರೆ ರೆಕಾರ್ಡ್ ವೆರಿಫೈ ಮಾಡಲಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಎನ್. ರಾಜಣ್ಣನವರನ್ನು ವಜಾ ಮಾಡುವುದಕ್ಕೆ ಅಥವಾ ತೆಗೆದು ಹಾಕುವುದಕ್ಕೆ ಕಾರಣ ಏನು ಪ್ರಶ್ನೆಯನ್ನು ನಾವು ಕೇಳಿದ್ದೇವೆ. ಹಾಗಾಗಿ, ದಯಮಾಡಿ ಅದನ್ನು ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ತಿಳಿಸಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ವಿನಂತಿ ಮಾಡುತ್ತೇನೆ.

**(ಗೊಂದಲ)**

**ಶ್ರೀ ಐವನ್ ಡಿ' ಸೋಜಾ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರನ್ನು ವಜಾಗೊಳಿಸಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸಬೇಕೆಂದು ಬಯಸುತ್ತಾರೆ. ಆದರೆ, ಉಪರಾಷ್ಟ್ರಪತಿಗಳಾದ ಶ್ರೀ ಜಗದೀಪ್ ಧನಕರ್‌ರವರು ರಾಜೀನಾಮೆ ಕೊಟ್ಟಿದ್ದಾರಲ್ಲವೇ? ಅದರ ಬಗ್ಗೆ ಮಾನ್ಯ ನರೇಂದ್ರ ಮೋದಿಯವರು ಉತ್ತರ ನೀಡುತ್ತಾರೆಯೇ?

**(ಗೊಂದಲ)**

**ಶ್ರೀ ಸಂತೋಷ್ ಎಸ್. ಲಾಡ್:-** ಮಾನ್ಯ ಸಭಾಪತಿಯವರೇ, ಮೊದಲು ಇವರು ಬಸನಗೌಡ ಪಾಟೀಲ್ ಯತ್ನಾಳ್‌ರವರನ್ನು ಏತಕ್ಕೆ ವಜಾಗೊಳಿಸಿರುತ್ತಾರೆಂದು ತಿಳಿಸಲಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರೇನು ಮಂತ್ರಿಯಾಗಿರಲಿಲ್ಲ. ಆದರೆ, ಮಾನ್ಯ ಕೆ.ಎನ್. ರಾಜಣ್ಣನವರು ಮಂತ್ರಿಯಾಗಿದ್ದರು.

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**(ಗೊಂದಲ)**

**ಸಭಾಪತಿಯವರು:-**ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದು ಮಾನ್ಯ ಮುಖ್ಯಮಂತ್ರಿಯವರ ಪರಮಾಧಿಕಾರ ಎನ್ನುವುದನ್ನು ನಾನು ಕೂಡ ಒಪ್ಪುತ್ತೇನೆ. ಆದರೆ, ಮಾನ್ಯ ಕೆ.ಎನ್. ರಾಜಣ್ಣನವರನ್ನು ವಜಾ ಮಾಡಿರಬೇಕಾದರೆ, ಕಾರಣ ತಿಳಿಸಬೇಕಲ್ಲವೇ?

**(ಗೊಂದಲ)**

**ಸಭಾಪತಿಯವರು:-** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರು ಮಾಡಿರುವಂತಹ ಅಪರಾಧವಾದರೂ ಏನು? ಅಂತಹ ತಪ್ಪು ಏನಾಗಿದೆ?

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಈ ವಿಷಯದಲ್ಲಿ ಸರ್ಕಾರದ ನಿಲುವನ್ನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದರೂ ಅಷ್ಟೇ. ಮಾನ್ಯ ಸಚಿವರು ಹೇಳಿದರೂ ಅಷ್ಟೇ.

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷ ಎಲ್ಲರೂ ಕುಳಿತುಕೊಳ್ಳಿ. ಮೊನ್ನೆಯ ದಿವಸ ಈ ವಿಷಯ ಪ್ರಸ್ತಾಪ ಆಗಿರುತ್ತದೆ. ಅದಕ್ಕೆ ಮಾನ್ಯ ಸಭಾನಾಯಕರು, "ಸರ್ಕಾರ ಮಾನ್ಯ ಸಚಿವರನ್ನು ವಜಾ ಮಾಡುವುದು ಅಥವಾ ಇಟ್ಟುಕೊಳ್ಳುವುದು ಅವರ ಜವಾಬ್ದಾರಿ" ಎಂದು ಸರ್ಕಾರದ ಪರವಾಗಿ ಉತ್ತರ ನೀಡಿರುತ್ತಾರೆ. ಅಲ್ಲಿಗೆ ಈ ವಿಚಾರವನ್ನು ಮುಕ್ತಾಯ ಮಾಡುತ್ತಿದ್ದೇನೆ. ಪುನಃ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿರುವುದಿಲ್ಲ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಜವಾಬ್ದಾರಿ ಇಲ್ಲವೆಂದು ಹೇಳುವುದಿಲ್ಲ.

**ಸಭಾಪತಿಯವರು:-** ಇಲ್ಲ ಆಗುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ವೈಸ್ ಛೇರ್ಮನ್‌ರವರು ಪೀಠವನ್ನು ಅಲಂಕರಿಸಿದರು)**

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ದಯಮಾಡಿ ಸರ್ಕಾರ ಪಲಾಯನ ಮಾಡಬಾರದು.

**(ಗೊಂದಲ)**

ಶ್ರೀ ಎನ್.ಎಸ್. ಬೋಸರಾಜು:- ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಏನು ಮಾತನಾಡುತ್ತಿದ್ದೀರಿ?

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ವಿರೋಧ ಪಕ್ಷದ ನಾಯಕರೇ, ದಯಮಾಡಿ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಸಿದ್ಧರಾಮಯ್ಯ(ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಏನು ಮಾತನಾಡುತ್ತಿದ್ದಾರೆ ಇವರು? **(ಗೊಂದಲ)** We are not going to answer your question.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಒಬ್ಬ ದಲಿತ ನಾಯಕನನ್ನು ಇವರು ಬಲಿ ತೆಗೆದುಕೊಂಡಿದ್ದಾರೆ. ಇದು ಕಾಂಗ್ರೆಸ್ಸಿನ ಸಂಸ್ಕೃತಿ.

**(ಗೊಂದಲ)**

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ವಿರೋಧ ಪಕ್ಷದ ನಾಯಕರೇ, ದಯಮಾಡಿ ಕುಳಿತುಕೊಳ್ಳಿ. **(ಗೊಂದಲ)** ಉಪ ರಾಷ್ಟ್ರಪತಿಯವರಾದಂತಹ ಶ್ರೀ ಜಗದೀಪ್ ಧನ್‌ಕರ್‌ರವರು ರಾಜೀನಾಮೆ ಕೊಟ್ಟಿದ್ದನ್ನು ಇವರು ಪ್ರಸ್ತಾಪ ಮಾಡಿದ್ದಾರೆಯೇ? **(ಗೊಂದಲ)** ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ರಾಜೀನಾಮೆ ಕೊಟ್ಟಿದ್ದನ್ನು ಯಾವ ಕಾರಣಕ್ಕೆ ಕೊಟ್ಟರು ಎಂದು ಇವರು ಪ್ರಸ್ತಾಪ ಮಾಡಿದ್ದಾರೆಯೇ? ಶ್ರೀ ಬಸನಗೌಡ ಪಾಟೀಲ್ ಯತ್ನಾಳ್‌ರವರನ್ನು ಪಕ್ಷದಿಂದ ಉಚ್ಛಾಟನೆ ಮಾಡಿದ್ದು ಯಾವ ಕಾರಣಕ್ಕೆ ಎಂದು ಇವರು ಪ್ರಸ್ತಾಪ ಮಾಡಿದ್ದಾರೆಯೇ? ಇದು ಆಯಾ ಪಕ್ಷಗಳ ಆಂತರಿಕ ವಿಚಾರಗಳು. ಅದನ್ನು ನಿಮ್ಮ ಜೊತೆಗೆ ಹೇಳಬೇಕಾದಂತಹ ಅಗತ್ಯ ಇಲ್ಲ.

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ದಲಿತ ವಿರೋಧಿ ಕಾಂಗ್ರೆಸ್.

**(ಗೊಂದಲ)**

**ವೈಸ್ ಛೇರ್ಮನ್:-** ಈಗ ಶೂನ್ಯವೇಳೆಯ ಪ್ರಸ್ತಾವನೆಗಳನ್ನು ತೆಗೆದುಕೊಳ್ಳಲಾಗುತ್ತದೆ.

(ಮುಂದು)

(710) 14.08.2025 12.30 ವೈಎಲ್-ವಿಕೆ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**೦೩. ನಿಯಮ 58ರ ಮೇರೆಗೆ ಶೂನ್ಯವೇಳೆ ಪ್ರಸ್ತಾವನೆಗಳು**

**ಅ) ವಿಷಯ:- ಆಶಾ ಕಾರ್ಯಕರ್ತೆಯರು ತಮ್ಮ ಗೌರವಧನವನ್ನು ಹತ್ತು ಸಾವಿರ ರೂಪಾಯಿಗಳಿಗೆ ಹೆಚ್ಚಿಸುವಂತೆ ಆಗ್ರಹಿಸಿ ಧರಣಿ ನಡೆಸುತ್ತಿರುವ ಬಗ್ಗೆ.**

- - -

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾಸಿಕ ಗೌರವಧನ ಹೆಚ್ಚಳಕ್ಕಾಗಿ ಆಶಾ ಕಾರ್ಯಕರ್ತೆಯರ ಪ್ರತಿಭಟನೆ ಎಂಬ ವಿಷಯವನ್ನು ಸದನದ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

ಕನಿಷ್ಠ 10 ಸಾವಿರ ರೂ. ಮಾಸಿಕ ಗೌರವಧನ ಏರಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯಾದ್ಯಂತ ಆಶಾ ಕಾರ್ಯಕರ್ತೆಯರು ಮಂಗಳವಾರದಿಂದ ೩ ದಿನಗಳ ಕಾಲ ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ಅಹೋರಾತ್ರಿ ಪ್ರತಿಭಟನೆ ಆರಂಭಿಸಿದ್ದಾರೆ ಎಂಬ ವಿಷಯ ದಿನಾಂಕ 13/8/2025 ರ 'ಸಂಯುಕ್ತ ಕರ್ನಾಟಕ' ದಿನಪತ್ರಿಕೆಯಲ್ಲಿ ಪ್ರಕಟವಾಗಿದೆ.

ಈ ಕುರಿತು ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ರಾಜ್ಯ ಕಾರ್ಯದರ್ಶಿಯವರು ಮಾತನಾಡಿ, ಕಾರ್ಯಕರ್ತೆಯರಿಗೆ ಗೌರವಧನ ಹೆಚ್ಚಿಸುವಂತೆ ಈ ವರ್ಷ ಜನವರಿಯಲ್ಲಿ ಪ್ರತಿಭಟನೆ ನಡೆಸಿ ಸರ್ಕಾರಕ್ಕೆ ಆಗ್ರಹಿಸಲಾಗಿತ್ತು. ಆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಏಪ್ರಿಲ್ ನಿಂದ ಪ್ರತಿ ತಿಂಗಳು ಕನಿಷ್ಠ ರೂ.10,000 ನೀಡುವುದಾಗಿ ಮುಖ್ಯಮಂತ್ರಿಗಳು ಭರವಸೆ ನೀಡಿದ್ದರು. ಆದರೆ, ಈ ಬಗ್ಗೆ ಈವರೆಗೂ ಯಾವುದೇ ಆದೇಶ ಹೊರಡಿಸಿಲ್ಲ. ಆದ್ದರಿಂದ ರಾಜ್ಯವ್ಯಾಪಿ ಆಶಾ ಕಾರ್ಯಕರ್ತೆಯರು ಅಹೋರಾತ್ರಿ ಪ್ರತಿಭಟನಾ ಧರಣಿ ನಡೆಸಲು ಮುಂದಾಗಿದ್ದಾರೆ ಎಂದು ಪತ್ರಿಕೆಯಲ್ಲಿ ಉಲ್ಲೇಖಿಸುತ್ತದೆ.

ಹಿಗಾಗಿ ಅತ್ಯಂತ ಮಹತ್ವದ ವಿಷಯವಾದ ಆಶಾ ಕಾರ್ಯಕರ್ತೆಯರ ಈ ಬೇಡಿಕೆಗಳನ್ನು ಸನ್ಮಾನ್ಯ ಮುಖ್ಯಮಂತ್ರಿಯವರು ಗಂಭೀರವಾಗಿ ಪರಿಗಣಿಸಿ ಅವರಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರಿಗೆ ತಮ್ಮ ಮೂಲಕ ಒತ್ತಾಯ ಮಾಡಬಯಸುತ್ತೇನೆ.

**ವೈಸ್ ಛೇರ್ಮನ್:-** ಈ ಒಂದು ವಿಷಯಕ್ಕೆ ಸಂಬಂಧಿಸಿದಂತೆ ನಾಲ್ಕು ಸದಸ್ಯರುಗಳಾದ ಮಾನ್ಯ ಶಾಂತರಾಮ ಬುಡ್ನ ಸಿದ್ದಿರವರು, ಶ್ರೀಮತಿ ಬಲ್ಕೀಸ್ ಬಾನು, ಶ್ರೀಮತಿ ಹೇಮಲತಾ ನಾಯಕ್ ಹಾಗೂ ಶ್ರೀ ರಾಮೋಜಿಗೌಡರವರು ಮಂಡಿಸಿದ್ದು, ಈಗಾಗಲೇ ಮಾನ್ಯ ಶಾಂತರಾಮ ಬುಡ್ನ ಸಿದ್ದಿರವರು ಶೂನ್ಯ ವೇಳೆ ಪ್ರಸ್ತಾವದಡಿ ಇರುವಂಥ ವಿಚಾರವನ್ನು ಓದಿ ಸದನದ ಗಮನಕ್ಕೆ ತಂದಿರುವುದರಿಂದ ಉಳಿದ ಮಾನ್ಯ ಸದಸ್ಯರುಗಳಾದ ಶ್ರೀಮತಿ ಬಲ್ಕೀಸ್ ಬಾನು, ಶ್ರೀಮತಿ ಹೇಮಲತಾ ನಾಯಕ್ ಹಾಗೂ ಶ್ರೀ ರಾಮೋಜಿಗೌಡರವರು ಅದೇ ವಿಚಾರವನ್ನು ಪುನಃ ಓದುವುದು ಬಿಟ್ಟು, ಬೇರೆ ಏನಾದರೂ ವಿಚಾರಗಳು ಇದ್ದ ಪಕ್ಷದಲ್ಲಿ ಸದನದ ಗಮನಕ್ಕೆ ತರಬೇಕೆಂದು ಹೇಳಬಯಸುತ್ತೇನೆ.

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬಹಳ ಮುಖ್ಯವಾದ ವಿಚಾರವಾಗಿರುವುದರಿಂದ ನಾಲ್ಕು ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಪ್ರತಿಭಟನೆ ನಡೆಸುವ ಮುನ್ನಾ ನನಗೂ ಸಹ ಈ ಆಶಾ ಕಾರ್ಯಕರ್ತೆಯರು ಮನವಿಯನ್ನು ಸಲ್ಲಿಸಿದ್ದರು. ತಮಗೂ ಸಹ ತಿಳಿದಿರುವಂತೆ ಆಶಾಕಾರ್ಯಕರ್ತೆಯರು 24X7 ರೀತಿಯಲ್ಲಿ ಯಾವುದೇ ಒಂದು ಕೆಲಸ ಮಾಡುವ ಮೂಲಕ ಸಾರ್ವಜನಿಕರ ಆರೋಗ್ಯ ಕಾಪಾಡುವಲ್ಲಿ ದಿನನಿತ್ಯದ ಕಾರ್ಯಕ್ರಮದಲ್ಲಿ ತೊಡಗಿಕೊಂಡಿದ್ದಾರೆ. ಯಾವುದೇ ವೈದ್ಯರು ಇಲ್ಲದಿದ್ದರೂ ಸಹ ಬಹಳ ವೇಗವಾಗಿ ಜನರಿಗೆ ಚಿಕಿತ್ಸೆ ನೀಡಲು ಮುಂದಾಗುವುದೆಂದರೆ, ಅದು ಆಶಾ ಕಾರ್ಯಕರ್ತೆಯರು. ಈ ಹಿಂದಿನ ಬಜೆಟ್‌ನಲ್ಲಿ ಸಹ ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಸಿದ್ದರಾಮಯ್ಯನವರು ಘೋಷಣೆ ಮಾಡಿದ್ದು, ಸಂಪೂರ್ಣವಾಗಿ ಸರ್ಕಾರಕ್ಕೆ ಅವರ ಮೇಲೆ ಭರವಸೆ ಇದೆ. ಸರ್ಕಾರವೇ ಅಂಗನವಾಡಿ ಕಾರ್ಯಕರ್ತೆಯರು ಇರಲಿ, ಆಶಾ ಕಾರ್ಯಕರ್ತೆಯರು ಇರಲಿ ಮತ್ತು ಮಹಿಳಾ ಆರ್ಥಿಕ ಸಬಲೀಕರಣಕ್ಕಾಗಿ ಬಹಳ ದೊಡ್ಡ ಹೆಜ್ಜೆಯನ್ನು ಹಾಕಿಕೊಂಡಿದ್ದಾರೆ. ಈ ನಿಟ್ಟಿನಲ್ಲಿ ಆಶಾ ಕಾರ್ಯಕರ್ತೆಯರು ಅಹೋರಾತ್ರಿ ಧರಣಿ ನಡೆಸುತ್ತಿರುವುದರಿಂದ ಇದಕ್ಕೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳೆರಡೂ ಸೇರಿ, ಅವರ ಮನವಿಯನ್ನು ಪರಿಗಣಿಸಲೇಬೇಕಾಗಿದೆ. ಗ್ರಾಮೀಣ ಪ್ರದೇಶದಲ್ಲಿರುವಂಥ ಆಶಾ ಕಾರ್ಯಕರ್ತೆಯರಿಗೆ ಮಾಸಿಕ ರೂ.10,000 ಹಾಗೂ ನಗರ ಪ್ರದೇಶದಲ್ಲಿರುವಂಥ ಆಶಾ ಕಾರ್ಯಕರ್ತೆಯರಿಗೆ ಮಾಸಿಕ ರೂ.20,000 ಗಳಷ್ಟು ಗೌರವಧನ ಹೆಚ್ಚಿಸಬೇಕೆಂಬ ಮನವಿಯ ಕುರಿತು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಬಲ್ಕೀಸ್ ಬಾನುರವರು ಹೇಳಿದಂತೆ ಆಶಾ ಕಾರ್ಯಕರ್ತೆಯರು ಸಮಾಜ ಮುಖಿಯಾಗಿ ತುಂಬಾ ಉತ್ತಮವಾದ ಕೆಲಸವನ್ನು ಮಾಡುತ್ತಿರುವುದರಿಂದ ಅವರು ಮನೆ ಯಾವುದನ್ನು ಲೆಕ್ಕಿಸದೇ ಪ್ರತಿಭಟನೆ ಮಾಡುತ್ತಿದ್ದಾರೆ. ಅಂಗನವಾಡಿಯವರಿಗೆ ಕೊಟ್ಟಿರುವಂಥ ಗೌರವಧನವನ್ನು ಆಶಾ ಕಾರ್ಯಕರ್ತೆಯರು ಕೇಳುವುದರಲ್ಲಿ ತಪ್ಪೇನಿಲ್ಲ. ಈಗಾಗಲೇ ಸರ್ಕಾರ ಘೋಷಿಸಿರುವಂತೆ ಗೌರವಧನವನ್ನು ಕೇಂದ್ರ ಭಾಗಶಃವೂ ಸೇರಿದಂತೆ ಕನಿಷ್ಠ ಪಕ್ಷ ರೂ.10,000 ಗಳಷ್ಟಾದರೂ ಗೌರವಧನವನ್ನು ಏಪ್ರಿಲ್ ಮಾಹೆಯಿಂದ ಅನ್ವಯವಾಗುವಂತೆ ಹೆಚ್ಚಳ ಮಾಡಬೇಕೆಂದು

ಪ್ರತಿಭಟನೆ ಮಾಡುತ್ತಿದ್ದು, ದಯವಿಟ್ಟು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಅವರ ಬೇಡಿಕೆಯನ್ನು ಈಡೇರಿಸುವಂಥ ಕೆಲಸ ಮಾಡಬೇಕೆಂದು ಹೇಳಬಯಸುತ್ತೇನೆ.

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮ ಅಭಿಪ್ರಾಯವು ಅದೇ ಆಗಿದೆ. ಆಶಾ ಕಾರ್ಯಕರ್ತೆಯವರ ಗೌರವಧನ ಹೆಚ್ಚಿಸಬೇಕೆಂದು ನಾನು ಸಹ ಹೇಳಬಯಸುತ್ತೇನೆ. ಪಾಪ; ಅಹೋರಾತ್ರಿ ಧರಣಿ ಮಾಡುತ್ತಿದ್ದಾರೆ. ಹಾಗಾಗಿ, ಅವರಿಗೆ ಏನು ನ್ಯಾಯ ಒದಗಿಸಿಕೊಡಬೇಕು, ಅದನ್ನು ಒದಗಿಸಿ ಕೊಡಿ. ಕೇಂದ್ರ ರೀತಿಯಲ್ಲಿ ಆಶಾ ಕಾರ್ಯಕರ್ತೆಯರಿಗೆ ಮಾಸಿಕ ರೂ.10,000 ಕೊಡಬೇಕೆಂಬ ಬೇಡಿಕೆ ಏನಿದೆ, ಅದನ್ನು ಈಡೇರಿಸಬೇಕೆಂದು ಹೇಳಬಯಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ಶೂನ್ಯ ವೇಳೆ ಪ್ರಸ್ತಾವಕ್ಕೆ ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಆ) ವಿಷಯ:- "ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಸಾವಿಗೀಡದವರ ಹೆಸರಿನಲ್ಲಿ ಡಯಾಲಿಸಿಸ್ ಚಿಕಿತ್ಸೆ ನೀಡಿದಂತೆ ನಕಲಿ ಬಿಲ್ ಸೃಷ್ಟಿಸುತ್ತಿರುವ ಬಗ್ಗೆ.**

-----

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಸತ್ತವರಿಗೂ ಡಯಾಲಿಸಿಸ್ ಸೌಲಭ್ಯ ಕಲ್ಪಿಸುತ್ತಿರುವ ಆಘಾತಕಾರಿ ಸಂಗತಿ ಬೆಳಕಿಗೆ ಬಂದಿದ್ದು, ಸರ್ಕಾರಿ ಆಸ್ಪತ್ರೆಗಳಲ್ಲಿ ನಡೆಯುತ್ತಿರುವ ಅವ್ಯವಸ್ಥೆ, ಭ್ರಷ್ಟಾಚಾರ ಮತ್ತು ಜನರಿಂದ ಹಣ ಸುಲಿಗೆ ವಿಚಾರ ಕುರಿತು "ಸರ್ಕಾರಿ ಆಸ್ಪತ್ರೆ ಸ್ಪೆಷಲ್ ಸ್ಕೀಮ್ ಸ್ವರ್ಗಸ್ತರಿಗೂ ಡಯಾಲಿಸಿಸ್ ಎಂಬ ಶೀರ್ಷಿಕೆಯಡಿ 'ನಂ ಸಮಾಚಾರ' ಎಂಬ ಕನ್ನಡ ದಿನಪತ್ರಿಕೆಯಲ್ಲಿ ಇತ್ತೀಚಿಗೆ ವರದಿ ಪ್ರಕಟವಾಗಿರುತ್ತದೆ.

ಬಾಗಲಕೋಟೆಯ ಪಾಟೀಲ್ ಮೆಡಿಕಲ್ ಕೆ.ಆರ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಸೀತಾಬಾಯಿ ಶೇಖಪ್ಪ ರಾಥೋಡ್ ಎಂಬ ಮಹಿಳೆ ನಿಧನ ಹೊಂದಿದ ನಂತರ, ಅವರ ಸಾವಿಗೆ ಸಂಬಂಧಿಸಿದ ಡೆತ್ ಸರ್ಟಿಫಿಕೇಟ್ ಸಹ ಆಸ್ಪತ್ರೆಯವರು ನೀಡಿದ್ದಾರೆ. ಆದರೆ, ವಿಜಯಪುರ ಜಿಲ್ಲೆಯ ಮುದ್ದೇಬಿಹಾಳದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ದಾಖಲೆಗಳಲ್ಲಿ ಅವರ ಸಾವಿನ ನಂತರವೂ ಹಲವಾರು ಬಾರಿ ಡಯಾಲಿಸಿಸ್ ಚಿಕಿತ್ಸೆ ಪಡೆದಂತೆ ನಕಲಿ ದಾಖಲೆಗಳನ್ನು ಸೃಷ್ಟಿಸಲಾಗಿದೆ, ಆಘಾತಕಾರಿ ವಿಷಯವೆಂದರೆ, ಈ ನಕಲಿ ದಾಖಲೆಗಳಿಗೆ ಆಸ್ಪತ್ರೆಯ ವೈದ್ಯಾಧಿಕಾರಿಗಳೇ ಸಹಿ ಹಾಕಿದ್ದಾರೆ.

ರಾಜ್ಯದ ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿ ಇಂತಹ ನಕಲಿ ಬಿಲ್‌ಗಳು ತಯಾರಾಗುತ್ತಿರುವ ಬಗ್ಗೆ ದೂರುಗಳು ಕೇಳಿಬರುತ್ತಿವೆ. ಡಯಾಲಿಸಿಸ್ ಯಂತ್ರಗಳ ಟೆಂಡರ್‌ಗಳನ್ನು ಪಡೆದಿರುವ ಏಜೆನ್ಸಿಗಳ ಮೇಲೆ ಸಮರ್ಪಕ ಮೇಲ್ವಿಚಾರಣೆ ಇಲ್ಲದ ಕಾರಣ, ಅವರ ಕಾರ್ಯವನ್ನು ನಿಕಟವಾಗಿ ಗಮನಿಸಿ, ಪ್ರಕ್ರಿಯೆಯನ್ನು ಸರಿಯಾದ ರೀತಿಯಲ್ಲಿ ಅನುಷ್ಠಾನಗೊಳಿಸುವಂತೆ ನೋಡಿಕೊಳ್ಳುವುದು ಸರ್ಕಾರದಿಂದ ಹಾಗೂ ಆರೋಗ್ಯ ಇಲಾಖೆಯಿಂದ ಅತ್ಯಂತ ಅಗತ್ಯ. ಸಾವಿಗೀಡಾದವರ ಹೆಸರಿನಲ್ಲಿ ಬಿಲ್ ತಯಾರಿಸುವುದು, ಸಾರ್ವಜನಿಕ ಆಸ್ಪತ್ರೆಗಳಲ್ಲಿ ನಕಲಿ ದಾಖಲೆ ಸೃಷ್ಟಿಸುವುದು ಇವೆಲ್ಲವು ವೈದ್ಯಕೀಯ ಕ್ಷೇತ್ರದ ಗೌರವಕ್ಕೆ ಧಕ್ಕೆ ತರುತ್ತವೆ, ಜನರ ನಂಬಿಕೆಯನ್ನು ನಾಶ ಮಾಡುತ್ತವೆ.

ಈ ಘಟನೆಗೆ ಸಂಬಂಧಿಸಿದಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಎಲ್ಲಾ ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿಯನ್ನು ತಕ್ಷಣ ಅಮಾನತು ಮಾಡಿ, ಜನರ ಹಣವನ್ನು ದೋಚಿದವರನ್ನು ಕಠಿಣವಾಗಿ ಶಿಕ್ಷಿಸಬೇಕು ಹಾಗೂ ಇಂತಹ ಘಟನೆಗಳು ರಾಜ್ಯದ ಇತರೆ ಸರ್ಕಾರಿ ಆಸ್ಪತ್ರೆಗಳಲ್ಲಿ ಘಟಿಸದಂತೆ ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ ಇನ್ನಿತರೆ ಲೋಪದೋಷಗಳ ಬಗ್ಗೆ ನಿಗಾ ವಹಿಸಲು ಗುಪ್ತ ವಿಚಕ್ಷಣ ದಳವನ್ನು ರಚಿಸಿ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕೆಂದು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರನ್ನು ತಮ್ಮ ಮೂಲಕ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ಶೂನ್ಯ ವೇಳೆ ಪ್ರಸ್ತಾವಕ್ಕೆ ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಇ) ವಿಷಯ:- ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಿರ್ಮಿಸಲು ಉದ್ದೇಶಿಸಿರುವ ಬಡಾವಣೆಗೆ ಭೂ ಸ್ವಾಧೀನ ಅಧಿಸೂಚನೆ ಹೊರಬಿದ್ದಿಲ್ಲದಿದ್ದರೂ ರೈತರು ಮತ್ತು ಸ್ಥಳೀಯರಿಗೆ ಮನೆ ಕಟ್ಟಿಕೊಳ್ಳಲು ನಿರಾಪೇಕ್ಷಣಾ(ಎನ್.ಒ.ಸಿ.) ಪತ್ರ ನೀಡದಿರುವ ಬಗ್ಗೆ**

**-----**

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಕೆಳಕಂಡ ಸಾರ್ವಜನಿಕ ಮಹತ್ವದ ವಿಷಯವನ್ನು ಇಂದು ಸದನದ "ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಿರ್ಮಿಸಲು ಉದ್ದೇಶಿಸಿರುವ ಬಡಾವಣೆಯ ಮುಂದುವರೆದ ಭಾಗ ಹಾಗೂ ಹೊಸ ಬಡಾವಣೆ ಬರಲಿರುವ ಪ್ರದೇಶಗಳಲ್ಲಿ ಸ್ಥಳೀಯರು ನಿರ್ಮಿಸಿಕೊಳ್ಳುವ ಸ್ವಂತ ಮನೆಗೆ ಪ್ರಾಧಿಕಾರ ಅಡ್ಡಗಾಲು ಹಾಕುತ್ತಿದೆ ಎಂಬುದಾಗಿ ರೈತರು ದೂರಿದ್ದಾರೆ. ಹಾಗೂ ಪಿ.ಆರ್.ಆರ್, ರಸ್ತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಸ್ಥಳೀಯರು ಸೂರು ನಿರ್ಮಿಸಿಕೊಳ್ಳಲು ಸಮಸ್ಯೆ ಉಂಟಾಗಿದೆ. ಸ್ವಂತ ಸ್ಥಳದಲ್ಲಿ ಮನೆ ನಿರ್ಮಿಸಿಕೊಳ್ಳಲು ಕಾನೂನಿನಲ್ಲಿ ಅವಕಾಶ ಇದೆ. ಆದರೆ, ಬಿ.ಡಿ.ಎ. ನಮಗೆ ನೋಟೀಸ್ ನೀಡಿ ಮನೆ ನಿರ್ಮಿಸದಂತೆ ತಾವರೆಕೆರೆ ಹೋಬಳಿಯ ರೈತರು ಆಕ್ಷೇಪ ಎತ್ತಿದ್ದಾರೆ. ಕಳೆದೊಂದು ವರ್ಷದಿಂದ ಬಿ.ಡಿ.ಎ. ಹಲವು ಗ್ರಾಮಗಳಲ್ಲಿ ರೈತರಿಗೆ ನೋಟೀಸ್ ನೀಡುತ್ತಿದೆ. ಜತೆಗೆ ಅನುಮೋದನೆ ಪಡೆಯದೇ ಬಡಾವಣೆಗಳಲ್ಲಿರುವ ಸೈಟುದಾರರಿಗೆ ನೋಟಿಸ್ ಜಾರಿ ಮಾಡಿದೆ. ಆದರೆ, ಅನಧಿಕೃತ ಬಡಾವಣೆ ನಿರ್ಮಾಣಕ್ಕೆ ತಡೆ ಒಡ್ಡುವ ಭರದಲ್ಲಿ ಸ್ಥಳೀಯರಾದ ನಮಗೆ ಸೂರು ನಿರ್ಮಿಸದಂತೆ ತಾಕೀತು ಮಾಡಲಾಗುತ್ತಿದೆ. ಹೊಸ ಬಡಾವಣೆಗೆ ಭೂ ಸ್ವಾದೀನ ಅಧಿಸೂಚನೆ ಹೊರಡಿಸಿದ್ದರೂ, ಸ್ವಂತ ಉಪಯೋಗಕ್ಕೆ ಮನೆ ನಿರ್ಮಿಸಿಕೊಳ್ಳಲು ಅಡ್ಡಿಪಡಿಸುವುದು ಯಾವ ನ್ಯಾಯವೆಂದು ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಅಲ್ಲದೇ, ಹೊಸ ಬಡಾವಣೆ ರಚಿಸುವ ಹಿನ್ನೆಲೆಯಲ್ಲಿ ಆಯಾ ಪ್ರದೇಶಗಳಲ್ಲಿ ಹೊಸ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ನೀಡುತ್ತಿಲ್ಲ. ಜೊತೆಗೆ ಈಗಾಗಲೇ NOC ನೀಡುತ್ತಿಲ್ಲ, ಕಳೆದ 20 ವರ್ಷಗಳಿಂದ ಕುಂಟುತ್ತಾ ತೆವಳುವ ಪಿ.ಆರ್.ಆರ್ -1 ಯೋಜನೆಗೆ ಇಲ್ಲಿಯವರೆಗೂ ಭೂ ಸ್ವಾಧೀನ ಪ್ರಕ್ರಿಯೆಯೇ ಮುಗಿದಿಲ್ಲ. ಆದರೆ, ಪಿ.ಆರ್.ಆರ್-2 ಎಂಬ ಯೋಜನೆ ಪ್ರಾರಂಭಿಸಲಾಗಿದೆ. ಅದು ಕೂಡಾ ಇನ್ನೂ ಪ್ರಾರಂಭವಾಗಿಲ್ಲ. ಈಗ ಪ್ರಾಧಿಕಾರವು ಆ ಎರಡು ರಸ್ತೆಗಳ ಸುತ್ತಲೂ 6 ಹೊಸ ಬಡಾವಣೆ ನಿರ್ಮಿಸಲು ಪ್ರಾಧಿಕಾರ ನಿರ್ಧರಿಸಿದೆ. ಆದರೆ, ಇನ್ನೂ ಭೂ ಸ್ವಾಧೀನ ಅಧಿಸೂಚನೆ ಹೊರಬಿದ್ದಿಲ್ಲ. ಅಧಿಸೂಚನೆ ಹೊರಡಿಸಿದ ನಂತರವಷ್ಟೇ ಪ್ರಾಧಿಕಾರವು ಕಟ್ಟಡ ನಿರ್ಮಾಣಕ್ಕೆ ತಡೆ ಒಡ್ಡಬೇಕೇ ಹೊರತು ಸ್ಥಳೀಯರು - ತಮ್ಮ ಸ್ವಂತಕ್ಕೆ ನಿರ್ಮಿಸಿಕೊಳ್ಳುವ ಮನೆಗಳಿಗೆ ಅಲ್ಲವೆಂದು; ‘ಕೂಸು ಹುಟ್ಟುವ ಮುಂಚೆಯೇ ಕುಲಾವಿ ಹೊಲಿಸಿದಂತೆ’ ಅದಕ್ಕೂ ಮುನ್ನವೇ ರೈತರಿಗೆ ಮತ್ತು ಸ್ಥಳೀಯರಿಗೆ ತಮ್ಮ ಜಾಗದಲ್ಲಿ ಸ್ವಂತ ಮನೆ ಕಟ್ಟಿಕೊಳ್ಳುವ ಕನಸಿಗೆ ಕೊಳ್ಳಿ ಇಡಬೇಡಿ ಮತ್ತು ಈಗಾಗಲೇ ಮನೆ ನಿರ್ಮಿಸಿಕೊಂಡ ರೈತರು ಮತ್ತು ಸ್ಥಳೀಯರಿಗೆ ವಿದ್ಯುತ್ ಸಂಪರ್ಕ ಮತ್ತು NOC ನೀಡಿ ಅವರಿಗೆ ಅನುಕೂಲ ಕಲ್ಪಿಸಿಕೊಡಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಈ ವಿಷಯದ ಬಗ್ಗೆ ದಿನಾಂಕ 13.08.2025 ರಂದು ವಿಜಯವಾಣಿ ದಿನ ಪತ್ರಿಕೆ ಪ್ರಕಟಗೊಂಡಿದೆ ಎಂಬುದನ್ನು ಮಾನ್ಯ ಉಪ ಮುಖ್ಯಮಂತ್ರಿಯವರಿಗೆ ತಮ್ಮ ಮೂಲಕ ಈ ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

(ಮುಂದು)

(711) 14.08.2025/12.40/ಎಸ್‌ಕೆ-ಬಿಎನ್‌ಎಸ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಡಿ.ಕೆ. ಶಿವಕುಮಾರ್ (ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಗೋಪಿನಾಥ್‌ರವರು ಇದೇ ಪ್ರಶ್ನೆಯನ್ನು ಕೇಳಿದ್ದರು. ನಾನು ಅದರ ಬಗ್ಗೆ ಉತ್ತರ ಕೊಡುವಾಗ ಮಾನ್ಯ ಸದಸ್ಯರು ಕೇಳಿದ್ದಾರೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. PRR-1 (Peripheral Ring Road) and PRR-2 ಎರಡೂ ಮಾಡಲು ನೋಟಿಫಿಕೇಷನ್ ಆಗಿ ಹೋಗಿದೆ. PRR-1 and 2 ಮಾಡಲು financial strength ಬೇಕು. ಇದು ಮೊದಲೇ ಮಾಡಿಬಿಟ್ಟಿದ್ದರೆ, ಈ ಸಮಸ್ಯೆ ಬರುತ್ತಿರಲಿಲ್ಲ. ಅಲ್ಲಿ ಅಕ್ಕಪಕ್ಕದಲ್ಲಿ ಎಲ್ಲೆಲ್ಲಿ ಕೆಲವು ಖಾಲಿ ಜಾಗಗಳು ಇದೆಯೋ, ಅದಕ್ಕೆ ನಾವು ನೋಟಿಫಿಕೇಷನ್ ಮಾಡಿದ್ದೇವೆ. ಯಾರಿಗೆ ಏನು ಪರಿಹಾರ ಕೊಡಬೇಕು ಮತ್ತು ಯಾರಿಗೆ legal entitlement ಇದೆಯೋ, ಅವರಿಗೆ ಕೊಡಲೇಬೇಕು. Road ಮಾಡುವುದಕ್ಕಾಗಲಲ್ಲವೆಂದರೆ, ನಾವು ಯಾರಿಂದಲೂ ಸುಮ್ಮನೆ ಜಮೀನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಎಲ್ಲರಿಗೂ ಕನಸು ಇದೆ. ಎಲ್ಲರಿಗೂ ಪರ್ಯಾಯ ಜಾಗ, ನಿವೇಶನ ಇಲ್ಲದವರಿಗೆ ನಿವೇಶನ ಕೊಡಬೇಕಾಗುತ್ತದೆ. ಮನೆಯಿಲ್ಲದವರಿಗೆ ಮನೆ ಕೊಡಬೇಕಾಗುತ್ತದೆ. ವಿಶೇಷವಾಗಿ, ರಸ್ತೆ ಮಾಡುವಾಗ ಯಾರು ಆಸ್ತಿಯನ್ನು ಕಳೆದುಕೊಳ್ಳುತ್ತಾರೋ, ಅವರಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು, ಪರ್ಯಾಯ ವ್ಯವಸ್ಥೆಯನ್ನು ನಾವು ಖಂಡಿತವಾಗಿಯೂ ಮಾಡುತ್ತೇವೆ. ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗುತ್ತದೆ ಮತ್ತು ಮಾಧ್ಯಮದವರ ಕಳಕಳಿಯೂ ಕೂಡ ನನಗೆ ಅರ್ಥವಾಗುತ್ತದೆ. ರಸ್ತೆ ಇಲ್ಲದೇ ಹೋದರೆ ಬಹಳ ಕಷ್ಟವಾಗುತ್ತದೆ. ಬೆಂಗಳೂರಿನ ಆ ಕಡೆ ಈ ಕಡೆ ಇವೆರಡು ರಸ್ತೆಯನ್ನು ಬಹುತೇಕ ಒಂದು 52 ಕಿಲೋ ಮೀಟರ್ ಇನ್ನೊಂದು 70 ಕಿಲೋ ಮೀಟರ್ ಹೆಚ್ಚು ಕಡಿಮೆ 125-130 ಕಿಲೋ ಮೀಟರ್ ಆಗುತ್ತದೆ. ಇವೆರಡು ರಸ್ತೆಗಳು ಬೆಂಗಳೂರಿಗೆ ಬಹಳಷ್ಟು ಅವಶ್ಯಕತೆ ಇದೆ. ಇಲ್ಲವೆಂದರೆ ಬಹಳ ಕಷ್ಟವಾಗುತ್ತದೆ. ಇದಕ್ಕೆ ತಾವು ಸಹಕಾರ ಕೊಡಬೇಕು.

**ಶ್ರೀ ಟಿ.ಎ. ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಎನ್.ಓ.ಸಿ., ಕೊಟ್ಟರೂ ಮನೆಗಳಿಗೆ ವಿದ್ಯುತ್ ಸಿಗುತ್ತಿಲ್ಲ.

**ಶ್ರೀ ಡಿ.ಕೆ. ಶಿವಕುಮಾರ್:-** ವಿದ್ಯುತ್ ವಿಚಾರದ ಬಗ್ಗೆ ತಮಗೆ ಗೊತ್ತಿದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಒಂದು ತೀರ್ಪು ಬಂದಿದೆ. ಯಾರದ್ದು plan sanction ಆಗಿಲ್ಲ ಮತ್ತು ಯಾರ ಬಳಿ Occupancy Certificate ಇಲ್ಲವೋ, ಅವರಿಗೆ ಕೊಡಬಾರದು ಎಂದು ತೀರ್ಪು ಬಂದಿದೆ. ನಾನು ಸಾಮಾನ್ಯ

ಮನೆ ಇರುವಂತಹವರಿಗೆ ಸಹಾಯ ಮಾಡಬೇಕೆಂದು ಹೇಳಿ, ಮಾನ್ಯ ಸರ್ವೋಚ್ಛ ನ್ಯಾಯಾಲಯದಿಂದ ಆದೇಶ ಬಂದ ಮೇಲೆ ನಾನು ತಕ್ಷಣವೇ ನಿರ್ಧಾರ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಮಾನ್ಯ ಮುಖ್ಯ ಕಾರ್ಯದರ್ಶಿ ಮತ್ತು ಅಧಿಕಾರಿಗಳು ವಿದ್ಯುತ್ ಸಂಪರ್ಕ ನಿಲ್ಲಿಸಿ ಎಂದು ಬರೆದುಬಿಟ್ಟಿದ್ದಾರೆ. ಅದಕ್ಕೆ ನಾನು ಒಂದು ಹೊಸದಾಗಿ ನೋಟ್‌ನ್ನು ತಯಾರು ಮಾಡಿ, ಸಚಿವ ಸಂಪುಟಕ್ಕೆ ನೋಟ್ ಸಬ್‌ಮಿಟ್ ಮಾಡುತ್ತಿದ್ದೇನೆ. ಇದಕ್ಕೆ ಯಾವ ರೀತಿ ಪರಿಹಾರ ಕೊಡಬೇಕೆಂಬ ಬಗ್ಗೆ ದೆಹಲಿಗೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಬೇರೆ ಬೇರೆ ರಾಜ್ಯದವರ ಹತ್ತಿರ ಮಾತನಾಡಿದ್ದೇನೆ. ವಿದ್ಯುತ್ ಇಲಾಖೆಯ ಕೆಲವು ಕಂಟ್ರ್ಯಾಕ್ಟರ್‌ಗಳು ಎರಡು ಬಾರಿ ಬಂದು ನನ್ನನ್ನು ಭೇಟಿ ಮಾಡಿದ್ದಾರೆ. ಮಾನ್ಯ ಜಾರ್ಜ್‌ರವರು ಕೂಡ ನನ್ನ ಹತ್ತಿರ ಮಾತನಾಡಿದ್ದಾರೆ. ಬೆಂಗಳೂರು ನಗರದ ಅನೇಕ ಎಂ.ಎಲ್.ಎ. ಗಳು ಕೂಡ ಮಾತನಾಡಿದ್ದಾರೆ. ಹಳ್ಳಿಗಳಲ್ಲಿರುವ ಮನೆಗಳಿಗೂ ವಿದ್ಯುತ್ ಕೊಡುತ್ತಿಲ್ಲ. ಸುಮಾರು ಆ ತರಹ ನಾಲ್ಕೈದು ಲಕ್ಷ ಕನೆಕ್ಷನ್ಸ್ ಪೆಂಡಿಂಗ್ ಇದೆ. ಅದರ ಬಗ್ಗೆ ಕೂಡಲೇ resolve ಮಾಡಬೇಕೆಂದು, ಮುಂದಿನ ಸಚಿವ ಸಂಪುಟಕ್ಕೆ ಈ ವಿಷಯವನ್ನು ತೆಗೆದುಕೊಂಡು ಹೋಗುತ್ತೇನೆ.

**ಈ) ಉತ್ತರ ಕರ್ನಾಟಕದ ಮಲಪ್ರಭಾ ನದಿಯ ಪ್ರವಾಹದಿಂದಾಗಿ ಹುನಗುಂದ ತಾಲ್ಲೂಕಿ ಬೇವಿನನಾಳ ಮತ್ತು ಸುರಳಿಕಲ್ಲ ಗ್ರಾಮದ ನಡುವೆ ಬರುವ ನದಿಗೆ ನಿರ್ಮಿಸಿರುವ ಬ್ರಿಡ್ಜ್ ಕಂ ಬ್ಯಾರೇಜ್‌ಗೆ ಗೇಟ್‌ಗಳನ್ನು ಎತ್ತರಿಸಿ ಸಂಭವಿಸಬಹುದಾದ ಅನಾಹುತವನ್ನು ತಪ್ಪಿಸುವ ಕುರಿತು**

**-------**

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ದಿನಾಂಕ 14.08.2025, ಗುರುವಾರದಂದು ಕನ್ನಡ ದಿನಪತ್ರಿಕೆಯಾದ "ವಿಜಯವಾಣಿ"ಯಲ್ಲಿ "ಜೀವನದಿಯೇ ಮುಳುವಾಯಿತಾ? ಗೇಟ್ ತೆರವುಗೊಳಿಸುವ ಹಿನ್ನೆಲೆ! ಮಲಪ್ರಭಾ ಪ್ರವಾಹಕ್ಕೆ ಒಡೆದ ಬ್ಯಾರೇಜ್" ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟಣೆಗೊಂಡಿರುವ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

ಉತ್ತರ ಕರ್ನಾಟಕ ಭಾಗದ ರೈತರು ಕಷ್ಟಪಟ್ಟು ಉತ್ತಿ, ಬಿತ್ತಿ ಹಸಿರು ಮೈದುಂಬಿಕೊಂಡಿದ್ದ ಭೂ ತಾಯಿ ಮಡಿಲು ಕಂದಕವಾಗಿ ಸೃಷ್ಟಿಯಾಗಿರುವುದು ಅತ್ಯಂತ ನೋವು ತಂದಿದೆ. ಜೀವ ನದಿ ಮಲಪ್ರಭಾ ನದಿಯ ಆರ್ಭಟ ಈ ಭಾಗದ ರೈತರನ್ನು ಹೈರಾಣಾಗಿಸಿದೆ. ಈ ಎಲ್ಲಾ ಸಮಸ್ಯೆಗಳು ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯ ಧೋರಣೆಯ ಕಾರಣದಿಂದ ಎಂಬುದಾಗಿ ವರದಿಯಾಗಿರುವುದು ಕೂಡ ಅಚ್ಚರಿಯ ಸಂಗತಿ.

ಪ್ರವಾಹ ಇಲ್ಲ, ಅತಿವೃಷ್ಟಿ ಇಲ್ಲ. ಆದರೂ ಹುನಗುಂದ ತಾಲ್ಲೂಕಿನ ಬೇವಿನಾಳ ಮತ್ತು ಸುರಳಿಕಲ್ಲ ಗ್ರಾಮದ ನಡುವೆ ಬರುವ ನದಿಗೆ ನಿರ್ಮಿಸಿರುವ ಬ್ರಿಡ್ಜ್ ಕಂ ಬ್ಯಾರೇಜ್‌ನಿಂದ ಅವಾಂತರ ಎಂದು ಹೇಳಲಾಗುತ್ತಿದೆ. ರಾಜ್ಯ ಸರ್ಕಾರದ ನಿಯಮಾನುಸಾರ ಬ್ಯಾರೇಜ್ ಗೇಟ್ ವಿಸ್ತರಿಸಬೇಕಿದ್ದ ಅಧಿಕಾರಿಗಳು ಯಾರದೋ ಮೇಲಿನ ಕೋಪಕ್ಕೆ ರೈತರ ಜಮೀನುಗಳ ಹಸಿರು ವನವಾಗಿದ್ದ ಭೂ ತಾಯಿಯ ಒಡಲಿಗೆ ಸಂಚಕಾರ ತಂದೊಡ್ಡಿದ್ದಾರೆ. ಮಳೆ ಅವಾಂತರ ಇನ್ನೂ ಹೆಚ್ಚಾದರೆ ನದಿಗೆ ಅಪಾರ ಪ್ರಮಾಣದಲ್ಲಿ ನೀರು ನುಗ್ಗಿ ಭೂಮಿ ಆಪೋಶನವಾಗಿ ರೈತರು ನಾಶಕ್ಕೆ ಒಳಗಾಗುವುದು ಗ್ಯಾರಂಟಿ. ರೈತರ ಜಮೀನುಗಳು ಕುಸಿದು ಬೀಳುವಷ್ಟರಲ್ಲಿ ರಾಜ್ಯ ಸರ್ಕಾರ ಎಚ್ಚೆತ್ತುಕೊಳ್ಳಬೇಕಾಗಿದೆ. ಈಗಾಗಲೇ ಮೇಲಿಂದ ಮೇಲೆ ರೈತರ ಜಮೀನುಗಳು ನೀರಿನ ಪಾಲಾಗಿ, ಇದರಿಂದ ರೈತರು ಸಂಕಷ್ಟಕ್ಕೆ ಒಳಗಾಗಿರುವುದನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕಾಗಿದೆ.

ರೈತರ ಸಂಕಷ್ಟವನ್ನು ಬಗೆಹರಿಸುವಲ್ಲಿ ರಾಜ್ಯ ಸರ್ಕಾರ ಸೂಕ್ತ ಕ್ರಮ ಕೈಗೊಂಡು, ರೈತರ ಭೂಮಿ ನೀರಿನ ಪಾಲಾಗದಂತೆ, ಬ್ರಿಡ್ಜ್ ಕಂ ಬ್ಯಾರೇಜ್‌ಗಳಿಗೆ ಗೇಟ್‌ಗಳನ್ನು ಅಳವಡಿಸಲು ಬಲಭಾಗ ತಡೆಗೋಡೆ ನಿರ್ಮಿಸಲು ತುರ್ತು ಕ್ರಮ ಕೈಗೊಳ್ಳಬೇಕು. ಹಾಗೆಯೇ ಈ ಬ್ಯಾರೇಜ್ ಗೇಟ್ ಎತ್ತರಿಸಲು ನಿರ್ಲಕ್ಷ್ಯ ಮಾಡಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರ ಗಮನಕ್ಕೆ ತರಲು ಬಯಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಈ ಬ್ಯಾರೇಜ್ ಹುನಗುಂದ ತಾಲ್ಲೂಕಿನ ಸುರಳಕಲ್ಲ ಬ್ಯಾರೇಜ್ ಎಂದು ಮಲಪ್ರಭಾ ನದಿಯ ಮೇಲೆ 2009-10ರಲ್ಲಿ ಕಟ್ಟಿರುವಂತಹದ್ದು. ಇದರ ಜೊತೆಗೆ ಆ ಮಲಪ್ರಭಾ ನದಿಯ ಮೇಲೆ ಸುಮಾರು 20 ಬ್ಯಾರೇಜ್ ಗೇಟ್‌ಗಳನ್ನು ಕಟ್ಟಿದ್ದಾರೆ. ಈ ಬ್ಯಾರೇಜ್ ಮೇಲೆ 16 ಬ್ಯಾರೇಜ್ ಗೇಟ್‌ಗಳಿವೆ. ಇದರ ಕೆಳಗೆ downstream ನಲ್ಲಿ ಇನ್ನೂ ಮೂರು ಬ್ಯಾರೇಜ್ ಗೇಟ್‌ಗಳಿವೆ. ಒಟ್ಟಾರೆಯಾಗಿ 19 ಬ್ಯಾರೇಜ್ ಗೇಟ್‌ಗಳಿವೆ. ಇದೊಂದು ಬ್ಯಾರೇಜ್ ಗೇಟ್‌ಗೆ ಮಾತ್ರ ಹಾನಿಯಾಗಿರುವ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪಿಸಿದ್ದಾರೆ. ಈ ಬ್ಯಾರೇಜ್ ಗೇಟ್‌ನಲ್ಲಿ ಏಪ್ರಿಲ್-ಮೇ ತಿಂಗಳುಗಳಲ್ಲಿ ಸಹಜವಾಗಿ ನೀರು ಕಡಿಮೆಯಾಗುತ್ತದೆ. ದನಕರುಗಳು ನೀರು ಕುಡಿಯುವುದಕ್ಕಾಗಿ ಗೇಟ್ ಅನ್ನು ಸಡಿಲಗೊಳಿಸಲಾಗುತ್ತದೆ. ಜುಲೈ-ಆಗಸ್ಟ್ ತಿಂಗಳು ಬಂದಾಗ ಸಹಜವಾಗಿ ನೀರು ಬಂದಂತಹ ಸಂದರ್ಭದಲ್ಲಿ ಗೇಟ್‌ಗಳನ್ನು ತೆರೆದಿರುತ್ತಾರೆ. ಆ ಸಂದರ್ಭದಲ್ಲಿ ಅಲ್ಲಿಗೆ ಹೋಗಬೇಕಾದರೆ, ಸದರಿ ಬ್ಯಾರೇಜ್‌ಗೆ approach road ಇರುವುದಿಲ್ಲ. ಹೀಗಾಗಿ ರೈತರು ಅಲ್ಲಿಗೆ ಹೋಗುವುದಕ್ಕೆ ನಮ್ಮ ಅಧಿಕಾರಿಗಳು ಅವಕಾಶ ಕೊಟ್ಟಿಲ್ಲ ಎಂಬ ಬಗ್ಗೆ ಇವತ್ತು ವರದಿಯಾಗಿದೆ. ಇತ್ತೀಚಿನ ದಿನಗಳಲ್ಲಿ ಬೆಣ್ಣೆಹಾಳದಲ್ಲಿ ಪ್ರವಾಹ ಉಂಟಾಗಿ 28,000 ಕ್ಯೂಸೆಕ್ಸ್ ನೀರು ಹರಿದು ಬಂದಿರುವುದರಿಂದ ಅಲ್ಲಿ ಕವರ್ ಆಗಿ, structure ಹಾಗೆಯೇ ಇದೆ. ಈ ಕುರಿತಾಗಿ, ಅದರ ಛಾಯಾಚಿತ್ರವನ್ನು ತರಿಸಿದ್ದೇನೆ. ಅದರ images, report ಇದೆ. ಹಾಗಾಗಿ, ನೀರು ಬಂದು ಸ್ವಲ್ಪ ತೊಂದರೆಯಾಗಿದೆ. ಪೋಲೀಸ್‌ನವರ ಸಹಕಾರ ತೆಗೆದುಕೊಂಡು ಈಗಾಗಲೇ ದೂರನ್ನು ದಾಖಲಿಸಿದ್ದು, ಮೊನ್ನೆ 13ನೇ ತಾರೀಖು ಪೋಲೀಸ್‌ನವರ ಜೊತೆ ನಮ್ಮ ಅಧಿಕಾರಿಗಳು ಹೋಗಿ approach road ಬಗ್ಗೆ ರೈತರಿಗೆ ಮನವೊಲಿಸಿದ್ದು, ಅದನ್ನು ಸರಿಪಡಿಸುವಂತಹ ಕೆಲಸವನ್ನು ಮಾಡಿದ್ದಾರೆ. ಈಗಾಗಲೇ ಅದರ ಅಂದಾಜನ್ನು ಕೂಡ ತಯಾರು ಮಾಡಿಸಿದ್ದೇವೆ. ಅದರ ಅಂದಾಜು ಸುಮಾರು 75 ಲಕ್ಷ ರೂಪಾಯಿಗಳಾಗಬಹುದು. ಅದನ್ನು ತಕ್ಷಣ ಸರಿಪಡಿಸಿ, ತಡೆಗೋಡೆಯನ್ನು ನಿರ್ಮಾಣ ಮಾಡಿ, ಇನ್ನು ಮುಂದೆ ಜನರಿಗೆ ತೊಂದರೆಯಾಗದಂತೆ ಅದನ್ನು ಮಾಡುತ್ತೇವೆ.

ಮಾನ್ಯ ಸಭಾಪತಿಯವರೇ, ಈಗ ಆಗಿರುವಂತಹದ್ದೇನೆಂದರೆ, ತಕ್ಷಣ 28,000 ಕ್ಯೂಸೆಕ್ಸ್‌ನಷ್ಟು ನೀರು ನುಗ್ಗಿದ ಕಾರಣ ಪ್ರವಾಹ ಬಂದಿದೆ. ಎರಡನೆಯದಾಗಿ, ರೈತರು ಅಲ್ಲಿಗೆ ಹೋಗುವುದಕ್ಕೆ ಅವಕಾಶ ಮಾಡಿಕೊಡಲಿಲ್ಲ. ಮಲಪ್ರಭಾ ನದಿಯ ಅದೇ ಲೈನ್‌ನಲ್ಲಿ ಉಳಿದ 19 ಬ್ಯಾರೇಜ್ ಗೇಟ್‌ನಲ್ಲಿ ಯಾವುದೇ ತೊಂದರೆಯಾಗಿಲ್ಲ. ಈ ಬ್ಯಾರೇಜ್ ಗೇಟ್‌ನಲ್ಲಿ ಮಾತ್ರ. ರೈತರಿಗೆ ಯಾವ ಕಾರಣಕ್ಕೆ ಅಲ್ಲಿ ಹೋಗುವುದಕ್ಕೆ ಬಿಟ್ಟಿಲ್ಲ ಎಂಬುದು ಗೊತ್ತಿಲ್ಲ. ಅದರ ಬಗ್ಗೆ verify ಮಾಡುವುದಕ್ಕೆ ಹೇಳಿದ್ದೇನೆ. Approach road ಮಾಡಲು ಯಾವುದೇ ರೀತಿಯ ತೊಂದರೆಯಾಗಬಾರದು ಎಂದು ಅಲ್ಲಿನ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಡುತ್ತಿದ್ದೇನೆ. ಈ ಬ್ಯಾರೇಜ್ ಗೇಟ್‌ನಲ್ಲಿ ಹಾನಿಯಾಗಿದ್ದು, ಅದನ್ನು ತಕ್ಷಣವೇ ಸರಿಪಡಿಸುವಂತಹ ಕೆಲಸವನ್ನು ಮಾಡಿಕೊಡುತ್ತೇನೆ.

**ಶ್ರೀ ಪಿ.ಹೆಚ್. ಪೂಜಾರ್:-** ಮಾನ್ಯ ಸಭಾಪತಿಯವರೇ, ಆ ಜಲಾಶಯದಿಂದ...

**ವೈಸ್ ಛೇರ್ಮನ್:-** ಮಾನ್ಯ ಪಿ.ಹೆಚ್. ಪೂಜಾರ್‌ರವರೇ, ಇದು ಶೂನ್ಯವೇಳೆ. ಇದನ್ನು ಪ್ರಸ್ತಾವನೆ ಮಾಡಬೇಕು. ಇದು ಪ್ರಶ್ನೋತ್ತರ ವೇಳೆಯಲ್ಲ. ಮಾನ್ಯ ಸಿ.ಟಿ. ರವಿಯವರೇ ಶೂನ್ಯವೇಳೆ ಪ್ರಸ್ತಾಪಿಸಿ.

**ಉ) ವಿಷಯ:- ಯುಜಿಸಿ ನಿಗಧಿಪಡಿಸಿರುವ ವಿದ್ಯಾರ್ಹತೆ ಹೊಂದಿರದಿದ್ದರೂ ಯುಜಿಸಿ ವೇತನ ಪಡೆಯುತ್ತಿರುವ ಸಹಾಯಕ ಪ್ರಾಧ್ಯಾಪಕರು ಮತ್ತು ಪ್ರಾಧ್ಯಾಪಕರುಗಳ ವಿರುದ್ಧ ಕ್ರಮ ಕೈಗೊಳ್ಳುವ ಕುರಿತು**

-------

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

"ವಿಜಯ ಕರ್ನಾಟಕ" ದಿನಪತ್ರಿಕೆಯಲ್ಲಿ "ಪಿ.ಎಚ್.ಡಿ., ನೆಟ್, ಕೆ.ಸೆಟ್ ಪೂರೈಸದ ಅಧ್ಯಾಪಕರಿಗೂ ಲಕ್ಷ ಲಕ್ಷ ವೇತನ-881 ಅನರ್ಹರಿಗೆ ಯು.ಜಿ.ಸಿ., ಸ್ಕೇಲ್ ಎಂಬ ಶಿರೋನಾಮೆಯಡಿಯಲ್ಲಿ ಪ್ರಕಟವಾಗಿರುವ ವರದಿಯನ್ನು ಪ್ರಸ್ತಾಪಿಸಲು ಬಯಸುತ್ತೇನೆ.

ವಿಶ್ವವಿದ್ಯಾಲಯ ಧನ ಸಹಾಯ ಆಯೋಗ (ಯು.ಜಿ.ಸಿ.) ನಿಗದಿಪಡಿಸಿರುವ ವಿದ್ಯಾರ್ಹತೆ ಇಲ್ಲದೆ ಇದ್ದರೂ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿದ್ದ 881 ಸಹಾಯಕ ಪ್ರಾಧ್ಯಾಪಕರು ಲಕ್ಷಾಂತರ ರೂಪಾಯಿ ಯು.ಜಿ.ಸಿ. ವೇತನ ಪಡೆಯುತ್ತಿರುವುದು ಬೆಳಕಿಗೆ ಬಂದಿದೆ. ರಾಜ್ಯದಲ್ಲಿ 430 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿದ್ದು, 7 ಸಾವಿರ ಖಾಯಂ ಸಹಾಯಕ ಪ್ರಾಧ್ಯಾಪಕರು, 12 ಸಾವಿರ ಅತಿಥಿ ಉಪನ್ಯಾಸಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರಲ್ಲಿ 881 ಉಪನ್ಯಾಸಕರು ಯು.ಜಿ.ಸಿ. ವೇತನಕ್ಕೆ ಅನರ್ಹರು ಎಂಬುದನ್ನು ಮಹಾಲೇಖಪಾಲರು ಪತ್ತೆ ಮಾಡಿದ್ದಾರೆ.

ಯು.ಜಿ.ಸಿ., ನಿಯಮಗಳ ಪ್ರಕಾರ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಹಾಯಕ ಪ್ರಾಧ್ಯಾಪಕರುಗಳು ಮುಖ್ಯವಾಗಿ ನೆಟ್, ಕೆ.ಸೆಟ್., ಪಿ.ಎಚ್.ಡಿ., ಪದವಿ ಪಡೆದಿರಬೇಕು. ಆಗ ಮಾತ್ರ 2006ರ ಯು.ಜಿ.ಸಿ. ವೇತನ ಶ್ರೇಣಿ ಪಡೆಯಲು ಅರ್ಹರಾಗಿರುತ್ತಾರೆ. ಆದರೆ ನಿಗದಿಪಡಿಸಿದ ಮಾನದಂಡಗಳು ಇಲ್ಲದೇ ಇದ್ದರೂ ಸಹಾಯಕ ಪ್ರಾಧ್ಯಾಪಕರಾಗಿ ನೇಮಕಗೊಂಡು ಯು.ಜಿ.ಸಿ., ವೇತನ ಪಡೆಯುತ್ತಿದ್ದರೂ ಇಲಾಖೆಯ ಗಮನಕ್ಕೆ ಬಂದಿರಲಿಲ್ಲ. ಮಹಾಲೇಖಪಾಲರು ಆಕ್ಷೇಪಣೆ ವ್ಯಕ್ತಪಡಿಸಿದ ನಂತರ ಕಾಲೇಜು ಶಿಕ್ಷಣ ಇಲಾಖೆಯು ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರಿಗೆ ಅನರ್ಹರಾಗಿದ್ದರೂ ಯು.ಜಿ.ಸಿ., ವೇತನ ಪಡೆಯುತ್ತಿರುವ ಸಹಾಯಕ ಪ್ರಾಧ್ಯಾಪಕರ ಪಟ್ಟಿ ಕಳುಹಿಸಿಕೊಡಲು ಸೂಚನೆ ನೀಡಿದೆ. ಸರ್ಕಾರ ಕೂಡಲೇ ಈ ವಿಚಾರವನ್ನು ಸಮಗ್ರವಾಗಿ ಪರಿಶೀಲಿಸಿ, ವಿದ್ಯಾರ್ಹತೆ ಇಲ್ಲದಿದ್ದರೂ ಯು.ಜಿ.ಸಿ., ವೇತನ ಪಡೆಯುತ್ತಿರುವ ಅನರ್ಹ 881 ಪ್ರಾಧ್ಯಾಪಕರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಆಗ್ರಹಿಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ವೈಸ್ ಛೇರ್ಮನ್:-** ಮಾನ್ಯ ಸಭಾನಾಯಕರೇ, ಇದು ಅತ್ಯಂತ ಗಂಭೀರವಾದಂತಹ ವಿಚಾರವಾಗಿದ್ದು, ಇದರ ಬಗ್ಗೆ ತಾವು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡಬೇಕಾಗುತ್ತದೆ. ಮಾನ್ಯ ಐವನ್ ಡಿ'ಸೋಜಾರವರೇ, ಶೂನ್ಯ ವೇಳೆ ಪ್ರಸ್ತಾಪಿಸಿ.

**ಊ) ವಿಷಯ:- ಕರಾವಳಿ ಕರ್ನಾಟಕದಲ್ಲಿ ನಡೆಯುವ ಪ್ರತಿ ಕಂಬಳ ಕ್ರೀಡಾಕೂಟಕ್ಕೆ ಸರ್ಕಾರದಿಂದ ಐದು ಲಕ್ಷ ರೂಪಾಯಿಗಳ ಅನುದಾನ ನೀಡುವ ಬಗ್ಗೆ.**

-------

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಕರಾವಳಿ ಕರ್ನಾಟಕದ ಜನಪ್ರಿಯ ಕ್ರೀಡೆಯಾಗಿರುವ ಕಂಬಳ ಕ್ರೀಡಾ ಕೂಟಕ್ಕೆ ಸರ್ಕಾರದಿಂದ ಪ್ರತಿ ಕಂಬಳಕ್ಕೆ 5 ಲಕ್ಷ ರೂ.ಗಳ ಬದಲು 2 ಲಕ್ಷ ರೂಪಾಯಿಗಳ ಅನುದಾನ ನೀಡಿ, ಉಳಿದ ಹಣಕ್ಕೆ ಕತ್ತರಿ ಮಾಡಿರುವ ಬಗ್ಗೆ ಪತ್ರಿಕೆಯಲ್ಲಿ ವರದಿಗಳು ಪ್ರಕಟವಾಗಿವೆ.

ಕರ್ನಾಟಕದ ಜನಪದ ಕ್ರೀಡೆಗಳಲ್ಲಿ ಕರಾವಳಿ ಭಾಗದಲ್ಲಿ ಜರುಗುವ ಕಂಬಳ ಕ್ರೀಡಾಕೂಟವು ಅತ್ಯಂತ ಜನಪ್ರಿಯ ಕ್ರೀಡೆ ಹಾಗೂ ಇದನ್ನು ದೇಶ ವಿದೇಶಗಳಲ್ಲಿ ಏಕಕಾಲದಲ್ಲಿ ವೀಕ್ಷಿಸುತ್ತಿರುವ ಅತ್ಯಂತ ಜನಪ್ರಿಯ ಕ್ರೀಡೆಯಾಗಿ ಕರಾವಳಿ ಭಾಗದಲ್ಲಿ ಒಟ್ಟು 24 ಕಂಬಳಗಳು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ನಡೆಯುತ್ತವೆ. ಪ್ರತಿ ಕಂಬಳಕ್ಕೆ 25 ರಿಂದ 40 ಲಕ್ಷ ರೂ.ಗಳು ವೆಚ್ಚವಾಗುತ್ತದೆ. ಈ ಕಂಬಳಗಳಿಗೆ ಸರ್ಕಾರ 3 ಬಾರಿ 5 ಲಕ್ಷದಂತೆ ಘೋಷಣೆ ಮಾಡಿ ಹಣವನ್ನು ಪಾವತಿ ಮಾಡಿರುತ್ತದೆ. ಆದರೆ 2023-24ನೇ ಸಾಲಿನ ಕಂಬಳಕ್ಕೆ ಸರ್ಕಾರವು ದಿನಾಂಕ 19.12.2024ರಂದು ತಲಾ 5 ಲಕ್ಷ ರೂಪಾಯಿಗಳನ್ನು ನೀಡುವಂತೆ ಆದೇಶವನ್ನು ಹೊರಡಿಸಿದೆ. ಎರಡೂ ಸದನಗಳಲ್ಲಿ ಚರ್ಚಿಸಿ ಪ್ರವಾಸೋದ್ಯಮ ಸಚಿವರು 5 ಲಕ್ಷ ರೂಪಾಯಿಗಳಂತೆ 24 ಕಂಬಳಗಳಿಗೆ 1 ಕೋಟಿ 20 ಲಕ್ಷ ರೂಪಾಯಿಗಳು ನೀಡುವ ಘೋಷಣೆಯಾಗಿದೆ. ಆದರೆ ಜೂನ್ 30 ರಂದು ಹೊಸ ಆದೇಶ ಹೊರಡಿಸಿ ದಕ್ಷಿಣ ಕನ್ನಡ ಜಿಲ್ಲೆಯ 10 ಕಂಬಳಗಳಿಗೆ 20 ಲಕ್ಷ ರೂ.ಗಳು ಮತ್ತು ಉಡುಪಿ ಜಿಲ್ಲೆಯ 10 ಕಂಬಳಗಳಿಗೆ 20 ಲಕ್ಷ ರೂ.ಗಳಂತೆ, ಒಟ್ಟು 40 ಲಕ್ಷ ರೂಪಾಯಿಗಳು ಮಂಜೂರು ಮಾಡಿದೆ. 1 ಕೋಟಿ 20 ಲಕ್ಷ ರೂಪಾಯಿಗಳ ಬದಲು ಕೇವಲ 40 ಲಕ್ಷ ರೂಪಾಯಿಗಳು ಮಂಜೂರು ಮಾಡಿದೆ. ಘೋಷಣೆಯಾದ 1 ಕೋಟಿ 20 ಲಕ್ಷ ರೂಪಾಯಿಗಳ ಬದಲು ಕೇವಲ 40 ಲಕ್ಷ ರೂಪಾಯಿಗಳು ನೀಡಿರುವುದರಿಂದ ಕಂಬಳ ಸಮಿತಿಯವರು ಈ ಹಣವನ್ನು ಬಟವಾಡೆ ಮಾಡುವುದು ಹೇಗೆ ಎಂದು ಅಸಮಾಧಾನ ವ್ಯಕ್ತಪಡಿಸಿರುತ್ತಾರೆ.

ಸರ್ಕಾರ ಘೋಷಿಸಿದಂತೆ, ಪ್ರತಿ ಕಂಬಳಕ್ಕೆ 5 ಲಕ್ಷ ರೂಪಾಯಿಗಳಂತೆ 1 ಕೋಟಿ 20 ಲಕ್ಷ ರೂಪಾಯಿಗಳಷ್ಟು ಹಣವನ್ನು ಪಾವತಿಸಬೇಕೆನ್ನುವುದು ಜಿಲ್ಲಾ ಕಂಬಳ ಸಮಿತಿಯ ಬೇಡಿಕೆಯಾಗಿತ್ತು ಮತ್ತು ಕಂಬಳ ಕ್ರೀಡೆಯನ್ನು ಪ್ರೋತ್ಸಾಹಿಸಲು ಪ್ರತಿ ವರ್ಷ 5 ಲಕ್ಷ ರೂಪಾಯಿಗಳು ಸರಿಯಾಗಿ ಎಲ್ಲಾ 24 ಕಂಬಳಗಳಿಗೂ ಸಮಾನವಾಗಿ ನೀಡಬೇಕೆಂದು ಕರಾವಳಿ ಭಾಗದ ಕ್ರೀಡಾ ಅಭಿಮಾನಿಗಳು ಮತ್ತು ಕ್ರೀಡಾ ಆಯೋಜಕರು ಒತ್ತಾಯಿಸಿರುತ್ತಾರೆ. ಈ ಬಗ್ಗೆ ಕರಾವಳಿ ಭಾಗದ ಪತ್ರಿಕೆಗಳಾದ ಉದಯವಾಣಿ ವಿಜಯ ಕರ್ನಾಟಕ ವಾರ್ತಾ ಭಾರತಿಯಲ್ಲಿ ಸುದ್ದಿ ಪ್ರಕಟವಾಗಿದ್ದು, ಸರ್ಕಾರ ನೀಡಿದ ಮಾತಿನಂತೆ ಪ್ರವಾಸೋದ್ಯಮ ಸಚಿವರು, ಉಳಿದ 80 ಲಕ್ಷ ರೂಪಾಯಿಗಳ ಹಣವನ್ನು ಬಿಡುಗಡೆ ಮಾಡಬೇಕು ಮತ್ತು ಮುಂದಿನ ಸಾಲಿನ ಕಂಬಳದ ಸಹಾಯಧನ 1 ಕೋಟಿ 20 ಲಕ್ಷ ರೂಪಾಯಿಗಳ ಹಣವನ್ನು ನೀಡಲು ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಶ್ರೀ ಐವನ್ ಡಿ' ಸೋಜಾ:-** ಮಾನ್ಯ ಸಭಾಪತಿಯವರೇ, ತಾವು ಕೂಡ ಈ ಜಿಲ್ಲೆಯವರು. ಇದು ತಮಗೂ ಕೂಡ ಗೊತ್ತಿದೆ.

**ವೈಸ್ ಛೇರ್ಮನ್:-** ಇದು ಪ್ರಶ್ನೋತ್ತರ ವೇಳೆಯಲ್ಲ.

**ಶ್ರೀ ಐವನ್ ಡಿ' ಸೋಜಾ:-** ಆಯಿತು.

**ವೈಸ್ ಛೇರ್ಮನ್:-** ಮಾನ್ಯ ಹರಿಪ್ರಸಾದ್‌ರವರೇ, ತಾವು ಶೂನ್ಯವೇಳೆಯನ್ನು ಪ್ರಸ್ತಾಪಿಸಿ.

**(ಮುಂದು)**

(712) 14.08.2025 12.50 ಟಿಸಿಹೆಚ್-ಬಿಎನ್‌ಎಸ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಖ) ವಿಷಯ:- ಅಬಕಾರಿ ಉದ್ಯಮದಲ್ಲಿ ತೊಡಗಿರುವ ಮೂಲ ಕಸುಬುದಾರರಾದ ಈಡಿಗ/ಬಿಲ್ಲವ ಸಮಾಜದ ಉದ್ದಿಮೆದಾರರಿಗೆ ತೆಲಂಗಾಣ ಮಾದರಿಯಲ್ಲಿ ವ್ಯವಹಾರಿಕ ಲಾಭಾಂಶವನ್ನು ನೀಡಲು ಸಮಿತಿ ರಚಿಸುವ ಕುರಿತು**

- --

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಈಡಿಗ/ಬಿಲ್ಲವ ಸಮುದಾಯವು ಶತಮಾನಗಳಿಂದ ಶೇಂದಿ ಇಳಿಸಿ ಮಾರಾಟ ಮಾಡುವ ಕಾಯಕದಲ್ಲಿ ತೊಡಗಿಕೊಂಡು ಸಮಾಜದ ಭಾಗವಾಗಿದ್ದರೂ ಬದಲಾದ ದಿನಮಾನಗಳಲ್ಲಿ ಕುಲಕಸುಬನ್ನು ತೊರೆಯಲಾಗದೆ ಮುಂದುವರೆಸಿಕೊಂಡು ಬರುತ್ತಾ, ಹಲವು ಪೀಳಿಗೆಗಳ ಹಸಿವು ನೀಗಿಸುವ ಕಾಯಕದಲ್ಲಿ ನಿರತವಾಗಿರುವುದು ಎಲ್ಲರಿಗೂ ತಿಳಿದಿರುವ ಸಂಗತಿಯಾಗಿದೆ.

ಆದಾಗ್ಯೂ, ವೃತ್ತಿ ಪೋಷಣೆ ಮಾಡಲಾಗದ ಶೇ.25ಕ್ಕೂ ಹೆಚ್ಚಿನ ಮಂದಿ ಮೂಲ ಕಸುಬನ್ನು ಅನಿವಾರ್ಯವಾಗಿ ತೊರೆಯಬೇಕಾದುದು ವಿಷಾದದ ಸಂಗತಿಯಾಗಿದೆ. ಇನ್ನುಳಿದವರು ವೃತ್ತಿ ಪೋಷಣೆ ಮತ್ತು ಸರ್ಕಾರದ ಅಬಕಾರಿ ನೀತಿಗಳಿಗೆ ಹೊಂದಿಕೊಂಡು ವೃತ್ತಿಯನ್ನು ಮುನ್ನಡೆಸುತ್ತಿದ್ದಾರೆ. ಈ ಹಿಂದೆ ಇವರಿಗೆ ಅಬಕಾರಿ ಮೂಲದಿಂದ ದೊರೆಯುತ್ತಿದ್ದ ಶೇ.20ರಷ್ಟು ಲಾಭಾಂಶವು ಈಗ ಶೇ.10ಕ್ಕೆ ಕುಸಿತಗೊಂಡಿರುವುದು ಮುಖ್ಯ ಆತಂಕಕ್ಕೆ ಕಾರಣವಾಗಿದೆ. ಇತರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿನ ಈಡಿಗ/ಬಿಲ್ಲವ ಸಮಾಜದ ಆರ್ಥಿಕ ವ್ಯವಸ್ಥೆ ಅಸ್ತವ್ಯಸ್ಥಗೊಂಡು ದುರ್ಬಲಗೊಂಡಿರುತ್ತದೆ. ಕಾನೂನುಗಳ ದುರ್ಬಳಕೆ, ಜಾಮೀನಿಲ್ಲದ ಪ್ರಕರಣಗಳಲ್ಲಿ ಇವರುಗಳನ್ನು ಆರೋಪಿತ ಸ್ಥಾನದಲ್ಲಿ ನಿಲ್ಲಿಸುವುದು, ಉದ್ದೇಶಪೂರ್ವಕ ದಾವೆಗಳನ್ನು ಹೂಡುವುದು ಇಂತಹ ಶೋಷಣೆ ಹೆಚ್ಚಾಗಿದ್ದು, ಹಣಬಲ ಉಳ್ಳವರ ಸಂಖ್ಯೆ ಹೆಚ್ಚಾಗಿ ಮೂಲ ಕುಲಕಸುಬುದಾರರನ್ನು ಈ ವೃತ್ತಿಯಿಂದ ಹೊರದಬ್ಬುವ ಕೆಲಸ ಅವಿರತವಾಗಿ ಸಾಗುತ್ತಾ ಬರುತ್ತಿದೆ.

ದಯಮಾಡಿ ಅಬಕಾರಿ ಉದ್ಯಮದಲ್ಲಿ ತೊಡಗಿರುವ ಈಡಿಗ/ಬಿಲ್ಲವ ಸಮಾಜದ ಉದ್ದಿಮೆದಾರರಿಗೆ ಶೇ.20 ರಷ್ಟು ಲಾಭಾಂಶ ನೀಡುವುದನ್ನು ಮುಂದುವರೆಸಬೇಕು, ವಿಧಿಸಿರುವ ಸನ್ನದು ಶುಲ್ಕವನ್ನು ಹಿಂಪಡೆಯಬೇಕು. ಮೂಲ ಕಸುಬುದಾರರ ಹಿತಕ್ಕಾಗಿ ರಾಜ್ಯ ಫೆಡರೇಷನ್ ಆಫ್ ವೈನ್ ಮರ್ಚಂಟ್ಸ್ ಅಸೋಸಿಯೇಷನ್‌ರವರು ನೀಡಿರುವ ಸಲಹೆಗಳನ್ನು ಪರಿಗಣಿಸಬೇಕು. ತೆಲಂಗಾಣ ಮಾದರಿಯಲ್ಲಿ ಅಲ್ಲಿನ ಗೌಡ ಸಮುದಾಯಕ್ಕೆ ನೀಡಲಾದ ವ್ಯವಹಾರಿಕ ಬೆಂಬಲದ ಜೊತೆಗೆ ವ್ಯವಹಾರಿಕ ಲಾಭಾಂಶವನ್ನು ರಾಜ್ಯದ ಸ್ಥಳೀಯ ಈಡಿಗ/ಬಿಲ್ಲವ ಸಮುದಾಯದ ಮೂಲ ಕಸುಬುದಾರರಿಗೆ/ಸನ್ನದುದಾರರಿಗೆ ನೀಡಲು ಸರ್ಕಾರದ ಮಟ್ಟದಲ್ಲಿ ಒಂದು ಸಮಿತಿಯನ್ನು ರಚಿಸಿ ಸಮಿತಿ

ವರದಿಯನ್ನು ಕಾಲಮಿತಿಯೊಳಗೆ ಅನುಷ್ಠಾನಕ್ಕೆ ತರಲು ಕ್ರಮಕೈಗೊಳ್ಳಬೇಕೆಂದು ಶೂನ್ಯವೇಳೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ.

**ಶ್ರೀ ತಿಮ್ಮಾಪುರ ರಾಮಪ್ಪ ಬಾಳಪ್ಪ (ಅಬಕಾರಿ ಸಚಿವರು):-** ಮಾನ್ಯ ಸಭಾಪತಿಯವರೇ, ಅಬಕಾರಿ ಸಚಿವನಾಗಿರುವುದರಿಂದ ನಾನೇ ಉತ್ತರ ಕೊಡುತ್ತೇನೆ. 2005ರಲ್ಲಿ common ಆಗಿ only ಬಿಲ್ಲವ ಅಥವಾ ಈಡಿಗರಿಗೆ ಮಾತ್ರವಲ್ಲದೇ ಎಲ್ಲಾ ಮಾರಾಟಗಾರರಿಗೆ ಸಂಬಂಧಪಟ್ಟಂತೆ ಶೇ.20 ಲಾಭಾಂಶ ಇರುವುದನ್ನು ಶೇ.10ಕ್ಕೆ ಇಳಿಸಿದರು. ರಾಜ್ಯದ Federation of Wine Merchants Association ನವರು ಕೂಡ ನಮಗೆ ಮನವಿ ಕೊಟ್ಟಿದ್ದಾರೆ. ಅದು ಪರಿಶೀಲನೆ ಹಂತದಲ್ಲಿದೆ. ಮುಂದೆ ಹರಾಜು ಮಾಡಬೇಕೆಂದು ಸರ್ಕಾರದ ಒಂದು ಯೋಚನೆ ಇದೆ. ಆ ಹರಾಜಿನಲ್ಲಿ ಬೇಕಾದರೆ reservation ತರುವುದಕ್ಕೆ ಎಸ್.ಸಿ., ಎಸ್.ಟಿ., ಬಿಲ್ಲವ ಇತರೆ ಹಲವಾರು ಸಮಾಜಗಳು ಮೊದಲು ಮಾಡುತ್ತಿದ್ದರೋ ಅವರಿಗೆ ಅವಕಾಶ ಮಾಡಿಕೊಡಬೇಕೆಂಬ ಯೋಚನೆ ನಮ್ಮ ಹತ್ತಿರ ಇದೆ. ಇದರ ಜೊತೆಗೆ ತೆಲಂಗಾಣದಲ್ಲಿ ಕೆಲವೊಂದು ವಿಷಯದಲ್ಲಿ reservation ಕೊಡುತ್ತಾರೆ ಅಥವಾ ಲಾಭಾಂಶವನ್ನು ಹೆಚ್ಚಿಗೆ ಕೊಡುತ್ತಾರೆ ಎಂದು ಮಾನ್ಯ ಹಿರಿಯ ಸದಸ್ಯರಾದ ಶ್ರೀ ಬಿ.ಕೆ.ಹರಿಪ್ರಸಾದ್ ರವರು ಈಗ ಮಾತನಾಡಿದ್ದಾರೆ. ಸಾಧ್ಯವಾದರೆ ತೆಲಂಗಾಣಕ್ಕೆ ಒಂದು ಕಮಿಟಿಯನ್ನು ಕಳಿಸಿ ಅಲ್ಲಿ ಏನು ನಡೆಯುತ್ತಿದೆ, ಲಾಭವಾಗುತ್ತಿದ್ದರೆ ಅಥವಾ ಜನಾಂಗಕ್ಕೆ ಸಹಾಯವಾಗುತ್ತಿದ್ದರೆ ಅದರ report ತರಿಸಿ ಕ್ರಮ ಕೈಗೊಳ್ಳುತ್ತೇನೆ.

**ಎ) ವಿಷಯ:- ಜಾನಪದ ವಿಶ್ವವಿದ್ಯಾಲಯದ ಹೊರಗುತ್ತಿಗೆ ಸಿಬ್ಬಂದಿಗಳಿಗೆ ವೇತನ ಪಾವತಿಸದಿರುವ ಬಗ್ಗೆ.**

----

**ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

ಕರ್ನಾಟಕ ರಾಜ್ಯದ ಜಾನಪದ ಇತಿಹಾಸ ಮತ್ತು ಪರಂಪರೆ ಹಾಗೂ ಗ್ರಾಮೀಣ ಕೃಷಿಕ ಸಮುದಾಯಗಳು, ರೈತರು, ಕಾರ್ಮಿಕರು, ಶ್ರಮಿಕರು, ದಲಿತರು, ಅಲೆಮಾರಿಗಳು, ಬುಡಕಟ್ಟು ಜನರು ಮತ್ತು ಜಾನಪದ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕಾರ್ಯವನ್ನು ರಾಜ್ಯದ ಜಾನಪದ ವಿಶ್ವವಿದ್ಯಾಲಯ ಮಾಡುತ್ತಿದೆ. 'ಜಾನಪದ ವಿಶ್ವವಿದ್ಯಾಲಯದ ಹೊರಗುತ್ತಿಗೆ ಸಿಬ್ಬಂದಿಗೆ ನೀಡಿಲ್ಲ ವೇತನ' ಎಂಬ ಶೀರ್ಷಿಕೆ ಅಡಿಯಲ್ಲಿ 'ಕನ್ನಡ ಪ್ರಭ' ದಿನಪತ್ರಿಕೆಯಲ್ಲಿ ವರದಿಯಾಗಿದೆ. ಹೊರಗುತ್ತಿಗೆ ಆಧಾರದಲ್ಲಿ ಸೇವೆ ಸಲ್ಲಿಸುತ್ತಿರುವ ಸ್ವಚ್ಛತಾ ಸಿಬ್ಬಂದಿ, ಗಾರ್ಡನ್ ಸಿಬ್ಬಂದಿ, ವಾಹನ ಚಾಲಕರು, ಭದ್ರತಾ ಕೆಲಸಗಾರರು, ಕಚೇರಿ ಸಹಾಯಕರು ಹಾಗೂ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರಿಗೆ ಕಳೆದ 5 ತಿಂಗಳಿಗೂ ಹೆಚ್ಚಿನಿಂದ ಸಂಬಳ ನೀಡಿಲ್ಲ. ಇದರಿಂದ ಸಿಬ್ಬಂದಿಗಳು ಸಂಕಷ್ಟ ಅನುಭವಿಸುತ್ತಿದ್ದಾರೆ. ಬೇರೆ ವಿಶ್ವವಿದ್ಯಾಲಯಗಳಿಗೆ ಹೋಲಿಸಿದರೆ ಜಾನಪದ ವಿಶ್ವವಿದ್ಯಾಲಯದಲ್ಲಿ ಪೂರ್ಣಕಾಲಿಕ ಮತ್ತು ಅರೆಕಾಲಿಕ ಪ್ರಾಧ್ಯಾಪಕರಿಗೆ ಅತಿ ಕಡಿಮೆ ವೇತನ ನೀಡಲಾಗುತ್ತಿದೆ. ಕಳೆದ 10 ವರ್ಷದಿಂದ ಕೇವಲ 25,000 ರೂಪಾಯಿಗಳ ವೇತನವನ್ನು ಪೂರ್ಣಕಾಲಿಕ ಅತಿಥಿ ಪ್ರಾಧ್ಯಾಪಕರಿಗೆ ನೀಡಲಾಗುತ್ತಿದೆ. ಪೂರ್ಣಕಾಲಿಕ ಮತ್ತು ಅರೆಕಾಲಿಕ ಪ್ರಾಧ್ಯಾಪಕರಿಗೆ ವರ್ಷದಲ್ಲಿ 7 ತಿಂಗಳ ಕಾರ್ಯಭಾರ ಮತ್ತು ನೇಮಕಾತಿ ಆದೇಶವನ್ನು ನೀಡುವುದಿಲ್ಲ. ಆದರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ 11 ತಿಂಗಳ ಕಾರ್ಯಾಭಾರ ಹಾಗೂ ನೇಮಕಾತಿ ಆದೇಶ ನೀಡುತ್ತಿದ್ದಾರೆ. ಸಾಕಷ್ಟು ಬಾರಿ ಕುಲಪತಿಗಳು, ಕುಲಸಚಿವರಿಗೆ ವೇತನ ಪಾವತಿಸುವಂತೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ ಎಂದು ಪತ್ರಿಕೆಯಲ್ಲಿ ವರದಿಯಾಗಿದೆ. ಇದರಿಂದ ಸಿಬ್ಬಂದಿಗಳ ದೈನಂದಿನ ಜೀವನ ನಿರ್ವಹಣೆ ಕಷ್ಟಕರವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಜಾನಪದ ವಿಶ್ವವಿದ್ಯಾಲಯದ ಹೊರಗುತ್ತಿಗೆ ಸಿಬ್ಬಂದಿಗಳಿಗೆ ಮತ್ತು ಅರೆಕಾಲಿಕ ಉಪನ್ಯಾಸಕರಿಗೆ ತಕ್ಷಣವೇ ವೇತನವನ್ನು ನೀಡಿ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಉನ್ನತ ಶಿಕ್ಷಣ ಸಚಿವರನ್ನು ಈ ಮೂಲಕ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಏ) ವಿಷಯ:- ಮೈಸೂರಿನಲ್ಲಿ ತಯಾರಾದ ಮಾದಕ ವಸ್ತುವಿಗೆ ಮಹಾರಾಷ್ಟ್ರದ ನಂಟು ಪತ್ತೆಯಾಗಿರುವ ಹಿನ್ನಲೆಯಲ್ಲಿ ಮಾದಕ ಜಾಲವನ್ನು ಬುಡ ಸಮೇತ ಕಿತ್ತು ಹಾಕುವ ಬಗ್ಗೆ**

----

**ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಮಹತ್ವದ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು.

ಮೈಸೂರಿನಲ್ಲಿ ಡ್ರಗ್ಸ್ ಮಾಫಿಯಾ, ಮಾದಕ ವಸ್ತು ಸೇವನೆ ಪ್ರಕರಣದ ವಿರುದ್ಧ ಕಠಿಣ ಕ್ರಮಕೈಗೊಳ್ಳುವಂತೆ ಒತ್ತಾಯಿಸಿ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ (ಎ.ಬಿ.ವಿ.ಪಿ) ಕಾರ್ಯಕರ್ತರು ಬೃಹತ್ ಪ್ರತಿಭಟನೆ ನಡೆಸಿರುವ ವಿಚಾರ ದಿನಾಂಕ 13.08.2025, 14.08.2025 ಮತ್ತು 15.08.2025 ರಂದು 'ಮೈಸೂರು ಮಿತ್ರ' 'ಆಂದೋಲನ' ಮತ್ತು 'ವಿಜಯ ವಾಣಿ' ದಿಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತದೆ.

"ಡ್ರಗ್ಸ್ ನಿರ್ಮೂಲನೆಗಾಗಿ ನಶೆಮುಕ್ತ ಕ್ಯಾಂಪಸ್" ಅಭಿಯಾನದಡಿಯಲ್ಲಿ ಸಾವಿರಾರು ವಿದ್ಯಾರ್ಥಿ ಸಮೂಹ ಪ್ರತಿಭಟನೆ ಹಮ್ಮಿಕೊಂಡಿತ್ತು. ಸಾಂಸ್ಕೃತಿಕ ನಗರಿ ಮೈಸೂರು, ಇತ್ತೀಚೆಗೆ ಮಾದಕ ವ್ಯಸನ ಮತ್ತು ಡ್ರಗ್ಸ್ ಜಾಲದ ಕೇಂದ್ರವಾಗಿ ಮಾರ್ಪಟ್ಟಿರುವುದು ತೀವ್ರ ಆತಂಕಕಾರಿಯಾದ ವಿಷಯವಾಗಿದೆ. ಮಾದಕ ವ್ಯಸನವು ಯುವಜನತೆ ಮತ್ತು ವಿದ್ಯಾರ್ಥಿಗಳ ಭವಿಷ್ಯವನ್ನು ನಾಶಪಡಿಸುತ್ತಿದ್ದು, ಈ ವಸ್ತುಗಳ ಸುಲಭ ಲಭ್ಯತೆಯಲ್ಲಿ ದುಶ್ಚಟಕ್ಕೆ ಬಲಿಪಶುಗಳಾಗುವಂತೆ ಮಾಡುತ್ತಿದೆ. ಇದರಿಂದಾಗಿ ಅಪರಾಧ ಚಟುವಟಿಕೆಗಳು ಹೆಚ್ಚಾಗುತ್ತಿರುವುದು ದುರ್ದೈವದ ಸಂಗತಿಯಾಗಿದೆ.

ರಾಜ್ಯದಲ್ಲಿ ಮಾದಕ ವಸ್ತುಗಳ ಉತ್ಪಾದನೆ, ಮಾರಾಟ ಮತ್ತು ಬಳಕೆ ತಡೆಯುವ ನಿಟ್ಟಿನಲ್ಲಿ ಪ್ರತ್ಯೇಕವಾಗಿ ಮಾದಕ ವಸ್ತುಗಳ ವಿರೋಧಿ ಕಾರ್ಯಪಡೆ ಘಟಕವನ್ನು ಸರ್ಕಾರ ರಚಿಸಿ ಆದೇಶ ಹೊರಡಿಸಿದೆ. ಘಟಕಕ್ಕೆ ಸೂಕ್ತ ವ್ಯಕ್ತಿ ಮತ್ತು ಅಗತ್ಯ ಸೌಕರ್ಯಗಳನ್ನು ಒದಗಿಸಿದಾಗ ಮಾತ್ರ ಡ್ರಗ್ಸ್ ಪೆಡ್ಲರ್ಸ್, ಡ್ರಗ್ಸ್ ತಯಾರಕರು ಮತ್ತು ಅವರ ಹಿಂದೆ ಇರುವ ದೊಡ್ಡ ವ್ಯಕ್ತಿಗಳನ್ನು ಮುಲಾಜಿಲ್ಲದೇ ಮಟ್ಟ ಹಾಕುವುದಕ್ಕೆ ಮತ್ತು ನಿಯಂತ್ರಿಸುವುದಕ್ಕೆ ಸಾಧ್ಯವಾಗುತ್ತದೆ.

ಮೈಸೂರಿನಲ್ಲಿ ತಯಾರಾದ ಮಾದಕ ವಸ್ತುವಿಗೆ ಮಹಾರಾಷ್ಟ್ರದ ನಂಟು ಪತ್ತೆಯಾಗಿರುವುದು ಜನರ ಆತಂಕಕ್ಕೆ ಕಾರಣವಾಗಿದ್ದು, ಬುಡಸಮೇತ ಇಂತಹ ಜಾಲಗಳನ್ನು ಕಿತ್ತು ಬಿಸಾಕುವಂತಹ ನಿಟ್ಟಿನಲ್ಲಿ ದಕ್ಷ ಅಧಿಕಾರಿಗಳನ್ನು ಕಾರ್ಯಪಡೆ ಘಟಕಕ್ಕೆ ನೇಮಿಸಿ ತೀವ್ರತರವಾದ ಕಠಿಣ ಕ್ರಮಗಳನ್ನು ಕೈಗೊಳ್ಳುವಂತೆ ಮಾನ್ಯ ಗೃಹ ಸಚಿವರನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

ಮುಂದುವರೆದು ಮಾನ್ಯ ಸದಸ್ಯರಾದ ಶ್ರೀ ಎಸ್.ವ್ಹಿ.ಸಂಕನೂರುರವರ ಶೂನ್ಯ ವೇಳೆ ವಿಷಯ ಕೂಡ ಒಂದೇಯಾಗಿರುವುದರಿಂದ ಅವರ ಪರವಾಗಿ ನಾನೇ ಓದುತ್ತಿದ್ದೇನೆ. ಮಾನ್ಯ ಸಭಾಪತಿಯವರೇ, ಡ್ರಗ್ಸ್ ಮಾಫಿಯಾ ವಿರುದ್ಧ ಎ.ಬಿ.ವಿ.ಪಿ. ಪ್ರತಿಭಟನೆ ಮೈಸೂರು ಚಲೋ ಜನ ಜಾಗೃತಿ ಜಾಥಾಗೆ ಪೊಲೀಸ್‌ರ ತಡೆ, ಆಕ್ರೋಶ ತಲೆಬರಹದ ಅಡಿಯಲ್ಲಿ ‘ಕನ್ನಡ ಪ್ರಭ’, ‘ವಿಜಯವಾಣಿ’ ಮತ್ತು ‘ವಿಜಯ ಕರ್ನಾಟಕ’ ಇನ್ನೂ ಮುಂತಾದ ದಿನಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಕ್ಕೆ ಸಂಬಂಧಿಸಿದಂತೆ, ಡ್ರಗ್ಸ್ ಮಾಫಿಯಾ ಮಾದಕ ವಸ್ತು ಸೇವನೆ ಹಾಗೂ ಮಾರಾಟ ನಿಯಂತ್ರಣದ ಸಂಬಂಧ ಕಠಿಣ ಕಾನೂನು ಕ್ರಮ ಜರುಗಿಸಬೇಕು. ಇತ್ತೀಚೆಗೆ ಮೈಸೂರಿನಲ್ಲಿ ಪತ್ತೆಯಾದ ಡ್ರಗ್ಸ್ ಫ್ಯಾಕ್ಟರಿ ಪ್ರಕರಣವನ್ನು ಉನ್ನತ ಮಟ್ಟದ ತನಿಖೆಗೆ ಒಪ್ಪಿಸಬೇಕು ಎಂಬ ಪ್ರಮುಖ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಕಾರ್ಯಕರ್ತರು ಮೈಸೂರು ನಗರದ ಗನ್‌ಹೌಸ್ ವೃತ್ತದಲ್ಲಿ ಇದೇ ಮಂಗಳವಾರ ಪ್ರತಿಭಟನೆ ಮಾಡಿದ್ದಾರೆ.

ಸಾಂಸ್ಕೃತಿಕ ನಗರವಾದ ಮೈಸೂರು ಇತ್ತೀಚೆಗೆ ಮಾದಕ ವಸ್ತುಗಳ ಮತ್ತು ಡ್ರಗ್ಸ್ ಜಾಲದ ಕೇಂದ್ರವಾಗಿ ಮಾರ್ಪಟ್ಟಿರುವುದು ತೀವ್ರ ಆತಂಕಕಾರಿ ವಿಷಯವಾಗಿದೆ. ಇದೇ ರೀತಿ ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಗದಗ ಇನ್ನು ಮುಂತಾದ ನಗರಗಳ ಮೆಡಿಕಲ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳ ಸುತ್ತಮುತ್ತ ಕಳ್ಳತನದ ವ್ಯಾಪಾರ ನಡೆದಿರುತ್ತದೆ. ಇದು ಪೊಲೀಸರ ಕರ್ತವ್ಯದ ವೈಫಲ್ಯತೆ ಎತ್ತಿ ತೋರಿಸುತ್ತದೆ ಎಂದು ದೂರಿದ್ದಾರೆ. ಇವತ್ತಿನ ದಿವಸ ಸಹಸ್ರಾರು ಯುವಕರು ಮತ್ತು ವಿದ್ಯಾರ್ಥಿಗಳು ದುಶ್ಚಟಕ್ಕೆ ಬಲಿಯಾಗುತ್ತಿದ್ದಾರೆ. ಹೀಗಾಗಿ ಸರ್ಕಾರ ದಿಟ್ಟಕ್ರಮ ಜರುಗಿಸಿ ಡ್ರಗ್ಸ್ ಮಾಫಿಯಾವನ್ನು ಬೇರುಸಹಿತ ಕಿತ್ತು ಹಾಕಲು NDPS Act ಮತ್ತು COTPA ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಸಬೇಕೆಂದು ಒತ್ತಾಯಿಸಿದ್ದಾರೆ.

ಇತ್ತೀಚೆಗೆ ನಗರದಲ್ಲಿ ಪತ್ತೆಯಾದ ಡ್ರಗ್ಸ್ ಫ್ಯಾಕ್ಟರಿ ಪ್ರಕರಣಕ್ಕೆ ಪೊಲೀಸ್ ಇಲಾಖೆ ಹಾಗೂ ಗುಪ್ತಚರ ಇಲಾಖೆಯವರೇ ಇದರ ಹೊಣೆ ಹೊರಬೇಕಾಗಿದೆ. ಇದರ ಬಗ್ಗೆ ಮಾನ್ಯ ಗೃಹ ಸಚಿವರೇ ಖುದ್ದಾಗಿ ತಪ್ಪನ್ನು ಒಪ್ಪಿಕೊಂಡು ಪತ್ರಿಕಾ ಹೇಳಿಕೆ ನೀಡಿದ್ದು, ಗೃಹ ಇಲಾಖೆ ನಿದ್ರಾವಸ್ಥೆಯಲ್ಲಿ ಇದೆ ಎಂಬುದಕ್ಕೆ ಬೇರೆ ಸಾಕ್ಷಿ ಬೇಕಾಗಿರುವುದಿಲ್ಲ.

ಒಟ್ಟಾರೆ ಸರ್ಕಾರ ಈಗಲಾದರೂ ಎಚ್ಚೆತ್ತುಕೊಂಡು ಕರ್ನಾಟಕವನ್ನು ಡ್ರಗ್ಸ್ ಮಾಫಿಯಾ ಮಾದಕ ವಸ್ತುಗಳ ಮುಕ್ತ ರಾಜ್ಯವನ್ನಾಗಿ ಮಾಡಲು ಕಠಿಣ ಕ್ರಮ ಜರುಗಿಸಲು ಒತ್ತಾಯಿಸುವೆನು.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳಾದ ಶ್ರೀ ಸಿ.ಎನ್.ಮಂಜೇಗೌಡ ಮತ್ತು ಮಾನ್ಯ ಎಸ್.ವ್ಹಿ.ಸಂಕನೂರ ರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಐ) ವಿಷಯ:- ಸಿಂಧನೂರಿನ ನಗರ ಹೃದಯ ಭಾಗದಲ್ಲಿ ಹಣ್ಣಿನ ತೋಟವನ್ನು ನಿರ್ಲಕ್ಷಿಸದೇ ಅಭಿವೃದ್ಧಿ ಪಡಿಸುವ ಕುರಿತು.**

----

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

ದಿನಾಂಕ 05.08.2025ರಂದು "ಸಿಂಧನೂರು ನಗರದಲ್ಲಿ ಜಾಲಿ ಗಿಡಗಳ ತೋಟ" ಎಂದು 'ವಿಜಯ ಕರ್ನಾಟಕ' ದಿನಪತ್ರಿಕೆಯಲ್ಲಿ ಪ್ರಕಟವಾಗಿರುತ್ತದೆ. ಸಿಂಧನೂರು ನಗರದ ಹೃದಯ ಭಾಗದಲ್ಲಿರುವ ಹಿರಿಯ ತೋಟಗಾರಿಕೆ ಇಲಾಖೆಯ ನಿರ್ದೇಶಕರ ಕಚೇರಿಗೆ ಹೊಂದಿಕೊಂಡಿರುವ ಭೂಮಿಯಲ್ಲಿ ಸರಕಾರಿ ಹಣ್ಣಿನ ತೋಟದಲ್ಲಿ ಜಾಲಿ ಬೇಲಿ ಬೆಳೆಸಿರುವುದು ಜನರ ಅಸಮಾಧಾನಕ್ಕೆ ಕಾರಣವಾಗಿದೆ. ಇಲಾಖೆಗೆ ಸಂಬಂಧಿಸಿದ ಒಟ್ಟು 19 ಎಕರೆ ಭೂಮಿ ಇದ್ದು, ಅದರಲ್ಲಿ ಗಿಡಮರಗಳನ್ನು ಬೆಳೆಸದೇ ಹೊಸ ಪ್ರಯೋಗ ನಡೆಸುವಲ್ಲಿ ಅಧಿಕಾರಿಗಳು ನಿರ್ಲಕ್ಷ್ಯವಹಿಸಿದ್ದಾರೆ. ತೋಟಗಾರಿಕೆ ಇಲಾಖೆಯ ಯೋಜನೆ ಕುರಿತಂತೆ ಬಹುತೇಕರಿಗೆ ಮಾಹಿತಿ ಕೊರತೆಯೂ ಇದೆ. ಸುಮಾರು 300-400 ಕೋಟಿಗಳಷ್ಟು ಬೆಲೆ ಬಾಳುವ ಭೂಮಿ ಇಲಾಖೆಯ ಅಧೀನದಲ್ಲಿದ್ದರೂ ಕೂಡ ಅದರ ಸದ್ಬಳಕೆ ಸಾಧ್ಯವಾಗದಿರುವುದು ನಿರ್ಲಕ್ಷ್ಯದ ಪರಮಾವಧಿ ಎನಿಸಿದೆ. ಇದಲ್ಲದೇ ಹಗಲಿನಲ್ಲಿ ಬಹಿರ್ದೆಸೆ, ಮೂತ್ರ ವಿಸರ್ಜನೆ ಹಾಗೂ ರಾತ್ರಿವೇಳೆ ಅನೈತಿಕ ಚಟುವಟಿಕೆಗಳ ತಾಣವಾಗಿ ತೋಟ ಬಳಕೆಯಾಗಿದ್ದು, ಇದು ಜನರ ಅಸಮಾದಾನಕ್ಕೆ ಕಾರಣವಾಗಿದೆ.

ಆದ್ದರಿಂದ ಹಣ್ಣಿನ ತೋಟದಲ್ಲಿ ಜಾಲಿಬೇಲಿ ಬೆಳೆಯಲು ಕಾರಣಗಳೇನು? ಏಕೆ ತೋಟಗಾರಿಕೆ ಇಲಾಖೆ ತನ್ನ ಅಧೀನದಲ್ಲಿದ್ದರೂ ಭೂಮಿಯನ್ನು ಅಭಿವೃದ್ಧಿಪಡಿಸದೇ ಇರಲು ಕಾರಣವೇನು? ಇಲಾಖೆ ಅಧಿಕಾರಿಗಳ ನಿರ್ಲಕ್ಷ್ಯವೇ? ಅನುದಾನದ ಕೊರತೆ ಇದೆಯೇ ಎಂಬುದರ ಬಗ್ಗೆ ಮಾಹಿತಿ ನೀಡಲು ಮಾನ್ಯ ಗಣಿ ಮತ್ತು ಭೂವಿಜ್ಞಾನ ಮತ್ತು ತೋಟಗಾರಿಕೆ ಇಲಾಖೆ ಸಚಿವರನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

(ಮುಂದು)

(713)14.8.2025/1.00/ಎಂ.ಎಂ-ಕೆ.ಎಸ್ (ವೈಸ್ ಛೇರ್ಮನ್ ಉಪಸ್ಥಿತಿ)

**04. ಕಾರ್ಯದರ್ಶಿಯವರ ವರದಿ**

**ಕಾರ್ಯದರ್ಶಿ, ಕ.ವಿ.ಪ:-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಇಡುತ್ತಿದ್ದೇನೆ.

1. ಬಸವಕಲ್ಯಾಣ ಅಭಿವೃದ್ಧಿ ಮಂಡಳ (ತಿದ್ದುಪಡಿ) ವಿಧೇಯಕ, 2025
2. ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025
3. ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025
4. ಕಿತ್ತೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025
5. ಕೂಡಲ ಸಂಗಮ ಅಭಿವೃದ್ಧಿ ಮಂಡಳ (ತಿದ್ದುಪಡಿ) ವಿಧೇಯಕ, 2025
6. ಬನವಾಸಿ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025
7. ಸರ್ವಜ್ಞ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025
8. ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2025
9. ಕರ್ನಾಟಕ ಭೂ ಸುಧಾರಣೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2025

## ೦೫. ವಿಧೇಯಕಗಳನ್ನು ಚರ್ಚೆಗೆ ಸ್ವೀಕರಿಸದೇ ಕಾರ್ಯಕಲಾಪಗಳ ಪಟ್ಟಿಯನ್ನು ಮುಂದುವರೆಸುವ ಬಗ್ಗೆ

**ವೈಸ್ ಛೇರ್ಮನ್:-** ಈಗ ವಿಧೇಯಕಗಳ ಪರ್ಯಾಲೋಚನೆ ಮತ್ತು ಅಂಗೀಕಾರ. ಮಾನ್ಯ ಕಂದಾಯ ಸಚಿವರು ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಬಸವ ಕಲ್ಯಾಣ ಅಭಿವೃದ್ಧಿ ಮಂಡಳ (ತಿದ್ದುಪಡಿ) ವಿಧೇಯಕ, ೨೦೨೫ ರ ಮೇಲಿನ ಪ್ರಸ್ತಾವನೆಯನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತಿದ್ದೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈಗತಾನೇ ನೀವು ವಿಧೇಯಕಗಳನ್ನು ಮಂಡಿಸುತ್ತಿದ್ದೀರಿ. ಅವುಗಳು ಈಗ ತಾನೇ ಬಂದಿರುವುದರಿಂದ ಹಲವು ಸದಸ್ಯರುಗಳ ಆಗ್ರಹವಿದೆ, ಇದನ್ನು ಸೋಮವಾರಕ್ಕೆ ತೆಗೆದುಕೊಳ್ಳಿ. ಸೋಮವಾರದಂದು ನಾವು ಎಲ್ಲಾ ವಿಧೇಯಕಗಳನ್ನೂ ಪಾಸ್ ಮಾಡಿಕೊಡುತ್ತೇವೆ ಎಂದು ಎಲ್ಲರೂ ಹೇಳುತ್ತಿದ್ದಾರೆ. ನಾವು ಹಲವು ವಿಚಾರಗಳನ್ನು;

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ವಿರೋಧ ಪಕ್ಷದ ನಾಯಕರೇ, ನಿನ್ನೆ ದಿವಸವೇ ನಾವು ಕಳುಹಿಸಿಕೊಟ್ಟಿದ್ದೇವೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ವಿರೋಧ ಪಕ್ಷದ ನಾಯಕರೇ, ಆಗಲೇ ಕಳುಹಿಸಿದ್ದೇವೆ ನೋಡಿ, ಎರಡು ದಿನಗಳಾಗಿವೆ.

**ಶ್ರೀ ಕೃಷ್ಣ ಭೈರೇಗೌಡ:-** ನಿನ್ನೆಯೇ announcement ಆಗಿದೆ, ನನಗಿರುವ ಮಾಹಿತಿ ಪ್ರಕಾರ ಇದು circulation ಸಹ ಆಗಿದೆ. ನಿನ್ನೆ ದಿವಸ ನಾನೇ ಇಲ್ಲಿದ್ದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಮಗೆ ಇವತ್ತು ಸಿಕ್ಕಿದೆ. ಜೊತೆಗೆ ಹಲವು ಸದಸ್ಯರ ಆಗ್ರಹ ಇದೆ;

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, ಇಲ್ಲ ಸರ್, ನಾನು ತಪ್ಪು ಹೇಳಿದ್ದರೆ, they are welcome to……

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಇಲ್ಲ, . . .

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ, ಕೇಳಿಸಿಕೊಳ್ಳಿ. ಕೇಳಿಸಿಕೊಳ್ಳುವುದಕ್ಕೆ ಅಷ್ಟು ಅವಸರ ಮಾಡಿದರೆ ಹೇಗೆ? ನಿನ್ನೆ ದಿವಸ ಸದನದಲ್ಲಿ ನಾನೇ ಇದ್ದೆ. ಅವರು ನಿನ್ನೆಯೇ ಸದನದಲ್ಲಿ announce ಮಾಡಿದ್ದಾರೆ. ನನ್ನ ಪ್ರಕಾರ circulate ಆಗಿದೆ. ಆಗಿಲ್ಲವೆಂದರೆ ನೀವು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಅಜೆಂಡಾದಲ್ಲಿ ಕಳುಹಿಸಿಕೊಟ್ಟಿದ್ದೀರಿ. ಆದರೆ ಕೆಲವರ ಆಗ್ರಹ ಇದೆ, ನಾವಿನ್ನೂ ಅದನ್ನು ಓದಿಲ್ಲ. ಓದಿದ ಮೇಲೆ ಸೋಮವಾರಕ್ಕೆ ತೆಗೆದುಕೊಳ್ಳಿ, ನಮ್ಮದೇನೂ ಅಭ್ಯಂತರವಿಲ್ಲ, ಮಾಡಿಕೊಡುತ್ತೇವೆ.

**ಶ್ರೀ ನಸೀರ್ ಅಹಮದ್:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಅದರಲ್ಲಿ major issues ಏನೂ ಇಲ್ಲ.

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಎಲ್ಲರಲ್ಲೂ ಮನವಿ ಮಾಡುತ್ತೇನೆ, ನಿನ್ನೆಯೇ ನಾವಿಲ್ಲಿ announce ಮಾಡಿದ್ದೇವೆ ಹಾಗೂ circulation ಕೂಡ ಆಗಿದೆ. ದಯವಿಟ್ಟು ಏನಾದರೂ ವಿಷಯ ಇದ್ದರೆ ಚರ್ಚೆ ಮಾಡೋಣ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ . . . ಚರ್ಚೆಗೆ ಎಂದು ಕೊಟ್ಟಿದ್ದೆವು. ನಿಯಮ 330ರಡಿಯಲ್ಲಿ 3-4 ವಿಷಯಗಳಿವೆ. ನೀವು ಒಂದನ್ನೂ ಚರ್ಚೆಗೆ ತೆಗೆದುಕೊಂಡಿಲ್ಲ.

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, ನಾನು ವಿವರಣೆ ಕೊಡುತ್ತೇನೆ. ಚರ್ಚೆಗೆ ಮುಕ್ತ ಅವಕಾಶವಿದೆ. ಸಮಯ ಸಾಲದಿದ್ದರೆ, ಇನ್ನೂ ಸಮಯ ಬೇಕೆಂದರೆ ಆ ಸಂದರ್ಭದಲ್ಲಿ ಮುಕ್ತವಾಗಿ ಪರಿಗಣಿಸೋಣ. ನಾವು due diligence ಮಾಡಿದ್ದೇವೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಹಲವು ವಿಚಾರಗಳನ್ನು ನಿಯಮ 330ರಡಿಯಲ್ಲಿ ಚರ್ಚಿಸಲು ಅವಕಾಶ ಕೋರಿ ತಮಗೆ ಪತ್ರ ಕೊಟ್ಟಿದ್ದೆವು. Law and Order ಮತ್ತು ಒಳಮೀಸಲಾತಿ ವಿಷಯಗಳ ಬಗ್ಗೆ ತಮಗೆ ಸೂಚನಾ ಪತ್ರಗಳನ್ನು ಕೊಟ್ಟಿದ್ದೇವೆ. ಅದು ಇವತ್ತು ಚರ್ಚೆಗೆ ಬರುತ್ತದೆಂದು ಹೇಳಿದ್ದರು. ನೀವು ಅದ್ಯಾವುದನ್ನೂ ತೆಗೆದುಕೊಳ್ಳದೇ ಈಗ ವಿಧೇಯಕಗಳನ್ನು ಚರ್ಚೆಗೆ ತೆಗೆದುಕೊಳ್ಳುತ್ತಿದ್ದೀರಿ.

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, ತಮ್ಮ ಅನುಮತಿಯೊಂದಿಗೆ . . .

**ವೈಸ್ ಛೇರ್ಮನ್:-** ಈಗ ವಿಧೇಯಕಗಳ ಮಂಡನೆ ಆಗಿದೆ, ಆಮೇಲೆ ಅವುಗಳನ್ನು ಚರ್ಚೆಗೆ ತೆಗೆದುಕೊಳ್ಳುತ್ತೇವೆ.

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯಸಚೇತಕರು):-** ಮಾನ್ಯ ಸಭಾಪತಿಯವರೇ, ಖಂಡಿತವಾಗಿಯೂ ವಿಧೇಯಕಗಳನ್ನು ತೆಗೆದುಕೊಂಡು ಪಾಸ್ ಮಾಡಿಕೊಳ್ಳೋಣ. ನಮ್ಮ ಸರ್ಕಾರ ಇದ್ದಾಗಲೂ ನಾವು ಮಾಡುತ್ತೇವೆ, ನಿಮ್ಮ ಸರ್ಕಾರ ಇದ್ದಾಗಲೂ ನೀವು ಮಾಡಬೇಕು. ಬಿಲ್‌ಗಳನ್ನು ಪಾಸ್ ಮಾಡುವುದಕ್ಕೆ ನಮ್ಮ ಯಾವುದೇ ವಿರೋಧವಿಲ್ಲ. ಆದರೆ ನನ್ನದೊಂದು ಮನವಿ ಇದೆ. ಅದೇನೆಂದರೆ, ಪ್ರಶ್ನೋತ್ತರಗಳು ಮುಗಿದ ತಕ್ಷಣ ನಿಯಮ 330ರ ವಿಷಯಗಳು, ಶೂನ್ಯವೇಳೆ ಪ್ರಸ್ತಾವಗಳು ಬರಬೇಕಾಗಿತ್ತು. ಶೂನ್ಯವೇಳೆ ಬಂತು. ನಂತರ ನಿಯಮ 330 ತೆಗೆದುಕೊಳ್ಳಬೇಕಾಗಿತ್ತು.

**ವೈಸ್ ಛೇರ್ಮನ್:-** ಮಾನ್ಯ ರವಿಕುಮಾರ್‌ರವರೇ, ಇವತ್ತು ಸದನವನ್ನು ಅರ್ಧ ದಿವಸ ಮಾಡಿರುವುದರಿಂದ ಅದನ್ನು ನಾಳಿದ್ದು ತೆಗೆದುಕೊಳ್ಳಲಾಗುತ್ತದೆ. ಈಗ ವಿಧೇಯಕಗಳನ್ನು ಮಂಡನೆ ಮಾಡಲಾಗಿದೆ.

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, . . .

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಲೀಂ ಅವರೇ, ಒಂದೇ ನಿಮಿಷ ಸ್ವಲ್ಪ ಕೇಳಿಸಿಕೊಳ್ಳಿ. ಏತಕ್ಕೆ?

**ಶ್ರೀ ಐವನ್ ಡಿ’ಸೋಜಾ:-** ಮಾನ್ಯ ಸಭಾಪತಿಯವರೇ, ಬಿ.ಎ.ಸಿ.ಯಲ್ಲಿ ನಾವು ತೀರ್ಮಾನ ಮಾಡಿದ್ದೇವೆ.

**ಶ್ರೀ ಎನ್. ರವಿಕುಮಾರ್:-** ನಾವು ಬೇಡ ಎಂದು ಹೇಳಿದೆವಾ? ವಿಷಯ ಏನೆಂದರೆ, ಒಳಮೀಸಲಾತಿ ಬಗ್ಗೆ ಇಷ್ಟೊಂದು ಚರ್ಚೆ ನಡೆಯುತ್ತಿದೆ.

**ವೈಸ್ ಛೇರ್ಮನ್:-** ಇವತ್ತು ಅರ್ಧ ದಿನ ಕಲಾಪ ಇರುವುದರಿಂದ ಅದನ್ನು ನಾಳಿದ್ದು ತೆಗೆದುಕೊಳ್ಳೋಣ. ಮತ್ತೆ ಅದನ್ನು ಚರ್ಚೆ ಮಾಡುವುದು ಬೇಡ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಆಯಿತು ತೆಗೆದುಕೊಳ್ಳಿ. ನನ್ನ ಮನವಿಯೇನೆಂದರೆ, ನಾಳೆ 15ನೇ ತಾರೀಖು. ರಜೆ ಇರುತ್ತದೆ. 16ನೇ ಮತ್ತು 17ನೇ ತಾರೀಖು ಸಹ ರಜೆ ಇರುತ್ತದೆ. ಮತ್ತೆ ನಾವು ಸದನಕ್ಕೆ ಬರುವುದು 18ನೇ ತಾರೀಖಿಗೆ. 16ನೇ ತಾರೀಖು ಕ್ಯಾಬಿನೆಟ್ ಮೀಟಿಂಗ್ ಇದೆ. ಒಳಮೀಸಲಾತಿ ವಿಷಯಕ್ಕೆ ಸಂಬಂಧಪಟ್ಟಂತೆ ಸರ್ಕಾರ ಏನು stand ತೆಗೆದುಕೊಳ್ಳುತ್ತದೆ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಇವತ್ತು ಚರ್ಚೆಗೆ ಬರಬೇಕೆಂದು ನಾವೆಲ್ಲಾ ಸದಸ್ಯರೂ ಸಹಿ ಮಾಡಿಕೊಟ್ಟಿದ್ದೇವೆ. All of a sudden ಈ ವಿಷಯವನ್ನು ತೆಗೆದುಕೊಂಡರೆ ನಾವೆಲ್ಲಿ ಇದನ್ನು ಚರ್ಚೆ ಮಾಡೋಣ? ರಾಜ್ಯದಲ್ಲಿ ಒಳಮೀಸಲಾತಿ ಬಗ್ಗೆ ಎಡಗೈ, ಬಲಗೈ, ಲಂಬಾಣಿ ಸಮಾಜ, ಬೋವಿ ಸಮಾಜ ಇವರೆಲ್ಲಾ ಬೀದಿಗಿಳಿದು ಹೋರಾಟ ಮಾಡುತ್ತಿದ್ದಾರೆ. ಈ ವಿಷಯದ ಬಗ್ಗೆ ಚರ್ಚೆ ಮಾಡಬೇಕೆಂದು . . .

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ B.A.C. (Business Advisory Committee) meeting ನಲ್ಲಿ ಪ್ರಶ್ನೋತ್ತರಗಳಾದ ಮೇಲೆ ಬಿಲ್ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೇವೆ. ಅವರೆಲ್ಲರೂ ಸಹ ಕಮಿಟಿಯಲ್ಲಿದ್ದರು.

**ವೈಸ್ ಛೇರ್ಮನ್:-** ಬಿ.ಎ.ಸಿ. ಯಲ್ಲಿ ತೀರ್ಮಾನವಾಗಿದೆ ಮತ್ತೆ ಇದರ ಬಗ್ಗೆ ಚರ್ಚೆ ಬೇಡ.

**ಶ್ರೀ ಕೆ.ಎಸ್. ನವೀನ್:-** ಮಾನ್ಯ ಸಭಾಪತಿಯವರೇ, . . .

**ವೈಸ್ ಛೇರ್ಮನ್:-** ಮಾನ್ಯ ನವೀನ್ ಅವರೇ, ಕುಳಿತುಕೊಳ್ಳಿ. ಬಿ.ಎ.ಸಿ. ಮೀಟಿಂಗ್‌ನಲ್ಲಿ ತೀರ್ಮಾನವಾಗಿದೆ. ಮತ್ತೆ ಚರ್ಚೆಗೆ ಹೋಗುವುದು ಬೇಡ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಇದು ಬಿ.ಎ.ಸಿ.ಯಲ್ಲಿ ತೀರ್ಮಾನವಾಗಿದ್ದು, 15ನೇ ತಾರೀಖು ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ಧ್ವಜಾರೋಹಣ ಕಾರ್ಯಕ್ರಮ ಇರುವುದರಿಂದ ಸದನವನ್ನು ಅರ್ಧ ದಿವಸಕ್ಕೆ ನಿಗದಿಪಡಿಸಲು ತೀರ್ಮಾನವಾಗಿದೆ.

**ಶ್ರೀ ಕೆ.ಎಸ್. ನವೀನ್:-** ಮಾನ್ಯ ಸಭಾಪತಿಯವರೇ, ನನ್ನ ಅಭಿಪ್ರಾಯವನ್ನು ಕೇಳಿ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಸ್ವಲ್ಪ ನಮ್ಮ ಅಭಿಪ್ರಾಯವನ್ನು ಕೇಳಿ.

**ಶ್ರೀ ಎನ್.ಎಸ್. ಬೋಸರಾಜು:-** ಈಗ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ.

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾನಾಯಕರೇ, ನಾವು ಚರ್ಚೆ ಮಾಡುತ್ತಿಲ್ಲ. ನಾನು ಹೇಳುತ್ತಿರುವುದು ಇಷ್ಟೇ, ಈಗಾಗಲೇ ಸರ್ಕಾರ ಹೇಳಿರುವಂತಹ ರೀತಿಯಲ್ಲಿ ಇವೆಲ್ಲಾ ಚಿಕ್ಕ ಚಿಕ್ಕ ಬಿಲ್‌ಗಳಾಗಿದ್ದು, ಹೆಚ್ಚು ಪ್ರಸ್ತಾವಗಳಲ್ಲ. ಬಹಳ ಸಿಂಪಲ್ ಆಗಿರುವುದರಿಂದ ಅವುಗಳನ್ನು ಪಾಸ್ ಮಾಡಿಕೊಡಬೇಕೆಂದು ಕೇಳುತ್ತಿದ್ದಾರೆ. ನಮಗೆ ಇದರ ಬಗ್ಗೆ ಯಾವ ಆಕ್ಷೇಪಣೆಯೂ ಇಲ್ಲ. ನಾವು ಕೇಳುತ್ತಿರುವುದೇನೆಂದರೆ, ನಾವು ಎರಡು ದಿವಸಗಳಿಂದ ಪ್ರಮುಖವಾದ ವಿಷಯಕ್ಕೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ನಿನ್ನೆ ದಿವಸ ಎರಡು ವಿಷಯಗಳನ್ನು ತಮ್ಮ ಪೀಠಕ್ಕೆ ಸಲ್ಲಿಸಿದ್ದೇವೆ. ನಾಳೆ ದಿವಸ ಅವಕಾಶ ಕೊಟ್ಟೇ ಕೊಡುತ್ತೇವೆಂದು ನಿನ್ನೆ ದಿವಸ ನಮಗೆ ಹೇಳಿದ್ದರು. ಇವತ್ತು ಅದಕ್ಕೆ ಸಂಬಂಧಪಟ್ಟಂತಹ ಎಲ್ಲಾ ದಾಖಲೆಗಳನ್ನು ತೆಗೆದುಕೊಂಡು ಬಂದು ಚರ್ಚೆ ಮಾಡಿ ಸರ್ಕಾರದ ಗಮನಕ್ಕೆ ತರಬೇಕೆಂದು ನಾವು ತಯಾರಾಗಿ ಬಂದಿದ್ದರೆ, ತಾವು ಐದು ಬಿಲ್‌ಗಳನ್ನು ತಂದು ಪಾಸ್ ಮಾಡಿಕೊಂಡು ಮತ್ತೆ ಸೋಮವಾರದ ತನಕ ಸದನವನ್ನು ಮುಂದೂಡಿದರೆ, ಇನ್ನು ಸದನದ ಕಲಾಪಗಳು ನಾಲ್ಕೇ ದಿವಸ ಉಳಿಯುತ್ತದೆ. ಅಂದರೆ ನೀವು ಬಿಲ್‌ಗಳನ್ನು ಪಾಸ್ ಮಾಡಿಸಿಕೊಳ್ಳುವುದಕ್ಕೋಸ್ಕರ ಸದನವನ್ನು ನಡೆಸುತ್ತೀರಾ?

**(ಗೊಂದಲ)**

**ಶ್ರೀ ಎನ್. ರವಿಕುಮಾರ್:-** ಬಿಲ್‌ಗಳಿಗೋಸ್ಕರ ಅಧಿವೇಶನ ನಡೆಸಬೇಕೇ? ಬೇರೆ ವಿಷಯ ಚರ್ಚೆ ಮಾಡಬೇಕೇ ಬೇಡವೇ?

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ರವಿಯವರೇ, ಇದು B.A.C. meeting ನಲ್ಲಿ ಚರ್ಚೆಯಾಗಿರುವಂತಹದ್ದು. ದಯವಿಟ್ಟು ಮತ್ತೆ ಮತ್ತೆ ಅದನ್ನೇ ಚರ್ಚೆ ಮಾಡುವುದು ಬೇಡ.

**(ಗೊಂದಲ)**

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, ನನಗೆ ಒಂದು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ.

**ಶ್ರೀ ಎನ್. ರವಿಕುಮಾರ್:-** ಬಿಲ್ ಪಾಸ್ ಮಾಡಿಸಿಕೊಳ್ಳುವುದಕ್ಕೆ ಸರ್ಕಾರ . . .

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ರವಿಯವರೇ, ಮಾನ್ಯ ಕಂದಾಯ ಸಚಿವರು ಮಾತನಾಡುತ್ತಾರೆ.

**(ಗೊಂದಲ)**

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಅವಕಾಶ ಕೇಳಿದರೆ ಬಿಡುವುದಿಲ್ಲ ಎಂದರೆ ಹೇಗೆ? ನಾನು ಏನನ್ನು ಹೇಳುತ್ತೇನೆಂದು ಮಾತನಾಡುವುದಕ್ಕೂ ಬಿಡುವುದಿಲ್ಲ. ನಾನು ತಮಗೆ ಹಾಗೂ ತಮ್ಮ ಮುಖಾಂತರ ಸದನಕ್ಕೆ ನಿವೇದನೆ ಮಾಡಿಕೊಳ್ಳುವುದೇನೆಂದರೆ, ಇವತ್ತು ನಾಲ್ಕನೇ ದಿನದ ಅಧಿವೇಶನ ನಡೆಯುತ್ತಿದೆ. ನಾಲ್ಕು ದಿನದಿಂದಲೂ ಪೀಠದಿಂದ ಎಲ್ಲರಿಗೂ ಮುಕ್ತವಾಗಿ ಅವಕಾಶ ಕೊಟ್ಟಿದ್ದೀರಿ. ಈ ನಾಲ್ಕು ದಿನಗಳಲ್ಲಿ ವಿಧೇಯಕಗಳ ಪರ್ಯಾಲೋಚನೆ ಬಂದಿರುವುದು ಇದೇ ಮೊದಲು. ಇಲ್ಲಿಯವರೆಗೂ ಸರ್ಕಾರಿ ಕಾರ್ಯಕಲಾಪಗಳು ನಡೆದೇ ಇಲ್ಲ. ಇದೇ ಮೊದಲ ಸರ್ಕಾರಿ ಕಾರ್ಯಕಲಾಪವಾಗಿದೆ. ತಾವು ಇಲ್ಲಿಯವರೆಗೂ ಅವಕಾಶ ಕೊಟ್ಟಿದ್ದೀರಿ. ಈಗ ಅವರು ಪ್ರಸ್ತಾಪ ಮಾಡಿರುವ ವಿಷಯದ ಬಗ್ಗೆ ಚರ್ಚೆಯಾಗಲೇಬೇಕು. ನಾನು ಸಹ ನಂಬಿದ್ದೇನೆ ಅದು ಚರ್ಚೆಯಾಗಬೇಕು ಹಾಗೂ ಅದು ಅವರ ಹಕ್ಕಾಗಿದೆ. ಅವೆರಡಕ್ಕೂ ನಾನು ಗೌರವ ಕೊಡುತ್ತೇನೆ. ಆದರೆ ಇಲ್ಲಿಯವರೆಗೂ ಯಾವ ಅಜೆಂಡಾ ತೆಗೆದುಕೊಳ್ಳಬೇಕೆಂದು ಅವರೇ ತೀರ್ಮಾನ ಮಾಡಿದ್ದಾರೆ. ಹಾಗಾಗಿ ಈ ರೀತಿ ಇರುವುದರಿಂದ, ನಾವು ಸರ್ಕಾರಿ ಕಾರ್ಯಕಲಾಪವನ್ನು ಮೊದಲನೆಯದಾಗಿ ಇವತ್ತು ಈ ಅಧಿವೇಶನದಲ್ಲಿ ತೆಗೆದುಕೊಂಡಿದ್ದೇವೆ. ಸರ್ಕಾರದ ಕಾರ್ಯಕಲಾಪ ಭಾಗಶಃ, ನಮ್ಮದು ಇನ್ನೂ ಸುಮಾರು ಇದೆ. ಇದಕ್ಕೊಂದು ಸ್ವಲ್ಪ ಅವಕಾಶ ಮಾಡಿಕೊಡಿ. ಹಾಗೆಯೇ ಅವರಿಗೂ ಅವಕಾಶ ಮಾಡಿಕೊಡಿ ಎಂದು ನಾನು ಅವರಲ್ಲಿ ಮನವಿ ಮಾಡುತ್ತಾ; ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವಂತಹ ಬಸವ ಕಲ್ಯಾಣ ಅಭಿವೃದ್ಧಿ ಮಂಡಳ (ತಿದ್ದುಪಡಿ) ವಿಧೇಯಕ, 2025 . . .

**(ಗೊಂದಲ)**

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಇದಕ್ಕೊಂದು ಸಮಯ ನಿಗದಿ ಮಾಡಿ. ಬಿಲ್‌ಗೆ ನಮ್ಮ ವಿರೋಧವಿಲ್ಲ.

**ವೈಸ್ ಛೇರ್ಮನ್:-** ಇದು ಮುಗಿಯಲಿ, ಮಾಡುತ್ತೇನೆ.

**(ಗೊಂದಲ)**

(ಮುಂದು)

(714) 14.08.2025 1.10 ಹೆಚ್‌ವಿ.ಕೆಎಸ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**(ಗೊಂದಲ)**

**ಶ್ರೀ ಎನ್.ರವಿಕುಮಾರ್(ಸರ್ಕಾರದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೇ, ನಾವು ಒಳಮೀಸಲಾತಿಗೆ ಸಂಬಂಧಪಟ್ಟಂತೆ ಚರ್ಚೆ ಮಾಡುವುದಕ್ಕೆ ನೋಟೀಸ್ ನೀಡಿದ್ದೆವು, ತಾವು ಈಗ ವಿಧೇಯಕಗಳ ಮೇಲೆ ಚರ್ಚೆಯನ್ನು ತೆಗೆದುಕೊಂಡರೇ, ಆ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಕಾಲಾವಧಿಯನ್ನು ನಿಗದಿ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಕೆಲವು ವಿಧೇಯಕಗಳು simple ಹಾಗೂ ಸಣ್ಣ ವಿಧೇಯಕಗಳಾಗಿವೆ ಅವುಗಳನ್ನು pass ಮಾಡೋಣ ಅದಕ್ಕೆ ತೊಂದರೆ ಏನಿಲ್ಲ.

**ಶ್ರೀ ಸಿ.ಟಿ.ರವಿ(ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಯಾವುದೇ ವಿಧೇಯಕಗಳಾಗಿದ್ದರೂ ಅವು ಬಹಳ ಮಹತ್ವದಾಗಿರುತ್ತವೆ. ಬೇರೆ ವಿಚಾರಗಳ ಮೇಲೆ ಚರ್ಚೆ ಮಾಡುವುದಕ್ಕಿಂತಲೂ ವಿಧೇಯಕಗಳ ಮೇಲೆ ಚರ್ಚೆ ಮಾಡುವುದು ಅತಿ ಹೆಚ್ಚಿನ ಮಹತ್ವಪೂರ್ಣ ವಿಚಾರವಾಗಿದೆ. ಮಾನ್ಯ ಕಂದಾಯ ಸಚಿವರು ಒಟ್ಟು 9 ವಿಧೇಯಕಗಳಿಗೆ ಅನುಮೋದನೆಯನ್ನು ಪಡೆದುಕೊಳ್ಳಲು ಸದನದ ಮುಂದೆ ವಿಧೇಯಕಗಳನ್ನು ಮಂಡಿಸುತ್ತಿದ್ದಾರೆ. ಅವುಗಳ ಪೈಕಿ 2-3 ವಿಧೇಯಕಗಳನ್ನು ಮಾತ್ರ ಅವರು ಮಂಡನೆ ಮಾಡಲಿ, ಅವುಗಳ ಮೇಲೆ ಚರ್ಚೆ ಮಾಡೋಣ. ಅದೇ ರೀತಿ ಮಾನ್ಯ ಎನ್.ರವಿಕುಮಾರ್‌ರವರು ಪ್ರಸ್ತಾಪ ಮಾಡಿರುವ ವಿಚಾರವನ್ನು ಸಹ ಚರ್ಚೆಗೆ ತೆಗೆದುಕೊಳ್ಳಬೇಕಾಗುತ್ತದೆ. ಈ ಎರಡೂ ವಿಚಾರಗಳ ಮೇಲಿನ ಚರ್ಚೆಗೆ ತಾವು ಸಮಯವನ್ನು ನಿಗದಿ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಈಗ 2-3 ವಿಧೇಯಕಗಳನ್ನು ಚರ್ಚೆಗೆ ತೆಗೆದುಕೊಂಡು ಉಳಿದಿರುವ ವಿಧೇಯಕಗಳನ್ನು ಸೋಮವಾರದಂದು ಚರ್ಚೆಗೆ ತೆಗೆದುಕೊಂಡರೆ, ಉತ್ತಮ ಎನ್ನುವುದು ನನ್ನ ಅನಿಸಿಕೆಯಾಗಿದೆ.

ಈಗ ನಾನು ಒಂದು ವಿಧೇಯಕವನ್ನು ಓದುತ್ತಿದ್ದೆ; ಎಲ್ಲ ವಿಧೇಯಕಗಳನ್ನು ಓದುವುದಕ್ಕೆ ಸಾಧ್ಯವಾಗಲಿಲ್ಲ. ಮುಖ್ಯವಾಗಿರುವ 2-3 ವಿಧೇಯಕಗಳನ್ನು ತಾವು ಚರ್ಚೆಗೆ ತೆಗೆದುಕೊಳ್ಳಿ, ನಂತರ ಮತ್ತೊಂದು ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳೋಣ ಆದ್ದರಿಂದ ಎರಡೂ ವಿಚಾರಗಳಿಗೂ ಸಮಯ ನಿಗದಿ ಮಾಡಬೇಕೆನ್ನುವುದು ನನ್ನ ಮನವಿಯಾಗಿದೆ.

**ಶ್ರೀ ಕೃಷ್ಣ ಭೈರೇಗೌಡ(ಕಂದಾಯ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಗಮನಕ್ಕೆ ಒಂದು ವಿಚಾರವನ್ನು ತರಲು ಬಯಸುತ್ತಿದ್ದೇನೆ. ಒಟ್ಟು 9 ವಿಧೇಯಕಗಳಿವೆ, ಅವುಗಳ ಪೈಕಿ ಕೊನೆಯ 02 ವಿಧೇಯಕಗಳ ಮೇಲೆ ಚರ್ಚೆ ಮಾಡಬೇಕಾಗುತ್ತದೆ. ಉಳಿದ 07 ವಿಧೇಯಕಗಳ ಬಗ್ಗೆ ನಾನು ವಿವರಣೆಯನ್ನು ನೀಡುತ್ತೇನೆ. ನಾನು ವಿವರಣೆ ಕೊಟ್ಟ ನಂತರ ಮಾನ್ಯ ಸದಸ್ಯರುಗಳು ಚರ್ಚೆ ಮಾಡುವುದಕ್ಕೆ ಕಾಲಾವಕಾಶ ಬೇಕೆಂದು ಕೇಳಿದರೆ, ನೂರಕ್ಕೆ ನೂರರಷ್ಟು ನಾನು ಚರ್ಚೆಗೆ ಸಿದ್ಧನಿದ್ದೇನೆ. ಚರ್ಚೆಯಾದರೆ, ನನಗೂ ಬಹಳ ಸಂತೋಷ. ಆದ್ದರಿಂದ, we have a complete open mind.

**ವೈಸ್ ಛೇರ್ಮನ್:-** ಮಾನ್ಯ ಕಂದಾಯ ಸಚಿವರೇ, ಈಗ ವಿಧೇಯಕವನ್ನು ಮಂಡಿಸಿ.

**ಶ್ರೀ ಎನ್.ರವಿಕುಮಾರ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು open mind ಆಗಿದ್ದರೆ, ವಿಧೇಯಕಗಳ ಮೇಲೆ ಚರ್ಚೆ ಮಾಡುವುದಕ್ಕೆ ನಮಗೆ ಕಾಲಾವಕಾಶವನ್ನು ನೀಡಬೇಕಾಗುತ್ತದೆ. ವಿಧೇಯಕಗಳನ್ನು

ಚರ್ಚೆಗೆ ತೆಗೆದುಕೊಳ್ಳುವುದರ ಬಗ್ಗೆ ನನ್ನ ವಿರೋಧವೇನೂ ಇಲ್ಲ. ಅದನ್ನು ಸರಿಯಾದ ರೀತಿಯಲ್ಲಿ ಮಾಡಬೇಕೆನ್ನುವುದು ನನ್ನ ಕಳಕಳಿಯಾಗಿದೆ.

**ಶ್ರೀ ಕೃಷ್ಣಭೈರೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಸರಿಯಾದ ರೀತಿಯಲ್ಲಿಯೇ ವಿಧೇಯಕಗಳ ಮೇಲೆ ಚರ್ಚೆ ಮಾಡೋಣ.

**೦6. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಬಸವ ಕಲ್ಯಾಣ ಅಭಿವೃದ್ಧಿ ಮಂಡಳ (ತಿದ್ದುಪಡಿ) ವಿಧೇಯಕ, 2025**

**ಪರ್ಯಾಲೋಚನ ಪ್ರಸ್ತಾವ**

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ಬಸವ ಕಲ್ಯಾಣ ಅಭಿವೃದ್ಧಿ ಮಂಡಳ_(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಈ ವಿಧೇಯಕ ಮತ್ತು ಇದರ ನಂತರ ಬರುವಂತಹ 7 ತಿದ್ದುಪಡಿ ವಿಧೇಯಕಗಳಲ್ಲಿ ಒಂದೇ ಅಂಶವಿದೆ. ಇವೆಲ್ಲವೂ ಪ್ರಾಧಿಕಾರಗಳಾಗಿವೆ. ಬಸವ ಕಲ್ಯಾಣ ಅಭಿವೃದ್ಧಿ ಮಂಡಳ, ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ, ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ, ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರ ಹೀಗೆ ಹಲವಾರು ಪ್ರಾಧಿಕಾರಗಳಿವೆ. ಇವೆಲ್ಲವುಗಳಲ್ಲಿ ಹಾಲಿ ಮಾನ್ಯ ಮುಖ್ಯಮಂತ್ರಿಗಳು ಮಾತ್ರ ಇದರ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುವುದಕ್ಕೆ ಅವಕಾಶವಿದೆ. ನಮ್ಮೆಲ್ಲರಿಗೂ ತಿಳಿದಿರುವಂತೆ ಮಾನ್ಯ ಮುಖ್ಯಮಂತ್ರಿಗಳಿಗೆ ಕೆಲಸದ ಒತ್ತಡ ಹೆಚ್ಚಾಗಿರುತ್ತದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಈ ಪ್ರಾಧಿಕಾರಗಳ ಸಭೆಯನ್ನು ನಡೆಸುವುದಕ್ಕೆ ಸಮಯ ಕೊಡುವುದು ಕಷ್ಟಸಾಧ್ಯವಾಗಿದೆ. ಅವರಿಗೆ ಮನಸ್ಸಿನಲ್ಲಿ ಇಚ್ಛೆ ಇರಬಹುದು ಆದರೆ, ಕೆಲಸದ ಒತ್ತಡದಿಂದ ಅವರಿಗೆ ಸಾಧ್ಯವಾಗುವುದಿಲ್ಲ. ಇದಕ್ಕಾಗಿ ಒಂದು ಸಣ್ಣ ತಿದ್ದುಪಡಿಯನ್ನು ತರಲಾಗಿದೆ. ಮುಖ್ಯಮಂತ್ರಿಗಳಿಗೆ ಬದಲಾಗಿ "ಮುಖ್ಯಮಂತ್ರಿಗಳು ಅಥವಾ ಕಂದಾಯ ಮಂತ್ರಿಗಳು ಅಥವಾ ಮುಖ್ಯಮಂತ್ರಿಯವರು ಆಯ್ಕೆ ಮಾಡಿದ ಯಾರೇ ಇತರ ಮಂತ್ರಿ-ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ" ಎನ್ನುವ ಸಣ್ಣ ತಿದ್ದುಪಡಿಯನ್ನು ತರಲಾಗಿದೆ. ಯಾರಿಗೆ ಸಮಯವಿದೆ, ಯಾರಿಗೆ ಆಸಕ್ತಿ ಇದೆ ಅಂತಹವರು ಅಧ್ಯಕ್ಷರಾಗಿ ಕೆಲಸ ಮಾಡಿದರೆ, ಈ ಪ್ರಾಧಿಕಾರಗಳು ಸ್ವಲ್ಪ ಮಟ್ಟಿಗೆ ಸೂಕ್ತ ರೀತಿಯಲ್ಲಿ ಕಾರ್ಯನಿರ್ವಹಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದು ಉದ್ದೇಶವಾಗಿದೆ. ಮೊದಲು ಒಂದೆರಡು ಪ್ರಾಧಿಕಾರಿಗಳು

ಇರುತ್ತಿತ್ತು. ಈಗ ಅವುಗಳ ಸಂಖ್ಯೆ ಎಷ್ಟು ಹೆಚ್ಚಾಗಿವೆಯೆಂದು ಹೇಳಿದರೆ, ಕೆಲವರ ಮನಸ್ಸಿಗೆ ಬೇಜಾರಾಗುತ್ತದೆ. ಯಾರ ಮನಸ್ಸಿಗೂ ಬೇಜಾರು ಮಾಡುವ ಉದ್ದೇಶ ನನಗಿಲ್ಲ. ಈಗ dozen ನಲ್ಲಿ ಲೆಕ್ಕ ಹಾಕುವಷ್ಟು ಪ್ರಾಧಿಕಾರಗಳು ರಚನೆಯಾಗಿವೆ. ಆದ್ದರಿಂದ ಸೂಕ್ತವಾಗಿರುವವರು ಕೆಲಸ ಮಾಡಲಿ ಎನ್ನುವ ದೃಷ್ಟಿಯಿಂದ ನನ್ನ ಇಲಾಖೆಯ ವ್ಯಾಪ್ತಿಗೆ ಬರುವಂತಹ ಸುಮಾರು 7 ಪ್ರಾಧಿಕಾರಗಳಿಗೆ ಸಂಬಂಧಪಟ್ಟಂತೆ ಈ ತಿದ್ದುಪಡಿಯನ್ನು ತರಲಾಗುತ್ತಿದೆ. ಯಾವ-ಯಾವ ಇಲಾಖೆಗಳಲ್ಲಿ ಈ ರೀತಿ ಇದೆ ಅವೆಲ್ಲದಕ್ಕೂ ಈ ತಿದ್ದುಪಡಿಯನ್ನು ತನ್ನಿ ಎಂದು ಮಾನ್ಯ ಮುಖ್ಯಮಂತ್ರಿಗಳು ಎಲ್ಲ ಇಲಾಖೆಯವರಿಗೂ ಸೂಚಿಸಿದ್ದಾರೆ. ಆ ಹಿನ್ನೆಲೆಯಲ್ಲಿ ನನ್ನ ಇಲಾಖೆಯ ವ್ಯಾಪ್ತಿಗೆ ಬರುವಂತಹ 07 ಪ್ರಾಧಿಕಾರಗಳಿಗೆ ಸಂಬಂಧಪಟ್ಟಂತೆ ಈ ತಿದ್ದುಪಡಿಯನ್ನು ತರಲಾಗಿದೆ. ಅದರಲ್ಲಿ ಈ ಬಸವ ಕಲ್ಯಾಣ ಅಭಿವೃದ್ಧಿ ಮಂಡಳ(ತಿದ್ದುಪಡಿ) ವಿಧೇಯಕವೂ ಒಂದಾಗಿದೆ. ಪ್ರಾಧಿಕಾರದ ಕಾರ್ಯಗಳಲ್ಲಿ ಚುರುಕುತನ ಬರಲಿ ಎನ್ನುವ ದೃಷ್ಟಿಯಿಂದ ಈ ತಿದ್ದುಪಡಿಯನ್ನು ತರಲಾಗಿದೆ, ಇದಕ್ಕೆ ಸದನವು ತನ್ನ ಸಹಮತಿಯನ್ನು ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ವೈಸ್ ಛೇರ್ಮನ್:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿ_(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2**

**ವೈಸ್ ಛೇರ್ಮನ್:-** ಪ್ರಸ್ತಾವ ಏನೆಂದರೆ, "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ವೈಸ್ ಛೇರ್ಮನ್:-** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿ_(ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

**ವೈಸ್ ಛೇರ್ಮನ್:-** ಪ್ರಸ್ತಾವ ಏನೆಂದರೆ,

**"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಆ) ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025**

**ಪರ್ಯಾಲೋಚನ ಪ್ರಸ್ತಾವ**

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಈ ವಿಧೇಯಕದಲ್ಲಿಯೂಯೇ ಸಹ ಮಾನ್ಯ ಮುಖ್ಯಮಂತ್ರಿಗಳಿಗೆ ಬದಲಾಗಿ "ಮುಖ್ಯಮಂತ್ರಿಗಳು ಅಥವಾ ಕಂದಾಯ ಮಂತ್ರಿಗಳು ಅಥವಾ ಮುಖ್ಯಮಂತ್ರಿಯವರು ಆಯ್ಕೆ ಮಾಡಿದ ಯಾರೇ ಇತರ ಮಂತ್ರಿ-ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ" ಎನ್ನುವ ಸಣ್ಣ ತಿದ್ದುಪಡಿಯನ್ನು ತರಲಾಗಿದೆ. ಇದರಿಂದ ಪ್ರಾಧಿಕಾರಗಳ ಆಡಳಿತ ಸುಧಾರಣೆ ಆಗುತ್ತದೆಂದು ನಾವು ಭಾವಿಸಿದ್ದೇವೆ. ಸದರಿ ವಿಧೇಯಕಕ್ಕೆ ಸದನವು ಅನುಮೋದನೆಯನ್ನು ನೀಡಬೇಕೆಂದು ಕೋರುತ್ತೇನೆ.

**ವೈಸ್ ಛೇರ್ಮನ್:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2**

**ವೈಸ್ ಛೇರ್ಮನ್:-** ಪ್ರಸ್ತಾವ ಏನೆಂದರೆ, "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ವೈಸ್ ಛೇರ್ಮನ್:-** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಕೃಷ್ಣ ಬೈರೇಗೌಡ (ಕಂದಾಯ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ__(ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

**ವೈಸ್ ಛೇರ್ಮನ್:-** ಪ್ರಸ್ತಾವ ಏನೆಂದರೆ,

**"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

(ಮುಂದುವರಿದಿದೆ)

(715) 14.8.2025 1.20 ಪಿಕೆ:ಎಂಡಿ

**ಇ) ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಗಳೆ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಗಳೆ, ಸದರಿ ಪ್ರಾಧಿಕಾರದ ಅಧ್ಯಕ್ಷರು ಕೇವಲ ಮುಖ್ಯಮಂತ್ರಿಗಳಾಗಿರುತ್ತಿದ್ದರು. ಆದರೆ ಈಗ, ಮಾನ್ಯ ಮುಖ್ಯಮಂತ್ರಿಗಳು ಅಥವಾ ಕಂದಾಯ ಸಚಿವರು ಅಥವಾ ಮುಖ್ಯಮಂತ್ರಿಯವರು ಆಯ್ಕೆ ಮಾಡಿದ ಯಾರೇ ಇತರ ಮಂತ್ರಿಗಳು ಅಧ್ಯಕ್ಷರಾಗಿ ಕೆಲಸ ಮಾಡುವುದಕ್ಕೆ ತಿದ್ದುಪಡಿಯನ್ನು ತರಲಾಗಿದೆ. ಹಾಗಾಗಿ ಸದನ ಇದಕ್ಕೆ ಸಹಮತಿ ನೀಡಬೇಕೆಂದು ಕೋರುತ್ತೇನೆ.

**ವೈಸ್ ಛೇರ್ಮನ್:-** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2**

**ವೈಸ್ ಛೇರ್ಮನ್:-** "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ವೈಸ್ ಛೇರ್ಮನ್:-** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಕೃಷ್ಣ ಭೈರೇಗೌಡ(ಕಂದಾಯ ಸಚಿವರು):-** ಮಾನ್ಯ ಸಭಾಪತಿಗಳೆ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ವೈಸ್ ಛೇರ್ಮನ್:-** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

## ಈ) ಕಿತ್ತೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಗಳೆ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಕಿತ್ತೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಗಳೆ, ಸದರಿ ಪ್ರಾಧಿಕಾರದ ಅಧ್ಯಕ್ಷರು ಕೇವಲ ಮುಖ್ಯಮಂತ್ರಿಗಳಾಗಿರುತ್ತಿದ್ದರು. ಆದರೆ ಈಗ, ಮಾನ್ಯ ಮುಖ್ಯಮಂತ್ರಿಗಳು ಅಥವಾ ಕಂದಾಯ ಸಚಿವರು ಅಥವಾ ಮುಖ್ಯಮಂತ್ರಿಯವರು ಆಯ್ಕೆ ಮಾಡಿದ ಯಾರೇ ಇತರ ಮಂತ್ರಿಗಳು ಅಧ್ಯಕ್ಷರಾಗಿ ಕೆಲಸ ಮಾಡುವುದಕ್ಕೆ ತಿದ್ದುಪಡಿಯನ್ನು ತರಲಾಗಿದೆ. ಹಾಗಾಗಿ ಸದನ ಇದಕ್ಕೆ ಸಹಮತಿ ನೀಡಬೇಕೆಂದು ಕೋರುತ್ತೇನೆ.

**ವೈಸ್ ಛೇರ್ಮನ್:-** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಕಿತ್ತೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2**

**ವೈಸ್ ಛೇರ್ಮನ್:-** "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2ಅನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ವೈಸ್ ಛೇರ್ಮನ್:-** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಕೃಷ್ಣ ಭೈರೇಗೌಡ(ಕಂದಾಯ ಸಚಿವರು):-** ಮಾನ್ಯ ಸಭಾಪತಿಗಳೆ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಕಿತ್ತೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ವೈಸ್ ಛೇರ್ಮನ್:-** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಕಿತ್ತೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಉ) ಕೂಡಲ ಸಂಗಮ ಅಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕ, 2025**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ (ಹಿಂದುಳಿದ ವರ್ಗ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು)(ಕಂದಾಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೆ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಕೂಡಲ ಸಂಗಮ ಅಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ (ಹಿಂದುಳಿದ ವರ್ಗ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು)(ಕಂದಾಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೆ, ಸದರಿ ಪ್ರಾಧಿಕಾರದ ಅಧ್ಯಕ್ಷರು ಕೇವಲ ಮುಖ್ಯಮಂತ್ರಿಗಳಾಗಿರುತ್ತಿದ್ದರು. ಆದರೆ ಈಗ, ಮಾನ್ಯ ಮುಖ್ಯಮಂತ್ರಿಗಳು ಅಥವಾ ಕಂದಾಯ ಸಚಿವರು ಅಥವಾ ಮುಖ್ಯಮಂತ್ರಿಯವರು ಆಯ್ಕೆ ಮಾಡಿದ ಯಾರೇ ಇತರ ಮಂತ್ರಿಗಳು ಅಧ್ಯಕ್ಷರಾಗಿ ಕೆಲಸ ಮಾಡುವುದಕ್ಕೆ ತಿದ್ದುಪಡಿಯನ್ನು ತರಲಾಗಿದೆ. ಹಾಗಾಗಿ ಸದನ ಇದಕ್ಕೆ ಸಹಮತಿ ನೀಡಬೇಕೆಂದು ಕೋರುತ್ತೇನೆ.

**ವೈಸ್ ಛೇರ್ಮನ್:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಕೂಡಲ ಸಂಗಮ ಅಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2**

**ವೈಸ್ ಛೇರ್ಮನ್:-** "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ವೈಸ್ ಛೇರ್ಮನ್:-** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ (ಹಿಂದುಳಿದ ವರ್ಗ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು)(ಕಂದಾಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೆ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಕೂಡಲ ಸಂಗಮ ಅಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ವೈಸ್ ಛೇರ್ಮನ್:-** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಕೂಡಲ ಸಂಗಮ ಅಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಊ) ಬನವಾಸಿ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಗಳೆ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಬನವಾಸಿ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಗಳೆ, ಸದರಿ ಪ್ರಾಧಿಕಾರದ ಅಧ್ಯಕ್ಷರು ಕೇವಲ ಮುಖ್ಯಮಂತ್ರಿಗಳಾಗಿರುತ್ತಿದ್ದರು. ಆದರೆ ಈಗ, ಮಾನ್ಯ ಮುಖ್ಯಮಂತ್ರಿಗಳು ಅಥವಾ ಕಂದಾಯ ಸಚಿವರು ಅಥವಾ ಮುಖ್ಯಮಂತ್ರಿಯವರು ಆಯ್ಕೆ ಮಾಡಿದ ಯಾರೇ ಇತರ ಮಂತ್ರಿಗಳು ಅಧ್ಯಕ್ಷರಾಗಿ ಕೆಲಸ ಮಾಡುವುದಕ್ಕೆ ತಿದ್ದುಪಡಿಯನ್ನು ತರಲಾಗಿದೆ. ಹಾಗಾಗಿ ಸದನ ಇದಕ್ಕೆ ಸಹಮತಿ ನೀಡಬೇಕೆಂದು ಕೋರುತ್ತೇನೆ.

**ವೈಸ್ ಛೇರ್ಮನ್:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಬನವಾಸಿ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2**

**ವೈಸ್ ಛೇರ್ಮನ್:-** "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ವೈಸ್ ಛೇರ್ಮನ್:-** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಕೃಷ್ಣ ಭೈರೇಗೌಡ(ಕಂದಾಯ ಸಚಿವರು):-** ಮಾನ್ಯ ಸಭಾಪತಿಗಳೆ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಬನವಾಸಿ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ವೈಸ್ ಛೇರ್ಮನ್:-** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಬನವಾಸಿ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

(716) 14-8-2025 1.30 ಡಿಎಸ್-ಎಂಡಿ (ವೈಸ್‌ಛೇರ್ಮನ್ ಉಪಸ್ಥಿತಿ)

**ಋ) ಸರ್ವಜ್ಞ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ನೇ ಸಾಲಿನ ಸರ್ವಜ್ಞ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, ಸದರಿ ತಿದ್ದುಪಡಿ ವಿಧೇಯಕದ ಮುಖಾಂತರ ಈ ಪ್ರಾಧಿಕಾರದಲ್ಲಿ ಮುಖ್ಯಮಂತ್ರಿಯವರು ಅಥವಾ ಕಂದಾಯ ಮಂತ್ರಿಯವರು ಅಥವಾ ಯಾವುದೇ ಇತರ ಮಂತ್ರಿಯವರು ಅಧ್ಯಕ್ಷರಾಗಿ ಕೆಲಸ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸುವುದಕ್ಕೆ ತಿದ್ದುಪಡಿಯನ್ನು ತಂದಿದ್ದೇವೆ. ಇದಕ್ಕೆ ಸಹಮತಿ ನೀಡಬೇಕೆಂದು ನಾನು ಸದನವನ್ನು ಕೋರುತ್ತಿದ್ದೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ನೇ ಸಾಲಿನ ಸರ್ವಜ್ಞ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2**

**ಸಭಾಪತಿಯವರು:-** "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ನೇ ಸಾಲಿನ ಸರ್ವಜ್ಞ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ನೇ ಸಾಲಿನ ಸರ್ವಜ್ಞ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ವಿಧೇಯಕಗಳನ್ನು ತೆಗೆದುಕೊಳ್ಳೋಣ. ಮಾನ್ಯ ಕೃಷ್ಣ ಬೈರೇಗೌಡರವರ ಬಗ್ಗೆ ನನಗೆ ಗೌರವವಿದೆ. ವಿಧೇಯಕವನ್ನು ಪಾಸ್ ಮಾಡುವುದರ ಬಗ್ಗೆ ನಮ್ಮದೇನೂ ಎರಡು ಮಾತಿಲ್ಲ. ಈಗ ನಾವು ನಿನ್ನೆ ಗೌರವಾನ್ವಿತ ಸದಸ್ಯರುಗಳು ಸಹಿ ಮಾಡಿ ನಾಳೆ ನಿಯಮ 330ರ ಮೇರೆಗೆ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಾವೆಲ್ಲಾ ಬರೆದು ಕೊಟ್ಟಿದ್ದೇವೆ. ನಮಗೆ ಇನ್ನು ನಾಲ್ಕು ದಿವಸಗಳು ಮಾತ್ರ ಉಳಿದಿವೆ. ಇವತ್ತು ಈ ವಾರದ ಅಧಿವೇಶನದ ಕೊನೆಯ ದಿನವಾಗಿದೆ.

**ವೈಸ್ ಛೇರ್ಮನ್:-** ಮಾನ್ಯ ರವಿಕುಮಾರ್‌ರವರೇ, ಈಗ ಪ್ರಸ್ತಾವನೆಗಳನ್ನು ಮುಗಿಸಿಕೊಂಡು ಬಿಡಿ. ಮತ್ತೆ ಮತ್ತೆ ಈ ರೀತಿ ಮಾತನಾಡಿದರೆ ಹೇಗೆ?

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಹೌದು ಚರ್ಚೆಗೆ ಅವಕಾಶ ಕೊಡುತ್ತೇವೆ ಎಂದು ಆದೇಶ ಕೊಡಿ, ನಾವು ಕುಳಿತುಕೊಳ್ಳುತ್ತೇವೆ.

**ವೈಸ್ ಛೇರ್ಮನ್:-** ನಿನ್ನೆ ಇದರ ಬಗ್ಗೆ ಕಾರ್ಯಕಲಾಪ ಸಲಹಾ ಸಮಿತಿಯಲ್ಲಿ ತೀರ್ಮಾನವಾಗಿದೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಒಳ ಮೀಸಲಾತಿ ಬಗ್ಗೆ 16ನೇ ತಾರೀಖು ಸಚಿವ ಸಂಪುಟದ ಸಭೆ ಇದೆ. ಈ ವಿಷಯದ ಬಗ್ಗೆ ನಾವು ಚರ್ಚೆ ಮಾಡಬೇಕೋ, ಬೇಡವೋ? ಸೋಮವಾರ ನಾವು ಎಲ್ಲಾ ವಿಧೇಯಕಗಳನ್ನು ಪಾಸ್ ಮಾಡಿಕೊಡುತ್ತೇವೆ. ಈ ವಿಷಯವನ್ನು ಏಕೆ ಚರ್ಚೆಗೆ ತೆಗೆದುಕೊಳ್ಳುತ್ತಿಲ್ಲ?

**ವೈಸ್ ಛೇರ್ಮನ್:-** ಇದರ ಬಗ್ಗೆ ಕಾರ್ಯಕಲಾಪ ಸಲಹಾ ಸಮಿತಿಯಲ್ಲಿ ತೀರ್ಮಾನವಾಗಿದೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಒಳ ಮೀಸಲಾತಿ ಬಗ್ಗೆ ಮೊದಲು ಚರ್ಚೆಗೆ ತೆಗೆದುಕೊಳ್ಳಿ.

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನ್ನ ವಿನಂತಿ ಏನೆಂದರೆ, ಈಗ ಮಾನ್ಯ ಕಂದಾಯ ಸಚಿವರು 7 ವಿಧೇಯಕಗಳು ಒಂದೇ ವಿಷಯವಾಗಿರುವುದರಿಂದ ಪಾಸ್ ಮಾಡಿ ಕೊಡಿ ಎಂದು ಹೇಳಿದರು. ಈಗ ಅವರು ಕಂದಾಯ ಇಲಾಖೆಗೆ ಸಂಬಂಧಪಟ್ಟ ವಿಧೇಯಕಗಳ ಬಗ್ಗೆ ಚರ್ಚೆಯಾಗಬೇಕು, ತಾವು ಚರ್ಚೆ ಮಾಡಿದರೆ ನಾನು ಅದನ್ನು ಸ್ವೀಕಾರ ಮಾಡುತ್ತೇವೆ, ಆಗ ಒಳ್ಳೆಯ ಚರ್ಚೆ ಆದಂತಾಗುತ್ತದೆ ಎಂದು ಹೇಳಿದರು. ಆದರೆ ಮಾನ್ಯ ಕಂದಾಯ ಸಚಿವರು ಈಗ ವಿಧೇಯಕಗಳನ್ನು ಕೊಟ್ಟಿದ್ದಾರೆ. ನಾವು ಆ ವಿಧೇಯಕದಲ್ಲಿನ ಒಂದು ಅಕ್ಷರವನ್ನು ಓದುವುದಕ್ಕಾಗಲಿಲ್ಲ. ಕೊನೆ ಪಕ್ಷ ಈ ಎರಡು ವಿಧೇಯಕಗಳನ್ನಾದರೂ ಸೋಮವಾರ ತೆಗೆದುಕೊಳ್ಳಿ. ಒಳ ಮೀಸಲಾತಿ ಬಗ್ಗೆ ಚರ್ಚೆ ಮಾಡುವುದಕ್ಕೆ ನಾವು ತಯಾರಾಗಿ ಬಂದಿದ್ದೇವೆ.

**ಶ್ರೀ ಪ್ರತಾಪ ಸಿಂಹ ನಾಯಕ್ ಕೆ:-** ಮಾನ್ಯ ಸಭಾಪತಿಯವರೇ, ಸದನವನ್ನು ಸಂಜೆವರೆಗೆ ನಡೆಸುತ್ತಿರಾ?

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಸದನವನ್ನು ಸಂಜೆವರೆಗೆ ನಡೆಸಿ. ಸದನವನ್ನು ಸಂಜೆವರೆಗೂ ನಡೆಸುವುದಿಲ್ಲವೆಂದರೆ ಏನರ್ಥ?

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ನಾಳೆಯಿಂದ ಬೆಳಗ್ಗೆ 10.00 ಗಂಟೆಯಿಂದ ರಾತ್ರಿ 8.00 ಗಂಟೆಯವರೆಗೆ ಸದನ ನಡೆಸುತ್ತೇವೆಂದು ನಿನ್ನೆ ಪೀಠದಿಂದ ಪ್ರಕಟಣೆಯನ್ನು ಹೊರಡಿಸಿದ್ದೀರಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಕಾರ್ಯಕಲಾಪ ಸಲಹಾ ಸಮಿತಿಯಲ್ಲಿ ಮಾನ್ಯ ಸಭಾನಾಯಕರು ಇದ್ದರು.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ರವಿಕುಮಾರ್‌ರವರೇ, ಇನ್ನು ಎರಡು ವಿಧೇಯಕಗಳಿವೆ, ಅವು ಮುಗಿಯಲಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಾವು ವಿಧೇಯಕಗಳನ್ನು ಮುಗಿಸಿ ಕೊಡುತ್ತೇವೆಂದು ಸಹಿ ಮಾಡಿ ಕೊಡುತ್ತೇವೆ. ಈಗ ಒಳ ಮೀಸಲಾತಿ ಬಗ್ಗೆ ಚರ್ಚೆ ಮಾಡಿ. ರಾತ್ರಿ 8.00 ಗಂಟೆಯವರೆಗೆ ಸದನವನ್ನು ನಡೆಸಿ. ಬೆಳಗ್ಗೆ 10.00 ಗಂಟೆಯಿಂದ ರಾತ್ರಿ 8.00 ಗಂಟೆಯವರೆಗೆ ಸದನ ನಡೆಸುತ್ತೇವೆಂದು ಕಾರ್ಯಕಲಾಪ ಸಲಹಾ ಸಮಿತಿಯಲ್ಲಿ ತೀರ್ಮಾನವಾಗಿದೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ರವಿಕುಮಾರ್‌ರವರೇ, ನಾಳೆ ಸ್ವಾತಂತ್ರ್ಯ ದಿನಾಚರಣೆ ಇರುವುದರಿಂದ ಎಲ್ಲರೂ ತಮ್ಮ ತಮ್ಮ ಕ್ಷೇತ್ರಗಳಿಗೆ ಹೋಗಬೇಕಾಗಿದೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಬೆಳಗ್ಗೆ 10.00 ಗಂಟೆಯಿಂದ ರಾತ್ರಿ 8.00 ಗಂಟೆಯವರೆಗೆ ಸದನ ನಡೆಸುತ್ತೇವೆಂದು ಕಾರ್ಯಕಲಾಪ ಸಲಹಾ ಸಮಿತಿಯಲ್ಲಿ ತೀರ್ಮಾನವಾಗಿದೆ. ಸಭೆಯಲ್ಲಿ ಮಾನ್ಯ ಸಭಾನಾಯಕರು ಇದ್ದರು ಕೇಳಿ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಕಾರ್ಯಕಲಾಪ ಸಲಹಾ ಸಮಿತಿ ಸಭೆಯಲ್ಲಿ ಸದಸ್ಯರುಗಳು ಮತ್ತು ಮಂತ್ರಿಗಳು ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸುವುದಕ್ಕೆ ದೂರದ ಊರಿಗೆ ಹೋಗಬೇಕಾಗಿರುವುದರಿಂದ ಇವತ್ತು ಅರ್ಧ ದಿನಕ್ಕೆ ಸದನವನ್ನು ಮುಗಿಸಬೇಕೆಂದು ತೀರ್ಮಾನವಾಗಿದೆ.

**(ಗೊಂದಲ)**

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ರವಿಕುಮಾರ್‌ರವರೇ, ಕಾರ್ಯಕಲಾಪ ಪಟ್ಟಿಯಲ್ಲಿ ಏನಿದೆ ನೋಡಿ. ವಿಧೇಯಕಗಳು ಮಾತ್ರ ಇವೆ.

**ಶ್ರೀ ಎನ್.ರವಿಕುಮಾರ್:-** ನಾನು ಕಾರ್ಯಕಲಾಪ ಪಟ್ಟಿಯನ್ನೇ ನೋಡಿ ಹೇಳುತ್ತಿದ್ದೇನೆ. ಕಾರ್ಯಕಲಾಪ ಪಟ್ಟಿಯಲ್ಲಿ ಏಕೆ ತರಲಿಲ್ಲ? ನಿನ್ನೆ ನಾವು ಮನವಿಯನ್ನು ಮಾಡಿದ್ದೆವು.

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ರವಿಕುಮಾರ್‌ರವರೇ, ಒಂದು ನಿಮಿಷ ಕುಳಿತುಕೊಳ್ಳಿ. ಈಗ ಅಜೆಂಡಾವನ್ನು ಮಾನ್ಯ ಸಭಾಪತಿಯವರು ಅಂತಿಮಗೊಳಿಸಿದ್ದಾರೆ. ಈಗ ಅದರ ಬಗ್ಗೆ ಚರ್ಚೆ ಮಾಡುವುದು ಬೇಡ. ಈಗ ನೀವು ಏನೇ ಪ್ರಯತ್ನ ಮಾಡುವುದಿದ್ದರೂ ಅಜೆಂಡಾವನ್ನು ಅಂತಿಮಗೊಳಿಸುವ ಮೊದಲೇ ಮಾಡಬೇಕಾಗಿತ್ತು. ಈಗ ಅಜೆಂಡಾ ಏನಿದೆ ಅದರ ಪ್ರಕಾರ ನಾವು ಹೋಗಬೇಕೇ ಹೊರತು ಮಧ್ಯೆ ಆ ವಿಷಯವನ್ನು ತರುವುದಕ್ಕಾಗುವುದಿಲ್ಲ. ಶ್ರೀ ನವೀನ್‌ರವರೇ, ಅಜೆಂಡಾ ಅಂತಿಮಗೊಂಡಿರುವುದರಿಂದ ಮಧ್ಯೆ ಇದನ್ನು ತರುವುದಕ್ಕಾಗುವುದಿಲ್ಲ. ಈಗೇನು ಮನವಿಯನ್ನು ಕೊಟ್ಟಿದ್ದೀರಿ ಅದು ಮುಂದೆ ಬರುವ ಅಜೆಂಡಾದಲ್ಲಿ ಹಾಕಿಕೊಳ್ಳೋಣ. ಈ ಅಜೆಂಡಾದಲ್ಲಿ ಅದನ್ನು ಸೇರಿಸುವುದಕ್ಕಾಗುವುದಿಲ್ಲ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಅಜೆಂಡಾದಲ್ಲಿರುವ ವಿಷಯವನ್ನು ಬಿಟ್ಟು ಬೇರೆ ವಿಷಯವನ್ನು ತೆಗೆದುಕೊಂಡಿರುವಂಥದ್ದು ಇದೆ.

**ವೈಸ್ ಛೇರ್ಮನ್:-** ಮಾನ್ಯ ಕಂದಾಯ ಸಚಿವರೇ, ತಾವು ವಿಧೇಯಕವನ್ನು ಮಂಡಿಸಿ.

**ಎ) ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2025**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ನೇ ಸಾಲಿನ ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಇದರಲ್ಲಿ ಸುಮಾರು ಪ್ರಕರಣಗಳಿಗೆ ನಾವು ತಿದ್ದುಪಡಿಯನ್ನು ತರುತ್ತಿದ್ದೇವೆ. ಅದರ ಮೂಲ ಉದ್ದೇಶ 2-3 ಇವೆ. ಅದನ್ನು ಏಕೆ ಮಾಡುತ್ತಿದ್ದೇವೆಂದು ನಾನು ಹೇಳುತ್ತೇನೆ, ನಾವು ಬದಲಾವಣೆ ತರಬೇಕಾದರೆ ತತ್ಸಂಬಂಧವಾಗಿ 3-4 ಕಡೆಗಳಲ್ಲಿ ನಾವು ತಿದ್ದುಪಡಿಯನ್ನು ಮಾಡಬೇಕಾಗುತ್ತದೆ. ಸಾಕಷ್ಟು ಪ್ರಕರಣ ಅಂದರೆ, ಸೆಕ್ಷನ್‌ಗಳು ತುಂಬಾ ಇದ್ದರೂ ಕೂಡ ಅದು ಒಂದು ಉದ್ದೇಶವನ್ನು ಈಡೇರಿಸುವುದಕ್ಕೆ ಮಾಡಿರುವಂತಹ ತಿದ್ದುಪಡಿಗಳು. ಅದರ ಉದ್ದೇಶವೇನೆಂದರೆ, ಸುಮಾರು ನೋಂದಣಿ ಕಛೇರಿಯಲ್ಲಿ, ಈಗ ನಿಮಗೆಲ್ಲರಿಗೂ ಗೊತ್ತಿದೆ, ಎರಡು ವರ್ಷಗಳಿಂದ ಸಾಕಷ್ಟು ಬದಲಾವಣೆಗಳನ್ನು ಪ್ರತಿ ಮೂರು ತಿಂಗಳು, ಆರು ತಿಂಗಳುಗಳಿಗೆ ತೆಗೆದುಕೊಂಡು ಬಂದು ನೋಂದಣಿ ಪ್ರಕ್ರಿಯೆಯಲ್ಲಿ ಜನಪರ ಸುಧಾರಣೆಗಳನ್ನು ತರುವಂತಹ ಪ್ರಯತ್ನವನ್ನು ಮಾಡುತ್ತಿದ್ದೇವೆ. ಸ್ವಲ್ಪ ಮಟ್ಟಿಗೆ ಸುಧಾರಣೆಯಾಗಿದೆ, ಇನ್ನು ಸುಧಾರಣೆಯಾಗಬೇಕಾಗಿರುವುದು ಸಾಕಷ್ಟು ಇವೆ. ಅವುಗಳನ್ನು ಸುಧಾರಣೆ ಮಾಡಬೇಕಾಗಿದೆ. ಆ ದಿಕ್ಕಿನಲ್ಲಿ ನಾವು ಹೆಜ್ಜೆ ಇಟ್ಟುಕೊಂಡು ಮುಂದೆ ಹೋಗುತ್ತಿದ್ದೇವೆ. ಇವತ್ತು ತಂದಿರುವಂತಹ ತಿದ್ದುಪಡಿಗಳು ಏನಿವೆ ಎಂದರೆ, ಈಗ ಉದಾಹರಣೆಗೆ ಹೇಳುವುದಾದರೆ, ತಾವು ಬ್ಯಾಂಕಿನಲ್ಲಿ ಸಾಲ ತೆಗೆದುಕೊಳ್ಳುತ್ತೀರಿ, ಸಾಲ ತೆಗೆದುಕೊಂಡಾಗ ತಮ್ಮ ಆಸ್ತಿಯಲ್ಲಿ ಸಾಲದ ಋಣವನ್ನು ನಾವು ಪ್ರಸ್ತಾಪ ಮಾಡುತ್ತೇವೆ. ಆಸ್ತಿಯ ದಾಖಲೆಯಲ್ಲಿ ಆರ್.ಟಿ.ಸಿ. ಇರಬಹುದು ಅಥವಾ ತಾವು ಬೇರೆ ಯಾವುದು ಆಸ್ತಿ ಕೊಟ್ಟಿರುತ್ತೀರಿ ಅದರ ಮೇಲೆ ನಾವು ಋಣಭಾರವನ್ನು ಬ್ಯಾಂಕಿನವರ ಕೋರಿಕೆಯ ಮೇಲೆ ಹೊರಿಸುತ್ತೇವೆ. ತಾವು ಸಾಲ ಮರುಪಾವತಿ ಮಾಡಿದ ಮೇಲೆ ಈ ಋಣಭಾರ ಏನಿದೆ ಅದನ್ನು ತೆಗೆಸುವುದಕ್ಕೆ ಅನಗತ್ಯವಾಗಿ ಜನರು ನಮ್ಮ ಕಛೇರಿಗೆ ಬರುವುದು ಬೇಕಾಗಿಲ್ಲ. ಈಗ ಆ ಋಣಭಾರ ತೆಗೆಸುವುದಕ್ಕೂ ಕೂಡ ಜನರು ನಮ್ಮ ಕಛೇರಿಗೆ ಬಂದು ಅಲೆಯುತ್ತಿದ್ದಾರೆ.

(ಮುಂದು)

(717) 14/08/2025 1:40 ಎಸ್‌ಪಿಆರ್/ಎಕೆ (ವೈಸ್ ಛೇರ್ಮನ್ ರವರ ಉಪಸ್ಥಿತಿ)

**ಶ್ರೀ ಕೃಷ್ಣಭೈರೇಗೌಡ (ಮುಂದು):-**

ನಾನು ಸುಮಾರು ಕಛೇರಿಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿರುವವರನ್ನು "ಏದಕ್ರೀ ಇಲ್ಲಿ ಬಂದಿರೀ" ಎಂದು ಪ್ರಶ್ನಿಸಿದಾಗ ಅವರುಗಳು "ಉತಾರ್ ತೆಗಿಸಬೇಕ್ರೀ; ಅದಕ್ಕ ಬಂದೀವಿ ರೀ, ಉತಾರ್‌ನಲ್ಲಿ ಎಂಟ್ರಿ ಮಾಡಿಬಿಟ್ಟಾರ ರೀ; ಅದು ಸಾಲ ತೀರಿಸಿವ್ರೀ; ಆದರೆ ಇನ್ನೂ ತೆಗೆದಿಲ್ರೀ" ಎಂಬುದಾಗಿ ಉತ್ತರಿಸಿರುತ್ತಾರೆ. ಇದನ್ನು ಕೇಳಿ ನನಗೆ ಆಶ್ಚರ್ಯವಾಯಿತು. ಇದು ಏನು ಕ್ರಮ ಆಯಿತಲ್ಲ ಎಂದು ನಾನು ಅಂದುಕೊಂಡೆನು. ತೆಗೆದುಕೊಂಡಿರುವ ಸಾಲವನ್ನು ಬ್ಯಾಂಕಿಗೆ ಪಾವತಿ ಮಾಡಲಾಗಿದೆ; ಇದಕ್ಕೆ ಬ್ಯಾಂಕಿನವರು ತೆಗೆದುಕೊಂಡಿರುವ ಸಾಲ ಮರುಪಾವತಿ ಮಾಡಿದ್ದಾರೆ ಎಂದೂ ಸಹ ಹೇಳಿದ್ದಾರೆ. ಇದಾದ ನಂತರವೂ ಸಹ ಪುನಃ ಕಛೇರಿಗೆ ಅಲೆಯಬೇಕು ಎಂದಾದರೆ, ಎಲ್ಲಿಯೋ ಒಂದು ಕಡೆ ಮನುಷ್ಯನ ಗೌರವ ಅಂದರೆ human dignity ಅನ್ನು ಕಡಿಮೆ ಮಾಡಿದಂತೆ ಆಯಿತು. ಸಾಲ ಮರು ಪಾವತಿಸಿದ ನಂತರವೂ ಸಹ ಅದರ ನಮೂದನ್ನು ತೆಗೆಸುವುದಕ್ಕೋಸ್ಕರ ಕಛೇರಿಗಳಿಗೆ ಅಲೆಯಬೇಕು ಎಂದರೆ ಹೇಗೆ? ನಿನ್ನೆಯ ದಿವಸ ಕೆಳಮನೆಯಲ್ಲಿಯೂ ಸಹ ಹೇಳಿದೆ. ಇದಕ್ಕೂ ಸಹ ಬೇರೆ ಬೇರೆ ರೀತಿಯ ಷರತ್ತುಗಳಿವೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ಸಚಿವರು ಆ ಷರತ್ತುಗಳನ್ನು ಇಲ್ಲಿ ಮುಕ್ತವಾಗಿ ತಿಳಿಸಲಿ.

**ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೆ, ಇದರಲ್ಲಿ ಯಾವುದೇ ಮುಚ್ಚುಮರೆ ಇಲ್ಲದೇ ಇರುವುದರಿಂದ ಅದನ್ನು ಇಲ್ಲಿ ಹೇಳಬಹುದಾಗಿರುತ್ತದೆ. ಇದರ ಬಗ್ಗೆ ಹೇಳುತ್ತಿದ್ದೇವೆ. ಇದಕ್ಕಿಂತಲೂ ವಿವರವಾಗಿ ಇನ್ನೇನು ಹೇಳಬೇಕು. ಇಂತಹ ಪ್ರಕರಣಗಳಲ್ಲಿ ನಮೂದಾಗಿರುವುದನ್ನು ಸ್ವಯಂಚಾಲಿತವಾಗಿಯೇ ತೆಗೆಯಬೇಕು. ನಿನ್ನೆಯ ದಿನ ನಾನು ಉದಾಹರಣೆಯೊಂದನ್ನು ನೀಡಿದ್ದೆನು. ಇವರದ್ದು ಸಾಲ ಮರುಪಾವತಿಯಾಗಿದೆ ಎಂದು ತಮಗೆ ಡಿಜಿಟಲ್ ಆಗಿ ಕಳುಹಿಸಬೇಕು ಎಂಬುದಾಗಿ ಸ್ಟೇಟ್ ಬ್ಯಾಂಕಿನವರು ಕೇಳುತ್ತಾರೆ. ಸಾಲ ಮರುಪಾವತಿಯಾದ ಮೇಲೆ, ಡಿಜಿಟಲಿ ಸಹಿ ಮಾಡಿ, ಅವರ ಋಣಭಾರವನ್ನು ತೆಗೆದು ಹಾಕಬೇಕು. ಇದು ಒಂದು ರೀತಿಯ ಉದಾಹರಣೆಯಾದರೆ, ಮತ್ತೊಂದು ರೀತಿಯ ಉದಾಹರಣೆಯನ್ನು ನೀಡಬಯಸುತ್ತೇನೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಕೆ.ಐ.ಎ.ಡಿ.ಬಿ. ಸಂಸ್ಥೆಯವರು ನಿವೇಶನವನ್ನು ಹಂಚಿಕೆ ಮಾಡುತ್ತಾರೆ. ಅದೇ ರೀತಿಯಾಗಿ ಕರ್ನಾಟಕ ಹೌಸಿಂಗ್ ಬೋರ್ಡ್‌ನವರು ಮನೆ ಅಥವಾ ನಿವೇಶನವನ್ನು ಹಂಚಿಕೆ ಮಾಡುತ್ತಾರೆ. ಇಂತಹ ಸಂದರ್ಭಗಳಲ್ಲಿ ಹಂಚಿಕೆದಾರರಾಗಲೀ ಅಥವಾ ಸರ್ಕಾರಿ ಸಂಸ್ಥೆಯಾಗಲೀ ಸರ್ಕಾರಿ ಕಛೇರಿಗಳಿಗೆ ಬರುವ ಅವಶ್ಯಕತೆ ಇರಬಾರದು. ಏಕೆಂದರೆ, ನಿವೇಶನವನ್ನು ಮಾರಾಟ ಮಾಡುವವರು it is from a secure government source. When the source is secure, origin of truth is established, ಸರ್ಕಾರಿ ಸಂಸ್ಥೆಗಳಾದ ಬಿ.ಡಿ.ಎ., ಕೆ.ಐ.ಎ.ಡಿ.ಬಿ. ಮತ್ತು ಕೆ.ಹೆಚ್.ಬಿ. ರವರುಗಳೇ ಮಾರಾಟ

ಮಾಡುತ್ತಿರುವುದರಿಂದ ಇಂತಹ ಪ್ರಕರಣಗಳಲ್ಲಿ ಅವರು ಭೌತಿಕವಾಗಿ ನಮ್ಮ ಕಛೇರಿಗಳಿಗೆ ಬರುವ ಅವಶ್ಯಕತೆ ಇರುವುದಿಲ್ಲ. ಇಂತಹ ಪ್ರಕರಣದಲ್ಲಿ ಅದು ಸ್ವಯಂಚಾಲಿತವಾಗಿಯೇ ಸಹಿಯಾಗಬೇಕು. ಪ್ರಸ್ತುತ ಅಲ್ಲಿ ಏನೇನು ಆಗುತ್ತಿದೆ ಎಂಬುದರ ಬಗ್ಗೆ ನಾನು ಇಲ್ಲಿ ವಿವರಣೆ ನೀಡುವುದಿಲ್ಲ. ಬಹಳಷ್ಟು ಸಂದರ್ಭಗಳಲ್ಲಿ ಇಲ್ಲಿನ ಸದಸ್ಯರುಗಳೆಲ್ಲರೂ ಮಾತನಾಡಿದ್ದಾರೆ. ಇಂತಹ ಪ್ರಕರಣಗಳಿಗೂ ಸಹ ಇದು ಜನಪರ ಸುಧಾರಣಾ ಕ್ರಮವಾಗಿದೆ. ಅನಗತ್ಯವಾಗಿ ಕಛೇರಿಗಳಿಗೆ ಬರುವುದು ನಿಲ್ಲುತ್ತದೆ. ಇದಕ್ಕೆ ಪೂರಕವಾಗಿ ಮೂರನೆಯ ಉದಾಹರಣೆಯನ್ನು ಈ ಸಂದರ್ಭದಲ್ಲಿ ಕೊಡಲಿಚ್ಛಿಸುತ್ತೇನೆ. ತಾಲ್ಲೂಕು ತಹಸೀಲ್ದಾರ್ ಅಥವಾ ತಾಲ್ಲೂಕು ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಸೆಕ್ಷನ್ 94 ಸಿ, ಸೆಕ್ಷನ್ 94 ಸಿಸಿ ಮತ್ತು ಸೆಕ್ಷನ್ 94 ಡಿ ಅಡಿಯಲ್ಲಿ ಹಕ್ಕುಪತ್ರಗಳನ್ನು ನೀಡುತ್ತಾರೆ. ಫಾರಂ 50, 53 ಮತ್ತು 57 ಗಳಡಿ ಮಂಜೂರಾತಿ ಹಕ್ಕುಪತ್ರ ಅಂದರೆ ಸಾಗುವಳಿ ಚೀಟಿಗಳನ್ನು ನೀಡಲಾಗುತ್ತದೆ. ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು ಆಶ್ರಯ ಸಮಿತಿಯಲ್ಲಿ ಹಕ್ಕುಪತ್ರಗಳನ್ನು ವಿತರಿಸುತ್ತಾರೆ. ಈ ಎಲ್ಲಾ ಪ್ರಕರಣಗಳಲ್ಲಿ ಹಕ್ಕುಪತ್ರಗಳನ್ನು ಪಡೆದುಕೊಂಡಿರುವವರು ಸಾಮಾನ್ಯವಾಗಿ ರೈತರು ಅಥವಾ ಬಡವರು ಇರುತ್ತಾರೆ. ಈ ಹಕ್ಕುಪತ್ರಗಳ ನೋಂದಣಿಗಾಗಿ ನಮ್ಮ ಕಛೇರಿಗಳಿಗೆ ಏಕೆ ಬರಬೇಕು? ಯಾವಾಗ ತಾಲ್ಲೂಕು ತಹಸೀಲ್ದಾರ್ ರವರು ಸೆಕ್ಷನ್ 94 ಸಿ, ಸೆಕ್ಷನ್ 94 ಸಿಸಿ ಮತ್ತು ಸೆಕ್ಷನ್ 94 ಡಿ; ಫಾರಂ 50, 53 ಮತ್ತು 57 ಗಳಡಿ ಅಥವಾ ಆಶ್ರಯ ಸಮಿತಿಯಡಿ ಹಕ್ಕು ಪತ್ರಗಳನ್ನು ನೀಡಲಾಗುತ್ತಿದೆಯೋ, ಅಂದರೆ, ಸರ್ಕಾರದ ಪತ್ರಾಂಕಿತ ಅಧಿಕಾರಿಯೇ ಹಕ್ಕುಪತ್ರಗಳನ್ನು ನೀಡುವ ಸಂದರ್ಭಗಳಲ್ಲಿ ಅದೂ ಸಹ ಸ್ವಯಚಾಲಿತವಾಗಿಯೇ ನೋಂದಣಿಯಾಗಬೇಕು. ಇಂತಹ ಸಂದರ್ಭಗಳಲ್ಲಿ ನಮ್ಮ ಕಛೇರಿಗೆ ನೋಂದಣಿಗಾಗಿ ಬರುವುದು ಅವಶ್ಯಕವಾಗಿರುವುದಿಲ್ಲ. ಇದಕ್ಕೆ ಯಾರದ್ದೂ ಅನುಮೋದನೆಯ ಅವಶ್ಯಕತೆಯೂ ಸಹ ಇರುವುದಿಲ್ಲ. ಇಂತಹ ಸಂದರ್ಭಗಳಲ್ಲಿ ನೋಂದಣಾಧಿಕಾರಿಯ ಸಹಿಯನ್ನು ಡಿಜಿಟಲ್ ಆಗಿ ಜನರೇಟ್ ಮಾಡಿ, ಅದು ಸ್ವಯಂಚಾಲಿತವಾಗಿ ನೋಂದಣಿಯಾಗುವಂತಹ ಕ್ರಮಗಳನ್ನು ತೆಗೆದುಕೊಂಡು ಬರುತ್ತಿದ್ದೇವೆ. ಇದರಿಂದಾಗಿ ಇಲಾಖಾಧಿಕಾರಿಗಳ ಕೆಲಸದ ಒತ್ತಡವೂ ಸಹ ಕಡಿಮೆಯಾಗುತ್ತದೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಮಾನ್ಯ ಸದಸ್ಯರುಗಳು ಮೇಜನ್ನು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

ಇದರಿಂದಾಗಿ ಸರ್ಕಾರದಿಂದ ದೊರೆಯಬೇಕಾದ ಸೌಲಭ್ಯಗಳು ಜನರಿಗೆ ಸರಳ ಹಾಗೂ ಸುಲಲಿತವಾಗಿ ದೊರೆಯುವ ರೀತಿಯಲ್ಲಿ ಒಂದು ಬದಲಾವಣೆಯಾಗಿದೆ. ನೋಂದಣಿ ಪ್ರಕ್ರಿಯೆಯಲ್ಲಿ ಏನೆಲ್ಲಾ ಅವಶ್ಯಕತೆ ಇದೆಯೋ ಅವುಗಳನ್ನು ಮಾಡುತ್ತಿದ್ದೇವೆ. ಇಬ್ಬರು ಖಾಸಗಿ ವ್ಯಕ್ತಿಗಳ ನಡುವೆ ಆಸ್ತಿ ವಹಿವಾಟು ನಡೆಯುವ ಸಂದರ್ಭದಲ್ಲಿ ಇಬ್ಬರೂ ವ್ಯಕ್ತಿಗಳು ಕಛೇರಿಗೆ ಬರಬೇಕು. ಅವರುಗಳು ಬಂದಾಗ ಅದನ್ನು ಪರಿಶೀಲನೆ ಮಾಡುವ ಪ್ರಕ್ರಿಯೆಯು ಈಗ ಚಾಲ್ತಿಯಲ್ಲಿದೆ.

ಮಾನ್ಯ ಸಭಾಪತಿಯವರೆ, ಮೇಲೆ ಹೇಳಿದ ಉದಾಹರಣೆಗಳ ರೀತಿಯ ಸರಳೀಕರಣ ಕ್ರಮಗಳನ್ನು ಕೈಗೊಂಡಿದ್ದೇವೆ. ಮುಂದುವರೆದು, ಕೆಲವೊಂದು ಬಿಗಿಯಾದ ಕ್ರಮಗಳನ್ನು ತೆಗೆದುಕೊಂಡಿದ್ದೇವೆ; ಅವುಗಳು ಯಾವುವೆಂದು

ಉದಾಹರಣೆಗಳ ಮೂಲಕ ತಿಳಿಸುತ್ತೇನೆ. ಕೆಲವು ಆಸ್ತಿ ವಹಿವಾಟುಗಳು ಜಿ.ಪಿ.ಎ. ಆಧಾರದ ಮೇಲೆಯೇ ನಡೆಯುತ್ತಿವೆ. ಇದರ ಆಧಾರದ ಮೇಲೆಯೇ ಸ್ವತ್ತುಗಳೂ ಸಹ ಮಾರಾಟವಾಗುತ್ತಿವೆ. ಹಾಲಿ ಚಾಲ್ತಿಯಲ್ಲಿರುವ ಕಾನೂನಿನಲ್ಲಿ ಸದರಿ ಜಿ.ಪಿ.ಎ. ಕಡ್ಡಾಯವಾಗಿ ನೋಂದಣಿಯಾಗಿರಲೇಬೇಕು ಎನ್ನುವ ನಿಯಮವೂ ಸಹ ಇರಲಿಲ್ಲ. ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುವ ಸಾವಿರಾರು ಪ್ರಕರಣಗಳನ್ನು ನೋಡಿದರೆ, ಸದರಿ ಜಿ.ಪಿ.ಎ.ಗಳ ದುರುಪಯೋಗದಿಂದಲೇ ಈ ಭೂ ವ್ಯಾಜ್ಯಗಳು ಇರುವುದು. ಜಿ.ಪಿ.ಎ. ದುರುಪಯೋಗ ಎಂದರೆ, ಒಂದು ಕಡೆ ಅವರು ಜಿ.ಪಿ.ಎ. ಮಾಡಿಕೊಟ್ಟು ಆಸ್ತಿಯನ್ನು ಮಾರಾಟ ಮಾಡಿದ್ದಾರೆ; ನಂತರದಲ್ಲಿ ಅವರೇ ಬಂದು ಇದು ಬಹುಶಃ ನಕಲಿ ಜಿ.ಪಿ.ಎ. ಎಂಬುದಾಗಿ ಹೇಳುತ್ತಾರೆ. "ಇಸ್ಕೊಂಡವನು ಈರಭದ್ರ; ಕೊಟ್ಟವನು ಕೋಡಂಗೀ" ಎಂಬ ನಾಣ್ಣುಡಿಯಂತೆ ಅವರ ಪರಿಸ್ಥಿತಿ ಆಗುತ್ತದೆ. ಅಮಾಯಕರು ವೃಥಾ ಇದರಲ್ಲಿ ಸಿಕ್ಕಿಹಾಕಿಕೊಳ್ಳುತ್ತಿದ್ದಾರೆ. ಇನ್ನು ಕೆಲವರು ನಕಲಿ ಜಿ.ಪಿ.ಎ.ಗಳನ್ನು ಸೃಷ್ಟಿಸಿ, ಅದರ ಆಧಾರದ ಮೇಲೆ ವ್ಯವಹಾರ ಮಾಡುತ್ತಿದ್ದಾರೆ. ಇದರಿಂದ ಯಾವುದು ನೈಜ ಹಾಗೂ ಯಾವುದು ನೈಜ ಅಲ್ಲ ಎನ್ನುವುದು ಗೊತ್ತಾಗುತ್ತಿಲ್ಲ. ಹೀಗಾಗಿ ಇಂತಹ ಸಂದರ್ಭಗಳಲ್ಲಿ ನಾವೇನು ಮಾಡಿದ್ದೇವೆ ಎಂದರೆ, ಆಸ್ತಿ ವಹಿವಾಟು ಇದ್ದಲ್ಲಿ ಎಲ್ಲಿ 'conveyance' ಎಂಬ ಪದವನ್ನು ನಾವು ಬಳಸುತ್ತೇವೆಯೋ, ಜಿ.ಪಿ.ಎ. ಆಧಾರದ ಮೇಲೆ ಆಸ್ತಿ ವಹಿವಾಟನ್ನು ಮಾಡುವುದಾದರೆ, ಸದರಿ ಜಿ.ಪಿ.ಎ. ಕಡ್ಡಾಯವಾಗಿ ನೋಂದಣಿಯಾಗಿರಬೇಕು ಎಂಬ ಕ್ರಮವನ್ನು ಈಗಾಗಲೇ ತೆಗೆದುಕೊಂಡಿದ್ದೇವೆ. ಕೆಲವೊಂದು ಸಂದರ್ಭದಲ್ಲಿ ಹಾಲಿ ಇರುವ ಮಾನದಂಡವನ್ನು ಹೆಚ್ಚಳ ಮಾಡುತ್ತಿದ್ದೇವೆ. ಕೆಲವೊಂದು ಸಂದರ್ಭಗಳಲ್ಲಿ ಹಾಲಿ ಇರುವ ನಿಯಮಾವಳಿಗಳನ್ನು ಇನ್ನೂ ಸರಳೀಕರಣಗೊಳಿಸುತ್ತಿದ್ದೇವೆ. ಈ ರೀತಿಯ ಬದಲಾವಣೆಗಳನ್ನು ನಾವು ವಿಧೇಯಕದಲ್ಲಿ ತೆಗೆದುಕೊಂಡು ಬಂದಿದ್ದೇವೆ. ಕೆಲವೊಂದು ಸಂದರ್ಭಗಳಲ್ಲಿ ದಾಖಲೆಗಳನ್ನು ಭೌತಿಕವಾಗಿ ಹಾಜರುಪಡಿಸಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಎಲೆಕ್ಟ್ರಾನಿಕಲಿ ಪೇಪರ್‌ಗಳನ್ನು ಹಾಜರುಪಡಿಸಬಹುದು ಎನ್ನುವಂತಹ ತಿದ್ದುಪಡಿ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಇನ್ನೊಂದು 'physical presence of the registering parties' ಎಂಬುದಾಗಿ ಇದೆ. ಅದರ ಬದಲಾಗಿ 'virtual presence' ಎಂಬ ತಿದ್ದುಪಡಿಯನ್ನು ಮಾಡುತ್ತಿದ್ದೇವೆ. ಇನ್ನು ಕೆಲವು ಸಂದರ್ಭದಲ್ಲಿ physical presence ಅಥವಾ virtual presence ಎರಡರದ್ದೂ ಅವಶ್ಯಕತೆ ಇಲ್ಲ. 'Only when documents are electronically produced, it can be executed' ಎಂಬುದಾಗಿ ಮಾಡುತ್ತಿದ್ದೇವೆ. ಈ ಸಂಬಂಧ ಕೆಲವು ತಿದ್ದುಪಡಿಗಳನ್ನು ಮಾಡುತ್ತಿದ್ದೇವೆ.

ಇದೇ ವಿಚಾರವಾಗಿ ಮತ್ತೊಂದು ಅಂಶವನ್ನು ಹೇಳುವುದೇನೆಂದರೆ, ನೋಂದಣಿ ಪ್ರಕ್ರಿಯೆಯಲ್ಲಿ ಆಗುತ್ತಿರುವ ಅಕ್ರಮಗಳು ಯಾವ ರೀತಿಯದ್ದಾಗಿವೆ ಎಂದು ಹೇಳಿದರೆ, ಯಾವುದೋ ಪಂಚಾಯಿತಿಯಿಂದ ಖಾತೆ ಪಡೆದುಕೊಂಡಿರುವುದನ್ನು ಅವರುಗಳು ತೆಗೆದುಕೊಂಡು ಬರುತ್ತಾರೆ. ಆದರೆ ಅದನ್ನು ಯಾವುದೋ ಕಂಪ್ಯೂಟರ್ ಅಂಗಡಿಯಿಂದ ಡಿ.ಟಿ.ಪಿ. ಮಾಡಿಸಿಕೊಂಡು ಪಡೆದುಕೊಂಡಿರುತ್ತಾರೆ. ಬಿ.ಬಿ.ಎಂ.ಪಿ. ಅಥವಾ ಗ್ರಾಮ ಪಂಚಾಯಿತಿಗಳ ಖಾತೆಗಳ ಪ್ರಿಂಟ್ ಔಟ್ ಅನ್ನು ಕಂಪ್ಯೂಟರ್ ಅಂಗಡಿಗಳಂದ ಇವರು ಪಡೆದುಕೊಂಡು ಇಲ್ಲಿ ಕೊಡುತ್ತಾರೆ.

ಯಾವುದೇ ದಾಖಲಾತಿಗಳನ್ನು ನೋಂದಣಿ ಸಮಯದಲ್ಲಿ ಹಾಜರು ಪಡಿಸಿದಾಗ ರಾಜ್ಯ ಉಚ್ಛ ನ್ಯಾಯಾಲಯದ ನಿರ್ದೇಶನದಂತೆ, ಅದರ ನೈಜತೆಯನ್ನು ಪರಿಶೀಲನೆ ಮಾಡುವ ಅವಶ್ಯಕತೆ ಇರುವುದಿಲ್ಲ. 'The registering officer shall not verify the genuinity of the documents presented. Documents presented should be accepted and proceeded with' ಎಂಬುದಾಗಿ ರಾಜ್ಯ ಉಚ್ಛ ನ್ಯಾಯಾಲಯವು ನಿರ್ದೇಶಿಸಿರುತ್ತದೆ. ಹೀಗಾಗಿ ಇದು ಒಂದು ರೀತಿಯ ಕಾಕತಾಳೀಯವಾಗಿದೆ. ಒಂದು ಕಡೆ ಇವರುಗಳು ನಕಲಿ ದಾಖಲೆಗಳನ್ನು ತಂದು ಕೊಡುತ್ತಾರೆ; 'I am not required to verity' ಎಂಬುದಾಗಿ ಉಚ್ಛ ನ್ಯಾಯಾಲಯವು ತಿಳಿಸುತ್ತದೆ. ಹೀಗಾಗಿ ಇದು ಪರಿಪೂರ್ಣವಾಗಿದೆ. ಇದು "ರೋಗಿ ಬಯಸಿದ್ದು ಹಾಲು ಅನ್ನ; ವೈದ್ಯ ಹೇಳಿದ್ದು ಹಾಲು ಅನ್ನ" ಎಂಬ ನಾಣ್ಣುಡಿಯಂತಾಗಿದೆ. ನಕಲಿ ದಾಖಲಾತಿಗಳ ಆಧಾರದ ಮೇಲೆ ನೋಂದಣಿಗಳು ನಡೆಯುತ್ತಿವೆ. ನಾನು ಈ ಹಿಂದೆ ವಿರೋಧ ಪಕ್ಷದಲ್ಲಿದ್ದಾಗ ಇದೇ ವಿಚಾರವಾಗಿ ನಾನು ವಿಧಾನ ಸಭೆಯಲ್ಲಿಯೂ ಸಹ ಪ್ರಶ್ನೆಯನ್ನು ಕೇಳಿದ್ದೆನು. ಸ್ಥಾಯಿ ಸಮಿತಿಗಳಲ್ಲಿಯೂ ಸಹ ಇದರ ಬಗ್ಗೆ ಹಲವಾರು ಬಾರಿ ಪ್ರಶ್ನೆ ಮಾಡಿದ್ದೆನು. ಈ ರೀತಿಯಾದ ನೂರಾರು ಉದಾಹರಣೆಗಳನ್ನು ನಾನು ಕೊಡಬಹುದು. ಸಮಯದ ಅಭಾವದಿಂದಾಗಿ ನಾನು ಇಲ್ಲಿ ಕೇವಲ ಒಂದು ಉದಾಹರಣೆಯನ್ನು ಮಾತ್ರವೇ ಹೇಳಬಯಸುತ್ತೇನೆ. "ಸ್ವಾಮಿ ಯಾರಾದರೂ ಒಬ್ಬರು ವಿಧಾನಸೌಧಕ್ಕೆ ಆರ್.ಟಿ.ಸಿ. ಅನ್ನು ಮಾಡಿಸಿಕೊಂಡು ಬಂದರೆ, ನೀವು ಅದನ್ನು ನೋಂದಣಿ ಮಾಡುತ್ತೀರಾ" ಎಂಬುದಾಗಿ ನಾನು ಈ ಹಿಂದೆ ಅಂದಿನ ಕಂದಾಯ ಸಚಿವರಿಗೂ ಸಹ ಪ್ರಶ್ನೆಯನ್ನು ಕೇಳಿದ್ದೆನು. ಈ ರೀತಿಯಾಗಿ ಮಾಡುವುದಿಲ್ಲ ಎಂಬುದಾಗಿ ಆಗ ಯಾರೂ ಸಹ ಹೇಳಲಿಲ್ಲ. ಅಂದರೆ ಇದರ ಅರ್ಥವೇನೆಂದರೆ, ಯಾರಾದರೂ ಸಹ ವಿಧಾನಸೌಧಕ್ಕೆ ಆರ್.ಟಿ.ಸಿ. ಯನ್ನು ಮಾಡಿಸಿಕೊಂಡು ಬಂದು, ಇದರ ಆಧಾರದ ಮೇಲೆ ಸ್ವತ್ತನ್ನು ಮಾರಾಟ ಮಾಡಲು ಹೊರಟರೆ, 'Yes, I will register' ಎಂದು ಆಗುತ್ತದೆ. ಡಿ.ಟಿ.ಪಿ. ಮತ್ತು ಕಂಪ್ಯೂಟರ್‌ಗಳ ಮೂಲಕ ಅವುಗಳನ್ನು ಪ್ರಿಂಟ್ ಮಾಡಿಕೊಂಡು ಬಂದು; ಇದು ನನ್ನ ಆಸ್ತಿ ಎಂಬುದಾಗಿ ಹೇಳುತ್ತಾರೆ. ಅದೇ ರೀತಿಯಾಗಿ ಬಿ.ಬಿ.ಎಂ.ಪಿ.ಯ ಖಾತೆಯನ್ನೂ ಸಹ ಮಾಡಿಸಿಕೊಂಡು ಬರುತ್ತಾರೆ. ಬಿ.ಬಿ.ಎಂ.ಪಿ. ಯ ಆರ್.ಟಿ.ಸಿ. ಅನ್ನು ಇಂಟಿಗ್ರೇಟ್ ಮಾಡಿರುವುದು ತಮಗೂ ಸಹ ತಿಳಿದಿರುವ ವಿಚಾರವಾಗಿದೆ. ಆದರೆ ಈ ಮುಂಚೆ ಇದನ್ನು ಇಂಟಿಗ್ರೇಶನ್ ಮಾಡಿರಲಿಲ್ಲ. ಅದೇ ರೀತಿಯಾಗಿ ಬಹುಮಹಡಿಗಳ ಕಟ್ಟಡದ ಖಾತೆಯೂ ಸಹ ನೋಡುವುದಕ್ಕೆ ಮತ್ತು ಮುಟ್ಟುವುದಕ್ಕೆ ಪಾಲಿಕೆಯ ಖಾತೆಯಂತೆಯೇ ಇರುತ್ತದೆ. ಕ್ರಯಪತ್ರದಲ್ಲಿ ಬಹುಮಹಡಿಗಳ ಕಟ್ಟಡದ ಚೆಕ್ಕುಬಂಧಿಯನ್ನು ನಮೂದಿಸಿ, ಇನ್ಯಾರದ್ದೋ ಆಸ್ತಿಯ ನಂಬರ್ ಅನ್ನು ನಮೂದಿಸಿಕೊಂಡು ಬಂದರೆ, ಇಷ್ಟು ದಿನಗಳವರೆಗೆ ಅದನ್ನು ನೋಂದಣಿ ಮಾಡಲಾಗುತ್ತಿತ್ತು. ಸುಮಾರು ಆರ್.ಟಿ.ಸಿ.ಗಳಲ್ಲಿ "ಸರ್ಕಾರ" ಎಂದು ನಮೂದಾಗಿದ್ದರೂ ಸಹ ಅಂತಹ ಜಮೀನುಗಳಿಗೂ ಸಹ ಯಾರೋ ಖಾಸಗಿ ವ್ಯಕ್ತಿಗಳ ಆಸ್ತಿ ವಹಿವಾಟು ಮಾಡಿರುತ್ತಾರೆ. ಇಂತಹ ನಕಲಿ ದಾಖಲೆಗಳ ಆಧಾರದ ಮೇಲೆ ಮಾಡುವ ಎಲ್ಲಾ ರೀತಿಯ ನೋಂದಣಿ ಅಕ್ರಮಗಳಿಗೆ ಕಡಿವಾಣ ಹಾಕಬೇಕು ಎನ್ನುವ ದೃಷ್ಟಿಯಿಂದ

ಈಗ ಆರ್.ಟಿ.ಸಿ. ಮತ್ತು ಕಾವೇರಿ ತಂತ್ರಾಂಶಕ್ಕೂ ಸಂಯೋಜನೆ ಮಾಡಿದ್ದೇವೆ. ಅದೇ ರೀತಿಯಾಗಿ ಬಿ.ಬಿ.ಎಂ.ಪಿ.ಯಲ್ಲಿ ಖಾತೆ ಇದ್ದರೆ, ಬಿ.ಬಿ.ಎಂ.ಪಿ. ದಾಖಲೆಗೂ ಕಾವೇರಿ ತಂತ್ರಾಂಶಕ್ಕೂ ಸಂಯೋಜನೆ ಮಾಡಲಾಗಿದೆ. ಮುಂದುವರೆದು, ಅದೇ ರೀತಿಯಾಗಿ ಪುರಸಭೆ ಮತ್ತು ಗ್ರಾಮ ಪಂಚಾಯಿತಿಗಳಲ್ಲಿ ಖಾತೆ ಇದ್ದರೆ, ಇವುಗಳಿಗೂ ಹಾಗೂ ನಮ್ಮ ದಾಖಲೆಗಳಿಗೂ ಸಂಯೋಜನೆ ಮಾಡಲಾಗಿದೆ. ಅಲ್ಲಿ ಖಾತೆ ಇದ್ದರೆ ಮಾತ್ರವೇ ಇಲ್ಲಿ ಸ್ವತ್ತಿನ ನೋಂದಣಿಯಾಗುತ್ತದೆ; ಇಲ್ಲವೆಂದರೆ ನೋಂದಣಿಯಾಗುವುದಿಲ್ಲ. (ಮುಂದು)

(718)14-08-2025 1-50 bkp-ak (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಕೃಷ್ಣ ಬೈರೇಗೌಡ(ಮುಂದು..)**

ಹೀಗಾಗಿ, ಸುಳ್ಳು ದಾಖಲೆಗಳ ಮೇಲೆ registration ಆಗುವುದಕ್ಕೆ ಕಡಿವಾಣ ಹಾಕುವಂತಹ ಅಕ್ರಮಗಳಿಗೆ.. ನಾಳೆ ಈ ಎಲ್ಲಾ ಲಿಟಿಗೇಷನ್‌ಗಳು ಆಗುತ್ತವೆ. ಹೀಗಾಗಿ, ಜನರು ಆಸ್ತಿಯನ್ನು ಕೊಂಡುಕೊಂಡು ಎಷ್ಟೋ ಜನಕ್ಕೆ ನೆಮ್ಮದಿಯಾಗಿ ಜೀವನ ಮಾಡುವುದರ ಬದಲಿಗೆ ಜೀವನದಲ್ಲಿ ನೆಮ್ಮದಿಯನ್ನು ಕಳೆದುಕೊಳ್ಳುವ ಹಾಗೆ ಆಗಿದೆ. ಏತಕ್ಕೆ ಆಗುತ್ತಿದೆ ಎಂದರೆ, ಗೊತ್ತಿದ್ದು ಅಕ್ರಮಗಳನ್ನು ನಡೆಯಲಿಕ್ಕೆ ಬಿಡುತ್ತೇವೆ. ಅಕ್ರಮ ಶುರು ಆದಮೇಲೆ ಅದು series ಆಗುತ್ತದೆ. ಅದು ಒಂದು ಹೆಜ್ಜೆಗೆ ಮುಗಿಯುವುದಿಲ್ಲ. ಖಾತೆ ಆಗಬೇಕೆಂದರೆ, ನಾಳೆ ಅಲ್ಲಿ ಮತ್ತೆ ಲಂಚ. ಜನರಿಗೆ ಏನ್ರಿ ನೀವು ಕಾನೂನುಬಾಹಿರವಾಗಿ ಮನೆಗಳನ್ನು ಕಟ್ಟಿಕೊಂಡಿದ್ದೀರಿ ಎಂದರೆ ಅವರು ನನಗೆ ಪ್ರಶ್ನೆಯನ್ನು ಮಾಡುತ್ತಾರೆ. ಶಾಸಕನಾದ ನನಗೆ ಪ್ರಶ್ನೆ ಮಾಡುತ್ತಾರೆ. ಕಾನೂನುಬಾಹಿರವಾಗಿ ನೋಂದಣಿಯಾಗಬೇಕಾದರೆ ನೀವು ಏತಕ್ಕೆ ಬಿಟ್ಟಿದ್ದೀರಿ ಎಂದವರು ನನಗೆ ಕೇಳುತ್ತಾರೆ. ಅನಧಿಕೃತವಾದ ಬಡಾವಣೆಯಾಗಿದ್ದು, ಇದು ಕಂದಾಯ ಬಡಾವಣೆಯಾಗಿದೆ. ಇದಕ್ಕೆ ನೀವು ಏತಕ್ಕೆ ಬಿಟ್ಟಿದ್ದೀರಿ ಎಂದು ಕೇಳುತ್ತಾರೆ. ಅದಕ್ಕೆ ಮೂಲಕ್ಕೆ ಹೋಗಿ ಕಡಿವಾಣ ಹಾಕುವಂತಹ ಪ್ರಯತ್ನವನ್ನು ಮಾಡುತ್ತಿದ್ದೇವೆ. ಅದಕ್ಕೆ ತತ್ಸಂಬಂಧವಾಗಿ ಕೆಲವು ತಿದ್ದುಪಡಿಗಳನ್ನು ಇದರ ಮೂಲಕ ತೆಗೆದುಕೊಂಡು ಬಂದಿದ್ದೇವೆ, ಇದಕ್ಕೆ ಸದನ ಅನುಮತಿಯನ್ನು ನೀಡಬೇಕೆಂದು ಕೋರುತ್ತೇನೆ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಾನು ಈ ಬಗ್ಗೆ ಎರಡು ಕ್ಲಾರಿಫಿಕೇಷನ್ ಕೇಳಲಿಕ್ಕೆ ಬಯಸುತ್ತೇನೆ. ಈ ಸೈಬರ್ ವಂಚನೆ ಮಾಹಿತಿ ತಮಗೆ ಗೊತ್ತಿದೆ. Artificial Intelligence ಅನ್ನು ಉಪಯೋಗಿಸಿ ಯಾವುದನ್ನು ಬೇಕಾದರೂ ಈಗ create ಮಾಡಬಹುದು. ಈಗ ನೀವು ಏನೋ ಸುಧಾರಣೆಯನ್ನು ತರಬೇಕೆಂಬ ಸದುದ್ದೇಶದಿಂದ ತಂದಿದ್ದೀರಿ. ಸೈಬರ್ ವಂಚಕರು, ನಾಳೆ ಸರ್ಕಾರಿ ಅಧಿಕಾರಿಗಳೇ ಆನ್‌ಲೈನ್‌ನಲ್ಲಿ ಇದೇ ರೀತಿಯಲ್ಲಿ ಸೃಷ್ಟಿ ಮಾಡಿ ಹ್ಯಾಕ್ ಮಾಡಿ ಇದನ್ನು ದುರುಪಯೋಗ ಪಡಿಸಿಕೊಳ್ಳುವ ಸಾಧ್ಯತೆ ಇಲ್ಲವೇ, ಅದನ್ನು ತಡೆಯಲಿಕ್ಕೆ ಏನು ಮಾಡಿದ್ದೀರಿ?

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಹತ್ತು-ಹಲವು ಸಮಸ್ಯೆಗಳ, ಗೊಂದಲಗಳ ಗೂಡಾಗಿದ್ದ ಹಲವು ವಿಷಯಗಳ ಬಗ್ಗೆ ಬಹಳ ಪ್ರಯತ್ನ ಪೂರ್ವಕವಾಗಿ ಕಂದಾಯ ಸಚಿವರು ಅದರ ಸಿಲುಕುಗಳನ್ನು ಬಿಡಿಸುವಂತಹ ವಿಶೇಷ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಇಲ್ಲಿ ಬಿಲ್‌ಗಳನ್ನು ಪಾಸ್ ಮಾಡುವಾಗ ಆಡಳಿತ ಪಕ್ಷದವರು " ಹೌದು ಎಂದು ಗಟ್ಟಿಯಾಗಿ ಹೇಳುತ್ತಾರೆ. ನಾವು ಹೇಳುವುದಿಲ್ಲ, ಅಷ್ಟೆ. ಆದರೆ, ನಾವು ಹೇಳಲಿಲ್ಲವೆಂದರೂ ಸಹ ಒಳ್ಳೆಯದಕ್ಕೆ ಮೌನವಾಗಿ ನಮ್ಮದು ಸಮ್ಮತಿಯನ್ನು ಕೊಡುತ್ತಿದ್ದೇವೆ ಎನ್ನುವುದೇ ಅರ್ಥ. ಆದರೆ, ಇಂತಹ ವಿಷಯಗಳು ಬಂದಾಗ ಕೆಲವೊಂದು ಜಾಗರೂಕತೆಗಳನ್ನು ತೆಗೆದುಕೊಳ್ಳಬೇಕಾದಂತಹ ಅವಶ್ಯಕತೆ ಇದೆ. ಈಗ ಇವರು ಹೇಳಿದಂತಹ ಒಂದು ವಿಚಾರ. ಇವತ್ತು ಈ ರೀತಿಯ ಬದಲಾವಣೆಗಳು ನೇರವಾಗಿ ಸಾಮಾನ್ಯ ಜನರಿಗೆ ವಿಶೇಷವಾದಂತಹ ಪ್ರಯೋಜನ ಕೊಡುತ್ತಿದೆ ಎನ್ನುವುದು ಹೌದಾದರೂ ಕೂಡ ಈ ವ್ಯವಸ್ಥೆಯನ್ನು ದುರುಪಯೋಗ ಮಾಡಿಕೊಳ್ಳುವಂತಹ ಬೇರೆ ಪ್ರಯತ್ನಗಳು ಆಗುತ್ತಿರುತ್ತವೆ. ಮತ್ತೆ, ನೇರವಾಗಿ ಬಿಲ್ ಪಾಸ್ ಮಾಡುವುದರ ಬದಲು ಕಂದಾಯ ಸಚಿವರಾದ ತಾವು ಈ ನಿಟ್ಟಿನಲ್ಲಿ ಒಳ್ಳೆಯ ಪ್ರಯತ್ನಗಳನ್ನು ಮಾಡುತ್ತಿದ್ದೀರಿ ಎಂದು ಹೇಳುವಂತಹದ್ದು ಕೂಡ ನಮ್ಮ ಜವಾಬ್ದಾರಿ ಎಂದು ತಿಳಿದುಕೊಂಡು ಒಂದೆರಡು ಸಂಗತಿಗಳ ಬಗ್ಗೆ ಒಂದು lighter note ನಲ್ಲಿ ಹೇಳುವುದಾದರೆ ನಾಡಿದ್ದು, ಬರುವ ಜೂನ್‌ಗೆ ವಿಧಾನ ಪರಿಷತ್ತಿನ ನನ್ನ ಅವಧಿ ಮುಗಿಯುತ್ತದೆ. ಮತ್ತೆ ನಾನು ಪುನಃ ನ್ಯಾಯವಾದಿಯಾಗಿ ಅಲ್ಲಿ ಹೋಗಿ ಪ್ರಾಕ್ಟಿಸ್ ಮಾಡಬೇಕು. ಹೀಗಾಗಿ ನನ್ನ ಕೆಲಸವನ್ನು ಈ ವಿಚಾರದಲ್ಲಿ ಮಾಡುತ್ತಿದ್ದೀರಿ. ನನ್ನ ಹೊಟ್ಟೆಗೆ ಹೊಡೆಯುತ್ತಿದ್ದೀರಿ ಎಂದು ನಾನು ವಕೀಲರ ಪರವಾಗಿ ಹೇಳಲಿಕ್ಕೆ ಬಯಸುತ್ತೇನೆ.

**ವೈಸ್ ಛೇರ್ಮನ್:-** ನಾಳೆ ತೊಂದರೆ ಏನಾಗುತ್ತದೋ ಎಂದು ಹೇಳುತ್ತಿದ್ದೀರಾ?

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:-** ನೋಡಿ, ಸಾಲವನ್ನು ತೆಗೆಯುವುದಕ್ಕೋಸ್ಕರ ನಮ್ಮಲ್ಲಿಗೆ ಬರುತ್ತಿದ್ದರು. ನಾವು ಅದಕ್ಕೊಂದು ದಾಖಲೆಯನ್ನು ತಯಾರು ಮಾಡಿ. ಅವರಿಗೆ ಕೊಟ್ಟು, ಅದನ್ನು ನೋಂದಣಿ ಮಾಡಿಸುತ್ತಿದ್ದೆವು. ಆ ಒಂದು ಕೆಲಸ ಹೋಯಿತು. ಈಗ ಬೇರೆ ಬೇರೆ ಕೆಲಸಗಳು ಹೋದವು. ಆದರೆ, ಜನರ ದೃಷ್ಟಿಯಿಂದ ಇದು ಒಳ್ಳೆಯದು ಎಂದು ಹೇಳುವಂತಹದ್ದನ್ನು ಒಪ್ಪಿಕೊಂಡು ಮಾಡಬೇಕಾಗಿದೆ. ನಾನು ಒಬ್ಬ ನೋಟರಿ ಕೂಡ ಆಗಿರುತ್ತೇನೆ. ಈಗ ಎಲ್ಲಾ ಜಿ.ಪಿ.ಎ.ಗಳನ್ನು ನೋಂದಣಿ ಮಾಡಲಿಕ್ಕೆ ಶುರು ಮಾಡಿದ್ದೀರಿ. ಇದರ ಪರಿಣಾಮ ಏನಾಗುತ್ತದೆ ಎಂದು ಹೇಳಿದರೆ ಮತ್ತೆ ಪುನಃ ನಮ್ಮ ನೋಟರಿಗಳಿಗೆ ಕೆಲಸ ಕಡಿಮೆ ಆಗುತ್ತದೆ. ಆದರೂ ಸಹ ಈ ವಿಷಯ ಖಂಡಿತವಾಗಿಯೂ ಒಳ್ಳೆಯದೇ ಆಗಿದೆ. ಆದರೆ, ನನ್ನ ವಿನಂತಿ ಏನೆಂದರೆ, ಎಷ್ಟೋ ಬಾರಿ ಇಲ್ಲಿ ಒಳ್ಳೆಯ ಅಲೋಚನೆಗಳನ್ನು ಮಾಡುತ್ತೇವೆ. ಆದರೆ, ಆ ಆಲೋಚನೆಗಳು ಬೇರು ಮಟ್ಟಕ್ಕೆ ಹೋದಾಗ ಅಥವಾ ಕೆಳಗಿನ ಮಟ್ಟಕ್ಕೆ ಹೋದಾಗ ಅವರು ಅದನ್ನು ಅರ್ಥ ಮಾಡಿಕೊಳ್ಳುವಂತಹದ್ದನ್ನು ಬಿಟ್ಟು, ಅದನ್ನು ಬೇರೆ ರೀತಿಯಲ್ಲಿ ಅರ್ಥ ಮಾಡಿಕೊಳ್ಳುವುದರ ಬಗ್ಗೆ ನಾನು ಒಂದು ಉದಾಹರಣೆಯನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ. ಕನ್‌ವರ್ಷನ್ ಆಗಬೇಕೆಂದಾದರೆ ರಸ್ತೆ ಬೇಕೇ ಬೇಕು ಎಂದು ಹೇಳುವಂತಹದ್ದನ್ನು ಈಗ ಕಂದಾಯದವರು

ತಂದಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದು ಎಷ್ಟರಮಟ್ಟಿಗೆ ಪ್ರಾಕ್ಟಿಕಲ್ ಎನ್ನುವುದನ್ನು ಆಲೋಚನೆ ಮಾಡಿದರೆ... ಇದು ಒಂದು ಅವಕಾಶ ಎನ್ನುವ ಕಾರಣಕ್ಕೆ ನಿಮ್ಮ ಗಮನಕ್ಕೆ ವಿಚಾರವನ್ನು ತರಲಿಕ್ಕೆ ಬಯಸುತ್ತೇನೆ. ನೀವು ಈ ರೀತಿಯ ತಿದ್ದುಪಡಿಯನ್ನು ತರುತ್ತೀರಿ, ಆ ದೃಷ್ಟಿಯಲ್ಲಿ ಕರಾವಳಿ ಭಾಗಕ್ಕೆ, ಅಲ್ಲಿಯ ಭೌಗೋಳಿಕ ಸಂಗತಿಗೆ ಸರಿಯಾಗಿ ನೀವು ಒಂದು ವಿಶೇಷವಾದಂತಹ ಆಲೋಚನೆಯನ್ನು ಮಾಡಬೇಕಾದ ಅವಶ್ಯಕತೆ ಇದೆ. ನಮ್ಮಲ್ಲಿ ಗ್ರಾಮಠಾಣಗಳು ಇರುವುದಿಲ್ಲ. ಯಾವರೀತಿಯಲ್ಲಿ ಈ ಕಡೆ ಮೇಲ್ಭಾಗದಲ್ಲಿ ಬಯಲು ಪ್ರದೇಶಗಳಲ್ಲಿ ಮನೆಗಳು ಒಂದೇ ಕಡೆ ಇರುತ್ತವೆ. ಕೃಷಿಭೂಮಿಗಳು ಒಂದೇ ಕಡೆ ಇರುತ್ತವೆ. ಆದರೆ, ನಮ್ಮಲ್ಲಿ ಎಲ್ಲವೂ ಸಣ್ಣ ಹಿಡುವಳಿಗಳಾಗಿದ್ದು, ಸಣ್ಣ ಹಿಡುವಳಿಗಳಲ್ಲಿಯೇ ನನ್ನ ಮನೆ ಇದೆ. ನನಗೆ 3 ಎಕರೆ, 5 ಎಕರೆ ಜಮೀನು ಇದ್ದರೆ ಮನೆಯಲ್ಲಿ 4 ಜನರು ಇದ್ದರೆ ನಾವು 4 ಜನರು ಪಾಲು ಮಾಡಿಕೊಳ್ಳುತ್ತೇವೆ. ಆ 4 ಪಾಲು ಮಾಡಿಕೊಂಡಾಗ ಅದು 4 ಮನೆಗಳಾಗುತ್ತದೆ. 4 ಮನೆಯಾಗಬೇಕಾದರೆ ನಾನು ಕನ್‌ವರ್ಷನ್ ಮಾಡಲೇಬೇಕು. ಕನ್‌ವರ್ಷನ್ ಮಾಡಬೇಕಾದರೂ ಸಹ ನನ್ನ ಭೂಮಿಯಲ್ಲಿ ಇದಕ್ಕೆ ಮಾರ್ಗ ಇದ್ದರೂ ಕೂಡ ಈಗಿನ ಕಾನೂನಿನಲ್ಲಿ ಆ ಮಾರ್ಗವನ್ನು ಮೊದಲು ಕನ್‌ವರ್ಷನ್ ಮಾಡಬೇಕು. ಕನ್‌ವರ್ಷನ್ ಮಾಡಿ, ಅದನ್ನು ಪಂಚಾಯಿತಿಯ ಹೆಸರಿಗೆ ದಾನ ಪತ್ರವನ್ನು ಮಾಡಿಕೊಡಬೇಕು. ಇದನ್ನು ಮಾಡಿ ಮತ್ತೆ, ನಮಗೆ ಮನೆ ಕಟ್ಟುವುದಕ್ಕೆ ಕನ್‌ವರ್ಷನ್‌ಗೆ ಬರದಿದ್ದರೆ ನಮೂನೆ 9 ಮತ್ತು 11 ಪಂಚಾಯಿತಿಗೆ ಹೋಗದೇ ಅದು ಪ್ರಾಧಿಕಾರಕ್ಕೆ ಹೋಗುತ್ತದೆ. ಪ್ರಾಧಿಕಾರದಲ್ಲಿ ಕೊಡುವುದಿಲ್ಲ. ಈ ತಿದ್ದುಪಡಿಗೆ ಅದು ಸಂಬಂಧ ಇಲ್ಲದೇ ಇರಬಹುದು, ಆದರೆ, practical ಆಗಿ ಈ ರೀತಿಯ ಸಂಗತಿಗಳು ಕೆಳಗಡೆ ಆಗುತ್ತವೆ. ನಾನು ಒಂದು ದಾಖಲೆಯನ್ನು ತಂದಿದ್ದೇನೆ. ನೋಡಿ, alienation ನಕ್ಷೆ ತಯಾರಿ ಬಗ್ಗೆ ಈ ಮೇಲಿನ ವಿಷಯಕ್ಕೆ ಸಂಬಂಧಿಸಿದ, ಉಲ್ಲೇಖಿಸಿದಂತೆ ಜಿಲ್ಲಾಧಿಕಾರಿಗಳಿಗೆ ಭೂ ಪರಿವರ್ತನೆಗಾಗಿ ಸಲ್ಲಿಸುವ ಕಡತಗಳಲ್ಲಿ ಭೂ ಪರಿವರ್ತನೆಗಾಗಿ ಕೋರಿರುವ ಸ್ಥಳಕ್ಕೆ ಸಂಪರ್ಕಿಸುವ ರಸ್ತೆಯ ಬಗ್ಗೆ ಸ್ಫುಟವಾಗಿ ತೋರಿಸಬೇಕು. ಸರ್ಕಾರಿ ರಸ್ತೆಯನ್ನು ಒಳಗೊಂಡು ಸಂಪರ್ಕವನ್ನು ಹೊಂದಿದ್ದರೆ ಮಾತ್ರ ಭೂ ಪರಿವರ್ತನೆಗೊಳಿಸಲಾಗುವುದು. ಈ ರೀತಿಯಲ್ಲಿ ಅರ್ಥವನ್ನು ಕೊಟ್ಟು ಇವತ್ತು ಭೂ ಪರಿವರ್ತನೆಯಾಗುತ್ತಿಲ್ಲ. ನನ್ನ ಪ್ರಶ್ನೆ ಏನೆಂದರೆ, ಈಗಾಗಲೇ ನೀವೇ ಅಂದರೆ, ಕಂದಾಯ ಇಲಾಖೆಯವರೇ, ಭೂ ಪರಿವರ್ತನೆ ಮಾಡಿಕೊಟ್ಟಿದ್ದು, ನಾನು ಅದರಲ್ಲಿ ಮನೆ ಕಟ್ಟಿದ್ದೇನೆ. ನಾನು ಸಾಲವನ್ನು ತೆಗೆದಿದ್ದೇನೆ. ಈಗ ನಾನು ಅದನ್ನು ಮಾರಬೇಕೆಂದರೆ ದೃಷ್ಟಿಯಲ್ಲಿ ಏನಾದರೂ ಹೋದರೆ already converted property ಗೂ ನಮೂನೆ 9 ಮತ್ತು 11 ಸಿಗುವುದಿಲ್ಲ. ಎಲ್ಲಿಯವರೆಗೆ suggest ಮಾಡುತ್ತಾರೆಂದರೆ ನೀವು ಪುನಃ ಆ ಭೂ ಪರಿವರ್ತನೆಯನ್ನು ರದ್ದುಗೊಳಿಸಿ, ಹೊಸದಾಗಿ ಭೂ ಪರಿವರ್ತನೆಗೆ ಅರ್ಜಿಯನ್ನು ಕೊಡಿ, ಮಾರ್ಗವನ್ನು ತೋರಿಸಿಕೊಳ್ಳಿ, ಮತ್ತೆ ಮಾಡಿ ಎಂದು ಹೇಳುತ್ತಿದ್ದೀರಿ. ಅದು ನನ್ನ ಜೀವಮಾನದಲ್ಲಿ ಆಗುವಂತಹ ಕೆಲಸ ಅಲ್ಲ. ನನ್ನ ಮಕ್ಕಳ ಮತ್ತು ಮೊಮ್ಮಕ್ಕಳ ಕಾಲಕ್ಕೆ ಅದು ಸರಿಯಾಗುತ್ತದೋ ಏನೋ ಎಂದು ಹೇಳುವಂತಹ ಭಾವನೆ ಇದೆ. ನೀವು ಈಗ ಏನು ಅಲೆದಾಡುವಂತಹ ಕೆಲಸವನ್ನು ಕಡಿಮೆ ಮಾಡುವ ದೃಷ್ಟಿಯಲ್ಲಿ ಇದರ ಬಗ್ಗೆ ಆಲೋಚನೆ ಮಾಡುತ್ತಿದ್ದೀರಿ, ಈ ದೃಷ್ಟಿಯಲ್ಲಿಯೂ ಕರಾವಳಿ ಭಾಗಕ್ಕೆ, ಕರಾವಳಿ ಭಾಗದವನಾದ ನನ್ನ practical

ಅನುಭವವನ್ನು ಹೇಳುತ್ತೇನೆ. ಇವತ್ತು ನಮೂನೆ 9 ಮತ್ತು 11 ಹಾಗೂ ಈ ಭೂ ಪರಿವರ್ತನೆ ಈ ಎರಡು ಕೆಲಸಗಳು ನನಗೆ ಪ್ರತಿನಿತ್ಯ ಆಗುವಂತಹ ಸಮಸ್ಯೆಗಳಾಗಿವೆ. ನೂರಾರು ಮಂದಿಗೆ ಅದರಲ್ಲೂ ನಾನು ಬೆಳ್ತಂಗಡಿಗೆ ಸಂಬಂಧಿಸಿದಂತೆ ಹೇಳುತ್ತಿದ್ದೇನೆ. ಇದು ಪ್ರಾಧಿಕಾರದ ದೃಷ್ಟಿಯಲ್ಲಿ ನಿಮ್ಮ ಇಲಾಖೆಗೆ ಸಂಬಂಧಪಡುವುದಿಲ್ಲ. ಆದರೆ, ಎಲ್ಲಿಯೋ ಒಂದು ಕಡೆ ಪ್ರಾಧಿಕಾರದವರು ಅಥವಾ ನಗರಾಭಿವೃದ್ಧಿ ಸಚಿವರು ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಹಾಗೂ ನೀವು ಸೇರಿ ಒಟ್ಟು 3 ಜನ ಕುಳಿತು, ಇದಕ್ಕೆ ಈ ಸಮಸ್ಯೆಗೆ ಏನು ಪರಿಹಾರ ಇದೆ ಎನ್ನುವುದರ ಬಗ್ಗೆ ನಿಮ್ಮನ್ನು ಉಸ್ತುವಾರಿ ಸಚಿವರು ಅಲ್ಲಿಗೆ ಕರೆದಾಗ ಮರಳು ಮತ್ತು ಇದರಲ್ಲಿ ನೀವು ಇದ್ದೀರಿ. ನಮೂನೆ 9 ಮತ್ತು 11 ಗೆ ಆಗುವಾಗ ತಾವು ಅಲ್ಲಿ ಇರಲಿಲ್ಲ. ತಾವು ಇದ್ದಿದ್ದರೆ ತಮಗೆ ಇಡೀ ಜಿಲ್ಲೆಯ ಎಲ್ಲಾ ವಿಷಯಗಳು ಗೊತ್ತಾಗುತ್ತಿತ್ತು. ಈ ದೃಷ್ಟಿಯಲ್ಲಿ ತಾವು ಆಲೋಚನೆ ಮಾಡಬೇಕೆಂದು ಹೇಳುತ್ತಾ, ಈ ಬಿಲ್ ಖಂಡಿತವಾಗಿಯೂ ಸ್ವಾಗತಾರ್ಹ ಎಂದು ಹೇಳುವಂತಹದ್ದನ್ನು ಒಪ್ಪಿಕೊಳ್ಳುತ್ತೇನೆ.

ಎರಡನೆಯದಾಗಿ, ಇದಕ್ಕೆ ಸರಿಯಾಗಿ, ಕೆಳಗಿನ ಹಂತದಲ್ಲಿ ಏನು ಕಂಪ್ಯೂಟರ್ ಅಥವಾ ನೆಟ್‌ವರ್ಕ್ ಸಮಸ್ಯೆ ಬಗ್ಗೆ ಪ್ರತಿಬಾರಿಯೂ ಚರ್ಚೆಯಾಗುತ್ತದೆ. ನಾವು ತರುವಂತಹ ಸುಧಾರಣೆಗೆ ಸರಿಯಾಗಿ ಅದನ್ನು ಧಾರಣೆ ಮಾಡುವಂತಹ ಶಕ್ತಿ ಅಲ್ಲಿಯ ಕೆಳಗಿನ ಹಂತದಲ್ಲಿ ಯಾವಾಗ ನೋಡಿದರೂ ನೆಟ್‌ವರ್ಕ್ ಇರುವುದಿಲ್ಲ ಅಥವಾ ಯಾವಾಗ ನೋಡಿದರೂ 'server down', 'server down' ಎಂದು ಹೇಳುವಂತಹದ್ದು ಇರುತ್ತದೆ. ಇಷ್ಟು ಒಳ್ಳೆಯ ಸುಧಾರಣೆ ತರುವಾಗ ಅದನ್ನು ಜಾರಿಗೆ ತರುವಂತಹ ದೃಷ್ಟಿಯಲ್ಲಿ ಆ ಕೆಳಗಿನ ವ್ಯವಸ್ಥೆಯನ್ನು ಅದಕ್ಕೆ ತಕ್ಕಂತೆ ಉನ್ನತೀಕರಿಸಲಿಕ್ಕೆ ಆಗುವುದಿಲ್ಲವೆನ್ನುವುದಾದರೆ ಯಾವುದನ್ನೇ ತಂದರೂ ಕೂಡ ಮತ್ತೆ ಜನರು ಪುನಃ ಓಡಾಡುವಂತಹ ಕೆಲಸವಾಗುತ್ತದೆ. ನಿಮ್ಮ ಸುಧಾರಣೆಗೆ ಇನ್ನು ಹೆಚ್ಚಿನ ಆಯಾಮ ಬರಲಿ ಎಂದು ಹೇಳುವಂತಹ ವಿನಂತಿಯನ್ನು ಮಾಡುತ್ತಾ, ನಾನು ಈ ತಿದ್ದುಪಡಿಯನ್ನು ಸ್ವಾಗತಿಸುತ್ತೇನೆ.

**ವೈಸ್ ಛೇರ್ಮನ್:-** ಕಂದಾಯ ಸಚಿವರೆ, ಇದಕ್ಕೆ ಪೂರಕವಾಗಿ ಒಂದು ಸಭೆ ನಡೆಯಿತು. ಆದರೆ, ಆ ಒಂದು ಸಭೆಗೆ ನೀವು ಬಂದಿರಲಿಲ್ಲ. ನೀವು ಬಂದು ಬೇಗ ಹೋಗಿದ್ದೀರಿ. ಆದರೆ, ಕರಾವಳಿ ಭಾಗಕ್ಕೆ ನಮೂನೆ 9 ಮತ್ತು 11 ಗೆ ಸಂಬಂಧಪಟ್ಟಂತೆ ಪರಿಶೀಲನೆ ಮಾಡಬೇಕೆಂದು ಅಂದು ಅಲ್ಲಿಗೆ ಬಂದಿದ್ದ ಎಲ್ಲಾ 13 ಶಾಸಕರುಗಳು ಈ ಸಭೆಯಲ್ಲಿ ಹಾಜರಿದ್ದರು. ಅದರ ಬಗ್ಗೆ ತಾವು ಸ್ವಲ್ಪ ಗಮನಹರಿಸಬೇಕು. ಇದು ಬಹಳ ಜಟಿಲವಾದಂತಹ ಸಮಸ್ಯೆಯಾಗಿದೆ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಮ್ಮ ಕಂದಾಯ ಸಚಿವರು ತಂದಿರತಕ್ಕಂತಹ ತಿದ್ದುಪಡಿಯನ್ನು ಸ್ವಾಗತ ಮಾಡುತ್ತೇನೆ. ನಾನು ಮತ್ತು ಮಾನ್ಯ ಸದಸ್ಯರಾದ ಶ್ರೀ ಪ್ರತಾಪ ಸಿಂಹ ನಾಯಕ್ ರವರದ್ದು ಒಂದೇ ಭಾಗವಾಗಿದೆ.

**(ಮುಂದು)**

(719) 14.08.2025 02.00 ಎಸ್‌ವಿ-ಆರ್‌ಎನ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಐವನ್ ಡಿಸೋಜ (ಮುಂದು):-**

ನಾವಿಬ್ಬರೂ ವಕೀಲರು. ಈಗಲೂ ಕೆಲವೊಮ್ಮೆ ನಾನು ಪ್ರಾಕ್ಟೀಸ್ ಮಾಡುತ್ತೇನೆ. ನಾನು ನೋಟರಿ ಕೂಡ ಇದ್ದೇನೆ. ನಮ್ಮ ವಿಚಾರವೇನೆಂದರೆ ಮಾನ್ಯ ಕೃಷ್ಣ ಬೈರೇಗೌಡರು ಇಲಾಖೆಗೆ ಬಂದ ಮೇಲೆ ಅವರು ಈ ಬಿಲ್‌ನ್ನು ಮನೆಯಲ್ಲಿ ಕುಳಿತು ಮಾಡಲಿಲ್ಲ. ಅವರು ಪ್ರಾಕ್ಟಿಕಲ್ ಆಗಿ ತಾಲ್ಲೂಕು ಕಛೇರಿಗೆ ಹೋಗಿ ಮಾತನಾಡುವುದನ್ನು ನಾನು ಕೇಳಿದ್ದೇನೆ. ಅವರು ಮಾತನಾಡುವುದನ್ನು ಯೂಟ್ಯೂಬ್‌ನಲ್ಲಿ ಕೇಳಿದ್ದೇನೆ. ಆ ಎಲ್ಲಾ ವಿಚಾರಗಳಿಗೆ ಪರಿಹಾರವನ್ನು ಹುಡುಕಲು ಈ ತಿದ್ದುಪಡಿಗಳನ್ನು ತಂದಿದ್ದಾರೆ.

ಮಾನ್ಯ ಸಚಿವರೆ, ನಾನು ಹೇಳಬಯಸುವುದೇನೆಂದರೆ ನೀವು ಎಲ್ಲಾ ಗ್ರಾಮ ಪಂಚಾಯ್ತಿಗಳವರಿಗೆ ಸಬ್ ರಿಜಿಸ್ಟ್ರಾರ್ ಕಛೇರಿಗೆ ಬರುವುದು ಬೇಡವೆಂದು ಹೇಳುತ್ತೀರಿ. ಬ್ಯಾಂಕ್‌ನವರಿಗೆ ಬರುವುದು ಬೇಡವೆಂದು ಹೇಳುತ್ತೀರಿ. ಕೆಐಎಡಿಬಿಯವರಿಗೆ ಬರುವುದು ಬೇಡವೆಂದು ಹೇಳುತ್ತೀರಿ. ಬಿಡಿಎ ಅವರಿಗೆ ಬರುವುದು ಬೇಡವೆಂದು ಹೇಳಿದಿರಿ. ಬೇಡವೆಂದು ಹೇಳಿದಾಗ ಆ ಕಕ್ಷಿದಾರರು ಅವರ ಹತ್ತಿರವೇ ಪುನಃ ಹೋಗದಂತೆ ನೋಡಿಕೊಳ್ಳಿ. ತಾಲ್ಲೂಕು ಕಛೇರಿ ಬೇಡ ಅಥವಾ ಸಬ್-ರಿಜಿಸ್ಟ್ರಾರ್ ಕಛೇರಿ ಬೇಡ ಎಂದು ನೀವು ಹೇಳಿದ ಮೇಲೆ ಅವರು ಪುನಃ ಅಲ್ಲಿ ಹೋಗಿ ಇಂಟರ್‌ನೆಟ್ ಇಲ್ಲ, ಸರ್ವರ್ ಇಲ್ಲ ಎಂದು ಹೇಳಿ ಅವರು ಇನ್ನೊಂದು ಕಡೆ ಹೋಗುವ ರೀತಿಯಲ್ಲಿ ಆಗಬಾರದು.

ಮಾನ್ಯ ಪ್ರತಾಪಸಿಂಹ ನಾಯಕರವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. ಅವರಿಗೆ ಮೂಲಭೂತ ಸೌಕರ್ಯ ಬೇಕು. ತಾಲ್ಲೂಕು ಕಛೇರಿ ಅಥವಾ ಸಬ್-ರಿಜಿಸ್ಟ್ರಾರ್ ಕಛೇರಿಗೆ ಹೋದರೆ ನಮ್ಮದು ಋಣಭಾರ ಹೋಯಿತೇ, Encumbrance Certificate clear ಆಯಿತೇ ಎಂದು ಕೇಳಿದರೆ ಅವರು ನಮಗೆ ಪಂಚಾಯ್ತಿಯಿಂದ ಬಂದಿಲ್ಲ ಎಂದು ಹೇಳುತ್ತಾರೆ. ಬ್ಯಾಂಕಿನಿಂದ ಬಂದಿಲ್ಲ. ನೀವು ಸ್ವಲ್ಪ ದಿನ ಬಿಟ್ಟು ಬನ್ನಿ ಎಂದು ಹೇಳುತ್ತಾರೆ. ಸರ್ವರ್ ಸರಿಯಿಲ್ಲ, ಕಂಪ್ಯೂಟರ್ ಸರಿಯಿಲ್ಲ ಎಂದು ಹೇಳುತ್ತಾರೆ. ಅದಕ್ಕೆ ಎಷ್ಟು ದಿನಗಳು ಎಂದು ಏನಾದರೂ ನಿಬಂಧನೆಯಿದೆಯೇ? ಅದರಿಂದ ಏನಾದರೂ ಹೊರಬರಲಿಕ್ಕೆ ಸಾಧ್ಯವಿದೆಯೇ? ಇದರ ಬಗ್ಗೆ ತಾವು ಆಲೋಚನೆ ಮಾಡಬೇಕು. ನೀವು ಹೇಳಿರುವ ಎಲ್ಲಾ ಅಂಶಗಳಿಂದ ನನ್ನ ಮತ್ತು ಮಾನ್ಯ ಪ್ರತಾಪ ಸಿಂಹ ನಾಯಕರ ಕೆಲಸ ಕಡಿಮೆಯಾಯಿತು. ಕರಾವಳಿ ಭಾಗದ ಬಗ್ಗೆ ಮಾನ್ಯ ಸಭಾಪತಿಯವರು ಹೇಳಿದರು. ನಾವು ಎಲ್ಲಿಯೇ ಹೋದರೂ, ಯಾವ ಗ್ರಾಮಕ್ಕೆ ಹೋದರೂ Form 9 and 11 ಮತ್ತು conversion ಇರಬೇಕು ಈ ಎರಡನ್ನು ಬಿಟ್ಟರೆ ಬೇರೆ ಯಾವ ಮಾತಿಲ್ಲ. ಮಾನ್ಯ ಸಭಾಪತಿಯವರು ಮಾತನಾಡುತ್ತಾ ತುಳುವಿನಲ್ಲಿ "ನನ್ನ ಪೂರಾ ಅರ್ಥ

ಆತುಜಿ ಮಾರಾಯ" ಎಂದು ಹೇಳಿದರು. ಅಂದರೆ ಅಷ್ಟು ಕಠಿಣವಾದ, ಜಟಿಲವಾದ ಸಮಸ್ಯೆಯಿದೆ. ಮಾನ್ಯ ಸಚಿವರೆ, ನೀವು ಮೊನ್ನೆ ಬೇರೆ ಯಾವುದೋ ಸಭೆಯಿದೆ ಎಂದು ಹೋದಿರಿ. ನೀವು ಕುಳಿತಿದ್ದರೆ ಬಹುಶಃ ಅದಕ್ಕೆ ವಿವರಣೆ ಕೊಡಲಿಕ್ಕೆ ಸಾಧ್ಯವಿತ್ತು. ಅಧಿಕಾರಿಗಳಿಗೂ ಅದರ ಬಗ್ಗೆ ತಿಳುವಳಿಕೆ ಕೊಡುವುದು ಸಾಧ್ಯವಿತ್ತು. ಸರಳೀಕರಣ ಮಾಡಿರುವುದು ಒಂದು ಒಳ್ಳೆಯ ಲಕ್ಷಣ. ನಮ್ಮ ಕರಾವಳಿ ಭಾಗದಲ್ಲಿ ಕಂದಾಯ ಇಲಾಖೆಯಲ್ಲಿರುವಷ್ಟು ಸಮಸ್ಯೆ ಬೇರೆ ಯಾವ ಇಲಾಖೆಯಲ್ಲಿಯೂ ಇಲ್ಲ. ಹಾಗಾಗಿ ನೀವು ಕಂದಾಯ ಸಚಿವರಾಗಿ ಮಾಡುತ್ತಿರುವ ಕೆಲಸ ಶ್ಲಾಘನಾರ್ಹ ಎಂದು ಹೇಳಿ ಈ ಒಂದು ತಿದ್ದುಪಡಿಯನ್ನು ಸ್ವಾಗತಿಸುತ್ತೇನೆ.

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಕಂದಾಯ ಸಚಿವರು ತಂದಿರುವ ವಿಧೇಯಕದ ಬಗ್ಗೆ ಎರಡು ಅಂಶಗಳನ್ನು ಹೇಳಬಯಸುತ್ತೇನೆ. ಋಣಭಾರವನ್ನು ತೆಗೆಯುವುದಕ್ಕೆ ಪುನಃ ಸಬ್-ರಿಜಿಸ್ಟ್ರಾರ್ ಕಛೇರಿಗೆ ಹೋಗದೆ ನೇರವಾಗಿ ಬ್ಯಾಂಕ್‌ನಿಂದ ಮಾಡಿರುವುದು ಒಂದು ಒಳ್ಳೆಯ ಕ್ರಮ. ಅದು ವಿಶೇಷವಾಗಿ ರೈತರಿಗೆ ಬಹಳಷ್ಟು ಅನುಕೂಲವಾಗುತ್ತದೆ. ಈ ಹಗರಣಗಳ ದಾಖಲೆಗಳನ್ನು ತಿರುಚುವಾಗ GPA (General Power of Attorney) ಗಳನ್ನು ಬಳಕೆ ಮಾಡಿರುವುದರಿಂದ ಇಡೀ ರಾಜ್ಯದಲ್ಲಿ GPA ಅತ್ಯಂತ ದುರ್ಬಳಕೆಯಾಗಿದೆ. ವಿಶೇಷವಾಗಿ ಬೆಂಗಳೂರಿನಲ್ಲಿಯಂತೂ ಬಹಳ ದುರ್ಬಳಕೆಯಾಗಿದೆ. ಮಾನ್ಯ ಕಂದಾಯ ಸಚಿವರು ತಿಳಿಸಬೇಕಾಗಿರುವುದೇನೆಂದರೆ KIADB, BDA ಇತ್ಯಾದಿ ಸರ್ಕಾರಿ ಸಂಸ್ಥೆಗಳ ಮೂಲಕ ಮಾಲೀಕತ್ವವನ್ನು ಕೊಡುವುದೇನಾಗುತ್ತದೆ, ಅದಕ್ಕೂ ಕೂಡ ನಾವು concerned Executive Officer ಮತ್ತು ಫಲಾನುಭವಿ ಮಧ್ಯೆ ಇರುವ transaction ಅನ್ನು ಡಿಜಿಟಲ್ ಮೂಲಕ ಮಾಡಬೇಕು ಎಂದು ತಾವು ವಿವರಿಸಿದ್ದೀರಿ. ಏಕೆಂದರೆ ಬಿಡಿಎ ಮತ್ತು ಕೆಐಎಡಿಬಿಯಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ನಿವೇಶನಗಳು ಮತ್ತು ಪ್ರಾಪರ್ಟಿಗಳ transaction ಆಗುವುದಿಲ್ಲ. ಹಾಗಾಗಿ ಇದರಲ್ಲಿ ಆ ರೀತಿಯ ತಪ್ಪುಗಳು ಕಂಡು ಬಂದರೆ ಅದಕ್ಕೆ ತಕ್ಷಣ ಪರಿಹಾರ ಹುಡುಕುವಂಥ ಕೆಲಸ ಮಾಡಬೇಕು.

ಮಾನ್ಯ ಸಚಿವರೆ, ತಾವು ಮತ್ತೊಂದು ಹೇಳಿದಿರಿ. ಸರ್ಕಾರಿ ಹಕ್ಕುಪತ್ರಗಳನ್ನು ಗ್ರಾಮೀಣ ಭಾಗದಲ್ಲಿ ಕೊಡುವುದಕ್ಕೆ Section 94CC of Karnataka Land Revenue Act ಇತ್ಯಾದಿಗಳಲ್ಲಿ ಕೊಡಲಾಗುತ್ತದೆ. ಅದನ್ನು ಬೇರೆ ಬೇರೆ ನಿಯಮಗಳಡಿಯಲ್ಲಿ ಲಕ್ಷಾಂತರ ಗ್ರಾಮಗಳಲ್ಲಿ ಸರ್ಕಾರವು ಕೊಡುತ್ತದೆ. ತಾವು ತಂದಿರುವ ಡಿಜಿಟಲ್ ವ್ಯವಸ್ಥೆಯಡಿಯಲ್ಲಿ ನನಗಾಗಲೀ, ತಮಗಾಗಲೀ ಸರ್ಕಾರದ ವ್ಯವಸ್ಥೆಯಲ್ಲಿರುವವರಿಗೆ ಕೆಳಗಾಗುವ ಪರಿಣಾಮಗಳ ಬಗ್ಗೆ ಅರಿವಾಗುವುದಿಲ್ಲ. ಅಲ್ಲಿರುವಂಥ ಒಬ್ಬ ಅಧಿಕಾರಿ ಈ ಒಂದು ಕ್ರಮ ಮಾಡುವುದಕ್ಕೆ ಬೇಕಾದಷ್ಟು

ಸತಾಯಿಸುವ ಅವಕಾಶವಿದೆ. Digitally ಏನೇ transaction ಮಾಡಿದರೂ ಕೂಡ ಅದು ಒಂದು ರೀತಿಯಾಗಿ double-edged sword. ಯಾರಿಗೆ ತಂತ್ರಜ್ಞಾನ ಗೊತ್ತಿಲ್ಲ, ಅವನು ಆ ತಂತ್ರಜ್ಞಾನದಲ್ಲಿ ಏನೋ ತಪ್ಪಾಗಿದೆಯೆಂದು ದೂಷಣೆ ಮಾಡುತ್ತಿರುತ್ತಾನೆ. ಯಾರಿಗೆ ತಂತ್ರಜ್ಞಾನ ಗೊತ್ತಿದೆ ಅವನು ಅದರ ದುರುಪಯೋಗವನ್ನು ಮಾಡಿಕೊಳ್ಳುತ್ತಿರುತ್ತಾನೆ. ಹತ್ತಾರು ಬಾರಿ ತಹಶೀಲ್ದಾರ್ ಅವರ ಬಳಿ ಹೇಳುವಂಥದ್ದು ಅಥವಾ ಕೇಳುವಂಥದ್ದನ್ನು ಮಾಡಿದಾಗ ಇದು ಸಧ್ಯಕ್ಕಾಗುತ್ತಿಲ್ಲ, ಆನ್‌ಲೈನ್‌ನಲ್ಲಿ ಸಮಸ್ಯೆಯಿದೆ ಎಂದು ಹೇಳಿದಾಗ ಅಲ್ಲಿ ಯಾರೋ ಹಕ್ಕುಪತ್ರ ಪಡೆದುಕೊಂಡಂಥ ಕಡುಬಡವ ವ್ಯಕ್ತಿಗೆ ಏನಪ್ಪಾ, ಸರ್ಕಾರ ನನ್ನನ್ನು ಹತ್ತಾರು ಬಾರಿ ತಿರುಗಿಸುತ್ತಿದೆ ಎನ್ನುವ ಭಾವನೆ ಮೂಡುತ್ತದೆ. ಇಲ್ಲಿ ಸತಾಯಿಸಬೇಕೆನ್ನುವ ವ್ಯಕ್ತಿಗೆ ಉದಾಹರಣೆ ಕೊಡಲು ಒಂದು tool ಆಗುತ್ತದೆ.

ತಾವು ಉದಾಹರಣೆಯನ್ನು ಕೊಟ್ಟಿರಿ. ಅದು ಎಂ.ಎಸ್. ಬಿಲ್ಡಿಂಗ್ ಆಗಿರಬಹುದು, ವಿಧಾನಸೌಧ ಆಗಿರಬಹುದು, ಆರ್‌ಟಿಸಿಗಳನ್ನು ಸೃಷ್ಟಿ ಮಾಡಿಕೊಂಡು registration ಮಾಡಿಕೊಳ್ಳಲು ಮುಂಚೆ ಅವಕಾಶವಿತ್ತು. ಆದರೆ ನೀವು backward digitization ಮಾಡದೆ ಸರ್ಕಾರದ ಎಲ್ಲಾ ಹಂತದ ದಾಖಲಾತಿಗಳನ್ನು ಕಾವೇರಿ ತಂತ್ರಾಂಶದಲ್ಲಿ backward digitization ಮಾಡಿ integration ಮಾಡಿ, ಶೇ.100ರಷ್ಟು ನಮ್ಮ ರಾಜ್ಯದ ಎಲ್ಲಾ ಕಂದಾಯ ದಾಖಲೆಗಳು dispose ಆಗದೆ ಎಲ್ಲಿಯೋ ಒಂದು ಕಡೆ ಮತ್ತು ಆ digitization pending ಇದ್ದು ಅದಕ್ಕೆ ಸಂಬಂಧಪಟ್ಟ ರಿಜಿಸ್ಟ್ರೇಷನ್ ಮಾಡಲು ಪ್ರಯತ್ನ ಪಟ್ಟಾಗ ಇಲ್ಲಿ ಅದು ಎರಡೂ ಸಾಫ್ಟ್‌ವೇರ್‌ಗಳ ನಡುವೆ integration ಆಗದೆ ಇರುವ ಸಂದರ್ಭದಲ್ಲಿ ಆ transaction ಮುಂದೆ ಹೋಗುವುದಿಲ್ಲ. ಆಗ ಏನಾಗುತ್ತದೆಯೆಂದರೆ it will be in the hands of the officer who is going to take the decision. ಆಗ ಅಲ್ಲಿ ಯಾರೋ ಒಬ್ಬರು ಇದು ಆಗುತ್ತಿಲ್ಲ ಎಂದು ಹೇಳುತ್ತಾರೆ.

ಮಾನ್ಯ ಕಂದಾಯ ಸಚಿವರೆ, ತಮಗೆ ತಿಳಿದಿದೆ. ಅನೇಕ ಜಿಲ್ಲೆಗಳಲ್ಲಿ ಸಣ್ಣ-ಸಣ್ಣ land holding ನವರು ಬಹಳಷ್ಟು ಜನರಿದ್ದಾರೆ. ಏಕೆಂದರೆ ಅವರ ಪಿತ್ರಾರ್ಜಿತ ಆಸ್ತಿಗಳು ವಿಭಜನೆಯಾಗಿ ಒಂದು ಮನೆಯಲ್ಲಿದ್ದವರು ಹತ್ತಾರು ಮನೆಗಳ ಅವಲಂಬಿತ ಸದಸ್ಯರಾಗಿರುವುದರಿಂದ ಈ ಥರದ ದಾಖಲೆಗಳಾಗುತ್ತದೆ, ನಾನು ನಮ್ಮ ಹೊಲದ ಒಂದು ಉದಾಹರಣೆಯನ್ನು ಕೊಡುತ್ತೇನೆ. ಒಂದು ಖಾತೆಯಲ್ಲಿ 14 ಜನರಿದ್ದಾರೆ. ನಮ್ಮ ಅಜ್ಜ ಮತ್ತು ಮುತ್ತಜ್ಜರ ಕಾಲದಲ್ಲಿದ್ದಂಥವರ ದಾಖಲೆಗಳನ್ನು ಸರಿಪಡಿಸಿಕೊಳ್ಳಬೇಕೆಂದರೆ ಅವರೆಲ್ಲರೂ ಕೂಡ ಬಂದು ದಾಖಲೆಗಳನ್ನು ಪ್ರತ್ಯೇಕವಾಗಿ ಸಿದ್ಧ ಮಾಡಿ ಸರಿಪಡಿಸಿಕೊಳ್ಳಬೇಕು. ಈ ರೀತಿಯಾಗಿ reverse integration ಅನ್ನು ಮಾಡಿ

ಹೌದು ಶೇ.100ರಷ್ಟು ಇದು ವರ್ಕ್ ಆಗುತ್ತದೆ ಎಂದು trial ಮಾಡಿ ಜಾರಿಗೆ ತರಬೇಕು. ನಾನು ತಮಗೆ ಹೇಳುತ್ತಿರುವುದೇನೆಂದರೆ are we going too much into technology and creating a confusion or creating a one more problem to people to do the registration. ಅದು ಸರ್ಕಾರದ ಜವಾಬ್ದಾರಿ. ಅಲ್ಲಿರುವ ಭೂಮಿ ಮಾಲೀಕನದ್ದೋ ಅಥವಾ ರೈತನದ್ದೋ ಅಥವಾ ಇನ್ಯಾರದೋ ಅಲ್ಲ. ಅದು integration ಆಗಿದೆಯೋ ಬಿಟ್ಟಿದೆಯೋ ಎನ್ನುವುದು ಅವನ ಸಮಸ್ಯೆಯಲ್ಲ. ನಾನು ಕೊನೆಯದಾಗಿ ಇನ್ನೊಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈಗಾಗಲೇ ಸರ್ಕಾರದ litigations pending ಇವೆ, ಅದು ರೆವಿನ್ಯೂ ಲ್ಯಾಂಡ್ಸ್ ಇರಬಹುದು ಅಥವಾ ಬೇರೆ ಬೇರೆ ಲ್ಯಾಂಡ್ಸ್ ಇರಬಹುದು. ಸಾಕಷ್ಟು ಹಿಂದೆ ಆಗಿರುವ ಅಕ್ರಮಗಳ ಬಗ್ಗೆ ಕೋರ್ಟ್‌ನಲ್ಲಿ ಕೇಸ್‌ಗಳು ನಡೆಯುತ್ತಿವೆ, ಈ ಥರದ ಪರಿಸ್ಥಿತಿ ಉದ್ಭವವಾದಾಗ ಅದನ್ನು ಹೇಗೆ solve ಮಾಡುತ್ತೀರಿ? ಏಕೆಂದರೆ ಒಂದು litigation ಇರುವುದರಲ್ಲಿ ಸರ್ಕಾರ itself is a respondent. ಸರ್ಕಾರ ಭೂಸ್ವಾಧೀನ ಮಾಡಿರುವುದಕ್ಕೆ litigation ಇದೆ. ನೀವು ಅದನ್ನು ಪರಭಾರೆ ಮಾಡುವಂಥದಕ್ಕೂ ಕೂಡ challenge ಮಾಡಿರುವ ಉದಾಹರಣೆಗಳಿವೆ. ಈ ರೀತಿಯ ಒಂದು ಪರಿಸ್ಥಿತಿ ಬಂದಾಗ ಸಾವಿರಾರು ಪ್ರಕರಣಗಳು ಬೇರೆ ಬೇರೆ ಕೋರ್ಟ್‌ಗಳಲ್ಲಿ ವಿವಿಧ ಹಂತಗಳಲ್ಲಿರುವ ಸಂದರ್ಭದಲ್ಲಿ ಈ ರೀತಿಯ ಕ್ರಮ ಕೈಗೊಂಡಾಗ ಅದು ಯಾವ ರೀತಿ ಪರಿಹಾರವಾಗುತ್ತದೆ? ಎಲ್ಲದಕ್ಕೂ ಕೂಡ, Revenue Department will be the main department to resolve these problems. ರೆವಿನ್ಯೂ ಇಲಾಖೆ ಸಹಕಾರವಿಲ್ಲದೆ ಬೇರೆ ಯಾವುದೇ ಇಲಾಖೆಗಳು ಇದಕ್ಕೆ ಸಂಬಂಧಿಸಿದಂತೆ ಏನೂ ಮಾಡುವುದಕ್ಕಾಗುವುದಿಲ್ಲ. ಹಾಗಾಗಿ ನಾನು ತಮಗೆ ಕೇಳುವುದೇನೆಂದರೆ ಸರ್ಕಾರದ ಉಪಕ್ರಮಗಳನ್ನು ಅಥವಾ readiness ಅನ್ನು ಸರಿಯಾಗಿ ಮಾಡದೆ ಜನರ ಮುಂದೆ ತೆಗೆದುಕೊಂಡು ಹೋಗಿ ಜನರು ಇದರಿಂದ ತೊಂದರೆ ಅನುಭವಿಸದಂತೆ ನೋಡಿಕೊಳ್ಳಬೇಕು. ನಮ್ಮ ಕಡೆಯಿಂದ readiness "ಹೌದಪ್ಪ, ನಾಳೆ ಇಂಥ ದಿನಾಂಕದಿಂದ ಯಾವುದೇ ಸಮಸ್ಯೆ ಅದು integration ನಲ್ಲಿಯೂ ಬರುವುದಿಲ್ಲ. ನಮ್ಮ ಕಾವೇರಿ ತಂತ್ರಾಂಶದಲ್ಲಿಯೂ ಬರುವುದಿಲ್ಲ. ಹೋದವರು ಸಂಪೂರ್ಣವಾಗಿ ನಿಶ್ಚಿಂತೆಯಾಗಿ digitize ಮೂಲಕ ತಮ್ಮ-ತಮ್ಮ documentations ಮಾಡಬಹುದು" ಎನ್ನುವಂಥ ಒಂದು ಮುಕ್ತವಾದ ಭರವಸೆಯನ್ನು ಸರ್ಕಾರ ಕೊಡುವಂಥದ್ದಾಗಿದೆಯೇ?

**(ಮುಂದು)**

(720) 14-08-2025 (2.10) ಕೆಜಿ:ಆರ್ಎನ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಕೆ.ಎಸ್.ನವೀನ್ (ಮುಂದು):-** ಈ ವಿಧೇಯಕವನ್ನು ಮಾಡುವುದರಲ್ಲಿ ಅರ್ಥ ಇದೆ. ಅದು ಆಗದೆಯೇ ಈ ವಿಧೇಯಕವನ್ನು ತೆಗೆದುಕೊಂಡು ಬಂದರೆ ಏನಾಗುತ್ತದೆ ಎಂದರೆ, ಮನೆಯ ಒಳಗಡೆ ಏನು ರೆಡಿ ಇಲ್ಲ. ಮನೆಯೇ ರೆಡಿ ಇಲ್ಲ, ಆಗಲೇ ಗೃಹಪ್ರವೇಶವನ್ನು ಮಾಡಿ ನಾಳೆಯಿಂದ ಇಲ್ಲೇ ವಾಸ ಮಾಡು ಎಂದು ಕೊಟ್ಟಂತೆ ಆಗುತ್ತದೆ. ಆದರೆ, ಆ ಮನೆ ರೆಡಿ ಇರುವುದಿಲ್ಲ. ಹಾಗಾಗಿ, ಮಾನ್ಯ ಸಚಿವರು ಇದನ್ನು ಗಂಭೀರವಾಗಿ ಪರಿಗಣಿಸಬೇಕು. ನನ್ನ ಪ್ರಕಾರ, anything digitizes double edge sword, and it can have both repercussions. ಅದನ್ನು ಮಾಡುವವರು ಅದಕ್ಕೆ ತೊಂದರೆಯನ್ನು ಮಾಡಬಹುದು. ಅವರು ಅದನ್ನು ದುರ್ಬಳಕೆಯನ್ನು ಮಾಡಬಹುದು. ಅದರಿಂದ ನಾಳೆ ದಿವಸ ಸರ್ಕಾರಕ್ಕೆ ಸಮಸ್ಯೆಗಳು ಆಗಬಹುದು ಎನ್ನುವಂತಹ 2-3 ವಿಷಯಗಳನ್ನು ತಮ್ಮ ಗಮನಕ್ಕೆ ತರುವಂತಹ ಕೆಲಸವನ್ನು ಮಾಡಿದ್ದೇನೆ.

**ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಕೃಷ್ಣಬೈರೇಗೌಡರವರು ಕಂದಾಯ ಸಚಿವರಾದ ಮೇಲೆ, ಇಲಾಖೆಗೆ ಒಂದು revolution ಆಯಿತು. ನಾನು ಅವರನ್ನು ಬಹಳ ತುಂಬು ಹೃದಯದಿಂದ ಸ್ವಾಗತ ಮಾಡುತ್ತೇನೆ. ನಾನು ಮಾಜಿ ಸೈನಿಕ ಇದ್ದೇನೆ. ನಾನು ಇದನ್ನು ಬಹಳ ಇಷ್ಟಪಡುತ್ತೇನೆ.

ಮಾನ್ಯ ಸಭಾಪತಿಯವರೇ, ಎಲ್ಲರೂ ಹೇಳಿದಂತೆ, ಇದರಲ್ಲಿ ಮುಖ್ಯವಾಗಿ Server Problem ನ ತೊಂದರೆ ಇದೆ. ಮಾನ್ಯ ಸಚಿವರು ಇವತ್ತಿನ ದಿವಸ ಈ ಇಲಾಖೆಯಲ್ಲಿ Stamp Duty ಯಿಂದ ಬರುವಂತಹ ಹಣದಿಂದ ಗ್ಯಾರಂಟಿ ಯೋಜನೆಗಳನ್ನು ನಡೆಸುವುದಕ್ಕೆ ಬಹಳ ಅನುಕೂಲ ಮಾಡಿ ಕೊಡುತ್ತಿದ್ದಾರೆ. ಅದೇರೀತಿ Stamp Duty ವಂಚನೆಯಾಗದ ರೀತಿಯಲ್ಲಿ ನೋಡಿಕೊಳ್ಳುತ್ತಿದ್ದಾರೆ. ಆದರೆ, Stamp Duty ಬರುವಂತಹ ಹಣವನ್ನು ಯಾರು ನೋಂದಾವಣಿಗೆ ಬರುತ್ತಾರೆಯೋ ಅವರು ತುಂಬುತ್ತಾರೆ. ಈಗ ಉದಾಹರಣೆಗೆ, ನಾವು ದೆಹಲಿಗೆ ಹೋಗಲು ರೂ.7,500 ಗಳನ್ನು ನೀಡಿ Aiport Ticket ಅನ್ನು ತೆಗೆದುಕೊಂಡರೆ, ಅವರು ಆ ವ್ಯಕ್ತಿಯನ್ನು Air Conditioner Room ನಲ್ಲಿ ಕುಳಿರಿಸುತ್ತಾರೆ. ಆದರೆ, ನಮ್ಮ Sub-Registrar ಕಛೇರಿಗಳಲ್ಲಿ ಕೆಲವರು ಒಂದು ಕೋಟಿ ರೂಪಾಯಿಗಳ Stamp Duty ಅನ್ನು ಕೊಡುತ್ತಾರೆ, ಕೆಲವರು ರೂ.50,000/- ಗಳ ಹಾಗೂ ಕೆಲವರು ರೂ.25,000 ಗಳ Stamp ಅನ್ನು ಕೊಡುತ್ತಾರೆ. ಆದರೆ, Sub-Registrar Office ಗಳಲ್ಲಿ ಸರಿಯಾಗಿ ಕುಳಿತುಕೊಳ್ಳುವುದಕ್ಕೆ ಆಸನಗಳು ಇರುವುದಿಲ್ಲ. ಆ ಕಛೇರಿಗಳಲ್ಲಿ ಒಂದು ಸರಿಯಾದಂತಹ ಶೌಚಾಲಯ ಇರುವುದಿಲ್ಲ. ಒಂದು restroom ಇರುವುದಿಲ್ಲ. ಇಲ್ಲಿ ಯಾವುದೇ ಕಾನೂನನ್ನು ತೆಗೆದುಕೊಂಡು ಬಂದರೂ ಸಹ, ಆ ಕಾನೂನು ಸಾರ್ವಜನಿಕವಾಗಿ, ಸಾರ್ವಜನಿಕರಿಗೋಸ್ಕರವಾಗಿ ಸಾರ್ವಜನಿಕರ ಹಣದಿಂದ ಮಾಡಿರುವಂತಹ ಕೆಲಸವಾಗುತ್ತಿದೆ. ಸರ್ಕಾರ ಹಣವನ್ನು ಪ್ರಿಂಟ್ ಮಾಡಿ ಕೊಡುವುದಿಲ್ಲ.

ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರು ಹಲವಾರು ಕಾನೂನುಗಳನ್ನು ತೆಗೆದುಕೊಂಡು ಬರುತ್ತಾರೆ. ನಾನು ಅವರು ಮಾಡಿದಂತಹ Social Media ದಲ್ಲಿ ಬಿಟ್ಟಂತಹ Paper Cuttings ಆಗಬಹುದು, ನಾನು ಈ ರೀತಿಯ ಎಲ್ಲವನ್ನು ಇಟ್ಟುಕೊಂಡಿದ್ದೇನೆ. ನಾವು ಕೆಲವು ಟೈಮ್‌ಗಳಲ್ಲಿ ಕುಳಿತುಕೊಂಡಾಗ ಅದನ್ನು ಕೇಳುತ್ತೇವೆ. ಏಕೆಂದರೆ, ನಾವು ಗ್ರಾಮೀಣ ಪ್ರದೇಶದಿಂದ ಬಂದಿರುವುದರಿಂದ ಹಾಗೂ ನಮ್ಮಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ರೈತರು ನಮ್ಮ ಸಂಪರ್ಕದಲ್ಲಿ ಇರುವುದರಿಂದ ನಾವು ಅವರಿಗೆ ಹೇಳುತ್ತೇವೆ. ಈಗ ಮಾನ್ಯ ಸಚಿವರು ಎಲ್ಲಾ ಕಾನೂನನ್ನು ಮಾಡಿದ್ದಾರೆ. ನಾವು ಇಲ್ಲಿ ಗ್ರಾಮೀಣ ಪ್ರದೇಶದಿಂದ ಬಂದ ರೈತರ ಬಗ್ಗೆ ಗಮನ ಹರಿಸಬೇಕಾಗಿರುತ್ತದೆ. ಆ ರೈತರಿಗೆ DTP (Desktop Publishing) ಬರುವುದಿಲ್ಲ. ನಾವು ಇಲ್ಲಿ ಏನೇ ಮಾಡಿದರೂ ಸಹ, ರೈತ ಅದನ್ನು ತೆಗೆದುಕೊಂಡು ಹೋಗಿ DTP Operator ನಿಂದಲೇ ಮಾಡಿಸಿ ಅದನ್ನು Sub-Registrar Office ಗೆ ಕಳುಹಿಸಬೇಕಾಗುತ್ತದೆ. ಈ ಹಿಂದೆ Stamp Vendor ಒಬ್ಬರಿಗೆ 200 ಗಳನ್ನು ಕೊಟ್ಟರೆ, ಅವರು ಅದನ್ನು ರೆಡಿ ಮಾಡಿ ಕೊಡುತ್ತಿದ್ದರು. ಈಗ ಇದಕ್ಕೆ ರೂ.1000.00 ಗಳು ಆಗುತ್ತದೆ. ದಯವಿಟ್ಟು ಅದಕ್ಕೆ ಇದನ್ನು ಯಾವ ರೀತಿ ಮಾಡಿದರೆ ಒಳ್ಳೆಯದು ಆಗುತ್ತದೆ ಎಂಬುದನ್ನು ಸರಳೀಕರಣಗೊಳಿಸಿಕೊಂಡು ಅನುಕೂಲ ಮಾಡಿಕೊಟ್ಟರೆ ತುಂಬ ಅನುಕೂಲವಾಗುತ್ತದೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು General Power of Attorney ಬಗ್ಗೆ ಮಾತನಾಡಿದ್ದಾರೆ. ಈಗ GPA ಮೇಲೆ registration ಆಗಬೇಕು ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ. ಈ ಬಗ್ಗೆ ಹಲವಾರು Central Government Act ಗಳು ಬಂದವು. 3-4 ವರ್ಷಗಳಿಂದಲೂ ಸಹ GPA ಒಳಗಡೆ sale consideration ಅನ್ನು ತೋರಿಸಿದರೆ, six percent Stamp Duty ಅನ್ನು ಕಟ್ಟಬೇಕು. Sale considerations ತೋರಿಸಿಲ್ಲವೆಂದರೆ, Stamp Duty ಅನ್ನು ಕಟ್ಟುವಂತಿಲ್ಲ ಎಂಬುದನ್ನು ಮಾಡಿದ್ದಾರೆ. ಈಗ ಉದಾಹರಣೆಗೆ ನಮ್ಮ ನಾಯಕರು ಮಾತನಾಡುವಾಗ ಕೋರ್ಟ್, ಕಛೇರಿಗಳಿಗೆ ಹೋಗಬೇಕಾದರೆ, GPA ಅನ್ನು Notarize ಮಾಡಿಸುತ್ತಿದ್ದೆವು ಎನ್ನುವಂತಹ ಮಾತನ್ನು ಹೇಳಿದರು. ಈಗ ಉದಾಹರಣೆಗೆ, ನನ್ನ ಅಪ್ಪನವರ ಹೆಸರಿನಲ್ಲಿ ಕೋರ್ಟ್‌ನಲ್ಲಿ ಕೇಸ್ ಇರುತ್ತದೆ. ಅವರು ಕೇಸ್‌ಗೆ ಹೋಗಬೇಕಾಗಿರುತ್ತದೆ. ಆದರೆ, ಅವರು ಹೋಗುವುದಕ್ಕೆ ಆಗುವುದಿಲ್ಲ. ಇಂತಹ ಸಂದರ್ಭದಲ್ಲಿ ಅವರು ನನಗೆ GPA ಕೊಡುತ್ತಾರೆ. ಆಗ ನಾನು ಅದನ್ನು Notary ಮಾಡಿಕೊಂಡು ನ್ಯಾಯಾಲಯಕ್ಕೆ ಹಾಜರಾಗಬಹುದು ಅಲ್ಲವೇ; ಇದನ್ನು registration ಮಾಡಿ ಎಂದರೆ, ಆಗ ಏನಾಗುತ್ತದೆ ಎಂದರೆ.,

**ಶ್ರೀ ಕೃಷ್ಣ ಭೈರೇಗೌಡ** (ತಮ್ಮ ಸ್ಥಾನದಲ್ಲಿ ಕುಳಿತು):- ಅದು sale ಗೆ ಮಾತ್ರ.

**ಶ್ರೀ ಸಿ.ಎನ್.ಮಂಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಇದನ್ನು ಒಪ್ಪಿಕೊಳ್ಳುತ್ತೇನೆ ಹಾಗೂ ಸ್ವಾಗತ ಮಾಡುತ್ತೇನೆ. ಕಂದಾಯ ಸಚಿವರು ಯಾವುದೇ ಒಂದು ನಿಯಮವನ್ನು ತೆಗೆದುಕೊಂಡು ಬಂದರೂ ಸಹ, ಈಗ ಉದಾಹರಣೆಗೆ ಒಂದು ಮಾತು ಬಂತು. ಯಾರೋ ಒಬ್ಬರು ಒಂದು ಬ್ಯಾಂಕಿನಲ್ಲಿ ಸಾಲ ತೆಗೆದುಕೊಂಡಿರುತ್ತಾರೆ.

ಅದರ ರುಣಭಾರ encumbrance ನಲ್ಲಿ ಬರುತ್ತಿರುತ್ತದೆ. RTC ನಲ್ಲಿ mention ಆಗುತ್ತಿರುತ್ತದೆ. ಇದರಲ್ಲಿ ಬರದಂತೆ ಇವರು ಯಾರು ಸಹ ಹೋಗಿ ಮನವಿ ಮಾಡಿಕೊಳ್ಳದೇ automatic ಹೋಗುತ್ತದೆ ಎಂಬ ಮಾತನ್ನು ಹೇಳಿದರು. ಇಲ್ಲಿ ಈ ಕೆಲಸವನ್ನು ದೇವರು ಬಂದು ಮಾಡುವುದಿಲ್ಲ. ನಾವು ಬ್ಯಾಂಕಿಗೆ ಹಣ ಕಳುಹಿಸಿದ ತಕ್ಷಣ ಅವರು ತೀರುವಳಿ ಮಾಡಿಕೊಡಬೇಕು. ಇಲ್ಲವೆಂದರೆ, Sub-Registrar Office ಗೆ ಹೋಗಬೇಕಾಗುತ್ತದೆ. ಈ ರೀತಿ ಹೋಗಬೇಕಾದರೆ, ಈ ಮಾರ್ಗಗಳು ಇವೆಯಲ್ಲವೇ? ಈ ಮಾರ್ಗಗಳನ್ನು ನೋಡುವವರು ಯಾರು? ಇದು automatic ಅಂತೂ ಆಗುವುದಿಲ್ಲ. ನಮ್ಮ ರಾಜ್ಯದಲ್ಲಿ ಅಂತಲ್ಲ. ಈ ಭೂಮಿಯ ಮೇಲೆ ಯಾವ ದೇಶದಲ್ಲಿಯೂ ಆಗುವುದಿಲ್ಲ. ಅವರು ಹೋಗಲೇಬೇಕು, ಅವರು ಮಾಡಲೇಬೇಕು, ಮೊದಲು ಹೇಳಿದಂತೆ ವ್ಯವಸ್ಥೆಗಳು ಆಗಲೇಬೇಕು. ಅದು ಯಾವ ರೀತಿ ಇದೆ ಎಂಬುದನ್ನು ಮಾನ್ಯ ಸಚಿವರು ತಿಳಿಸಿದರೆ ಬಹಳ ಒಳ್ಳೆಯದು ಆಗುತ್ತದೆ.

**ವೈಸ್ ಛೇರ್ಮನ್‌ರವರು:-** ಮಾನ್ಯ ಸದಸ್ಯರಾದ ಶ್ರೀ ಸಿ.ಎನ್.ಮಂಜೇಗೌಡರವರೇ, ತಾವು ಮಾತನಾಡಿದ್ದು ಮುಗಿಯಿತು ಅಲ್ಲವೇ;

**ಶ್ರೀ ಸಿ.ಎನ್.ಮಂಜೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಪೋಡಿ, ದುರಸ್ತಿ ಬಗ್ಗೆ ಮಾತನಾಡಿದ್ದಾರೆ. ಅದರ ಬಗ್ಗೆ ಸಾಕಷ್ಟು ಪ್ರಚಾರವನ್ನು ಸಹ ಕೊಟ್ಟಿದ್ದೀರಿ. ಮಾನ್ಯ ಸಚಿವರು ಮೈಸೂರಿನಲ್ಲಿ ಸುಮಾರು 2-3 ಕಾರ್ಯಕ್ರಮಗಳನ್ನು ಹಾಕಿಕೊಂಡಾಗ ಅವರ ಅಧ್ಯಕ್ಷತೆಯಲ್ಲಿ ನಡೆದಂತಹ ಸಭೆಗಳಲ್ಲಿ ನಾನು ಇದ್ದೆ. ಆದರೂ ಸಹ, ಇನ್ನು ಹಲವಾರು ಲಕ್ಷಾಂತರ ಪೋಡಿಗಳನ್ನು ಮಾಡುವುದು ಬಾಕಿ ಇದೆ. ಇಡೀ State ನಲ್ಲಿ ಮಾಡುವುದು ಬಾಕಿ ಇದೆ. ಕಂದಾಯ ಇಲಾಖೆಯಲ್ಲಿರುವ ತಹಶೀಲ್ದಾರ್‌ರವರ ಮಟ್ಟದಲ್ಲಿ ಅವರ login ನಲ್ಲಿ ಸಾಕಷ್ಟು ಬಾಕಿ ಇವೆ. ಇದನ್ನು ಆದಷ್ಟು ಬೇಗನೆ clear ಮಾಡಿಕೊಟ್ಟರೆ, ಈ ರಾಜ್ಯದಲ್ಲಿ ಇರುವಂತಹ ರೈತರು ಬಹಳ ನೆಮ್ಮದಿಯಾಗಿರುತ್ತಾರೆ ಎನ್ನುವಂತಹ ಮಾತನ್ನು ಹೇಳಿ ನಾನು ನನ್ನ ಮಾತುಗಳಿಗೆ ವಿರಾಮ ಇಡುತ್ತೇನೆ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರು ತಂದಿರುವ ವಿಧೇಯಕವನ್ನು ನಾನು ಸ್ವಾಗತ ಮಾಡುತ್ತೇನೆ. ಇದರಿಂದ ಬಡವರಿಗೆ ಮತ್ತು ರೈತರಿಗೆ ಅನುಕೂಲವಾಗುವುದರ ಜೊತೆಗೆ, ಲಕ್ಷಾಂತರ ಪ್ರಕರಣಗಳು ಏನು litigation ಆಗುತ್ತಿದ್ದವು, ಈ ಹಿಂದೆ ಆಗಿದ್ದವು, ಇವೆಲ್ಲಕ್ಕೂ ಒಂದು ಕಡಿವಾಣ ಹಾಕಿದಂತೆ ಆಗುತ್ತದೆ. ಹಾಗಾಗಿ, ಈ ದೃಷ್ಟಿಯಿಂದ ಇದೊಂದು ಒಳ್ಳೆಯ ಕಾಯ್ದೆ ಎಂದು ನಾನು ಭಾವಿಸುತ್ತೇನೆ. ಅವರು ವಿಧಾನಸೌಧವನ್ನು ಬೇಕಾದರೆ, ಆ ಬಗ್ಗೆ ಏನಾದರೂ ದಾಖಲೆಗಳು ತಂದರೆ ನೋಂದಣಿ ಮಾಡಿಕೊಡುತ್ತಾರೆ ಎಂದು ಹೇಳಿದರು. ಕಳೆದ 8-10 ವರ್ಷಗಳ ಹಿಂದೆ ಯಾರೋ ಒಬ್ಬರು M. S Building ನ ಮುಂದೆ ಇರುವಂತಹ ಖಾಲಿ ಜಾಗದ ದಾಖಲೆಗಳನ್ನು ನನ್ನ ಬಳಿಗೆ ತೆಗೆದುಕೊಂಡು ಬಂದು ಅವರು ನಮ್ಮ ಬಳಿ ಇದರ ಎಲ್ಲಾ ದಾಖಲೆಗಳು ಇವೆ, ಅದನ್ನು ನಮ್ಮ ಹೆಸರಿಗೆ ಮಾಡಿಸಿ ಕೊಡಿ ಎಂದು ಕೇಳಿದ್ದರು. M.S. Building ಮುಂದಗಡೆ ಸ್ವಲ್ಪ ಜಾಗ ಖಾಲಿ ಇದೆ. ಅವರು ಅದನ್ನು ಅದು ನಮ್ಮ ಪಿತ್ರಾರ್ಜಿತ ಸ್ವತ್ತು, ಇದನ್ನು ಬಿಡಿಸಿಕೊಡಿ ಎಂದು ನನ್ನ ಬಳಿ ಬಂದಿದ್ದರು. ಆಗ ನನ್ನ ಬಳಿಗೆ ಏಕೆ ಇದನ್ನು ತೆಗೆದುಕೊಂಡು ಬಂದಿದ್ದೀರಿ, ಅಲ್ಲಿ ನಿಮ್ಮ ಜಾಗ

ಹೇಗೆ ಇರುವುದಕ್ಕೆ ಸಾಧ್ಯ? ಸುಮ್ಮನೆ ಹೋಗಿ ಎಂದು ಹೇಳಿದ್ದೆ. ಅದರ ಸುತ್ತಮುತ್ತಲೂ ಸರ್ಕಾರಿ ಕಛೇರಿಗಳು ಇರುವಾಗ ನಿಮ್ಮದ್ದು ಹೇಗೆ ಬಂತು ಎಂದು ಕೇಳಿದೆ. ಆಗ ಅವರು ಅದರ ದಾಖಲೆಗಳನ್ನು ತೋರಿಸಿದರು. ಅದು ಅವರಿಗೆ ಹೇಗೆ ಬಂತು; ಯಾವ ರೀತಿ ಬಂತು ಎನ್ನುವುದು ನಮಗೆ ಗೊತ್ತಿಲ್ಲ. ನಾನು ಅಂತಹದ್ದನ್ನು ನೋಡಿದ್ದೇನೆ.

ಮಾನ್ಯ ಸಭಾಪತಿಯವರೇ, ಹೋಟೆಲ್ 'Radisson Blu' ಎಂದು ಇದೆ. ಶ್ರೀ ಹರೀಶ್‌ಗೌಡರು ಎಂಬ ಐಎಎಸ್ ಅಧಿಕಾರಿ ಇದ್ದರು, ಆ ಜಾಗವು ಸಹ ಸರ್ಕಾರಕ್ಕೆ ಸೇರಿದ್ದು ಎಂದು ಅದು ಸಹ ನಮ್ಮ ಬಳಿ ಅಷ್ಟು ವರ್ಷಗಳ ಕಾಲ ನಡೆಯಿತು. ಅದು ಎಲ್ಲಾ ಸರ್ಕಾರಕ್ಕೆ ಸೇರಿದ ಜಾಗ, ಅದರ ಮಧ್ಯದಲ್ಲಿ ಈ ಹೋಟೆಲ್ ಬರುವುದಕ್ಕೆ ಸಾಧ್ಯವಿಲ್ಲ. ಹೇಗೆ ಬಂತು ಎಂದು ಹೇಳಿ ಚರ್ಚೆ ನಡೆಯಿತು. ಈ ರೀತಿ ಆಗುವಂತಹ ಅವಕಾಶಗಳು ಜಾಸ್ತಿ ಇದ್ದವು. ಈಗ ಈ ಕಾಯ್ದೆಯನ್ನು ತಂದಿರುವುದರಿಂದ ಇದು ಎಲ್ಲವೂ ನಿಲ್ಲುತ್ತದೆ.

ಮಾನ್ಯ ಸಭಾಪತಿಯವರೇ, ಒಬ್ಬ ಭೂ-ಮಾಲಿಕನ ಬಳಿ ಒಂದು ಎಕರೆ ಜಮೀನು ಇರುತ್ತದೆ. ಆತ ಆ ಒಂದು ಎಕರೆ ಭೂಮಿಯಲ್ಲಿ 10 ಗುಂಟೆ, 10 ಗುಂಟೆ, 20 ಗುಂಟೆಯಂತೆ ಈ ರೀತಿ ಜಮೀನನ್ನು 10 ಜನರಿಗೆ ಮಾರಾಟ ಮಾಡುತ್ತಾನೆ. 10 ಗುಂಟೆ, 10 ಗುಂಟೆ, 10 ಗುಂಟೆ ಹಾಗೂ 20 ಗುಂಟೆ, 20 ಗುಂಟೆ ಮತ್ತು 20 ಗುಂಟೆಯನ್ನು ಈ ರೀತಿ ಮಾರಾಟ ಮಾಡುತ್ತಾನೆ. ಆದರೆ, ಆತನದ್ದು ಇರುವುದೇ ಒಂದು ಎಕರೆ ಭೂಮಿ. ಈ ರೀತಿ ಆತ ಒಂದು ಎಕರೆ ಭೂಮಿಯನ್ನು 3 ರಿಂದ 5 ಎಕರೆಯವರೆಗೂ ಮಾರಾಟ ಮಾಡಿಕೊಂಡು ಹೋಗುತ್ತಾನೆ. ಆಮೇಲೆ ಇದಕ್ಕೆ ಕೆಲವರು attachment ನವರು ಇರುತ್ತಾರೆ. ಕೆಲವು Co-operative Society ಗಳು ಅವರ ಜೊತೆಗೆ ಶಾಮೀಲಾಗಿ loan ಕೊಟ್ಟುಬಿಡುತ್ತಾರೆ. Loan ಅನ್ನು ತೆಗೆದುಕೊಳ್ಳುತ್ತಾರೆ. ನಾನು ಎಲ್ಲಾ Co-operative Society ಗಳು ಎಂದು ಹೇಳುತ್ತಿಲ್ಲ. ಒಂದು ಎಕರೆಯನ್ನು ಮಾರಾಟ ಮಾಡಿಕೊಂಡವನಿಗೆ benefit ಆಯಿತು. ಅದನ್ನು ಯಾರು ಬಂದು ಕೇಳುತ್ತಾರೆ? ಅವರಿಗೆ registration ಮಾಡಿಕೊಡುತ್ತಾನೆ. ಅವನಿಗೆ ಅದರಿಂದ ಹಣ ಬರುತ್ತಲೇ ಇರುತ್ತದೆ. ಆದರೆ, ಇಲ್ಲಿ litigation ಯಾರದ್ದು ಎಂದರೆ, ಅಕ್ಕಪಕ್ಕದಲ್ಲಿರುವಂತಹ ಲ್ಯಾಂಡ್‌ಗಳಲ್ಲಿ ಆ ಭೂಮಿಯನ್ನು ತೆಗೆದುಕೊಂಡಿರುವವರು ಕುಳಿತುಕೊಳ್ಳುವುದಕ್ಕೆ ಹೋಗುತ್ತಾರೆ. ಈ ಭೂಗಳ್ಳರ ಜೊತೆಗೆ ಅಲ್ಲಿನ ಸ್ಥಳೀಯವಾಗಿರುವಂತಹ ಪೊಲೀಸರು involvement ಆಗಿರುತ್ತಾರೆ. ನಮ್ಮ ಕಂದಾಯ ಇಲಾಖೆಯವರು involvement ಆಗಿರುತ್ತಾರೆ. ಬ್ಯಾಂಕಿನವರು involvement ಆಗಿರುತ್ತಾರೆ. ಅದರ ದಾಖಲೆಗಳು ಸರಿಯಾಗಿ ಇರುತ್ತವೆ. registration ಆಗಿರುತ್ತದೆ. ಚಕ್ಕುಬಂದಿ ಎಲ್ಲವೂ ಸರಿಯಾಗಿ ಇರುತ್ತದೆ. ನಂತರ ಆ ಜಮೀನಿನ ಪಕ್ಕದವರು ನ್ಯಾಯಾಲಯಕ್ಕೆ ಹೋಗುತ್ತಾರೆ. ನ್ಯಾಯಾಲಯ ಸಹ ದಾಖಲೆಗಳು ಸರಿ ಇವೆಯಲ್ಲವೆ ಎಂದು ಹೋಗಿ eviction ಮಾಡಿ ಎಂದು ಹೇಳುತ್ತದೆ. ಆಗ ಯಾರು ಪಕ್ಕದವರು ಇದ್ದಾರೆ, ಅವರು ಅವರ ಸ್ವಂತ ಜಮೀನನ್ನು ಉಳಿಸಿಕೊಳ್ಳುವುದಕ್ಕೆ ಪೊಲೀಸರ ಜೊತೆಗೆ, ಕಂದಾಯ ಇಲಾಖೆಯವರ ಜೊತೆಗೆ ಹಾಗೂ ನ್ಯಾಯಾಲಯದ ಜೊತೆಗೆ ಹೋರಾಟ ಮಾಡಬೇಕು. ಇದೊಂದು ದೊಡ್ಡ ದಂಧೆಯಾಗಿದೆ. ಇದಕ್ಕೆ ಏನಾದರೊಂದು ಕಡಿವಾಣವನ್ನು ಹಾಕಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಒಬ್ಬ

ಭೂಮಾಲೀಕನದ್ದು ಒಂದು ಎಕರೆ ಇದ್ದರೆ, ಅವರು ಒಂದು ಎಕರೆಯನ್ನು ಮಾತ್ರ ಮಾರಾಟ ಮಾಡಬೇಕು. ಒಂದು ಎಕರೆ ಒಂದು ಗುಂಟೆಯನ್ನು ಹೇಗೆ ಮಾರಾಟ ಮಾಡುತ್ತಾನೆ; 2 ಎಕರೆಯನ್ನು ಹೇಗೆ ಮಾರಾಟ ಮಾಡುತ್ತಾನೆ? ಅವರಿಗೆ ಯಾವ ರೀತಿ ಅಷ್ಟು ಜಮೀನು ಬಂತು? ಅದು ಹೇಗೆ registration ಆಯಿತು? ಆ ರೀತಿ ಇದ್ದರೂ ಸಹ ಪೋಲೀಸರು ಹೇಗೆ ಅವರಿಗೆ support ಮಾಡುತ್ತಾರೆ? **(ಮುಂದು)**

(721) 14-08-2025/2.20/ಎಂವಿ-ವಿಕೆ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಪುಟ್ಟಣ್ಣ (ಮುಂದು)**

ಮಾನ್ಯ ಸಚಿವರೆ, ಇದು ಒಂದು ದೊಡ್ಡ ದಂಧೆಯಾಗಿದೆ. ಈ ರೀತಿಯ ಕೆಲಸವನ್ನು ಯಾರು ಮಾಡುತ್ತಿದ್ದಾರೆ, ಇದಕ್ಕೂ ಸಹ ಕಡಿವಾಣ ಹಾಕಬೇಕು. ಮತ್ತೆ ಯಾವ ಕೋ-ಆಪರೇಟಿವ್ ಸೊಸೈಟಿಗಳು ಇದರ ಜೊತೆಗೆ involvement ಆಗಿ ಎಲ್ಲರಿಗೂ ತೊಂದರೆ ಕೊಡುತ್ತಾರೆ, ಮತ್ತೆ ಅವರು ಎಲ್ಲರಿಗೂ ಸಹ ಸಾಲವನ್ನು ನೀಡಿಬಿಡುತ್ತಾರೆ. ಅಂದರೆ ಎರಡು ಕೋಟಿ, ಮೂರು ಕೋಟಿ ಮತ್ತು ಹತ್ತು ಕೋಟಿ ಎಂದು ಕನಿಷ್ಠ ಅವರ capacity ಪ್ರಕಾರ ಸಾಲವನ್ನು ಕೊಟ್ಟುಬಿಡುತ್ತಾರೆ. ಆಗ ಅವರ ಅಕ್ಕಪಕ್ಕದಲ್ಲಿರುವಂತಹವರು ಹೋರಾಟ ಮಾಡಬೇಕಾಗುತ್ತದೆ. ಅಂದರೆ, ಕೆಲವೊಂದು ಕಡೆಗಳಲ್ಲಿ ಅವರ ಸ್ವಂತ ಆಸ್ತಿ, ಪಿತ್ರಾರ್ಜಿತ ಆಸ್ತಿ ಮತ್ತೆ ಇನ್ನೇನು ಇರುತ್ತದೆ ಅದನ್ನು ಉಳಿಸಿಕೊಳ್ಳುವುದಕ್ಕೆ ಹೋರಾಟ ನಡೆಯುತ್ತಿದೆ. ಇದು ಬೆಂಗಳೂರಿನಲ್ಲಿ ವಿಪರೀತವಾಗಿದೆ. ನಾನು ದಯವಿಟ್ಟು ಮಾನ್ಯ ಕಂದಾಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇದಕ್ಕೆ ಒಂದು ಕಡಿವಾಣ ಹಾಕಿ, ಒಂದು full stop ಇಡಲೇಬೇಕು. ಈಗ ಏನು ಲಕ್ಷಾಂತರ ರೂಪಾಯಿಗಳನ್ನು ತಪ್ಪಿಸುತ್ತಿದ್ದಾರೆ; ಇದನ್ನು ಮಾಡಿದರೆ, ಕೋ-ಆಪರೇಟಿವ್ ಸೊಸೈಟಿಗಳ ದುಡ್ಡು ಉಳಿಯುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಜನರು ವ್ಯಾಜ್ಯ ಆಡುವುದು ತುಂಬಾ ಕಷ್ಟವಿದೆ. ಇದನ್ನೆಲ್ಲಾ ಮಾಡಿಕೊಳ್ಳುವವರು ಯಾರು ಎಂದರೆ, ಅದು ಬಲಾಢ್ಯರು. ಅಂದರೆ, ಬೇರೆ ಬೇರೆ antisocial elements ಎಂದು ಯಾರು ಇರುತ್ತಾರೆ, ಅಂತಹವರು ಹೋಗಿ ರಿಜಿಸ್ಟ್ರೇಷನ್ ಮಾಡಿಕೊಂಡು ಬಂದು ಸ್ವಂತ property ಇರುವಂತಹವರ ಮೇಲೆ fight ಮಾಡುತ್ತಾರೆ. ದಯವಿಟ್ಟು ಇದನ್ನು ತಪ್ಪಿಸುವುದಕ್ಕೋಸ್ಕರ ಏನಾದರೂ ಒಂದು ತಿದ್ದುಪಡಿ ತರಲಿ. ಅದನ್ನು ಈ ವಿಧೇಯಕದಲ್ಲಿಯೇ ಸೇರಿಸುತ್ತಾರೋ ಅಥವಾ ಮತ್ತೊಂದು ವಿಧೇಯಕವನ್ನು ತರುತ್ತಾರೋ, ಇದನ್ನು ಮಾಡಿದರೆ ಅದರಲ್ಲೂ ಸಹ ಬಹಳಷ್ಟು litigations ತಪ್ಪುತ್ತದೆ ಎಂಬ ಮಾತನ್ನು ಹೇಳುತ್ತೇನೆ. ಮಾನ್ಯ ಕಂದಾಯ ಸಚಿವರು ಬಹಳ ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದಾರೆ. ಮಾನ್ಯ ಕಂದಾಯ ಸಚಿವರು ಬಂದ ಮೇಲೆ ಬಹಳಷ್ಟು ಬದಲಾವಣೆ ಮತ್ತು ಸುಧಾರಣೆಗಳಾಗಿದೆ. ಆದರೆ, ಡಿಜಿಟಲೀಕರಣ ಏನಿದೆ ಇದು ಒಂದು ದೊಡ್ಡ ಸುಧಾರಣೆ. ಇದು ಬಡವರ ಮತ್ತು ರೈತರ ಪರವಾಗಿದೆ. ಮಾನ್ಯ ಸದಸ್ಯರು ಸರ್ವರ್‌ಗೆ ಸಂಬಂಧಪಟ್ಟಂತೆ ಹೇಳಿದ್ದಾರೆ. ಸರ್ವರ್ ಅನ್ನು upgrade ಮಾಡಿದರೆ, ಎಲ್ಲರಿಗೂ ಇನ್ನೂ ಜಾಸ್ತಿ

ಅನುಕೂಲವಾಗುತ್ತದೆ. ಈಗ 'server down' ಎಂದು ಹೇಳುತ್ತಾರೆ. ಅದಕ್ಕೆ ಏನಾದರೂ ಪರಿಹಾರ ಕಂಡುಕೊಂಡರೆ extraordinary ಆಗಿ ಎಲ್ಲಾ ಬಡವರಿಗೆ ಇದರ ಅನುಕೂಲ ಜಾಸ್ತಿಯಾಗುತ್ತದೆ. ಈ ವಿಧೇಯಕವನ್ನು ತಂದಿರುವುದಕ್ಕೆ ಮಾನ್ಯ ಸಚಿವರಿಗೆ ಅಭಿನಂದಿಸುತ್ತೇನೆ. ಮತ್ತೆ ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ.

**ವೈಸ್ ಛೇರ್ಮನ್‌ರವರು:-** ಈಗ ಶ್ರೀ ಕೇಶವ ಪ್ರಸಾದ್.ಎಸ್ ರವರೇ ತಾವು ಮಾತನಾಡಿ.

**ಶ್ರೀ ಕೇಶವ ಪ್ರಸಾದ್.ಎಸ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಏನನ್ನು ಕೇಳಬೇಕು ಅಂದುಕೊಂಡಿದ್ದೆನು ಅದು ಈಗಾಗಲೇ cover ಆಗಿದೆ.

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೆಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಕೆಲವು ನೇರವಾಗಿ ಸಂಬಂಧ ಇರುವಂಥದ್ದು, ಇನ್ನು ಕೆಲವು ಕಂದಾಯ ಇಲಾಖೆಗೆ ಸಂಬಂಧಿಸಿದ್ದು. ನಾನು ಈ ಎರಡಕ್ಕೂ ಸಂಕ್ಷಿಪ್ತವಾಗಿ ಉತ್ತರ ಕೊಡುವುದಕ್ಕೆ ಬಯಸುತ್ತೇನೆ.

**ವೈಸ್ ಛೇರ್ಮನ್‌ರವರು:-** ಮಾನ್ಯ ಕಂದಾಯ ಸಚಿವರೆ, ಒಟ್ಟು ಏಳು ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ.

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, ಈಗ cybercrime ಆಗಬಹುದು, artificial intelligence ಆಗಬಹುದು, ಇವುಗಳನ್ನೆಲ್ಲಾ ದುರುಪಯೋಗ ಮಾಡಿಕೊಂಡು ಅದನ್ನು system ನಲ್ಲಿಯೇ hack ಮಾಡಿ, system ಒಳಗಡೆಯೇ fake ಅನ್ನು create ಮಾಡುವಂತಹ ಸಾಧ್ಯತೆಗಳು ಇವತ್ತಿನ ಕಾಲದಲ್ಲಿ ಆಗುತ್ತಿದೆ. ಇದರ ಬಗ್ಗೆ ಏನು ಎಚ್ಚರಿಕೆ ವಹಿಸಿದ್ದೀರಿ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಸದ್ಯಕ್ಕೆ ಇಲ್ಲಿಯವರೆಗೂ ಆ ರೀತಿ ಆಗಿಲ್ಲ. ಆದರೆ, ಆಗುವಂಥದ್ದನ್ನು rule out ಮಾಡುವುದಕ್ಕೆ ಆಗುವುದಿಲ್ಲ. ಇವತ್ತಿನ ಕಾಲದಲ್ಲಿ ಏನು ಬೇಕಾದರೂ ಸಾಧ್ಯವಿದೆ. ಈ ಡಿಜಿಟಲ್ ಯುಗದಲ್ಲಿ ಅವರು ಹೇಳಿರುವ concern ಅನ್ನು ಅಪ್ರಸ್ತುತ ಎಂದು ಹೇಳುವುದಿಲ್ಲ. ಆದರೆ, ಅವರು ಹೇಳಿರುವಂತಹ ವಿಷಯ ಪ್ರಸ್ತುತವಿದೆ. ಅದಕ್ಕೆ ನಾವು ಎಚ್ಚರಿಕೆ ವಹಿಸಬೇಕು. ಈಗ ಏನೂ ಆಗಿಲ್ಲವೆಂದು ಮತ್ತೆ ಅದು ಏನು ಆಗುವುದಿಲ್ಲವೆಂದು ಉಪೇಕ್ಷೆ ಮಾಡುವುದಕ್ಕೆ ಆಗುವುದಿಲ್ಲ. ಮುಂದೆ ದುರುಪಯೋಗವಾಗಿ, ಈ artificial intelligence and cybercrime ಇದರ ಮುಖಾಂತರ ನಾವು ಕಣ್ಣಲ್ಲಿ ಕಣ್ಣಿಟ್ಟು ವಾಚ್ ಮಾಡುತ್ತೇವೆ. ಇದು ಹೇಗೆ ಆಗುತ್ತದೆಂದು guess ಮಾಡುವುದಕ್ಕೂ ಸಹ ಕಷ್ಟವಿದೆ. ಏನೇ ಆದರೂ ಕೂಡ ನಾವು ಇದನ್ನು ಖಂಡಿತವಾಗಿ ಬಹಳ ಸೂಕ್ಷ್ಮವಾಗಿ ಗಮನಿಸುತ್ತೇವೆ. ನನ್ನ ಪ್ರಕಾರ ಮತ್ತು ನನಗೆ ಅನಿಸುವಂತೆ ನಮ್ಮ system secure ಇದೆ. ಆದರೆ, ಅನಾಹುತ ಆದಾಗಲೇ ಗೊತ್ತಾಗುವುದು ಅದು secure ಇಲ್ಲವೆಂದು. ಏಕೆಂದರೆ, ಇದನ್ನು guess ಮಾಡುವುದಕ್ಕೂ ಕಷ್ಟವಿದೆ. ಈ cybercrime and artificial intelligence ನ ಬುದ್ಧಿಶಕ್ತಿ ಸಾವಿರ ಜನಕ್ಕಿಂತ ಹೆಚ್ಚಿಗೆ ಇರುತ್ತದೆ. ನಾವು ಇಂತಹ ಕಾಲದಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ನಾವು ಖಂಡಿತವಾಗಿ ಎಚ್ಚರಿಕೆಯಿಂದ ಇರುತ್ತೇವೆ. ಈಗ ಎಲ್ಲರೂ ಸರ್ವರ್ ಸಮಸ್ಯೆಯ ಬಗ್ಗೆ ಮಾತನಾಡಿದ್ದಾರೆ.

ನಾನು ಅದರ ಬಗ್ಗೆ ಹೆಚ್ಚಿಗೆ ಏನೂ ವಿತಂಡವಾದ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಸದಸ್ಯರ ಸಲಹೆಯನ್ನು ನಾನು ಗೌರವಯುತವಾಗಿ ಸ್ವೀಕರಿಸುತ್ತೇನೆ.

ಈ ಹಿಂದೆಯೂ ಸಹ ಸರ್ವರ್ ಸಮಸ್ಯೆಗೆ ಸಂಬಂಧಪಟ್ಟಂತೆ ಚರ್ಚೆಯಾಗಿದೆ. ಒಂದಲ್ಲ ಎರಡು ಬಾರಿ ಈ ವಿಷಯವನ್ನು ಚರ್ಚೆ ಮಾಡಿದ್ದಾರೆ. ನಾನು ಖಂಡಿತವಾಗಿ ಈಗಾಗಲೇ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿದ್ದೇನೆ. ಅದನ್ನು ಇನ್ನೂ ಸುಧಾರಣೆ ಮಾಡಬೇಕಾದಂತಹ ಅವಶ್ಯಕತೆ ಇದೆ. ಮತ್ತೆ ಅದರ ಸಾಮರ್ಥ್ಯ ವೃದ್ಧಿಯಾಗುವಂತಹ ಅವಶ್ಯಕತೆ ಇದೆ. ಅದೇ ರೀತಿ ಕೆಲವರು ಮಾತನಾಡುತ್ತಾ ಏನು ಹೇಳಿದರು ಎಂದರೆ, ತಾವು ಇಲ್ಲಿ ಮೇಲಿನಿಂದ ಹೇಳುತ್ತೀರಿ. ಆದರೆ, ಕೆಳಗಡೆಗೆ ಮೂಲಭೂತ ಸೌಕರ್ಯ ಬೇಕಲ್ಲವೇ ಎಂದು. ಉಪ ನೋಂದಣಾಧಿಕಾರಿಗಳ ಕಛೇರಿಯಲ್ಲಿ IT systems ಇರಬೇಕು. ಅದರ ಕಡೆಗೂ ಸಹ ಗಮನ ಕೊಡಬೇಕು. ಇಲ್ಲವಾದರೆ, ಇದು ಕೆಳಮಟ್ಟದಲ್ಲಿ ಯಶಸ್ಸು ಆಗುವುದಿಲ್ಲ ಎನ್ನುವಂಥದ್ದು ಸಹ ಒಪ್ಪುವಂತಹ ವಿಚಾರವಾಗಿದೆ. ಅದೇ ರೀತಿ ಮಾತನಾಡುತ್ತಾ ನಾವು ಇಷ್ಟೆಲ್ಲಾ ತೆರಿಗೆ ಕಟ್ಟುತ್ತೇವೆ, ಆದರೆ ಉಪ ನೋಂದಣಾಧಿಕಾರಿಗಳ ಕಛೇರಿಗೆ ಹೋದರೆ ಕುಳಿತುಕೊಳ್ಳುವುದಕ್ಕೆ ಜಾಗ ಕೂಡ ಇರುವುದಿಲ್ಲ ಎನ್ನುವಂಥದ್ದನ್ನು ಸಹ ಹೇಳಿದ್ದಾರೆ. ನಾನು ಇವುಗಳನ್ನೆಲ್ಲಾ constructive ಆಗಿ ತೆಗೆದುಕೊಳ್ಳುತ್ತೇನೆ. ಸರ್ವರ್‌ನ quantity and quality ಗೆ ಸಂಬಂಧಿಸಿದ improvement ಆಗಲಿ, ಮತ್ತೆ ನಮ್ಮ ಕಛೇರಿಗಳಲ್ಲಿ physical infrastructure improvement ಅನ್ನು ಮಾಡಲೇಬೇಕಾಗಿದೆ. ನಾವು ಈ ಎರಡರ ಕಡೆಗೂ ಕೂಡ ಖಂಡಿತವಾಗಿ ಗಮನ ಕೊಡಲೇಬೇಕು. ಇದು ನಿರ್ವಿವಾದವಾದಂತಹ ವಿಷಯ. ಮಾನ್ಯ ಸದಸ್ಯರ ಸಲಹೆಗಳನ್ನು constructive ಆಗಿ ತೆಗೆದುಕೊಂಡು, ಅದರ ಕಡೆಗೆ ಗಮನ ಕೊಡುತ್ತೇನೆ.

ಮಾನ್ಯ ಸದಸ್ಯರು ಹಕ್ಕುಪತ್ರಗಳ ಬಗ್ಗೆ ಮಾತನಾಡಿದರು. ಈಗ ಸಾಮಾನ್ಯವಾಗಿ ಎರಡು-ಮೂರು ಹಕ್ಕುಪತ್ರಗಳು ಇರುವಂಥದ್ದು ಎಲ್ಲಿ ಆಗಿದೆ ಎಂದರೆ, ಅದನ್ನು ಪೇಪರ್‌ನಲ್ಲಿ record building ಮಾಡಿದರೆ, ಅಲ್ಲಿ ಎಲ್ಲಾ ಕೂಡ duplicate and fake ಸಹ ಇವೆ. ಆದರೆ, ಈಗ ಇದು digital integration ಆಗುವುದರಿಂದ ಆ file ಗಳು digital ಆಗಿ buildup ಆದರೆ fake and duplication ಗೂ ಅವಕಾಶವಿರುವುದಿಲ್ಲ. ಆ ರೀತಿ ಸಿಸ್ಟಮ್‌ನಲ್ಲಿ guardrails ಅನ್ನು built ಮಾಡಿ, ಅದನ್ನು ಮಾಡುತ್ತಿದ್ದೇವೆ. ಇದು ನಿಜ. ನಾನು ಹಿಂದೆ ಗ್ರಾಮೀಣಾಭಿವೃದ್ಧಿ ಸಚಿವನಾಗಿದ್ದೆ. ನಾನು ಈ ಕ್ಷೇತ್ರಕ್ಕೆ ಬಂದ ಮೇಲೂ ಕೂಡ ಒಂದೊಂದು ಸೈಟ್ ಎರಡು-ಮೂರು ಜನರ ಬಳಿ ಇದೆ. ಅದೆಲ್ಲವೂ ಸಹ ಪೇಪರ್‌ನಲ್ಲಿ ಆಗಿರುವಂಥದ್ದು. ಆ ರೀತಿ ಪೇಪರ್‌ನಲ್ಲಿ ಯಾರ್ಯಾರಿಗೆ ಬರೆದುಕೊಟ್ಟಿದ್ದಾರೋ ಗೊತ್ತಿಲ್ಲ. ಒಂದೇ ಸೈಟ್ ನಂಬರ್ ಹಾಕಿ ಎರಡು-ಮೂರು ಜನರಿಗೆ ಬರೆದುಕೊಟ್ಟಿದ್ದಾರೆ. ಈಗ ಡಿಜಿಟಲೀಕರಣ ಮಾಡಿದಾಗ ಇದುವರೆವಿಗೂ ನನಗೆ ಕಂಡು ಬಂದಿರುವುದು ಆ ರೀತಿಯ ಅವಕಾಶ ಇರುವುದಿಲ್ಲ, ಅದಕ್ಕೆ authenticity establish ಆಗುತ್ತದೆ, ಅದು secure ಆಗುತ್ತದೆ ಎನ್ನುವಂಥದ್ದು. ಈಗ ಹಕ್ಕುಪತ್ರವನ್ನು ಸಹ ಕಡ್ಡಾಯ ಮಾಡಿದ್ದೇವೆ. ಅದು ಬಡವರದ್ದು, ಇದನ್ನೆಲ್ಲಾ ಏಕೆ ಮಾಡಿದ್ದೀರಿ ಎಂದು ಕೇಳಬಹುದು. ಅದು

ನೋಂದಣಿಯಾಗಿಬಿಟ್ಟರೆ ಅದಕ್ಕೆ ಯಾರು original owner ಎನ್ನುವುದನ್ನು ಶೇಕಡಾ 100ರಷ್ಟು establish ಮಾಡಿದಂತೆ ಆಗುತ್ತದೆ. ಇನ್ನೊಬ್ಬರು ತಮ್ಮ ಕೈಯಲ್ಲಿ fake ಹಕ್ಕುಪತ್ರ ಹಿಡಿದುಕೊಂಡು ಬಂದರೆ ಅದಕ್ಕೆ ನಾಳೆ ಮಾನ್ಯತೆ ಇರುವುದಿಲ್ಲ.

ನಾನು ಎರಡು ಕ್ಷೇತ್ರದಲ್ಲಿ ಶಾಸಕನಾಗಿ ಅಡ್ಡಾಡಿಕೊಂಡು ಕೆಲಸ ಮಾಡಿದ್ದೇನೆ. ಇವತ್ತು ಯಾವುದೇ ಊರಿಗೆ ಹೋದರೂ ಒಂದು ಸೈಟ್‌ಗೆ ಎರಡು-ಮೂರು ಜನರು ಹಕ್ಕುಪತ್ರಗಳನ್ನು ತೆಗೆದುಕೊಂಡು ಬರುತ್ತಾರೆ. ಈಗ ಅದಕ್ಕೆ ರಿಜಿಸ್ಟ್ರೇಷನ್ ಮಾಡಿಕೊಟ್ಟುಬಿಟ್ಟರೆ, ಶೇಕಡಾ 99.9 ರಷ್ಟು ಯಾರೂ ಮಾಲೀಕರು ಎಂದು ಸ್ಪಷ್ಟವಾಗಿ clarity ಸಿಗುತ್ತದೆ. At least ಅದನ್ನು ಪಡೆದುಕೊಂಡಂತಹವರು ನೆಮ್ಮದಿಯಾಗಿ ಬದುಕಬಹುದು. ಮಾನ್ಯ ಸದಸ್ಯರು system ನಲ್ಲಿ integration ಬಗ್ಗೆ ಮಾತನಾಡಿದರು. ನಾವು ಅದಕ್ಕೆ ಏನು ಮಾಡಿದ್ದೇವೆಂದು ಮೊದಲು forward integration ಬಗ್ಗೆ ಹೇಳುತ್ತೇನೆ. ಆಮೇಲೆ backward integration ಬಗ್ಗೆ ಹೇಳುತ್ತೇನೆ. ಈಗ 2016 ರಿಂದ 2023 ರವರೆಗೆ 94C, 94CC and 94D ಈ ಮೂರು ಸೆಕ್ಷನ್‌ಗಳಲ್ಲಿ 2.60 ಲಕ್ಷ ಹಕ್ಕುಪತ್ರಗಳನ್ನು ವಿತರಣೆ ಮಾಡಿದ್ದೇವೆ. ಇವುಗಳೆಲ್ಲಾ ಹೆಚ್ಚು ಕಡಿಮೆ ಪೇಪರ್ ಹಕ್ಕುಪತ್ರಗಳು. ಈ ಹಕ್ಕುಪತ್ರಗಳಿಗೆ ಗ್ರಾಮಪಂಚಾಯಿತಿಗಳಲ್ಲಿ ಎಷ್ಟು ಇ-ಖಾತೆ ಆಗಿದೆ ಎಂದು ನೋಡಿದರೆ, ಕೇವಲ 10,000ಕ್ಕೆ ಖಾತೆ ಆಗಿದೆ. ಈಗ ನಾವು ಮೊನ್ನೆಯ ದಿವಸ 1,11,111 ಹಕ್ಕುಪತ್ರಗಳನ್ನು ವಿತರಣೆ ಮಾಡಿದ್ದೇವೆ. ಇವುಗಳೆಲ್ಲಾ ಡಿಜಿಟಲ್ ಹಕ್ಕುಪತ್ರಗಳು. ಹಿಂದೆ ಅವರಿಗೆ ಪೇಪರ್‌ನಲ್ಲಿ ಕೊಟ್ಟಿರುವುದು, ಅದು ಪ್ರಿಂಟ್‌ಔಟ್ ಅಷ್ಟೆ. Actually, there is no ಹಕ್ಕುಪತ್ರ. ಏಕೆಂದರೆ, ಇದು digital form ನಲ್ಲಿವೆ. ಈ 1,11,111 ರಲ್ಲಿ ಇಲ್ಲಿಯವರೆಗೆ ಈಗಾಗಲೇ ಸುಮಾರು 90,000ಕ್ಕೆ ಹಕ್ಕುಪತ್ರಗಳನ್ನು ಮಾಡಿಕೊಟ್ಟಿದ್ದೇವೆ. ಏಕೆಂದರೆ, ಅವುಗಳನ್ನು system ನಲ್ಲಿ integrate ಮಾಡಿದ್ದೇವೆ. ಆ ಹಕ್ಕುಪತ್ರಕ್ಕೆ ತಹಶೀಲ್ದಾರ್ ಸಹಿ ಮಾಡುತ್ತಾರೆ. ಅದನ್ನು ಉಪ ನೋಂದಣಾಧಿಕಾರಿಗಳು ರಿಜಿಸ್ಟ್ರೇಷನ್ ಮಾಡುತ್ತಾರೆ. ಅದು ‘ಕಾವೇರಿ’ ಯಿಂದ ನೇರವಾಗಿ ಇ-ಸ್ವತ್ತಿಗೆ ಹೋಗುತ್ತದೆ. ಅಲ್ಲಿ ಎಲ್ಲಾ ಆನ್‌ಲೈನ್. ಮತ್ತೆ ಅದು ಯಾವ್ಯಾವ ಹಂತದಲ್ಲಿದೆ ಎಂದು ಎಲ್ಲಾ ಕಾಣುತ್ತದೆ. ನಾವು system ಅನ್ನು completely forward integration ಅನ್ನು ಸಹ ಮಾಡಿದ್ದೇವೆ. ಅದು ಕಾವೇರಿಯಲ್ಲಿ ರಿಜಿಸ್ಟ್ರೇಷನ್ ಆದ ಮೇಲೆ automatic ಆಗಿ ಖಾತೆಯಾಗಿ, ಅದು ಖಾತೆಯಾದ ಮೇಲೆಯೇ ಅದರ process complete ಆಗುವುದು. ನಾವು ಇದನ್ನು ನೋಂದಣಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ನಗರಾಭಿವೃದ್ಧಿ ಇಲಾಖೆಯ ಜೊತೆಗೂ ಸಹ integrate ಮಾಡಿದ್ದೇವೆ. ಇದು forward integration. ಅದೇ ರೀತಿ backward integration ಅನ್ನು ಸಹ ಮಾಡುತ್ತಿದ್ದೇವೆ. ಅಂದರೆ, ಸರ್ವೆಯಲ್ಲಿ ಒಂದು ಸ್ಕೆಚ್ ಆದರೆ ಅದು ಅಲ್ಲಿಂದ town planning ಗೆ ಹೋಗಬೇಕು. ಆಗ town planning ನಿಂದ site create ಆಗಬೇಕು. ಆಗ ಅದಕ್ಕೆ ಖಾತೆಯಾಗಿ ಅಲ್ಲಿಂದ ಕಾವೇರಿಗೆ ಬರಬೇಕು. ಇದು ನಮ್ಮಿಂದ backward integration. ಅದೂ ಕೂಡ ULMS design ಮಾಡಿ, piece by piece ಅದನ್ನು ಕೂಡ operationalize ಮಾಡುತ್ತಿದ್ದೇವೆ. ಇದರ ಜೊತೆಗೆ ಮಾನ್ಯ ಸದಸ್ಯರು ಇದು ಯಾವಾಗ registration

digital work ಆಗುತ್ತದೆ ಎಂದು ಕೇಳಿದರು. ಅವರು ಹಿಂದೆ ಕೊಟ್ಟಿರುವ ಖಾತೆಗಳನ್ನು digitize ಮಾಡಿದರೆ ಮಾತ್ರ ಆಗುತ್ತದೆ. ನಾವು ಜನವರಿ 2024ರಲ್ಲಿ ಇದರ ಪ್ರಯತ್ನವನ್ನು ಆರಂಭ ಮಾಡಿದ್ದೇವೆ. ಎಲ್ಲಾ ಇಲಾಖೆಗಳು, ಕೈಗಾರಿಕಾ ಇಲಾಖೆ; KIADB, KSSIDC; Housing Department; Housing Board, Slum Board ಆಮೇಲೆ ನಗರಾಭಿವೃದ್ಧಿ ಇಲಾಖೆ; ಬಿ.ಬಿ.ಎಂ.ಪಿ., ಮುನ್ಸಿಪಾಲಿಟಿ ಆಮೇಲೆ ಪಂಚಾಯತ್ ರಾಜ್ ಇಲಾಖೆ. ಅಂದರೆ, ಗ್ರಾಮಪಂಚಾಯಿತಿ.

(ಮುಂದು)

**(722) 14.08.2025 02.30 LL-VK (ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಕೃಷ್ಣ ಭೈರೇಗೌಡ(ಮುಂದು):-**

ಇಷ್ಟು ಜನಗಳದ್ದು ಕಳೆದ ವರ್ಷ ಜನವರಿಯಿಂದ ಜುಲೈವರೆಗೂ ಪ್ರತಿ ತಿಂಗಳಿಗೆ ಒಂದೊಂದು ಮೀಟಿಂಗ್ ಮಾಡಿರುತ್ತೇನೆ. ಪ್ರತಿ ಸಭೆಗೆ ಇವರೆಲ್ಲರೂ ಸಹ ಹಾಜರಾಗಿ, "ಮಾಡಿಬಿಡುತ್ತೇವೆ ಸರ್" ಎಂದು ಹೇಳುತ್ತಾರೆ. ಅದರಂತೆ, ನಾನು ಇಂಟಿಗ್ರೇಷನ್ ಮಾಡುವುದನ್ನು ತಳ್ಳಿಕೊಂಡು ಬಂದಿರುತ್ತೇನೆ. ಕೊನೆಯದಾಗಿ ನನಗೆ ಅರ್ಥವಾಗಿದ್ದೇನೆಂದರೆ, ಸರ್ಕಾರದ ವ್ಯವಸ್ಥೆಯಲ್ಲಿ ಎಲ್ಲವನ್ನು perfect ಮಾಡಬೇಕಾದರೆ ನಾವು ಏನನ್ನೂ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ, ವ್ಯವಸ್ಥೆ ನಮಗೆ ಬಿಡುವುದಿಲ್ಲ. ಇಲ್ಲಿ ಸರ್ಕಾರ ದುರಾದೃಷ್ಟವಶಾತ್ ಹೇಗೆ ಕೆಲಸ ಮಾಡುತ್ತದೆಯೆಂದರೆ, higher will ನಿಂದಲೇ ಕೆಲಸ ಮಾಡಬೇಕಾಗಿರುತ್ತದೆ. ಕೊನೆಯದಾಗಿ, ನಾನು ಏನು ಹೇಳಿರುತ್ತೇನೆಂದರೆ, ನಾನಂತೂ ಪೇಪರ್ ಮೇಲೆ ರಿಜಿಸ್ಟ್ರೇಷನ್ ಮಾಡುವುದನ್ನು ಮುಂದಿನ ಅಕ್ಟೋಬರ್‌ನಿಂದ ನಿಲ್ಲಿಸುತ್ತೇನೆ. ನೀವು ಏನಾದರೂ ಮಾಡಿಕೊಳ್ಳಿ ಎಂದು ಹೇಳಿರುತ್ತೇನೆ. ಏಕೆಂದರೆ, ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ಅನೇಕ ಸಭೆಗಳನ್ನು ನಡೆಸಿ, ಒಳ್ಳೆಯ ಮಾತುಗಳನ್ನು ಹೇಳಿ ಸುಸಲಾಯಿಸಿರುತ್ತೇನೆ. ಆದರೆ, ಸರ್ಕಾರದ ವ್ಯವಸ್ಥೆಯಲ್ಲಿ ಒಳ್ಳೆಯ ಮಾತುಗಳಿಗೆ ಇಲ್ಲಿ ಗೌರವ ಸಿಗುವುದಿಲ್ಲ. ಎಲ್ಲಾ ಪೂರ್ವ ತಯಾರಿ ಮಾಡಿ ಅನುಷ್ಠಾನ ಮಾಡಬೇಕೆಂದು ನೀವು ಹೇಳಬಹುದು. ನಿಮ್ಮದು, ನಮ್ಮದು ಹಾಗೂ ಎಲ್ಲರ ಚಿಂತನೆ ಒಂದೇ ಇದೆ. ಆದರೆ, ಕೊನೆಯದಾಗಿ ಅರ್ಥ ಏನು ಎಂದರೆ, ನಾವು ಏನೂ ಮಾಡುವುದಕ್ಕಾಗುವುದಿಲ್ಲ ಎಂದು. Unless we bring down the will and face of our decision making, we cannot bring any changes. ಕೊನೆಯದಾಗಿ, ಅಕ್ಟೋಬರ್ ತಿಂಗಳಿಗೆ ನಾನು ಅದನ್ನು clampdown ಮಾಡಿದೆನು. ಆಗ ಅಧಿಕಾರಿಗಳು ಎದ್ದು ಬಿದ್ದು digitise ಮಾಡಿದರು. ಆ ಸಂದರ್ಭದಲ್ಲಿ ಒಂದೆರಡು ತಿಂಗಳು ಜನ ನನಗೆ ಬೈದರು. ಜೊತೆಗೆ ತಾವುಗಳು ಕೂಡ ಬೈದಿರುತ್ತೀರಿ. ಅಂದರೆ, ಈ ವ್ಯವಸ್ಥೆಯಿಂದಾಗಿ ಜನರಿಗೆ ತೊಂದರೆಯಾಗುತ್ತಿದೆ ಎಂದು ಹೇಳಿರುತ್ತೀರಿ. ಆದರೆ, ಈ ರೀತಿಯಾಗುತ್ತದೆ ಎಂದು ನನಗೆ ಮೊದಲೇ ಗೊತ್ತಿತ್ತು. ಆದರೆ, ನನಗೆ ಬೇರೆ ಮಾರ್ಗ ಇರಲಿಲ್ಲ. ಏಕೆಂದರೆ, ಸರ್ಕಾರದ ವ್ಯವಸ್ಥೆಯಲ್ಲಿ ನಾವು ದೃಢವಾಗಿ ಒಂದು ತೀರ್ಮಾನ ತೆಗೆದುಕೊಂಡು ಸ್ವಲ್ಪ ದಿನ ಟೀಕೆ-ಟಿಪ್ಪಣಿಗಳಿಗೆ ಒಳಗಾಗುವುದಕ್ಕೆ ನಾವು ತಯಾರಿಲ್ಲವೆಂದರೆ, ಬದಲಾವಣೆ ತರುವುದಕ್ಕೆ ಆಗುವುದಿಲ್ಲ. ಏಕೆಂದರೆ, ನಾವು ನಮ್ಮ

ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳಿಗೆ ಸುಮಾರು 8 ತಿಂಗಳು ಕಾಲ digitise ಮಾಡಿ ಎಂದು ಹೇಳಿರುತ್ತೇನೆ. ಅದಕ್ಕೆ ಅವರು, 'ಹ್ಞೂಂ ಸರ್, ಮಾಡುತ್ತೇವೆ' ಎಂದು ಹೇಳಿರುತ್ತಾರೆ. ಆದರೆ, ಏನನ್ನೂ ಮಾಡುವುದಿಲ್ಲ. ಕೊನೆಯದಾಗಿ, ಈ ದಿನಾಂಕದಿಂದ ಇನ್ನು ಮುಂದೆ ನಾನು ಪೇಪರ್‌ನಲ್ಲಿ ರಿಜಿಸ್ಟ್ರೇಷನ್ ಅಲೋ ಮಾಡುವುದಿಲ್ಲ ಎಂದು iron wall ಹಾಕಿದೆನು. ಆಗ ಡಿಜಿಟಲೈಸ್ ಮಾಡಬೇಕಾಗಿ ಬಂತು. ಆದಾಗ್ಯೂ, ಮೆಜಾರಿಟಿ digitise ಮಾಡಿದ್ದಾರೆ. ಆದರೆ, ಇವೊತ್ತಿಗೂ ಕೂಡ ಹೌಸಿಂಗ್ ಬೋರ್ಡ್, ಸ್ಲಂ ಬೋರ್ಡ್ ಮತ್ತು ಕೆಐಎಡಿಬಿಯವರು digitise ಮಾಡಿರುವುದಿಲ್ಲ. ಈ ಬಗ್ಗೆ ತಾವೆಲ್ಲರೂ ಹೇಳಿರುವುದು ನಿಜ ಇದೆ. ಆದರೆ, ಅವರೆಲ್ಲರೂ ಸಹ ಅನಿವಾರ್ಯವಾಗಿ ನಮ್ಮ ಬಳಿ ಬರಬೇಕಾಗಿದೆ. ಏನೆಂದರೆ, ಕೆಐಎಡಿಬಿ ಯವರು ಒಂದು ಪ್ಲಾಟ್ ಅನ್ನು ರಿಜಿಸ್ಟ್ರೇಷನ್ ಮಾಡಿಕೊಡಬೇಕೆಂದರೆ, they must come into my digital integration. ಇದು ಪ್ರಾಕ್ಟಿಕಲ್ ಆಗಿ ಆಗುವಂತಹ ವ್ಯವಸ್ಥೆಯನ್ನು ನಾನು ತಮಗೆಲ್ಲರಿಗೂ ಹೇಳುತ್ತಿದ್ದೇನೆ. ಎಲ್ಲವನ್ನೂ ಮೊದಲೇ ಪಕ್ಕಾ ತಯಾರು ಮಾಡಿ ಮಾಡುವುದಕ್ಕೆ ಸರ್ಕಾರದ ವ್ಯವಸ್ಥೆಯಲ್ಲಿ ನಮಗೆ ಬಿಡುವುದಿಲ್ಲ ಎನ್ನುವಂತಹದ್ದು ಕೂಡ ಇದೆ.

**ಶ್ರೀ ಸಿ.ಎನ್. ಮಂಜೇಗೌಡ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ವೈಸ್ ಛೇರ್ಮನ್:-** ಮಾನ್ಯ ಸಚಿವರು ಉತ್ತರ ನೀಡಿದ ನಂತರ, ಏನಾದರೂ ಇದ್ದರೆ ಹೇಳಿ. ಈಗ ತಾವು ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಸಿ.ಎನ್. ಮಂಜೇಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದಂತಹ ವಿಷಯವಾಗಿದೆ. ಮಾನ್ಯ ಸಚಿವರು ಇಲ್ಲಿ ಎಲ್ಲವನ್ನೂ ಜೋಡಿಸುತ್ತಿದ್ದಾರೆ. ಆದರೆ, ಕೆಲವು ಕಡೆಗಳಲ್ಲಿ ಏನಾಗುತ್ತಿದೆಯೆಂದರೆ, ಸತ್ತ ವ್ಯಕ್ತಿಯ ಹೆಸರಿನಲ್ಲಿ ಬೇರೆ ವ್ಯಕ್ತಿಗಳು ಬಂದು ಜಮೀನು ನೋಂದಣಿ ಮಾಡಿಕೊಡುತ್ತಿದ್ದಾರೆ. ಅದಕ್ಕೆ ಹೇಗೆ ಕಡಿವಾಣ ಹಾಕಬೇಕು ಎಂಬ ಬಗ್ಗೆ ಮಾನ್ಯ ಸಚಿವರು ಸ್ವಲ್ಪ ಮಾಹಿತಿ ನೀಡಬೇಕು.

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, ಹೌದು ಅದು ಕೂಡ ಇದೆ. ಈಗ ಮಾನ್ಯ ಸದಸ್ಯರು, ಲಿಟಿಗೇಷನ್ ಬಹಳ ಇದೆ, ಅದನ್ನು ಹೇಗೆ ಮಾಡುತ್ತಾರೆಂದು ಕೇಳಿರುತ್ತಾರೆ. ಉದಾಹರಣೆಗೆ ನಾವು ಈಗ ಏನು ಮಾಡಿದ್ದೇವೆಂದರೆ, ಯಾವುದಾದರೂ ಜಮೀನಿಗೆ ಸಂಬಂಧಪಟ್ಟಂತೆ ಮಾನ್ಯ ನ್ಯಾಯಾಲಯಗಳಿಂದ ತಡೆಯಾಜ್ಞೆ ಬಂದರೆ, ಅದು ನೇರವಾಗಿ ನಮ್ಮ ಆರ್.ಟಿ.ಸಿ. ಯಲ್ಲಿ ಆಗಬೇಕೆಂಬ ವ್ಯವಸ್ಥೆ ಮಾಡುತ್ತಿದ್ದೇವೆ. ಆದರೆ, ಇಷ್ಟು ದಿನ ಯಾವ ರೀತಿಯ ವ್ಯವಸ್ಥೆ ಇತ್ತೆಂದರೆ, ಯಾವುದೋ ಒಂದು ಪ್ರಾಪರ್ಟಿಯನ್ನು ಸರ್ಕಾರ (ಎಸ್.ಎಲ್.ಎ.ಓ.ಗಳು) ಅಕ್ವೇರ್ ಮಾಡುತ್ತಿದೆಯೆಂದರೆ, ಅದು ಕೆಐಎಡಿಬಿ ಇರಬಹುದು ಮತ್ತೊಂದು ಅಥವಾ ಮಗದೊಂದು ಇರಬಹುದು. ಅವರು ಉದ್ದೇಶಪೂರ್ವಕವಾಗಿ ನಮ್ಮ ಆರ್.ಟಿ.ಸಿ. ಕಾಲಂ 11 ರಲ್ಲಿ it is under acquisition ಎಂದು ನಮೂದು ಮಾಡುತ್ತಿರಲಿಲ್ಲ. ಆಗ ಆ ಜಮೀನಿನ ಖಾತೆ transaction ಆಗುತ್ತಿತ್ತು. ಆದರೆ, ಇಲ್ಲಿ ಕೆಲವು ಜಮೀನು ಸರ್ಕಾರಕ್ಕೆ ಸ್ವಾಧೀನ ಆಗುತ್ತಿರುತ್ತದೆ ಅಥವಾ ಸ್ವಾಧೀನ ಆಗಿ ಹೋಗಿರುತ್ತದೆ. ಆದರೆ, ನಮ್ಮ ಆರ್.ಟಿ.ಸಿ. ಯಲ್ಲಿ

ನಮೂದು ಇಲ್ಲದೇ ಇರುವುದರಿಂದ, ಅಂತಹ ಜಮೀನಿನ ಖಾತೆ transaction ಆಗುತ್ತಿತ್ತು. ಅದಕ್ಕಾಗಿ, ನಾವು ಏನು ಮಾಡಿದ್ದೇವೆಂದರೆ, ನಮ್ಮ ಎಸ್.ಎಲ್.ಎ.ಓ. ಗಳಿಗೆ ನಾವು direct entry ನೀಡಿರುತ್ತೇವೆ. ಅದರಂತೆ, ಎಸ್.ಎಲ್.ಎ.ಓ.ಗಳು ಇಂತಹ ಜಮೀನು acquisition ನಲ್ಲಿದೆ ಎಂದು ನಮೂದು ಮಾಡುವುದು ಅವರ ಕೆಲಸವಾಗಿರುತ್ತದೆ. ಆದರೆ, ಈ ಮೊದಲು ನಮಗೆ ಸಂಬಂಧಪಟ್ಟ ಜಮೀನಿನ ಬಗ್ಗೆ ಆರ್.ಟಿ.ಸಿ. ಕಾಲಂ 11 ರಲ್ಲಿ ನಮೂದು ಮಾಡಬೇಕೆಂದು ಪತ್ರ ಬರೆಯುತ್ತಿದ್ದರು. ಆ ಪತ್ರ ನಮಗೆ ತಲುಪುವುದಕ್ಕೆ ಒಂದಷ್ಟು ದಿನ ಆಗುತ್ತಿತ್ತು. ನಂತರ, ಅದನ್ನು ಡೇಟಾ ಎಂಟ್ರಿ ಆಪರೇಟರ್ ನಮೂದು ಮಾಡುವುದಕ್ಕೆ ಒಂದಷ್ಟು ದಿನ ತೆಗೆದುಕೊಳ್ಳುತ್ತಿದ್ದನು. ಈ ಮಧ್ಯದಲ್ಲಿ ತಾವುಗಳು ಹೇಳಿದ ಹಾಗೆ, ಲಿಟಿಗೇಷನ್ ಇರುವಂತಹ ಜಮೀನು ಹಾಗೂ ಇತರೆ ಸ್ವಾಧೀನವಾಗಬೇಕಾದಂತಹ ಜಮೀನುಗಳು ಕೈಯಿಂದ ಕೈಗೆ ಬದಲಾವಣೆಯಾಗುತ್ತಿತ್ತು. ಆದರೆ, ಈಗ ಕೋರ್ಟ್ ಆರ್ಡರ್‌ಗಳನ್ನು ಆರ್.ಟಿ.ಸಿ. ಕಾಲಂ-11 ರಲ್ಲಿ ನಮೂದು ಮಾಡುವುದಕ್ಕೆ ಎಸ್.ಎಲ್.ಎ.ಓ. ಗಳಿಗೆ ನೇರವಾಗಿ ಲಾಗಿನ್ ಎಂಟ್ರಿ ಕೊಟ್ಟಿರುತ್ತೇವೆ. ಅದಕ್ಕೆ ಇನ್ನು ಸ್ವಲ್ಪ ಇಂಪ್ರೂವ್‌ಮೆಂಟ್ ಆಗಬೇಕು. ಈಗ ಅದು ಶೇಕಡ 70 ರಷ್ಟು ಇಂಪ್ರೂವ್‌ಮೆಂಟ್ ಆಗಿದೆ. ಇನ್ನು ಶೇಕಡ 30 ರಷ್ಟು ಬಾಕಿ ಇರುತ್ತದೆ. ಈ ರೀತಿ ಸಮಸ್ಯಾತ್ಮಕ ಆಸ್ತಿಗಳು ವಹಿವಾಟು ಆಗುವುದನ್ನು ತಡೆಗಟ್ಟುವ ಬಗ್ಗೆ ನಾವು ಎಚ್ಚರಿಕೆಯನ್ನು ವಹಿಸುತ್ತಿದ್ದೇವೆ.

ಮಾನ್ಯ ಸದಸ್ಯರು ಆಗಲೇ ಮಾತನಾಡುತ್ತಾ, ತಾಲ್ಲೂಕು ಕಛೇರಿಗಳಲ್ಲಿ ಮೂಲಭೂತ ಸೌಕರ್ಯಗಳ ಬಗ್ಗೆ ಹೇಳಿರುತ್ತಾರೆ. ನಾನು ಕೂಡ ಮೊದಲು ಕಂದಾಯ ಇಲಾಖೆಯ ಕಛೇರಿಗಳಿಗೆ ಭೇಟಿ ನೀಡುತ್ತಿದ್ದಂತಹ ಸಂದರ್ಭದಲ್ಲಿ ಯಾವುದೇ ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಜನಜಂಗುಳಿ/ಜಾತ್ರೆ ಇರುತ್ತಿತ್ತು. ಈ ವಿಷಯಕ್ಕೆ ಸಂಬಂಧಿಸಿದಂತೆ, ಕೆಲವು ಅಧಿಕಾರಿಗಳನ್ನು "ಏತಕ್ಕೆ ಇಷ್ಟೊಂದು ಜನ" ಎಂದು ಕೇಳಿರುತ್ತೇನೆ. ಏಕೆಂದರೆ, ಜಮೀನು ನೋಂದಣಿಗಾಗಿ ಎಲ್ಲರೂ ಕೂಡ ಒಂದೇ ಸಮಯಕ್ಕೆ ಬರುತ್ತಾರೆ. ಅಂದರೆ, ಎಲ್ಲರೂ ಒಳ್ಳೆಯ ಗಳಿಗೆ ನೋಡಿಕೊಂಡು ಬರುತ್ತಾರೆ ಅಥವಾ ಎಲ್ಲರೂ ಸಹ ಬೆಳಗ್ಗೆ 11.00 ಅಥವಾ 12.00 ಗಂಟೆಗೆ ಜಮೀನು ನೋಂದಣಿಗಾಗಿ ಬರುತ್ತಾರೆ. ಅದರಂತೆ, ಎಲ್ಲರೂ ಒಟ್ಟಿಗೆ ಸಬ್ ರಿಜಿಸ್ಟ್ರಾರ್ ಕಛೇರಿಗೆ ಬಂದು ಮುಗಿಬೀಳುತ್ತಾರೆ. ಆದರೆ, ಒಂದೊಂದು ಜಮೀನು ನೋಂದಣಿ ಮಾಡುವುದಕ್ಕೂ ಸಹ ಕನಿಷ್ಠ ಮುಕ್ಕಾಲು ಗಂಟೆ ಅಥವಾ ಒಂದು ಗಂಟೆ ಸಮಯ ಬೇಕು. ಒಂದೊಂದು ಗುಂಪಿನಲ್ಲಿಯೂ ಸಹ 10 ರಿಂದ 20 ಜನ ಇರುತ್ತಾರೆ. ಏಕೆಂದರೆ, ಜಮೀನು ಮಾರಾಟ ಮಾಡುವವರಲ್ಲಿ ಯಾರ್ಯಾರು claimants ಇರುತ್ತಾರೆ, ಅವರೆಲ್ಲರೂ ಸಹ ಒಟ್ಟಿಗೆ ಬಂದು ಜಮೀನು ನೋಂದಣಿಗೆ ಸಹಿ ಮಾಡಬೇಕಾಗಿರುತ್ತದೆ. ಅದಕ್ಕೆ ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ, "ರೀ, ಏತಕ್ಕೆ ತಾವು ತಮ್ಮಲ್ಲಿ ಅಪಾಯಿಂಟ್‌ಮೆಂಟ್ ಸಿಸ್ಟಮ್ ತಂದಿರುವುದಿಲ್ಲ? ಮೊದಲು ಆ ಸಿಸ್ಟಮ್ ಅನ್ನು ಜಾರಿಗೆ ತನ್ನಿ" ಎಂದು ಆ ವ್ಯವಸ್ಥೆಯನ್ನು ಜಾರಿಗೆ ತಂದಿರುತ್ತೇನೆ. ಅದರಂತೆ, ಅಪಾಯಿಂಟ್‌ಮೆಂಟ್ ಸಿಸ್ಟಮ್‌ನಲ್ಲಿ ನಾವು ಟೈಮ್ ಸ್ಲಾಟ್ ಅನ್ನು ಪ್ರದರ್ಶನ ಮಾಡಿರುತ್ತೇವೆ. ಅದರಲ್ಲಿ ಜನರೇ ತಮಗೆ ಬೇಕಾದಂತಹ ಸಮಯವನ್ನು ಆಯ್ಕೆ ಮಾಡಬಹುದಾಗಿರುತ್ತದೆ. ಈ ವ್ಯವಸ್ಥೆಯನ್ನು ಜಾರಿಗೆ ತಂದ ನಂತರ, ಸದರಿ ಕಛೇರಿಗಳಿಗೆ ಹೋಗಿ ಪರಿಶೀಲಿಸಿದರೆ, ಪುನಃ ಅಲ್ಲಿ ಅದೇ

ಸಮಸ್ಯೆ ಇರುತ್ತದೆ. ಅದನ್ನು ನೋಡಿ ನನಗೆ ತಲೆ ಕೆಟ್ಟು ಹೋಗಿರುತ್ತದೆ. ಏಕೆಂದರೆ, ಅಪಾಯಿಂಟ್‌ಮೆಂಟ್ ಸಿಸ್ಟಮ್ ತಂದರೂ ಸಹ, ಏತಕ್ಕೆ ಇಷ್ಟೊಂದು ಜನಸಂದಣಿ ಇರುತ್ತದೆಯೆಂದು ಅರ್ಥವಾಗಲಿಲ್ಲ. ಪುನಃ ನಾನು ನಮ್ಮ ಅಧಿಕಾರಿಗಳಿಗೆ, "ಏತಕ್ಕೆ ಪುನಃ ಈ ರೀತಿಯಾಗಿರುತ್ತದೆ" ಎಂದು ಕೇಳಿರುತ್ತೇನೆ. ಆ ಬಗ್ಗೆ ನಮ್ಮ ಅಧಿಕಾರಿಗಳಿಗೆ ಎಲ್ಲಾ ಗೊತ್ತಿದ್ದರೂ ಸಹ ಯಾರು ಕೂಡ ಬಾಯಿ ಬಿಡುವುದಿಲ್ಲ. ಆ ನಂತರ, ನಾವು ಕುಳಿತುಕೊಂಡು ಏತಕ್ಕಾಗಿ ಈ ರೀತಿ ಆಗುತ್ತಿದೆ ಎನ್ನುವುದನ್ನು ಪರಿಶೀಲನೆ ಮಾಡಿ ನೋಡಿದರೆ, ಜನರು ಅಪಾಯಿಂಟ್‌ಮೆಂಟ್ ಅನ್ನು ಸೆಲೆಕ್ಟ್ ಮಾಡಿಕೊಂಡಿರುತ್ತಾರೆ. ಆದರೆ, ಆ ದಿನ ಅವರು ಯಾವ ಸಮಯಕ್ಕೆ ಬೇಕಾದರೂ ಬರಬಹುದು ಎಂದು ತಿಳಿದುಕೊಂಡಿರುತ್ತಾರೆ. ಹಾಗಾಗಿ, ಎಲ್ಲರೂ ಒಂದೇ ಸಮಯಕ್ಕೆ ಬಂದು ಅಲ್ಲಿ ಜನಜಂಗುಳಿ ಆಗುತ್ತಿತ್ತು. ಅದಕ್ಕಾಗಿ, ನಾನು ನಮ್ಮ ಅಧಿಕಾರಿಗಳಿಗೆ, "ಒಂದು ಅಪಾಯಿಂಟ್‌ಮೆಂಟ್‌ಗೆ 5 ಜನ ಇದ್ದರೆ, 10 ನಿಮಿಷ; 15 ಜನ ಇದ್ದರೆ 20 ನಿಮಿಷ; ಈ ರೀತಿ ಆಟೋಮ್ಯಾಟಿಕ್ ಆಗಿ parties to the transaction ಪ್ರಕಾರವಾಗಿ ಒಂದು ಅಪಾಯಿಂಟ್‌ಮೆಂಟ್ ಫಿಕ್ಸ್ ಮಾಡಿ, ಅದಕ್ಕೆ ಕೇವಲ 10 ನಿಮಿಷ ಬೋನಸ್ ಟೈಮ್ ನೀಡಿ. ಆ ಸಮಯದೊಳಗೆ ಅವರು ಬಂದು ಲಾಗಿನ್ ಆದರೆ ಮಾತ್ರ ಅವರಿಗೆ ಅಪಾಯಿಂಟ್‌ಮೆಂಟ್ ಸಿಗುತ್ತದೆ. ಇಲ್ಲವಾದರೆ, ಅವರ ಆ ದಿನದ ಲಾಗಿನ್ ಕ್ಯಾನ್ಸಲ್ ಆಗುತ್ತದೆ" ಎಂದು ಹೇಳಿರುತ್ತೇನೆ. ಆಗ ನಮ್ಮ ಅಧಿಕಾರಿಗಳು, "ತಾವು ಹೇಳುವುದು ಸರಿಯಿದೆ. ಆದರೆ, ಅಪಾಯಿಂಟ್‌ಮೆಂಟ್ ತೆಗೆದುಕೊಂಡವರು ಸಕಾಲಕ್ಕೆ ಬರುವುದಕ್ಕೆ ಸಾಧ್ಯವಾಗದೇ ಇದ್ದರೆ, ಆ ದಿನ ಸಾಯಂಕಾಲ ಅವರಿಗೆ ಮತ್ತೊಂದು ಅವಕಾಶ ನೀಡಿ" ಎಂದು ಕೇಳಿರುತ್ತಾರೆ. ಆದರೆ, ನಾನು ದಿನ ಮತ್ತೊಮ್ಮೆ ಅವಕಾಶ ನೀಡುವುದೇ ಇಲ್ಲವೆಂದು ಹೇಳಿರುತ್ತೇನೆ. ಒಂದು ವೇಳೆ ಸಾಯಂಕಾಲ ಮತ್ತೊಂದು ಅವಕಾಶ ನೀಡಿದರೆ, ಅವರು ಅಲ್ಲಿಯೇ ಕುಳಿತುಕೊಳ್ಳುತ್ತಾರೆ. ಇದರಿಂದಾಗಿ, ಪುನಃ ಅಲ್ಲಿ ಅದೇ ರೀತಿಯ ಜನಸಂದಣಿ ಆಗುತ್ತದೆ. ಅಪಾಯಿಂಟ್‌ಮೆಂಟ್ ತೆಗೆದುಕೊಂಡವರು ಲೇಟಾಗಿ ಬರುತ್ತಾರೆ. ಆದರೆ, ಅದಕ್ಕೆ ನನ್ನನ್ನು ದೂಷಿಸುತ್ತಾರೆ. ಅಂದರೆ, ನಮ್ಮ ಕಛೇರಿ ಅಥವಾ ನಮ್ಮ ಇಲಾಖೆಯನ್ನು ದೂಷಿಸುತ್ತಾರೆ. ಅದಕ್ಕಾಗಿ, ನಾನು ಏನು ಹೇಳಿರುತ್ತೇನೆಂದರೆ, "ನೋ, ಆ ದಿನದ ಅಪಾಯಿಂಟ್‌ಮೆಂಟ್ ಕ್ಯಾನ್ಸಲ್. ಮುಂದಿನ ದಿನ ಅವರು ತಮಗೆ ಬೇಕಾದಂತಹ ಸಮಯ ಆಯ್ಕೆ ಮಾಡಿಕೊಂಡು ಬರಲಿ" ಎಂದು ಹೇಳಿರುತ್ತೇನೆ. ಇದಾದ ಮೇಲೆ ಆ ವ್ಯವಸ್ಥೆ ಸ್ವಲ್ಪ ವರ್ಕ್ ಆಗುತ್ತಿದೆ.

**ವೈಸ್ ಛೇರ್ಮನ್:-** ಸದರಿ ವ್ಯವಸ್ಥೆ ಈಗಾಗಲೇ ಅನುಷ್ಠಾನವಾಗಿರುತ್ತದೆಯಲ್ಲವೇ?

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, ಹೌದು ಅನುಷ್ಠಾನವಾಗಿರುತ್ತದೆ. ನಾನು ಇದನ್ನು ಉದಾಹರಣೆಗೆ ಹೇಳಿರುತ್ತೇನೆ. ಈ ರೀತಿಯ ವ್ಯವಸ್ಥೆಯನ್ನು ನಮ್ಮ ಇಲಾಖೆಯಲ್ಲಿ ಜಾರಿಗೆ ತಂದಿರುತ್ತೇವೆ. ಮಾನ್ಯ ಸದಸ್ಯರು, "ಪೋಡಿ ಮಾಡುವ ವ್ಯವಸ್ಥೆ ಬಗ್ಗೆ ಮಾತನಾಡುತ್ತಾ, ಅದು ಕೂಡ ಕೇಳಹಂತದಲ್ಲಿ ಬಾಕಿ ಇಟ್ಟುಕೊಂಡಿದ್ದು, ಪ್ರಗತಿ ಆಗುತ್ತಿಲ್ಲವೆಂದು" ಹೇಳಿರುತ್ತಾರೆ. ನನ್ನ ಬಳಿ ಪ್ರತಿಯೊಬ್ಬ ಗ್ರಾಮ ಲೆಕ್ಕಿಗರ ಬಳಿ ಎಷ್ಟೆಷ್ಟು ಕಡತಗಳು ಬಾಕಿ ಇವೆ ಎಂಬ ಮಾಹಿತಿ ಇದೆ. At fingertips. ಪ್ರತಿ ಆರ್.ಐ.; ಪ್ರತಿ ಶಿರಸ್ತೇದಾರರು; ಪ್ರತಿ ತಹಶೀಲ್ದಾರ್‌ರವರು, ಪ್ರತಿ ಸರ್ವೇಯರ್; ಪ್ರತಿ ಎ.ಡಿ.ಎಲ್.ಆರ್. ಬಳಿ ಎಷ್ಟು ಕಡತಗಳು ಬಾಕಿ ಇವೆ ಎಂಬುದನ್ನು ನಾವು ಮಾನಿಟರ್

ಮಾಡುತ್ತಿದ್ದೇವೆ. ಹೌದು, ಪೋಡಿ ಕಡತಗಳು ಬಾಕಿ ಇರುವುದು ನಿಜ. ಇಲ್ಲಿಯವರೆಗೂ 1,41,000 ಕಡತಗಳನ್ನು ನಾವು ತೆಗೆದುಕೊಂಡಿರುತ್ತೇವೆ. ಸುಮಾರು 73,000 ಸರ್ವೆ ನಂಬರ್‌ಗಳು ಪ್ರೋಸೆಸ್ ಆಗಿದ್ದು, ಇನ್ನು 67,000 ಸರ್ವೆ ನಂಬರ್‌ಗಳು ತಹಶೀಲ್ದಾರ್ ಮತ್ತು ಅವರ ಕೆಳಹಂತದಲ್ಲಿ ಬಾಕಿ ಇರುತ್ತವೆ. Day to day ಅದನ್ನು monitor ಮಾಡುತ್ತಿದ್ದು, ಅದನ್ನು ನಾವು push ಮಾಡುತ್ತೇವೆ. ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣನವರು ಮಾತನಾಡುತ್ತಾ, "ಈ ರೀತಿ ಎರಡು, ಮೂರು ಎಕರೆ ಜಮೀನು ಇರುವಂತಹವರಿಗೆ ಮಾತ್ರ ಮಾಡುತ್ತಾರೆ" ಎಂದು ಹೇಳಿರುತ್ತಾರೆ. ಆದರೆ, ಇವೆಲ್ಲವೂ ಎಲ್ಲಿ ಆಗಿವೆಯೆಂದರೆ, ರೆವಿನ್ಯೂ ಲೇಔಟ್‌ಗಳಲ್ಲಿ ಅಂದರೆ, unauthorised layout ಗಳಲ್ಲಿ ಆಗಿರುತ್ತವೆ. ಏಕೆಂದರೆ, ಅಲ್ಲಿ ಪ್ಲಾನ್ ಅಪ್ರೂವಲ್ ಇರುವುದಿಲ್ಲ. ಹಾಗಾಗಿ, ಅವರು ಸೈಟುಗಳಿಗೆ ಹಾಕಿದ್ದೇ ನಂಬರ್ ಆಗಿರುತ್ತದೆ. ಅದರಿಂದಾಗಿ, ಯದ್ವಾ ತದ್ವಾ ನಂಬರ್‌ಗಳನ್ನು ಹೊಡೆದಿರುತ್ತಾರೆ. ಇದರಿಂದಾಗಿ, ಸಾಕಷ್ಟು ಅನಾಹುತಗಳು ಆಗಿ ಹೋಗಿರುತ್ತವೆ. ಉದಾಹರಣೆಗೆ, ನನ್ನ ಮತ ಕ್ಷೇತ್ರದಲ್ಲಿ ಕೆಲವು ಬಿಲ್ಡರ್‌ಗಳು ಜಮೀನು ಖರೀದಿ ಮಾಡಿರುವುದು ಕೇವಲ 53 ಎಕರೆ. ಆದರೆ, ಸುಮಾರು 80 ಎಕರೆಯಲ್ಲಿ ಬಡಾವಣೆ ನಿರ್ಮಿಸಿರುತ್ತಾರೆ. ಅಷ್ಟೊಂದು ಜಮೀನು ಅವರಿಗೆ ಎಲ್ಲಿ ಸಿಕ್ಕಿರುತ್ತದೆಯೆಂದರೆ, ಆ ಲೇಔಟ್‌ನ ಪಕ್ಕದಲ್ಲಿ ಗೋಮಾಳ ಜಮೀನು ಇತ್ತು, ಅದನ್ನು ಅವರು ಬಿಟ್ಟಿಯಾಗಿ ಹೊಡೆದುಕೊಂಡು ಲೇಔಟ್ ಮಾಡಿ ನಿವೇಶನಗಳನ್ನು ವಿಂಗಡನೆ ಮಾಡಿರುತ್ತಾರೆ. ಹಾಗಾಗಿ, ನಾವು unauthorised ರೆವಿನ್ಯೂ ಲೇಔಟ್‌ಗಳನ್ನು ಬಂದ್ ಮಾಡಿರುತ್ತೇವೆ. ಬಹುಶಃ ಇತ್ತೀಚೆಗೆ ಯಾವುದಾದರೂ ಲೇಔಟ್‌ಗಳು ಆ ರೀತಿಯಾಗಿದ್ದರೆ, ಅದನ್ನು ನಮ್ಮ ಗಮನಕ್ಕೆ ತನ್ನಿ. ಏಕೆಂದರೆ, ಅದು ನಮಗೂ ಅರ್ಥವಾಗಬೇಕಲ್ಲವೇ? ನಾವು ಅದನ್ನು ಅಧ್ಯಯನ ಮಾಡಬೇಕಲ್ಲವೇ? ಎಲ್ಲೆಲ್ಲಿ ಲೋಪದೋಷಗಳು ಇವೆ ಎಂಬುದನ್ನು ನಾವು ಹುಡುಕಬೇಕಲ್ಲವೇ? ಯಾವುದಾದರೂ ಇಂತಹ ಅನಾಹುತಗಳು ಆಗಿರುವುದನ್ನು ನಿಮ್ಮಂತಹವರು ನೋಡಿದಾಗ ಅದನ್ನು ನಮಗೆ ತಿಳಿಸಿದರೆ ಎಲ್ಲೆಲ್ಲಿ ಲೋಪದೋಷಗಳು ಇವೆ ಎಂಬುದು ನಮಗೂ ಸಹ ಅರ್ಥವಾಗುತ್ತದೆ. ಈ ಹಿಂದೆ ಈ ರೀತಿಯ ಅನಾಹುತಗಳು ಅವ್ಯಾಹತವಾಗಿ ನಡೆದಿರುತ್ತವೆ. ಆದರೆ, ಇತ್ತೀಚೆಗೆ ನಡೆದಿರುವುದಿಲ್ಲವೆಂದು ನಾನು ಭಾವಿಸುತ್ತೇನೆ. ಹಾಗಾಗಿ, ಇನ್ನು ಮುಂದೆ ಅಂತಹ ವಿಚಾರಗಳು ಏನಾದರೂ ಇದ್ದರೆ, ದಯಮಾಡಿ ನಮ್ಮ ಗಮನಕ್ಕೆ ತನ್ನಿ. ಖಂಡಿತವಾಗಿಯೂ ಸಹ ನಾವು ಅದನ್ನು ನೋಡುತ್ತೇವೆ.

ಇನ್ನು ಕೆಲವು ಸದಸ್ಯರು ಮಾತನಾಡುತ್ತಾ, ಕರಾವಳಿ ಭಾಗದಲ್ಲಿ ಆರ್.ಟಿ.ಸಿ. ಕಾಲಂ-9 ಮತ್ತು 11 ರ ಬಗ್ಗೆ ಹೇಳಿರುತ್ತಾರೆ. ಆ ವಿಚಾರಕ್ಕೆ I am convinced. ಆದರೆ, ಅದಕ್ಕೆ ಕೌಂಟರ್ ಪಾಯಿಂಟ್ ಅನ್ನು ನಾನು ಹೇಳುತ್ತೇನೆ. ಈ ಹಿಂದೆ ಕರಾವಳಿ ಭಾಗದಲ್ಲಿ ವಿಶೇಷವಾದ ಒಂದು ಪ್ರಾವಿಷನ್ ಕೊಟ್ಟು, ಭೂ ಪರಿವರ್ತನೆ ಮಾಡುವಂತಹ ಅಧಿಕಾರ ಸಂಬಂಧಪಟ್ಟ ತಹಶೀಲ್ದಾರ್‌ರವರಿಗೆ delegate ಆಗಿತ್ತು. ನಮ್ಮ ಆಕ್ಟ್‌ನಲ್ಲಿ ಅದಕ್ಕೆ ಪ್ರಾವಿಷನ್ ಇಲ್ಲ. ಆದರೆ, ಕರಾವಳಿ ಭಾಗ ವಿಶೇಷವಾದ ಪ್ರದೇಶವಾಗಿದೆ ಎಂದು ಹೇಳಿ, ಅಲ್ಲಿ ತಹಶೀಲ್ದಾರ್‌ರವರಿಗೆ ಭೂ ಪರಿವರ್ತನೆ ಮಾಡುವಂತಹ ಅಧಿಕಾರವನ್ನು delegate ಮಾಡಿದ್ದರು. ಅದರಂತೆ, ಸಂಬಂಧಪಟ್ಟ ತಹಶೀಲ್ದಾರ್‌ರವರು ಭೂ ಪರಿವರ್ತನೆಯ ಆರ್ಡರ್ ಅನ್ನು ಕೊಡುತ್ತಿದ್ದರು. ಆದರೆ, ಇಡೀ ರಾಜ್ಯದಲ್ಲಿ

ಜಿಲ್ಲಾಧಿಕಾರಿಯವರಿಗೆ ಮಾತ್ರ ಆ ಅಧಿಕಾರ ಇದೆ. ಆದರೆ, by an order ಕೊಟ್ಟಿದ್ದಾರೆ. It's against the law. ಆಯಿತು, ಕೊಟ್ಟಿರುತ್ತಾರೆ. ಆದರೆ, ಆವೊತ್ತಿನ ಕಾಲದಲ್ಲಿ ಕರಾವಳಿ ಭಾಗದ ಒಂದು ಜಾಗದಲ್ಲಿ ಜನ ಓಡಾಡುವುದಕ್ಕೆ ಒಂದು ರಸ್ತೆಯನ್ನು ಬಿಟ್ಟುಕೊಂಡಿರುತ್ತಾರೆ. ಅದನ್ನೇ ಇವರು ಜಮೀನು ಸರ್ವೆ ಸ್ಕೆಚ್‌ನಲ್ಲಿ ತೋರಿಸಿ, ಭೂ ಪರಿವರ್ತನೆ ಮಾಡಿಕೊಟ್ಟಿರುತ್ತಾರೆ. ಅದರಂತೆ, ಅಲ್ಲಿ ಮನೆ, ಅಂಗಡಿ ಹಾಗೂ ಇತರೆ ಕಟ್ಟಡಗಳನ್ನು ಕಟ್ಟಿರುತ್ತಾರೆ. ಆದರೆ, ಈ ಹಿಂದೆ ಸದರಿ ರಸ್ತೆಯ ಜಾಗವನ್ನು ಯಾವ ಜಮೀನು ಮಾಲೀಕನು ಬಿಟ್ಟಿರುತ್ತಾನೆ, ಅದು ಆತನ ಸ್ವಂತ ಜಾಗವಾಗಿದ್ದು, ಅಲ್ಲಿ ಆತ ಏನೋ ಬೇರೆ ವ್ಯವಸ್ಥೆ ಮಾಡಿರುತ್ತಾನೆ. ಸ್ವಂತ ಜಾಗವನ್ನು ಸರ್ವೆ ಸ್ಕೆಚ್‌ನಲ್ಲಿ ತೋರಿಸಿದರೂ ಅದರ ಮೇಲೆ ತಹಶೀಲ್ದಾರ್‌ರವರು ಭೂ ಪರಿವರ್ತನೆ ಮಾಡಿಕೊಟ್ಟಿರುತ್ತಾರೆ. ಅದರಂತೆ, ಅಲ್ಲಿ ಕೆಲವರು ಕಟ್ಟಡಗಳನ್ನು ಕಟ್ಟಿರುತ್ತಾರೆ. ಆದರೆ, ಯಾರ ಜಮೀನಿನಲ್ಲಿ ದಾರಿ ಹೋಗಿತ್ತು, ಆತ ಅದನ್ನು ತನ್ನ ಸ್ವಂತಕ್ಕೆ ಬಳಕೆ ಮಾಡಿಕೊಂಡಿರುತ್ತಾರೆ. ಏಕೆಂದರೆ, ಅದು ಆತನ ಸ್ವಂತ ಹಿಡುವಳಿ ಜಮೀನಾಗಿರುತ್ತದೆ.

(ಮುಂದು)

(723) 14.08.2025 2.40 ವೈಎಲ್-ಬಿಎನ್‌ಎಸ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಕೃಷ್ಣಭೈರೇಗೌಡ (ಮುಂದು):-**

ಅವರು ಬುದ್ಧಿವಂತರಾಗಿದ್ದು, ಈಗ ನ್ಯಾಯಾಲಯದ ಮೊರೆ ಹೋಗಿದ್ದಾರೆ. ನ್ಯಾಯಾಲಯವು ಸರ್ಕಾರಕ್ಕೆ ಹಿಂದೆ ಇದ್ದ ಮನೆಗಳಿಗೆ ಪರಿವರ್ತನೆ ಮಾಡಿಕೊಡುವಾಗ ದಾರಿ ತೋರಿಸಿದ್ದು, ಸರ್ಕಾರವು ಅದಕ್ಕೆ ಸಹಿ ಹಾಕಿಕೊಟ್ಟಿದೆ. ಹಾಗಾಗಿ, ಆ ದಾರಿಯ ಜಾಗವನ್ನು ಸ್ವಾಧೀನಪಡಿಸಿಕೊಂಡು ಅವರಿಗೆ ಕೊಡಿ, ಇಲ್ಲದಿದ್ದರೆ ಅಲ್ಲಿರತಕ್ಕಂಥ ಮನೆಗಳನ್ನು ಕೆಡವಿ ಎಂದು ಸರ್ಕಾರಕ್ಕೆ ನಿರ್ದೇಶನ ನೀಡಿದೆ. ನಾನು ಹೇಳಿದ ವಿಚಾರ ಅರ್ಥವಾಯಿತೇ? ಎಲ್ಲಿಂದ ಮಾಡಲಿಕ್ಕೆ ಸಾಧ್ಯ? ಯಾರದೋ ಜಮೀನಿನಲ್ಲಿ ರಸ್ತೆ ತೋರಿಸಿ, ಈಗ ಆ ರಸ್ತೆ ಜಾಗವನ್ನು ಕೇಳಬೇಡಿ ಎಂದು ಹೇಳುತ್ತಾರೆ. ಇದು ಕೇವಲ ಒಂದೆರಡು ಪ್ರಕರಣಗಳಿಗೆ ಸೀಮಿತವಾಗಿಲ್ಲ, ಸುಮಾರು ಪ್ರಕರಣಗಳು ನಡೆದಿವೆ. ಇದರಿಂದಾಗಿ ನಾವು ಆ ರಸ್ತೆ ಜಾಗವನ್ನು ಸ್ವಾಧೀನಪಡಿಸಿಕೊಂಡು ಕೊಡಬೇಕಾಗಿದೆ. ಇತ್ತೀಚೆಗೆ ಕರಾವಳಿ ಭಾಗದಲ್ಲಿ ಅದರಲ್ಲಿಯೂ ವಿಶೇಷವಾಗಿ ಮಂಗಳೂರು ಭಾಗದಲ್ಲಿ ಸುಮಾರು ಮನೆಗಳು ನೆಲಸಮಗೊಳ್ಳುತ್ತಿವೆ. ನಾನು ಸಹ ಸುಮಾರು ಏರಿಯಾಗಳಿಗೆ ಭೇಟಿ ನೀಡಿದ್ದು, ಅಲ್ಲಿ 8 ಅಡಿ ರಸ್ತೆ ಬಿಡುತ್ತಾರೆ. ಅಲ್ಲಿ ಏನಾದರೂ ಅನಾಹುತವಾದರೆ, 500 ಮೀಟರ್ ದೂರದಿಂದ ನಡೆದುಕೊಂಡು ಹೋಗಬೇಕು. ಒಂದು machine reach ಆಗುವುದಕ್ಕಾಗುವುದಿಲ್ಲ. ಇದರಿಂದಾಗಿ ಮತ್ತೆ ಯಾರ ಮೇಲೆ ದೂಷಣೆ ಬರುತ್ತದೆ ಎಂದರೆ, ಸರ್ಕಾರದ ಮೇಲೆ ದೂಷಣೆ ಬರುತ್ತದೆ. ಮೊದಲನೆಯದಾಗಿ norms ಅನ್ನು

follow ಮಾಡುವುದಿಲ್ಲ. ಈ conversion ಗೆ ರಸ್ತೆ ಇರಬೇಕೆಂಬುದು ಇಡೀ ದೇಶದ ಕಾನೂನಾಗಿದೆ. ಏತಕ್ಕಾಗಿ ರಸ್ತೆ ಇರಬೇಕೆಂದರೆ, ನಾಳೆ ದಿವಸ ಮನೆ ನಿರ್ಮಾಣವಾಗುತ್ತದೆಯೋ, ಕಾರ್ಖಾನೆ ನಿರ್ಮಾಣವಾಗುತ್ತದೆಯೋ, ನಾಳೆ ದಿವಸ ಹೇಗೆ ಅಲ್ಲಿಗೆ ತಲುಪುತ್ತಾರೆ ಎನ್ನುವಂಥದ್ದಾಗಿದೆ. ಅವರ ಸಮಸ್ಯೆ ಏನೆಂಬುದು ನಮಗೆ ಅರ್ಥವಾಗುತ್ತದೆ, ಇಲ್ಲವೆಂದು ಹೇಳುವುದಿಲ್ಲ. ಮತ್ತೊಂದು ಚಿತ್ರಣವನ್ನು ತಮಗೆ ಕೊಡಬಯಸುತ್ತೇನೆ. ಮಾನ್ಯ ಸಭಾಪತಿಯವರು ಈಗಾಗಲೇ ಹೇಳಿದ ಹಾಗೆ ಚರ್ಚೆ ಮಾಡೋಣ.

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮುಂದಕ್ಕೆ ಕೈಗೊಳ್ಳುವುದು ಸರಿ. ಚರ್ಚೆ ಸಲುವಾಗಿ ಒಂದು ಸಣ್ಣ ಪರಿಹಾರ ನೀಡಬಯಸುತ್ತೇನೆ. ಪಂಚಾಯಿತಿ ವತಿಯಿಂದ ಅಥವಾ private property ಇರುವವರು ಅಥವಾ ಯಾವುದರಿಂದಲಾದರೂ ಭೂ ಪರಿವರ್ತನೆಗೆ ಒಪ್ಪಿಗೆ ಪತ್ರ ಕೊಟ್ಟಿರುತ್ತಾರೆ ಅಥವಾ ಪಂಚಾಯಿತಿಯಿಂದಲೇ ರಸ್ತೆಗೋ, ಮತ್ಯಾವುದಕ್ಕೋ invest ಆಗಿರುತ್ತದೆ. ಸರ್ಕಾರಕ್ಕೆ ಆ ರೀತಿ ಯಾರೆಲ್ಲಾ ಜಾಗವನ್ನು ಬಿಟ್ಟುಕೊಟ್ಟಿದ್ದಾರೆ, ಅದನ್ನು ಸರ್ಕಾರವೇ plotting ಮಾಡಿ, ರಸ್ತೆ ಎಂದು ಪರಿಗಣಿಸಿ ಆರ್.ಟಿ.ಸಿ. ನಲ್ಲಿ ಸೇರಿಸಿ ಬಿಟ್ಟರೆ ಸಮಸ್ಯೆಯಿರುವುದಿಲ್ಲ.

**ಶ್ರೀ ಕೃಷ್ಣಬೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರತಾಪ್ ಸಿಂಹ ನಾಯಕ್‌ರವರು ಹೇಳಿದ ವಿಚಾರಕ್ಕೆ ನಾವು ತಯಾರಿದ್ದೇವೆ. ಆದರೆ, ರಸ್ತೆ ಜಾಗವೆಂದು ಬರೆದುಕೊಡಿ ಎಂದರೆ ಅದಕ್ಕೂ ಸಹ ವಿರೋಧ ಇದೆ. ಈಗಾಗಲೇ ನಾಲ್ಕು ಜನ ಅಣ್ಣ-ತಮ್ಮಂದಿರು ಜಾಗವನ್ನು ಭಾಗ ಮಾಡಿಕೊಂಡಿದ್ದಾರೆ ಎನ್ನುವಂಥ ಉದಾಹರಣೆ ಕೊಟ್ಟಿದ್ದು, ಆ ನಾಲ್ಕು ಜನ ಅಣ್ಣ-ತಮ್ಮಂದಿರು ಭಾಗ ಮಾಡಿಕೊಂಡು ಇವತ್ತು ಚೆನ್ನಾಗಿಯೇ ಇದ್ದಾರೆ, ನಮಗೆ ಅವರು ರಸ್ತೆಯನ್ನು ಬಿಟ್ಟುಕೊಟ್ಟಿಲ್ಲ. ನಾಳೆ ದಿವಸ ಅವರ ಮಧ್ಯೆ ವ್ಯಾಜ್ಯ ಬಂದರೆ, ಎಲ್ಲಿಂದ ರಸ್ತೆ ಕೊಡುವುದು? ಅದಕ್ಕಾಗಿ ನಾವು ಹೇಳುವುದೇನೆಂದರೆ, ಜಾಗವನ್ನು ಭಾಗ ಮಾಡಿಕೊಳ್ಳಲಿ ಅದಕ್ಕೆ ನಮ್ಮ ತಕರಾರು ಇಲ್ಲ. ಆ ಜಾಗದಲ್ಲಿಯೇ ರಸ್ತೆಗೆ ಇಷ್ಟು ಜಾಗವೆಂದು ಪಂಚಾಯಿತಿಗೋ ಅಥವಾ ಆರ್.ಟಿ.ಸಿ. ನಲ್ಲಿ ಎಂಟ್ರಿ ಮಾಡಿಕೊಡಿ ಎಂದು ಅಷ್ಟೇ ಕೇಳುತ್ತಿರುವುದು. ನಾಳೆ ಆ ರಸ್ತೆ ಖಾಯಂ ಆಗಿ ಉಳಿಯಬೇಕು. ಈ ಸಂಬಂಧ ಅವರು ಹೇಳುವಂಥ ಸಲಹೆಗಳಿಗೆ ನಾವು ಸಹ ತಯಾರಿದ್ದೇವೆ. ಆದರೆ, ಸುಮಾರು ಮಂದಿ ‘ಈಗಾಗಲೇ ರಸ್ತೆ ತೋರಿಸಿದ್ದು, ಮತ್ತೆ ಬರೆದುಕೊಡಿ ಎಂದು ಏತಕ್ಕೆ ಕೇಳುತ್ತೀರಿ’ ಎಂದು ವಿರೋಧ ಮಾಡುತ್ತಿದ್ದಾರೆ. ಅವರು ಬರೆದುಕೊಡಲಿಲ್ಲವೆಂದರೆ, ರಸ್ತೆಗೆ ಗ್ಯಾರಂಟಿ ಏನು?

**ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, relinquish ಮಾಡಬೇಕಾಗುತ್ತದೆ.

**ಶ್ರೀ ಕೃಷ್ಣಬೈರೇಗೌಡ:-** ಮಾನ್ಯ ಸಭಾಪತಿಯವರೇ, relinquish ಮಾಡಬೇಕು. ಆದರೆ, ಅದಕ್ಕೂ ವಿರೋಧ ಮಾಡುತ್ತಾರೆ. ಮಾನ್ಯ ಪ್ರತಾಪ್ ಸಿಂಹ ನಾಯಕ್‌ರವರು ಅದಕ್ಕೆ ಒಪ್ಪಿಕೊಂಡಿದ್ದಾರೆ. ಆದರೆ, ನಾವು ಅಲ್ಲಿಗೆ ಹೋದಾಗ ಸುಮಾರು ಮಂದಿ ನನ್ನನ್ನು ಭೇಟಿ ಮಾಡಿದ್ದು, ಅದಕ್ಕೂ ವಿರೋಧ ಮಾಡುತ್ತಾರೆ. ಈಗಾಗಲೇ ಮಾನ್ಯ ಪ್ರತಾಪ್ ಸಿಂಹ ನಾಯಕ್‌ರವರು ಹೇಳಿದ ಸಲಹೆಗೆ ನಾವು ತಯಾರಿದ್ದೇವೆ. ಈಗಾಗಲೇ ಮಾನ್ಯ ಸದಸ್ಯರು ವಕೀಲರ ಬಗ್ಗೆ ಮಾತನಾಡಿದ್ದಾರೆ. ಅವರು ಹೇಳಿದ ವಿಚಾರಕ್ಕೆ ಸಹಾನುಭೂತಿ ಇದೆ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, complication ಆಗಬಾರದು ಎಂದು ಮಾತನಾಡಿದ್ದಾರೆ. ಹಾಗಾಗಿ, ಮಾನ್ಯ ಸಚಿವರು ಆತಂಕ ಪಡಬೇಕಾಗಿಲ್ಲ.

**ಶ್ರೀ ಕೃಷ್ಣಬೈರೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಸಚಿವನಾಗಿ ಬಂದಾಗ ಎ.ಸಿ. ಕೋರ್ಟ್‌ನಲ್ಲಿ ಸುಮಾರು 62,000 ಅವಧಿ ಮೀರಿದ ಪ್ರಕರಣಗಳು ಬಾಕಿ ಇತ್ತು. ವಕೀಲರು ಸಹ ಆಗಾಗ ಹೋಗಿ ದಿನಾಂಕವನ್ನು ಹಾಕಿಸಿಕೊಂಡು ಬರುವಂಥ ಕೆಲಸವಾಗುತ್ತಿತ್ತು. ಎಷ್ಟು ವರ್ಷಗಳಿಂದ ಪ್ರಕರಣಗಳು ಬಾಕಿ ಇವೆ ಎಂದರೆ, ಸುಮಾರು 5 ವರ್ಷಗಳು, 8 ವರ್ಷಗಳು, 12 ವರ್ಷಗಳಿಂದ ಎ.ಸಿ. ಕೋರ್ಟ್‌ನಲ್ಲಿ ಪ್ರಕರಣ ಬಾಕಿ ಇವೆ. ಸುಮಾರು 10 ಬಾರಿ, 15 ಬಾರಿ ಹಿಯರಿಂಗ್ ಆಗಿದ್ದು, ತೀರ್ಪುಗಳು ಬಂದಿರುವುದಿಲ್ಲ. ಎ.ಸಿ. ಕೋರ್ಟ್‌ಗೆ ಒಂದು ಪ್ರಕರಣವನ್ನು ಇತ್ಯರ್ಥಗೊಳಿಸಲು ಸರ್ಕಾರ ಕೊಟ್ಟಿರುವಂಥ ಗಡುವು 6 ತಿಂಗಳು ಮಾತ್ರ. ಸಿವಿಲ್ ಕೋರ್ಟ್ ಮೊರೆ ಹೋಗುವ ಪ್ರಕರಣಗಳೆಲ್ಲವನ್ನೂ ಎ.ಸಿ.ಕೋರ್ಟ್‌ನಲ್ಲಿ ಹಾಕಿಕೊಂಡಿದ್ದಾರೆ. ಈ ರೀತಿಯಾಗಿ ಸುಮಾರು 62,000 ಪ್ರಕರಣಗಳಿತ್ತು. ಹಾಗಾಗಿ, unfit case ಗಳನ್ನು ವಜಾಗೊಳಿಸಿ, ಏನಿದೆ ಅದಕ್ಕೆ ಆರ್ಡರ್ ಪಾಸ್ ಮಾಡಿ ಎಂದು ಹೇಳಿದ ಮೇಲೆ ಸುಮಾರು 62,000 ಪ್ರಕರಣಗಳಿರುವುದು ಸುಮಾರು 16,000 ಪ್ರಕರಣಗಳಿಗೆ ಇಳಿಕೆಯಾಗಿದೆ. ಅದರ ಪರಿಣಾಮ ಏನೆಂಬುದು ಮಾನ್ಯ ಪ್ರತಾಪ್ ಸಿಂಹ ನಾಯಕ್‌ರವರಿಗೆ ಅರ್ಥವಾಗುತ್ತದೆ. ತಹಸೀಲ್ದಾರ್ ಕೋರ್ಟ್‌ನಲ್ಲಿ time barred cases ಸುಮಾರು 10,774 ಇತ್ತು. ಸುಮ್ಮನೆ ದಿನಾಂಕವನ್ನು ನಿಗದಿಪಡಿಸುತ್ತಿದ್ದರು. ಆದರೆ, ಇವತ್ತಿನ ದಿವಸ ಕೇವಲ 416 ಕೇಸ್ ಬಾಕಿ ಇವೆ. ನನ್ನ ಮಾತು ಅವರಿಗೆ ಇಷ್ಟವಾಗುತ್ತದೆಯೋ, ಏನೋ ಗೊತ್ತಿಲ್ಲ. ಆದರೂ ಕೂಡ ಇದೆಲ್ಲವೂ ಹೇಗೆ ನಡೆಯುತ್ತಿದೆ ಎಂಬುದನ್ನು ಹೇಳುತ್ತಿದ್ದೇನೆ. ಏತಕ್ಕೆ ಇದೆಲ್ಲವನ್ನೂ

ಮಾಡುತ್ತಿದ್ದೇನೆ ಎಂಬುದನ್ನು ನಾನು ಹೇಳುತ್ತಿದ್ದೇನೆ. ಶುಲ್ಕ ಕಟ್ಟುವವರು ಯಾರು? ಯಾರನ್ನು serve ಮಾಡಲಿಕ್ಕೆ ಇಲ್ಲಿ ನಾವು ಕುಳಿತಿದ್ದೇವೆ. ಯಾರೇ ಇರಲಿ, ನ್ಯಾಯಯುತವಾಗಿ ಜೀವನ ಮಾಡುವವರು ಯಾರಿರುತ್ತಾರೆ ನಾವು ಅವರ ಪರವಾಗಿ ಇರುತ್ತೇವೆ. ಆದರೆ, ನಮ್ಮ ಮುಖ್ಯ ಗುರಿ ಏನೆಂದರೆ, ಸಾಮಾನ್ಯ ಜನರ ಸೇವೆ ಮಾಡುವುದಕ್ಕಾಗಿ ಈ ತಿದ್ದುಪಡಿ ವಿಧೇಯಕದಲ್ಲಿ ಕೆಲವೊಂದು ಸುಧಾರಣೆಗಳನ್ನು ತಂದಿದ್ದೇವೆ. ಮಾನ್ಯ ಸದಸ್ಯರು ನೀಡಿರುವ ಸಲಹೆಗಳನ್ನು ಗಂಭೀರವಾಗಿ ಪರಿಗಣಿಸುತ್ತೇವೆ ಎಂದು ಹೇಳುತ್ತಾ, ನನಗೆ ಇಷ್ಟು ಮಾತನಾಡಲು ಅವಕಾಶ ಕಲ್ಪಿಸಿದ್ದಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತೇನೆ.

**ವೈಸ್ ಛೇರ್ಮನ್:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ರ ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವವನ್ನು ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡಖಂಡವಾಗಿ ಪರ್ಯಾಲೋಚಿಸುವುದು**

ಖಂಡ 2 ರಿಂದ 10 ರವೆರೆಗೆ

**ವೈಸ್ ಛೇರ್ಮನ್:-** ಪ್ರಸ್ತಾವ ಏನೆಂದರೆ, "ಖಂಡ 2 ರಿಂದ 10 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 10 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ವೈಸ್ ಛೇರ್ಮನ್:-** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಕೃಷ್ಣಬೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ವೈಸ್ ಛೇರ್ಮನ್:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ವೈಸ್ ಛೇರ್ಮನ್:-** ಸದನವನ್ನು ಸೋಮವಾರ ಬೆಳಗ್ಗೆ 10.00 ಗಂಟೆಗೆ ಮುಂದೂಡಲಾಗುವುದು.

**(ಸದನವು ಮಧ್ಯಾಹ್ನ 2 ಗಂಟೆ 47 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ಸೋಮವಾರ 18ನೇ ಮಾಹೆ ಆಗಸ್ಟ್ 2025 ರಂದು ಬೆಳಗ್ಗೆ 10 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)**